# ವಿಶ್ವವಾಣಿ

ವಿಶ್ವಾಸವೇ ವಿಶ್ವ

## ಸುವರ್ಣ ರಥೋತ್ಸವ

ಶ್ರೀ ಗುರು ರಾಘವೇಂದ್ರ ಸ್ವಾಮಿಗಳ 354ನೇ ಆರಾಧನಾ ಮಹೋತ್ಸವ ಪ್ರಯುಕ್ತ ಮಂತ್ರಾಲಯದಲ್ಲಿ ಸೋಮವಾರ ಗುರುರಾಯರ ಮಧ್ಯಾರಾಧನೆ ವಿಜೃಂಭಣೆಯಿಂದ ನಡೆಯಿತು. ಆಂಧ್ರಪ್ರದೇಶ, ತೆಲಂಗಾಣ, ತಮಿಳುನಾಡು ಹಾಗೂ ಕರ್ನಾಟಕದಿಂದ ಆಗಮಿಸಿದ ಸಾವಿರಾರು ಭಕ್ತರು ರಥೋತ್ಸವದಲ್ಲಿ ಪಾಲ್ಗೊಂಡು ಸಂಭ್ರಮಿಸಿದರು.

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿಗಳು

ಅಂತರಾಷ್ಟ್ರೀಯ
ಯುವ ದಿನಾಚರಣೆ-2025
ದಿನಾಂಕ : 12.08.2025 ರಿಂದ 12.10.2025 ರವರೆಗೆ
ಘೋಷ ವಾಕ್ಯ :
ಸುಸ್ಥಿರ ಅಭಿವೃದ್ಧಿಗಾಗಿ ಸ್ಥಳೀಯ ಯುವಜನರ ಪಾತ್ರ ಮತ್ತು ಗುರಿಗಳು

NACO National AIDS Control Organisation
KSAPS Karnataka State AIDS Prevention Society
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ
ಹೆಚ್.ಐ.ವಿ. ತಡೆಗಟ್ಟಲು ತೀವ್ರಗೊಳಿಸಿದ ಐ.ಇ.ಸಿ ಪ್ರಚಾರಾಂದೋಲನ-2025

ಮಾನ್ಯ ಆರೋಗ್ಯ ಸಚಿವರಾದ ಶ್ರೀ ದಿನೇಶ್ ಗುಂಡೂರಾವ್ ಅವರು ಹೆಚ್.ಐ.ವಿ ಪ್ರಚಾರಾಂದೋಲನದಲ್ಲಿ ಭಾಗವಹಿಸಿರುವುದು

"ದೇಶದ ಕಾಡು, ವನ್ಯಜೀವಿ, ನದಿಗಳು ಸೇರಿ ಪರಿಸರ ಉಳಿಸುವುದು" - ಪ್ರತಿಯೊಬ್ಬ ಭಾರತೀಯನ ಸಂವಿಧಾನ ಬದ್ಧ ಮೂಲಭೂತ ಕರ್ತವ್ಯ. ಮಾಹಿತಿ ಮತ್ತು ಸಲಹೆಗಾಗಿ ಉಚಿತ ರಾಷ್ಟ್ರೀಯ ಸಹಾಯವಾಣಿ 1097 ಕ್ಕೆ ಕರೆ ಮಾಡಿ | Download the NACO AIDS app | Google Play | https://kspc.karnataka.gov.in | KarSAPS

ದಿನಕ್ಕೊಂದು ಗುಂಡಿ ತೋಡಿ ತೆಂಗಿನ ತೋಪು ಮಾಡುವುದು ಎಸ್ಐಟಿ ಉದ್ದೇಶವೇ? | ಬುರುಡೆ ಬಗ್ಗೆ ಬುರುಡೆ ಬಿಟ್ಟ ಮುಸುಕುಧಾರಿ ಅನಾಮಿಕ ವ್ಯಕ್ತಿಯ ವಿಶ್ವಾಸಾರ್ಹತೆ ಏನು? | ಧರ್ಮಸ್ಥಳದ ಸುತ್ತಮುತ್ತ ಸರಣಿ ಕೊಲೆ ನಡೆದಿವೆ ಎನ್ನಲಾದ ಪ್ರಕರಣಕ್ಕೆ ಬೇಕಿದೆ ಬ್ರೇಕ್

# ದಿಕ್ಕಿಲ್ಲದೇ ಸಾಗುತ್ತಿರುವ ತನಿಖೆಗೆ ಬೇಕಿದೆ ಲಗಾಮು

**ರಂಜಿತ್ ಎಚ್. ಅಶ್ವತ್ಥ** ಬೆಂಗಳೂರು

ದಿಕ್ಕಿಲ್ಲದ ವ್ಯಕ್ತಿಯೊಬ್ಬನ ಹೇಳಿಕೆಯಿಂದ ಶುರುವಾದ ಗುಂಡಿ ಅಗೆಯುವ ಕಾರ್ಯ ಇದೀಗ ಬಾಹುಬಲಿ ಬೆಟ್ಟದ ಬಳಿ ಬಂದು ನಿಂತಿದೆ. ಸಾವಿರಾರು ಹೆಣಗನ್ನು ಹೂತಿದ್ದೇನೆ ಎಂದು 'ಬುರುಡೆ' ಬಿಟ್ಟಿದ್ದ ವ್ಯಕ್ತಿ ಗುರುತಿಸಿದ್ದ ಸ್ಥಳದಲ್ಲಿ ಸಿಕ್ಕಿದ್ದು ಬರೀ ಮಣ್ಣಾದರೂ, ಎಸ್ಐಟಿ ಮಾತ್ರ ತನ್ನ ಅಗೆಯುವ ಕಾರ್ಯದಿಂದ ಹಿಂದೆ ಸರಿದಿಲ್ಲ. ನಿತ್ಯ ಲಕ್ಷಾಂತರ ರುಪಾಯಿ ಖರ್ಚು ಮಾಡಿ ಅರ್ಥವಿಲ್ಲದ ತನಿಖೆಯನ್ನು ಕೂಡಲೇ ಸ್ಥಗಿತಗೊಳಿಸದಿದ್ದರೆ ವಿಶೇಷ ತನಿಖಾ ತಂಡದ 'ಅಣಕ'ವಾಗುವುದರಲ್ಲಿ ಅನುಮಾನವಿಲ್ಲ.

ರಾಜ್ಯದಲ್ಲಿ ಕಳೆದೊಂದು ತಿಂಗಳಿನಿಂದ ಸದ್ದು ಮಾಡುತ್ತಿರುವ 'ಮುಸುಕುಧಾರಿ ವ್ಯಕ್ತಿ'ಯ ಬುರುಡೆ ರಹಸ್ಯ ಆರಂಭದಲ್ಲಿ ರೋಚಕವಾಗಿ ಕಂಡರೂ, 'ಗುಂಡಿ' ತೋಡುವ ಕಾರ್ಯಾರಂಭಗೊಂಡು ನಿತ್ಯ 'ಖಾಲಿ' ಕೈಯಲ್ಲಿ ವಾಪಸಾಗಿದ್ದರಿಂದ ಎಸ್ಐಟಿಯ ತನಿಖೆಗೇ ಅರ್ಥವಿಲ್ಲದಂತಾಗಿದೆ. ಇಷ್ಟಾದರೂ, ಆತ ತೋರಿಸಿದ ಕಡೆಯಲ್ಲ ಗುಂಡಿ ಅಗೆಯಲು ಹೋಗುತ್ತಿರುವುದು ತಂಡಕ್ಕಿರುವ ಗಾಂಭೀರ್ಯತೆಯನ್ನು ಕಡಿಮೆಗೊಳಿಸುತ್ತಿದೆ ಎನ್ನುವುದು ಸ್ಪಷ್ಟ.

ಕೆಲ ತಿಂಗಳ ಹಿಂದೆ ಏಕಾಏಕಿ ಮುನ್ನೆಲೆಗೆ ಬಂದ ಈ ಮುಸುಕುಧಾರಿ ಧರ್ಮಸ್ಥಳದಲ್ಲಿ ನೂರಾರು ಶವಗಳನ್ನು ಹೂತಿಟ್ಟಿದ್ದೇನೆ ಎಂದು ನ್ಯಾಯಾಲಯದ ಮುಂದೆ ಹೇಳಿಕೆ ನೀಡುತ್ತಿದ್ದಂತೆ ರಾಜ್ಯವಷ್ಟೇ ಅಲ್ಲ, ರಾಷ್ಟ್ರೀಯ, ಅಂತಾರಾಷ್ಟ್ರೀಯ ಮಟ್ಟದಲ್ಲೂ ಈ ಸುದ್ದಿ ಸದ್ದಾಗಿತ್ತು. ಈತನ 'ಸಾಕ್ಷ್ಯ'ವಿಲ್ಲದ ಹೇಳಿಕೆಯನ್ನೇ ನಂಬಿಕೊಂಡ ಕೆಲವೊಂದಷ್ಟು ಜನರು ಈತನ ಹೇಳಿಕೆಗೆ ಸೌಜನ್ಯಾ ಪ್ರಕರಣವನ್ನು ಸೇರಿಸಿಕೊಂಡು 'ರೀಲ್ಸ್'ಗಳನ್ನು ಮಾಡಲು ಶುರು ಮಾಡಿದ್ದರು. ಆದರೆ ನ್ಯಾಯಾಧೀಶರ ಮುಂದೆ ಹೇಳಿಕೆ ದಾಖಲಿಸಿದ್ದರಿಂದ, ರಾಜ್ಯ ಸರಕಾರ 'ನಿಷ್ಪಕ್ಷಪಾತ' ತನಿಖೆಯ ಉದ್ದೇಶದಿಂದ ವಿಶೇಷ ತನಿಖಾ ತಂಡವನ್ನು ರಚಿಸಿತ್ತು. ಆರಂಭದಲ್ಲಿ ಎಸ್ಐಟಿ ರಚನೆ ಮಾಡಿದ ಸರಕಾರದ ತೀರ್ಮಾನವನ್ನು ಯಾರೊಬ್ಬರೂ ವಿರೋಧಿಸಲಿಲ್ಲ. ಆದರೆ ತನಿಖಾ ತಂಡದ ಕಾರ್ಯನಿರ್ವಹಣೆ, ತನಿಖೆ ನಡೆಸುತ್ತಿರುವ ರೀತಿ ಗಮನಿಸಿ, 'ತಟಸ್ಥ'ರಾಗಿದ್ದವರೂ ಇದೀಗ ಎಸ್ಐಟಿ ತನಿಖೆಯ ದಿಕ್ಕನ್ನು ಪ್ರಶ್ನಿಸುತ್ತಿದ್ದಾರೆ.

**15 ಗುಂಡಿಯಲ್ಲಿ ಸಿಗದ ಬುರುಡೆ:** ಪ್ರಣಬ್ ಮೊಹಂತಿ ನೇತೃತ್ವದಲ್ಲಿ ರಚನೆ ಯಾದ ಎಸ್ಐಟಿ ಧರ್ಮಸ್ಥಳಕ್ಕೆ ತೆರಳಿ ಅನಾಮಿಕ ವ್ಯಕ್ತಿ ಹೂತಿಟ್ಟಿದ್ದ ಸ್ಥಳಗಳನ್ನು ಗುರುತಿಸಿ, ನಿತ್ಯ ಒಂದೊಂದು ಸ್ಥಳದ 'ಉತ್ಖನನ' ನಡೆಸಿದೆ. ಈವರೆಗೆ 15 ಸ್ಥಳದಲ್ಲಿ ಗುಂಡಿ ತೋಡಿದರೂ ಸಿಕ್ಕಿದ್ದು ಮಾತ್ರ ಬರೀ 'ಮಣ್ಣು'. ಒಂದು ಕಡೆ ಮೂಳೆ ಸಿಕ್ಕರೂ ಪ್ರಾಥಮಿಕ ತನಿಖೆಯಲ್ಲಿಯೇ ಈ ಮೂಳೆಗೂ, ಅನಾಮಧೇಯ ಹೂತಿಟ್ಟಿರುವ ಹೆಣಗಳ ಪ್ರಕರ ಣಕ್ಕೂ ಸಂಬಂಧವಿಲ್ಲ ಎನ್ನುವುದು ಸ್ಪಷ್ಟವಾಯಿತು. ಉತ್ಖನನ ಪ್ರಕ್ರಿಯೆ ಆರಂಭಗೊಂಡ ಮೂರೇ ದಿನಕ್ಕೆ ಅನಾಮಧೇಯ ವ್ಯಕ್ತಿಯ ಬುರುಡೆ ಆರೋಪದಲ್ಲಿ ಹುರುಳಿಲ್ಲ ಎನ್ನುವುದು ಖಚಿತವಾಗಿದೆ. ಆದರೂ ಎಸ್ಐಟಿ ಅಧಿಕಾರಿಗಳು ಆತ ತೋರಿದ ಎಲ್ಲ ಸ್ಥಳಗಳಲ್ಲೂ ಉತ್ಖನನ ಮಾಡುತ್ತಿರುವುದು ಏಕೆ? 15 ಸ್ಥಳಗಳಲ್ಲಿ ಏನೂ ಸಿಗಲಿಲ್ಲವೆಂದ ಮೇಲೆ, ಆತನ ಪೂರ್ವಾಪರದ ಬಗ್ಗೆ ಕನಿಷ್ಠ ವಿಚಾರಣೆ ಮಾಡಬೇಕೆಂದು ಎಸ್ಐಟಿ ಅಧಿಕಾರಿಗಳಿಗೆ ಅನಿಸಲೇ ಇಲ್ಲವೇ? ಎನ್ನುವುದು ಈಗಿರುವ ಪ್ರಶ್ನೆಯಾಗಿದೆ.

ಅನಾಮಧೇಯ ವ್ಯಕ್ತಿ ತೋರಿಸಿರುವ ಜಾಗವೆಲ್ಲ ಖಾಲಿಯಾಗಿದ್ದರೂ, ಇದೀಗ ಅಲ್ಲೊಂದು ಇಲ್ಲೊಂದು ಎಂದು ಜಾಗ ಗುರುತಿಸುವ ಕಾರ್ಯ ಮುಂದುವರಿದೇ ಇದೆ. ಸೋಮವಾರ ಬಾಹುಬಲಿ ಬೆಟ್ಟದ ಸುತ್ತಮುತ್ತಲೂ 'ಬುರುಡೆ' ಹುಡುಕಾಟ ಮುಂದುವರಿದಿರುವುದು ನಿಜಕ್ಕೂ ಹಾಸ್ಯಾಸ್ಪದ. ಎಸ್ಐಟಿಯ ಈ ತನಿಖಾ ಪ್ರಕ್ರಿಯೆಯನ್ನು ಬದಲಾಯಿಸಿಕೊಳ್ಳದಿದ್ದರೆ, ಮುಂದಿನ ಆರು ತಿಂಗಳಲ್ಲಿ ಧರ್ಮಸ್ಥಳದ ಸುತ್ತಮುತ್ತ ಸೃಷ್ಟಿಯಾಗಿರುವ ಗುಂಡಿಗಳಲ್ಲಿ 'ತೆಂಗಿನ ತೋಪು' ಮಾಡಬೇಕಾಗುತ್ತದೆ. ಆದ್ದರಿಂದ ದಿಕ್ಕುದೆಸೆಯಿಲ್ಲದಂತೆ ನಡೆಯುತ್ತಿರುವ ಈ ತನಿಖೆಯ ವಿಷಯದಲ್ಲಿ ರಾಜ್ಯ ಸರಕಾರ ಕೂಡಲೇ ಮಧ್ಯಪ್ರವೇಶಿಸಿ ಸ್ಥಗಿತಗೊಳಿಸಬೇಕು ಎನ್ನುವುದು ಹಲವರ ಆಗ್ರಹವಾಗಿದೆ.

ಕೇವಲ ಬಾಯಿ ಮಾತಿನ ಆರೋಪಕ್ಕೆ ತಿಂಗಳುಗಟ್ಟಲೇ ಇಡೀ ವ್ಯವಸ್ಥೆಯೇ ಗುಂಡಿ ತೋಡುವ ಕಾರ್ಯದಲ್ಲಿ ಮುಳುಗಿದೆ. ಈಗಾಗಲೇ ಇನ್ನೊಬ್ಬ ವ್ಯಕ್ತಿ ಇದೇ ರೀತಿಯ ಆರೋಪವನ್ನು ಮಾಡಿ ನಾನೂ ಮೂರು ಗುಂಡಿ ತೋಡಿಸುವುದಾಗಿ ಹೇಳಿದ್ದಾನೆ. ಹೀಗಿರುವಾಗ 'ಆರೋಪ'ಕ್ಕೆ ಸರಿಯಾದ ಮಾಹಿತಿ ಕೇಳದೇ, ಈ ರೀತಿ ಎಸ್ಐಟಿ ರಚಿಸುತ್ತಾ ಹೋದರೆ, ಮುಂದೊಂದು ದಿನ ವಿಧಾನ ಸೌಧದ ಬಳಿಕ ಶವ ಹೂತಿದ್ದೆ ಎಂದರೆ ಅಥವಾ ಸಚಿವರೊಬ್ಬರು 10 ಹೆಣಗಳನ್ನು ಹೂತ್ತಿಟ್ಟಿದ್ದಾರೆಂದು ಬಂದು ಹೇಳಿಕೆ ನೀಡಿದ ಮಾತ್ರಕ್ಕೆ ವಿಶೇಷ ತನಿಖಾ ತಂಡ ರಚಿಸಿ ಗುದ್ದಲಿ, ಹಾರೆ ಹಿಡಿದು ಗುಂಡಿ ಅಗೆಯಲು ಸಾಧ್ಯವೇ?

ಬುರುಡೆ ರಹಸ್ಯ

## ಗೌಪ್ಯತೆ ಕಾಪಾಡಿದ್ದು ತಪ್ಪು

ನೂರಾರು ಶವಗಳನ್ನು ಹೂತಿದ್ದೇನೆ ಎಂದು ನ್ಯಾಯಾಧೀಶರ ಮುಂದೆ ಹೇಳಿಕೆ ನೀಡಿದ ವ್ಯಕ್ತಿಯ ಗೌಪ್ಯತೆಯನ್ನು ಆರಂಭದಲ್ಲಿ ಸುರಕ್ಷತೆಯ ದೃಷ್ಟಿಯಿಂದ ಕಾಪಾಡಲಾಗಿತ್ತು. ಆದರೆ ನಿಜಕ್ಕೂ ಆ ವ್ಯಕ್ತಿಯ ವಿಶ್ವಾಸಾರ್ಹತೆ ಏನು? ಆತನ ಪೂರ್ವಾಪರವೇನು? ನಿಜಕ್ಕೂ ಮಾನಸಿಕವಾಗಿ ಸ್ಥಿಮಿತವಾಗಿದ್ದಾನೆಯೇ? ಎನ್ನುವ ಬಗ್ಗೆ ಮಾಹಿತಿಯನ್ನು ಬಹಿರಂಗಗೊಳಿಸಬೇಕು. ಇನ್ನೊಂದು ಆರು ತಿಂಗಳು ತನಿಖೆ ನಡೆಸಿದ ಬಳಿಕ ಆತನ ಮಾನಸಿಕ ಸ್ಥಿತಿ ಸರಿಯಿಲ್ಲವೆಂದರೆ ಇಷ್ಟು ದಿನಗಳ ಕಾಲ ಆತನ ಮಾತು ನಂಬಿ ತೋಡಿದ ಗುಂಡಿಗಳು, ಇದಕ್ಕಾಗಿ ಸರಕಾರ ವ್ಯಯಿಸಿದ ಲಕ್ಷಾಂತರ ರುಪಾಯಿ ತೆರಿಗೆ ಹಣ ಈ ಗುಂಡಿಗೆ ಹಾಕಿದಂತಾಗುವುದಿಲ್ಲವೇ? ಹೇಳಿಕೆ ನೀಡಿ ಇಷ್ಟು ದಿನವಾದರೂ ಆತನ ಮಾಹಿತಿಯನ್ನು ಬಹಿರಂಗಪಡಿಸದಿರುವುದೇ ಮೊದಲ ತಪ್ಪು ಎನ್ನುವುದು ಸ್ಪಷ್ಟ.

## ಜನರ ಪ್ರಶ್ನೆಗಳೇನು?

- ಆತನ ಬಗ್ಗೆ ಈ ಪ್ರಮಾಣದಲ್ಲಿ ರಹಸ್ಯ ಕಾಪಾಡಿಕೊಳ್ಳುವ ಅಗತ್ಯವೇನಿದೆ?
- ಅನಾಮಿಕ ವ್ಯಕ್ತಿಯು ತೋರಿಸಿದ ಜಾಗಗಳಲ್ಲೆಲ್ಲಾ ಅಗೆಯುತ್ತಿರುವುದೇಕೆ?
- ಮುಂದಿನ ದಿನಗಳಲ್ಲಿ ಇನ್ನಷ್ಟು ಮಂದಿ ಬಂದು ದೂರು ನೀಡಿದರೆ ಆಗಲೂ ಅಗೆಯುವರೇ?
- ಯಾರೇ ಆರೋಪ ಮಾಡಿದರೂ ಈ ರೀತಿ ಎಸ್ಐಟಿ ರಚಿಸಿ, ಗುಂಡಿ ತೋಡಲು ಸಾಧ್ಯವೇ?
- ಅನಾಮಿಕ ತೋರಿದ ಕಡೆಯೆಲ್ಲಾ ಅಗೆಯಲು ಬಳಕೆಯಾದ ತೆರಿಗೆ ಹಣದ ನಷ್ಟಕ್ಕೆ ಹೊಣೆ ಯಾರು?

## ಸೊಂಪಾದ ಪುಟಗಳು

ರಾಜಕೀಯ ಸಂಘರ್ಷಕ್ಕೆ ಶಿಕ್ಷಣ ನಲುಗದಿರಲಿ
ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ 6

ಈ ದೇಶಗಳು ತೆರೆದುಕೊಂಡ ರೀತಿ ಅಚ್ಚರಿದಾಯಕ
ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ 7

### ದಾರಿದೀಪೋಕ್ತಿ

ನಾವು ಏನೇ ಮಾಡಿದರೂ ಅದು ನಮಗೆ ಸಂತಸ ಮತ್ತು ನೆಮ್ಮದಿಯನ್ನು ನೀಡಬೇಕು. ಅಷ್ಟೇ ಅಲ್ಲ, ನಮ್ಮ ವ್ಯಕ್ತಿತ್ವ ವಿಕಸನಕ್ಕೆ ನೆರವಾಗಬೇಕು. ನಾವು ಮಾಡುವ ಉದ್ಯೋಗ ಅಥವಾ ಕೆಲಸ ಇವುಗಳನ್ನು ನೀಡದಿದ್ದರೆ ಅವನ್ನು ಮಾಡದಿರುವುದೇ ವಾಸಿ.

### ವಕ್ರತುಂಡೋಕ್ತಿ

ಕೆಲವರು ಜೀವನದಲ್ಲಿ ಹಣಕ್ಕಾಗಿ ಏನು ಬೇಕಾದರೂ ಮಾಡುತ್ತಾರೆ. ಬೆಳಗ್ಗೆ ಮೂರು ಗಂಟೆಗೆ ಎದ್ದು ರಾತ್ರಿ ಹನ್ನೆರಡು ಗಂಟೆಗೆ ಮಲಗುತ್ತಾರೆ.

## ಮುನೀರ್ ಅಣು ಬಾಂಬ್ ಬೆದರಿಕೆ

**ನ್ಯೂಯಾರ್ಕ್:** ಪಾಕಿಸ್ತಾನ ಸೇನೆ ಮುಖ್ಯಸ್ಥ ಜನರಲ್ ಅಸೀಮ್ ಮುನೀರ್ ಅಮೆರಿಕದ ನೆಲದಲ್ಲಿ ನಿಂತು ಭಾರತ ವಿರೋಧಿ ಹೇಳಿಕೆ ನೀಡಿರುವುದಲ್ಲದೇ ಪ್ರಪಂಚಕ್ಕೇ ಅಣು ಬಾಂಬ್ ಬೆದರಿಕೆ ಹಾಕಿದ್ದಾರೆ. ನಾವು ಸಹ ಅಣ್ವಸ್ತ್ರಗಳನ್ನು ಹೊಂದಿದ್ದೇವೆ. ಒಂದು ವೇಳೆ ಯುದ್ಧಗಳು ನಡೆದು ನಾವು ಸೋತು ಹೋಗುತ್ತೇವೆ ಎನ್ನುವುದಾದರೆ ಆಗ ಅರ್ಧ ಪ್ರಪಂಚವನ್ನೇ ಮುಳುಗಿಸಿ ಹೋಗುತ್ತೇವೆ. ಇಂಡಸ್ ನದಿ (ಸಿಂಧೂ ನದಿ) ಭಾರತದ ಸ್ವತ್ತಲ್ಲ, ಅವರು ನದಿ ನೀರನ್ನು ತಡೆದಿದ್ದಾರೆ. ಡ್ಯಾಮ್ ಕಟ್ಟುತ್ತೇವೆ ಎಂದು ಹೇಳಿದ್ದಾರೆ. ಕಟ್ಟಲಿ ನೋಡೋಣ, ಆಗ ನಮ್ಮ ಹತ್ತೇ ಹತ್ತು ಮಿಸೈಲ್‌ಗಳಿಂದ ಡ್ಯಾಮ್ ಪುಡಿಗಟ್ಟುತ್ತೇವೆ ಎಂದು ಹೇಳಿದ್ದಾರೆ.

**ಬೆದರಿಕೆಗೆ ಮಣಿಯಲ್ಲ:** ಪಾಕಿಸ್ತಾನದ ಪರಮಾಣು ಬೆದರಿಕೆಗೆ ಭಾರತ ಮಣಿಯುವುದಿಲ್ಲ ಎಂದು ವಿದೇಶಾಂಗ ಸಚಿವಾಲಯ ಪ್ರತಿಕ್ರಿಯಿಸಿದೆ.

ಮಂತ್ರಿ ಸ್ಥಾನಕ್ಕೆ ಕುತ್ತು ತಂದ ಮತಗಳವು ಸಂಬಂಧಿತ ಹೇಳಿಕೆ

# ರಾಜಣ್ಣ ತಲೆದಂಡ

**ಬೆಂಗಳೂರು:** ಮತಗಳ್ಳತನ ಹೋರಾಟಕ್ಕೆ ಬಹಿರಂಗವಾಗಿಯೇ ವಿರೋಧ ವ್ಯಕ್ತಪಡಿಸಿದ್ದ ಸಹಕಾರ ಸಚಿವ ಕೆ.ಎನ್.ರಾಜಣ್ಣ ಅವರನ್ನು ಸಚಿವ ಸಂಪುಟದಿಂದ ವಜಾಗೊಳಿಸಲಾಗಿದೆ.

ರಾಹುಲ್ ಗಾಂಧಿ ನೇತೃತ್ವದಲ್ಲಿ ಶನಿವಾರ ನಡೆದ ಪ್ರತಿಭಟನೆ ಮುಗಿದ ಬಳಿಕ, ಕೆ.ಎನ್.ರಾಜಣ್ಣ ಅವರು ತುಮಕೂರಿನಲ್ಲಿ ಮತಗಳವು ಆರೋಪದ ಕುರಿತು ವ್ಯತಿರಿಕ್ತ ಹೇಳಿಕೆ ನೀಡಿದ್ದ ರಿಂದ ಪಕ್ಷಕ್ಕೆ ತೀವ್ರ ಮುಜುಗರವಾಗಿತ್ತು. ಆದ್ದ ರಿಂದ ರಾಹುಲ್ ಗಾಂಧಿ ಅವರ ಸೂಚನೆ ಯಂತೆ ಸಂಪುಟದಿಂದ ವಜಾಗೊಳಿಸಲಾಗಿದೆ ಎಂದು ಮೂಲಗಳು ತಿಳಿಸಿವೆ. ಆದರೀಗ ಕೇವಲ ಸಂಪುಟದಿಂದ ಮಾತ್ರವಲ್ಲದೇ, ಪಕ್ಷದಿಂದಲೇ ಉಚ್ಚಾಟಿಸಿದರೂ ಅಚ್ಚರಿಯಿಲ್ಲ ಎನ್ನುವ ಮಾತುಗಳು ಪಕ್ಷದಲ್ಲಿ ಕೇಳಿಬರುತ್ತಿವೆ.

ಮೊದಲಿನಿಂದಲೂ ಮಾಧ್ಯಮಗಳ ಎದುರು ಪಕ್ಷಕ್ಕೆ ಮತ್ತು ಸರಕಾರಕ್ಕೆ ಇರಿಸು ಮರಿಸು ತರುವಂತಹ ಹೇಳಿಕೆ ನೀಡುವ ಮೂಲಕ ರಾಜಣ್ಣ ಅವರು ಹಲವು ನಾಯಕರ ಕೆಂಗಣ್ಣಿಗೆ ಗುರಿಯಾಗಿದ್ದರು. ಹನಿಟ್ರ್ಯಾಪ್ ಪ್ರಕರಣ, ನಾಯಕತ್ವ ಬದಲಾವಣೆ ವಿಷಯ ದಲ್ಲಿ ನಿರಂತರವಾಗಿ ಪಕ್ಷದ ವಿರುದ್ಧ ಹೇಳಿಕೆ ನೀಡುತ್ತಾ ಬಂದಿದ್ದರು. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಎಚ್ಚರಿಕೆಯ ಹೊರತಾಗಿಯೂ ಪಕ್ಷದ ವಿರುದ್ಧ ಹೇಳಿಕೆ ನೀಡಿದ್ದರು. ಹೈಕಮಾಂಡ್ ಸೂಚನೆಯ ಬೆನ್ನಲ್ಲೇ ರಾಜಣ್ಣ ಅವರನ್ನು ಸಂಪುಟದಿಂದ ಕೈಬಿಡುವ ಸಂಬಂಧ ಡಿಸಿಎಂ ಡಿ.ಕೆ.ಶಿವಕುಮಾರ್ ಹಾಗೂ ಪರಮೇಶ್ವರ ಅವರೊಂದಿಗೆ ಚರ್ಚಿಸಿ, ವಜಾಗೊಳಿಸಲು ರಾಜ್ಯಪಾಲರಿಗೆ ಸಿದ್ದರಾಮಯ್ಯ ಅವರು ಶಿಫಾರಸು ಮಾಡಿದರು. → 4

- ರಾಜಣ್ಣ ಹೇಳಿಕೆಯ ವರದಿ ಹೈಕಮಾಂಡ್‌ಗೆ ತಲುಪಿಸಿದ ಡಿಕೆ ಆಪ್ತರು
- ರಾಹುಲ್ ಕೆಂಡಾಮಂಡಲ: ಕೂಡಲೇ ವಜಾಗೊಳಿಸಲು ಸೂಚನೆ
- ಸಿದ್ದುಗೆ ಸೂಚನೆ ನೀಡಿದ ಸುರ್ಜೇವಾಲ; ಆಪ್ತರೊಂದಿಗೆ ಸಭೆ ನಡೆಸಿ, ಮುಂದಿನ ನಡೆ ಬಗ್ಗೆ ಚರ್ಚೆ
- ಪಕ್ಷದಿಂದಲೇ ಉಚ್ಚಾಟಿಸುವ ಬದಲು, ಸಚಿವ ಸಂಪುಟದಿಂದ ವಜಾಗೊಳಿಸಲು ಸಿಎಂ ಸಿದ್ದರಾಮಯ್ಯ ನಿರ್ಧಾರ

### ದೊಡ್ಡ ಷಡ್ಯಂತ್ರ

ನನ್ನನ್ನು ಸಂಪುಟದಿಂದ ವಜಾ ಮಾಡಿರುವ ಹಿಂದೆ ದೊಡ್ಡ ಷಡ್ಯಂತ್ರ, ಪಿತೂರಿ ಇದೆ. ಮಾಜಿ ಸಚಿವ ಎಂದು ಕರೆಸಿಕೊಳ್ಳಲು ನನಗೆ ಸಂತೋಷ ಇದೆ. ಈ ಪಿತೂರಿ ಹಿಂದೆ ಯಾರಿದ್ದಾರೆ? ಏನೇನು ನಡೆದಿದೆ? ಎಲ್ಲೆಲ್ಲಿ ನಡೆದಿದೆ? ಎಲ್ಲವನ್ನೂ ಕಾಲ ಬಂದಾಗ ತಿಳಿಸುತ್ತೇನೆ. ಹೈಕಮಾಂಡ್ ತಪ್ಪು ಗ್ರಹಿಕೆ ನಿವಾರಣೆ ಮಾಡಲು ದೆಹಲಿಗೆ ಹೋಗುತ್ತೇನೆ ಹೈಕಮಾಂಡ್ ತೀರ್ಮಾನಕ್ಕೆ ಬದ್ಧರಿದ್ದೇವೆ ಎಂದು ಕೆ.ಎನ್.ರಾಜಣ್ಣ ಹೇಳಿದ್ದಾರೆ.

### ಬಿಜೆಪಿ ವ್ಯಂಗ್ಯ

ಸಚಿವ ಸ್ಥಾನಕ್ಕೆ ರಾಜಣ್ಣ ರಾಜೀನಾಮೆ ನೀಡಿದ್ದಾರೆ ಎನ್ನುವ ಸುದ್ದಿಯ ಹೊರತಾಗಿಯೂ ಅಧಿಕೃತ ಘೋಷಣೆ ಯಾಗಿರಲಿಲ್ಲ. ಈ ವಿಷಯವನ್ನು ಮುಂದಿಟ್ಟುಕೊಂಡು ಬಿಜೆಪಿ ನಾಯಕರು, ವಿಧಾನಸಭೆಯಲ್ಲಿ ರಾಜಣ್ಣ ಸಚಿವರೇ? ಶಾಸಕರೇ? ಎಂದು ವ್ಯಂಗ್ಯವಾಡಿದರು.

ಚು.ಆಯೋಗ, ಬಿಜೆಪಿ ವಿರುದ್ಧ ರ್‍ಯಾಲಿ

# ರಾಗಾ ವಶ

**ದೆಹಲಿ:** ಚುನಾವಣಾ ಆಯೋಗ ಬಿಜೆಪಿಯೊಂದಿಗೆ ಒಪ್ಪಂದ ಮಾಡಿ ಕೊಂಡು ಚುನಾವಣಾ ದುಷ್ಕೃತ್ಯಗಳನ್ನು ನಡೆಸುತ್ತಿದೆ ಎಂದು ಆರೋಪಿಸಿ ಇಂಡಿಯಾ ಮೈತ್ರಿಕೂಟದ ಸಂಸದರು ಸೋಮವಾರ ಪ್ರತಿಭಟನಾ ಮೆರವಣಿಗೆ ನಡೆಸಿದ್ದು, ಈ ವೇಳೆ ಚುನಾವಣಾ ಆಯೋಗದ ಪ್ರಧಾನ ಕಚೇರಿಯ ಬಳಿ ಭಾರೀ ಹೈಡ್ರಾಮಾ ನಡೆದಿದೆ. ಲೋಕಸಭೆ ಪ್ರತಿಪಕ್ಷದ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ಇಂಡಿಯಾ ಮೈತ್ರಿಕೂಟದ ಸಂಸದರು ಚುನಾವಣಾ ಆಯೋಗದ ಪ್ರಧಾನ ಕಚೇರಿಯವರೆಗೆ ಪ್ರತಿಭಟನಾ ರ್‍ಯಾಲಿ ಆರಂಭಿಸಿದ್ದರು. ಆದರೆ, ಪ್ರತಿಭಟನೆಗೆ ಅನುಮತಿ ಪಡೆಯದ ಹಿನ್ನೆಲೆಯಲ್ಲಿ ಪೊಲೀಸರು ರ್‍ಯಾಲಿಗೆ ತಡೆಯೊಡ್ಡಿದರು. ಈ ವೇಳೆ ಕೆಲ ಸಂಸದರು ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ, ಬ್ಯಾರಿಕೇಡ್ ಹತ್ತುವ ಪ್ರಯತ್ನ ಮಾಡಿದರು. → 4

ರಾಹುಲ್ ಗಾಂಧಿ ಅವರನ್ನು ವಶಕ್ಕೆ ಪಡೆದ ಪೊಲೀಸರು.

- ಪ್ರತಿಭಟನೆಗೆ ಅನುಮತಿ ಪಡೆಯದ ಹಿನ್ನೆಲೆ ಪೊಲೀಸರಿಂದ ರ್‍ಯಾಲಿಗೆ ತಡೆ
- ಚುನಾವಣಾ ಆಯೋಗದ ಪ್ರಧಾನ ಕಚೇರಿಯ ಬಳಿ ಭಾರೀ ಹೈಡ್ರಾಮಾ
- ಬ್ಯಾರಿಕೇಡ್ ಹತ್ತಲು ಪ್ರಯತ್ನಿಸಿದ ಸಂಸದರನ್ನು ಬಂಧಿಸಿದ ಪೊಲೀಸರು

ಇದು ಸಂವಿಧಾನವನ್ನು ರಕ್ಷಿಸುವ ಹೋರಾಟ. ನಮಗೆ ಸ್ವಚ್ಛ ಮತದಾರರ ಪಟ್ಟಿ ಬೇಕು. ಅವರಿಗೆ ಮಾತನಾಡಲು ಸಾಧ್ಯವಾಗುತ್ತಿಲ್ಲ. ಇದೇ ವಾಸ್ತವ. ಸತ್ಯ ದೇಶದ ಮುಂದೆ ಇದೆ.
-ರಾಹುಲ್ ಗಾಂಧಿ ಪ್ರತಿಪಕ್ಷ ನಾಯಕ

## ಡಿಜಿಪಿ ರಾವ್ ಮರುನೇಮಕ

**ಬೆಂಗಳೂರು:** ನಟಿ ರನ್ಯಾ ರಾವ್ ಚಿನ್ನ ಕಳ್ಳಸಾಗಣೆ ಪ್ರಕರಣದಲ್ಲಿ ಭಾಗಿಯಾಗಿಯಾಗಿದ್ದಾರೆ ಎಂಬ ಆರೋಪದ ಮೇಲೆ ಕಡ್ಡಾಯ ರಜೆಯಲ್ಲಿದ್ದ ಪೊಲೀಸ್ ಮಹಾನಿರ್ದೇಶಕ ಕೆ.ರಾಮಚಂದ್ರ ರಾವ್ ಅವರನ್ನು ರಾಜ್ಯ ಸರಕಾರ ಮರುನೇಮಕ ಮಾಡಿದೆ. ಡಿಜಿಪಿ ರಾವ್ ಅವರನ್ನು ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯದ ಪೊಲೀಸ್ ಮಹಾನಿರ್ದೇಶಕರ ಹುದ್ದೆಗೆ ಮೇಲ್ದರ್ಜೆಗೇರಿಸಲಾಗಿದೆ. ಅಧಿಸೂಚನೆಯಲ್ಲಿ ರಾಜ್ಯ ಸರಕಾರವು ಡಿಜಿಪಿ (ಡಿಸಿಆರ್ಇ) ಐಪಿಎಸ್ (ವೇತನ) ನಿಯಮಗಳು 2016ರ ನಿಯಮ 12ರ ಅಡಿಯಲ್ಲಿ ಸಿಐಡಿ, ವಿಶೇಷ ಘಟಕಗಳು ಮತ್ತು ಆರ್ಥಿಕ ಅಪರಾಧಗಳ ಮಹಾನಿರ್ದೇಶಕ ಹುದ್ದೆಗೆ ಸಮಾನವಾಗಿದೆ ಎಂದು ಹೇಳಿದೆ.

## ಬಿಜೆಪಿ 18 ಶಾಸಕರ ಅಮಾನತು ವಾಪಸ್

**ವಿಧಾನಸಭೆ:** ಸಭಾಧ್ಯಕ್ಷರ ಪೀಠಕ್ಕೆ ಅಗೌರವ ಸೂಚಿಸಿದ್ದ ಆರೋಪದ ಮೇಲೆ 6 ತಿಂಗಳು ಬಿಜೆಪಿಯ 18 ಶಾಸಕರನ್ನು ಅಮಾನತುಗೊಳಿಸಿದ್ದ ನಿರ್ಣಯ ಹಿಂಪಡೆದಿರುವುದನ್ನು ವಿಧಾನಸಭೆಯಲ್ಲಿ ಸೋಮವಾರ ಅಧಿಕೃತವಾಗಿ ಹಿಂಪಡೆಯಲಾಯಿತು. ಕಳೆದ ಅಧಿವೇಶನದಲ್ಲಿ ಬಿಜೆಪಿಯ 18 ಶಾಸಕರನ್ನು ಅಮಾನತುಗೊಳಿಸಿ ನಿರ್ಣಯ ಕೈಗೊಳ್ಳಲಾಗಿತ್ತು. ಆದರೆ ಸದನದಲ್ಲಿ ನಿರ್ಣಯ ಕೈಗೊಂಡಿದ್ದರಿಂದ, ಸದನದಲ್ಲಿಯೇ ಅನುಮೋದನೆ ಪಡೆಯಬೇಕಿತ್ತು. ಆದ್ದರಿಂದ ಸೋಮವಾರ ಅನುಮೋದನೆ ಪಡೆಯಲಾಯಿತು.

## ಫಾಸ್ಟ್ಯಾಗ್ ಪಾಸ್ ಹಂಚಿಕೆ 15ರಿಂದ

**ದೆಹಲಿ:** 3,000 ರು. ಪಾವತಿಸಿ ದೇಶದ ಯಾವುದೇ ಟೋಲ್‌ಗಳಲ್ಲಿ 1 ವರ್ಷ ಅಥವಾ 200 ಟ್ರಿಪ್‌ಗೆ ಅನುಮತಿಸುವ ವಾರ್ಷಿಕ ಫಾಸ್ಟ್ಯಾಗ್ ಪಾಸ್ ಆ.15ರಿಂದ ಲಭಿಸಲಿದೆ. ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ಫಾಸ್ಟ್ಯಾಗ್‌ಗಳಿಗಾಗಿ ಹೊಸ ವಾರ್ಷಿಕ ಪಾಸ್ ಅನ್ನು ಜೂನ್ ತಿಂಗಳಲ್ಲಿ ಘೋಷಿಸಿತ್ತು. ಪಾಸ್‌ಗಳ ವಿತರಣಾ ಕಾರ್ಯಕ್ಕೆ ಆ.15ರಂದು ಚಾಲನೆ ಸಿಗಲಿದ್ದು, ಈ ಪಾಸ್ ಇದ್ದವರು, ಖಾಸಗಿ ಕಾರು, ಜೀಪ್, ವ್ಯಾನ್‌ಗಳನ್ನು ಗೊತ್ತುಪಡಿ ಸಿದ ರಾಷ್ಟ್ರೀಯ ಹೆದ್ದಾರಿ ಮತ್ತು ರಾಷ್ಟ್ರೀಯ ಮೋಟಾರು ಮಾರ್ಗ ಶುಲ್ಕ ಪ್ಲಾಜಾಗಳಲ್ಲಿ 1 ವರ್ಷ ಅಥವಾ 200 ಟ್ರಿಪ್ ಹೋಗಬಹುದು. ಪ್ರತಿ ಬಾರಿ ಶುಲ್ಕ ಕೊಡುವುದು ತಪ್ಪುತ್ತದೆ.

## ಅನರ್ಹ ಕಾರ್ಡ್ ಇನ್ನು ಎಪಿಎಲ್?

**ವಿಧಾನ ಪರಿಷತ್:** ರಾಜ್ಯದಲ್ಲಿ 15 ಲಕ್ಷ ಅನರ್ಹ ಬಿಪಿಎಲ್ ಕಾರ್ಡುದಾರರಿದ್ದಾರೆ. ಗುರುತಿಸಲಾಗಿರುವ ಅನರ್ಹ ಪಡಿತರದಾರರನ್ನು ಎಪಿಎಲ್‌ಗೆ ಸೇರ್ಪಡೆ ಮಾಡಲು ಪ್ರತಿಪಕ್ಷ ಸದಸ್ಯರು ಒಪ್ಪಿಗೆ ನೀಡಿದರೆ ಶೀಘ್ರದಲ್ಲಿ ಕಾರ್ಯಾರಂಭ ಮಾಡಲಾಗುವುದು ಎಂದು ಆಹಾರ ಸಚಿವ ಕೆ. ಎಚ್.ಮುನಿಯಪ್ಪ ತಿಳಿಸಿದ್ದಾರೆ. ಈ ಹಿಂದೆ ಬಿಪಿಎಲ್ ಕಾರ್ಡ್‌ನಲ್ಲಿದ್ದ ಫಲಾನುಭವಿಗಳನ್ನು ಎಪಿಎಲ್‌ಗೆ ವರ್ಗಾವಣೆ ಮಾಡಲು ಇಲಾಖೆ ಮುಂದಾದಾಗ ದೊಡ್ಡ ವಿವಾದವೇ ಸೃಷ್ಟಿಯಾಯಿತು. ಸದನದ ಸದಸ್ಯರೆಲ್ಲರೂ ಒಪ್ಪಿಗೆಯನ್ನು ಸೂಚಿಸಿದರೆ ಬಿಪಿಎಲ್‌ನಿಂದ ಎಪಿಎಲ್‌ಗೆ ಅನರ್ಹ ಫಲಾನುಭವಿಗಳನ್ನು ವರ್ಗಾವಣೆ ಮಾಡಲಾಗುವುದು ಎಂದರು.

ಮೈಸೂರು ದಸರಾ ಎಷ್ಟೊಂದು ಸುಂದರ

ಭೀಮನ ತೂಕ
5465 ಕೆ.ಜಿ

- ಕ್ಯಾಪ್ಟನ್ ಅಭಿಮನ್ಯು ದಸರಾ ಆನೆಗಳಲ್ಲೇ 2ನೇ ಹೆಚ್ಚು ತೂಕದ ಆನೆ



ಬಲಶಾಲಿ ಭೀಮನ ತೂಕ ಪರೀಕ್ಷೆ.

ದಸರಾ ಆನೆಗಳ ತೂಕ ಪರೀಕ್ಷೆ

# ಭೀಮನೇ ಬಲಶಾಲಿ

**ಮೈಸೂರು:** ನಾಡಹಬ್ಬ ದಸರಾ ಹಿನ್ನೆಲೆಯಲ್ಲಿ ಮೈಸೂರಿಗೆ ಆಗಮಿಸಿರುವ ಅಭಿಮನ್ಯು ನೇತೃತ್ವದ ಒಂಬತ್ತು ಆನೆಗಳ ತಂಡದ ತೂಕ ಕಾರ್ಯ ಸೋಮವಾರ ನಡೆದಿದ್ದು, ಎಲ್ಲ ಆನೆಗಳಿಗಿಂತ ಭೀಮನೇ ಅತೀ ಹೆಚ್ಚು ತೂಗಿದ್ದಾನೆ.

ಕಾಡಿನಿಂದ ನಾಡಿಗೆ ಬಂದ ನಂತರ ನಡೆಯುವ ಮೊದಲ ತೂಕ ಪರೀಕ್ಷೆಯಲ್ಲೇ 25 ವರ್ಷದ ಭೀಮ ಬರೋಬ್ಬರಿ 5,465 ಕೆ.ಜಿ ತೂಕ ಹೊಂದುವ ಮೂಲಕ ಅಂಬಾರಿ ಹೊರುವ ಅಭಿಮನ್ಯುವನ್ನು ಹಿಂದಿಕ್ಕಿದ್ದಾನೆ. ಇನ್ನುಳಿದಂತೆ ಅಭಿಮನ್ಯು 5,360 ಕೆ.ಜಿ, ಪ್ರಶಾಂತ 5,110 ಕೆ.ಜಿ, ಧನಂಜಯ 5,310 ಕೆ.ಜಿ, ಮಹೇಂದ್ರ 5,120 ಕೆ.ಜಿ, ಏಕಲವ್ಯ 5,305 ಕೆ.ಜಿ, ಕಂಜನ್ 4,880 ಕೆ.ಜಿ, ಲಕ್ಷ್ಮಿ 3,730 ಹಾಗೂ ಕಾವೇರಿ 3,010 ಕೆ.ಜಿ ತೂಕ ಹೊಂದಿವೆ. ಮೈಸೂರಿನ ಧನ್ವಂತರಿ ರಸ್ತೆಯಲ್ಲಿರುವ ಸಾಯಿರಾಂ ಆ್ಯಂಡ್ ಕೋ, ಎಲೆಕ್ಟ್ರಿಕ್ ತೂಕ ಮಾಪನ ಕೇಂದ್ರದಲ್ಲಿ ಎಲ್ಲ ಆನೆಗಳನ್ನು ತೂಕ ಮಾಡಲಾಯಿತು.

| | | |
|---|---|---|
| ಅಭಿಮನ್ಯು | 5360 | ಕೆ.ಜಿ |
| ಪ್ರಶಾಂತ | 5110 | ಕೆ.ಜಿ |
| ಧನಂಜಯ | 5310 | ಕೆ.ಜಿ |
| ಮಹೇಂದ್ರ | 5120 | ಕೆ.ಜಿ |
| ಏಕಲವ್ಯ | 5305 | ಕೆ.ಜಿ |
| ಕಂಜನ್ | 4880 | ಕೆ.ಜಿ |
| ಲಕ್ಷ್ಮಿ | 3730 | ಕೆ.ಜಿ |
| ಕಾವೇರಿ | 3010 | ಕೆ.ಜಿ |

## ಸಮಾಚಾರ ಸಣ್ಣದಲ್ಲ

### ಅಬ್ದುಲ್ ಪ್ರಕರಣ: ಆರೋಪಿ ಬಂಧನ

**ಬಂಟ್ವಾಳ:** ಕೊಳತ್ತಮಜಲು ಅಬ್ದುಲ್ ರಹ್ಮಾನ್ ಹತ್ಯೆ ಪ್ರಕರಣದಲ್ಲಿ ಆರೋಪಿಯಾಗಿದ್ದ ಒಬ್ಬನನ್ನು ಬಂಟ್ವಾಳ ಗ್ರಾಮಾಂತರ ಪೊಲೀಸರು ಬಂಧಿಸಿದ್ದಾರೆ. ಇದರೊಂದಿಗೆ ಬಂಧಿತರ ಸಂಖ್ಯೆ 13ಕ್ಕೆ ಏರಿಕೆಯಾಗಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧಿತನನ್ನು ರಂಜಿತ್ ಯಾನೆ ರಂಜು (35) ಎಂದು ಗುರುತಿಸಲಾಗಿದೆ. ಆ.10 ರಂದು ರಂಜಿತ್ ಯಾನೆ ರಂಜು (35) ಎಂಬಾತನನ್ನು ಬಂಧಿಸಿದ್ದಾರೆ. ಮೇ 27ರಂದು ಆರೋಪಿಗಳು ಅಬ್ದುಲ್ ರಹ್ಮಾನ್ ಅವರನ್ನು ಹತ್ಯೆಗೈದು ಮತ್ತು ಅವರ ಸ್ನೇಹಿತ ಕಲಂದರ್ ಶಾಫಿ ಅವರ ಮೇಲೆ ಮಾರಾಣಾಂತಿಕ ಹಲ್ಲೆ ನಡೆಸಿ ಪರಾರಿಯಾಗಿದ್ದರು. ಈ ಸಂಬಂಧ ಬಂಟ್ವಾಳ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಈಗಾಗಲೇ 12 ಮಂದಿ ಆರೋಪಿಗಳನ್ನು ಬಂಧಿಸಲಾಗಿದೆ.

### ಕಾರ್ಕಳ, ಹೆಬ್ರಿ ದಸರಾ ಕ್ರೀಡಾಕೂಟ ಆ.17ಕ್ಕೆ

**ಉಡುಪಿ:** ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಕ್ರೀಡಾ ಇಲಾಖೆಯಿಂದ ಕಾರ್ಕಳ ಹಾಗೂ ಹೆಬ್ರಿ ತಾಲೂಕು ಮಟ್ಟದ ದಸರಾ ಕ್ರೀಡಾಕೂಟ ಆ.17ರಂದು ಕಾರ್ಕಳ ತಾಲೂಕು ಕ್ರೀಡಾಂಗಣದಲ್ಲಿ ನಡೆಯಲಿದ್ದು, ಸ್ಪರ್ಧಿಗಳು ಅಂದು ಬೆಳಗ್ಗೆ 9 ಗಂಟೆಯ ಒಳಗಾಗಿ ಸಂಘಟಕರಲ್ಲಿ ವರದಿ ಮಾಡಿಕೊಳ್ಳಬಹುದಾಗಿದೆ. ತಾಲೂಕು ಮಟ್ಟದ ದಸರಾ ಕ್ರೀಡಾಕೂಟದ ವೈಯಕ್ತಿಕ ಸ್ಪರ್ಧೆಯಲ್ಲಿ ಪ್ರಥಮ ಮತ್ತು ದ್ವಿತೀಯ ಹಾಗೂ ಗುಂಪು ಕ್ರೀಡೆಯಲ್ಲಿ ಪ್ರಥಮ ಸ್ಥಾನ ಪಡೆದ ತಂಡ ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟದಲ್ಲಿ ಭಾಗವಹಿಸಲು ಅರ್ಹತೆ ಪಡೆಯಲಿದೆ. ಸ್ಪರ್ಧೆಗೆ ಹೆಸರು ಅಥವಾ ತಂಡವನ್ನು ನೋಂದಾಯಿಸಲು ಆ. 14 ಕೊನೆಯ ದಿನ. ಕ್ರೀಡಾಕೂಟ ನಡೆಯುವ ದಿನದಂದು ನೋಂದಣಿಗೆ ಅವಕಾಶ ಇಲ್ಲ. ಹೆಚ್ಚಿನ ಮಾಹಿತಿಗಾಗಿ ಕಾರ್ಕಳ ತಾಲೂಕು ಯುವಜನ ಕ್ರೀಡಾಧಿಕಾರಿ ಮೊ.ನಂ: 9008857495 ಅನ್ನು ಸಂಪರ್ಕಿಸಬಹುದಾಗಿದೆ.

### ಧರ್ಮಸ್ಥಳದ ಬಗ್ಗೆ ವಾಗ್ವಾದ: ಹಲ್ಲೆ

**ಬೆಳ್ತಂಗಡಿ:** ಧರ್ಮಸ್ಥಳದಲ್ಲಿ ವಿಡಿಯೋ ಚಿತ್ರೀಕರಣದ ವಿಚಾರದಲ್ಲಿ ನಡೆದ ವಾಗ್ವಾದ, ಹಲ್ಲೆ ಪ್ರಕರಣವಾಗಿ ಪರಿವರ್ತನೆಯಾಗಿದ್ದು, ಕುಡ್ಲಾ ರಾಂ ಪೇಜ್ ಎಂಬ ಯೂಟ್ಯೂಬ್ ಚಾನೆಲ್‌ನ ಯೂ ಟ್ಯೂಬರ್ ಮತ್ತು ಇಬ್ಬರು ಸಹಚರರ ವಿರುದ್ಧ ಧರ್ಮಸ್ಥಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಹಲ್ಲೆಗೊಳಗಾದವರು ಉಜಿರೆಯ ನಿವಾಸಿ ಹರೀಶ್ ನಾಯ್ಕ (46) ಎಂದು ಗುರುತಿಸಲಾಗಿದೆ. ದೂರಿನ ಪ್ರಕಾರ, ಬುಧವಾರ ಮಧ್ಯಾಹ್ನ ಹರೀಶ್ ನಾಯ್ಕ ಅವರು ಪಾಂಗಾಳ ರಸ್ತೆಯಲ್ಲಿ ಹೋಗುತ್ತಿದ್ದಾಗ, ವಿಡಿಯೋ ಚಿತ್ರೀಕರಣ ಮಾಡುತ್ತಿದ್ದ ಮೂವರು ಅವರನ್ನು ತಡೆದು ನಿಲ್ಲಿಸಿದ್ದಾರೆ. ರಾಂ ಪೇಜ್ ಯೂಟ್ಯೂಬರ್ ಎಂದು ಹೇಳಿಕೊಂಡ ವ್ಯಕ್ತಿ, ಧರ್ಮಸ್ಥಳದಲ್ಲಿ ಹೆಣಗಳನ್ನು ಹೂತಿರುವ ಬಗ್ಗೆ ಮಾಹಿತಿ ಕೇಳಿ ವಾಗ್ವಾದ ಆರಂಭಿಸಿದ್ದಾರೆ. ಹರೀಶ್ ನಾಯ್ಕ ಇದಕ್ಕೆ ತಕರಾರು ವ್ಯಕ್ತಪಡಿಸಿದಾಗ, ಯೂ ಟ್ಯೂಬರ್ ಮತ್ತು ಆತನ ಸಹಚರರು ಹಲ್ಲೆ ನಡೆಸಿದ್ದಾರೆ ಎಂದು ದೂರಿನಲ್ಲಿ ವಿವರಿಸಲಾಗಿದೆ. ಹರೀಶ್ ನಾಯ್ಕ ನೀಡಿದ ದೂರಿನ ಅನ್ವಯ, ಧರ್ಮಸ್ಥಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಇದೇ ದಿನ ಈ ಯೂಟ್ಯೂಬರ್‌ಗಳ ಗುಂಪೊಂದು ಹಲ್ಲೆ ನಡೆಸಿದ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿತ್ತು.

### ಬೃಂದಾವನದಲ್ಲಿ ರಾಯರ ಆರಾಧನೆ

**ಹೊಸನಗರ:** ಹೊಸನಗರದ ಹಳೇ ಸಾಗರರಸ್ತೆಯ ಶ್ರೀ ರಾಘವೇಂದ್ರ ಸ್ವಾಮಿ ಬೃಂದಾವನದಲ್ಲಿ ರಾಘವೇಂದ್ರ ಸ್ವಾಮಿಯವರ 354ನೇ ಆರಾಧನಾ ಮಹೋತ್ಸವ ನಡೆಯಿತು. ಸೋಮವಾರ ಬೆಳಿಗ್ಗೆಯಿಂದ 6ಗಂಟೆಗೆ ಅಷ್ಟೋತ್ತರ, 7ಗಂಟೆಗೆ ಪಂಚಾಮೃತಾ ಭಷೇಕ, 11 ಗಂಟೆಗೆ ಅಲಂಕಾರ ಸೇವೆ, 12ಗಂಟೆಗೆ ಮಹಾಮಂಗಳಾರತಿ, ಎಲ್ಲಪೂಜಾ ಕಾರ್ಯಕ್ರಮಗಳು ಮಂಗಳ ವಾದ್ಯ ದೊಂದಿಗೆ ಕಾರ್ಯಕ್ರಮ ಆರಂಭವಾದವು. ಪೂಜೆಯ ನಂತರತೀರ್ಥಪ್ರಸಾದ ವಿನಿಯೋಗ ಪ್ರಸಾದ ವಿತರಣೆ, ಅನ್ನ ಸಂತರ್ಪಣೆ ನಡೆಯಿತು.

ಒಟ್ಟು 601 ಸಿಸಿ ಕ್ಯಾಮರಾ ಅಳವಡಿಸುವ ಯೋಜನೆ | ಎಸ್‌ಪಿ ಹರಿರಾಂ ಶಂಕರ್ ಮಾಹಿತಿ

# ಜಿಲ್ಲೆಯ 207 ಕಡೆ ಸಿಸಿ ಕಣ್ಗಾವಲು

**ಉಡುಪಿ:** ಜಿಲ್ಲೆಯಲ್ಲಿ ಅಪರಾಧ ಚಟುವಟಿಕೆಗಳ ಕಣ್ಗಾವಲು ನಡೆಸುವುದಕ್ಕೆ ಕೋಮು ಸೂಕ್ಷ್ಮ ಮತ್ತು ಆಯಕಟ್ಟಿನ 207 ಪ್ರದೇಶಗಳಲ್ಲಿ 601 ಸಿಸಿ ಕ್ಯಾಮರಾ ಅಳವಡಿಸುವ ಯೋಜನೆಯನ್ನು ಹಾಕಿಕೊಳ್ಳಲಾಗಿದೆ ಎಂದು ಎಸ್‌ಪಿ ಹರಿರಾಂ ಶಂಕರ್ ತಿಳಿಸಿದ್ದಾರೆ.

ಅವರು ಸೋಮವಾರ ಸುದ್ದಿಗೋಷ್ಠಿಯಲ್ಲಿ ಈ ಯೋಜನೆಯ ಬಗ್ಗೆ ಮಾಹಿತಿ ನೀಡಿದರು. ಸುಮಾರು 2.50 ಕೋಟಿ ರೂ. ವೆಚ್ಚದ ಈ ಯೋಜನೆಗೆ ಛೇಂಬರ್ ಆಫ್ ಕಾಮರ್ಸ್ ಕೈಜೋಡಿಸಿದೆ. ಮೊದಲ ಹಂತದಲ್ಲಿ ಯೋಜನೆಯ ಆರಂಭಿಕ ಹಂತದಲ್ಲಿ ಜಿಲ್ಲೆಯ ಗಡಿ ಪ್ರದೇಶಗಳು, ಮತೀಯ ಸೂಕ್ಷ್ಮ ಸ್ಥಳಗಳನ್ನು ಆಯ್ಕೆ ಮಾಡಲಾಗಿದೆ. ಈ ಕ್ಯಾಮೆರಾಗಳ ಮೂಲಕ ಸ್ಥಳೀಯ ಪೊಲೀಸ್ ಠಾಣೆ ಹಾಗೂ ಜಿಲ್ಲಾ ಪೊಲೀಸ್ ಕಂಟ್ರೋಲ್ ರೂಮ್‌ನಲ್ಲಿ ನಿರಂತರವಾಗಿ ವೀಕ್ಷಣೆ ನಡೆಸಲಾಗುವುದು ಎಂದರು.

ಕಳ್ಳತನದಂತಹ ಪ್ರಕರಣಗಳನ್ನು ತಡೆಯುವ ಉದ್ದೇಶದಿಂದ 50 – 100 ಮನೆಗಳಿರುವ ವಠಾರಕ್ಕೆ ತರಬೇತಿ ಪಡೆದ ಗಾರ್ಡ್ ಗಳನ್ನು ನೇಮಿಸುವ ದೃಷ್ಟಿ ಯೋಜನೆ ಈಗಾಗಲೇ ಉಡುಪಿ ನಗರ, ಶಿರ್ವಾ ಮತ್ತು ಗಂಗೊಳ್ಳಿ ಠಾಣೆ ವ್ಯಾಪ್ತಿಯಲ್ಲಿ 2 ಕಡೆ ಹಾಗೂ ಕುಂದಾಪುರ, ಹೆಬ್ರಿ, ಕಾರ್ಕಳ ನಗರ, ಹಿರಿಯಡ್ಕ, ಶಂಕರನಾರಾಯಣ ಮತ್ತು ಬ್ರಹ್ಮಾವರ ಠಾಣಾ ಸರಹದ್ದಿನ ತಲಾ 1 ಕಡೆಗಳಲ್ಲಿ ಅಳವಡಿಸಲಾಗುವುದು. ಒಟ್ಟು 12 ಕಡೆಗಳಲ್ಲಿ ದೃಷ್ಟಿ ಯೋಜನೆಯನ್ನು ಆರಂಭಿಸಲಾಗಿದೆ.

ಮುಂದಿನ ದಿನಗಳಲ್ಲಿ ಜಿಲ್ಲೆಯ ಉಳಿದ ಭಾಗಗಳಲ್ಲಿ ಇನ್ನೂ 21 ಕಡೆಗಳಲ್ಲಿ ಯೋಜನೆಯನ್ನು ವಿಸ್ತರಿಸಲಾಗುವುದೆಂದು ಎಸ್ಪಿ ತಿಳಿಸಿದರು.

**166 ಕಾಲೇಜುಗಳಲ್ಲಿ ಎಡಿಎಸಿ :**

ಡ್ರಗ್ಸ್ ಮುಕ್ತ ಉಡುಪಿ ಧ್ಯೇಯವಾಕ್ಯದೊಂದಿಗೆ ಶಾಲಾ ಕಾಲೇಜುಗಳಲ್ಲಿ ಮಾದಕ ವಸ್ತು ನಿಯಂತ್ರಿಸಲು ಜಾಗೃತ ಕಮಿಟಿ ಆರಂಭಿಸಲಾಗಿದೆ. ಜಿಲ್ಲೆಯ 120 ಪಿಯು ಕಾಲೇಜು ಹಾಗೂ 46 ವೃತ್ತಿಪರ ಕಾಲೇಜು ಸೇರಿದಂತೆ 166 ಕಾಲೇಜುಗಳಲ್ಲಿ ಕಮಿಟಿಯನ್ನು ರಚಿಸಲಾಗಿದೆ. ಈ ಕಮಿಟಿಯಲ್ಲಿ ಕಾಲೇಜಿನ ಪ್ರಿನ್ಸಿಪಾಲ್, ಇಬ್ಬರು ಸಿಬ್ಬಂದಿ ಹಾಗೂ ಪ್ರತಿ ತರಗತಿಯ ಓರ್ವ ವಿದ್ಯಾರ್ಥಿಗಳಿರುತ್ತಾರೆ, ಸ್ಥಳೀಯ ಠಾಣಾಧಿಕಾರಿ ನೋಡಲ್ ಅಧಿಕಾರಿಯಾಗಿರುತ್ತಾರೆ. ಕಥಾನ್‌ನಂತಹ ಜಾಗೃತಿ ಕಾರ್ಯಕ್ರಮ, ಪ್ರತಿ 3 ತಿಂಗಳಿಗೊಮ್ಮೆ ನೋಡಲ್ ಅಧಿಕಾರಿಯ ಸಭೆ, ತಜ್ಞ ವೈದ್ಯರಿಂದ ವಿದ್ಯಾರ್ಥಿಗಳ ಆರೋಗ್ಯ ತಪಾಸಣೆ, ಮಾದಕ ವಸ್ತು ಸೇವನೆ ಪತ್ತೆಯಾದ ವಿದ್ಯಾರ್ಥಿಗಳಿಗೆ ಆಪ್ತ ಸಮಾಲೋಚನೆ ಕೈಗೊಳ್ಳುವಂತೆ ತಿಳಿಸಲಾಗಿದೆ ಎಂದರು.

ಜಿಲ್ಲಾ ಮಟ್ಟದ ಸಮಿತಿಗೆ ನೋಡಲ್ ಅಕಾರಿಯಾಗಿ ಸೆನ್ ಅಪರಾಧ ಠಾಣೆಯ ಡಿವೈಎಸ್ಪಿ ಇರುತ್ತಾರೆ ಎಂದು ಎಸ್ಪಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಎಎಸ್ಪಿ ಸುಧಾಕರ್ ಎಸ್. ನಾಯ್ಕ್, ಜಿಲ್ಲಾ ಛೇಂಬರ್ ಆಫ್ ಕಾಮರ್ಸ್ ಅಧ್ಯಕ್ಷ ಅಮ್ಮುಂಜೆ ಪ್ರಭಾಕರ್ ನಾಯಕ್, ಕಾರ್ಯದರ್ಶಿ ಡಾ. ವಿಜಯೇಂದ್ರ ಉಪಸ್ಥಿತರಿದ್ದರು.

**ಎಲ್ಲೆಲ್ಲಿ ಕ್ಯಾಮರಾಗಳಿರುತ್ತವೆ?**

**ಕಾರ್ಕಳ ಗ್ರಾಮಾಂತರ ಠಾಣಾ ವ್ಯಾಪ್ತಿಯಲ್ಲಿ ಮಾಳ, ಹೊಸ್ಮಾರು, ಸಚ್ಚರಿಪೇಟೆ, ಕಾರ್ಕಳ ನಗರ ಠಾಣಾ ವ್ಯಾಪ್ತಿಯ ಸಾಣೂರು, ಹೆಬ್ರಿ ಪೊಲೀಸ್ ಠಾಣಾ ವ್ಯಾಪ್ತಿಯ ಸೋಮೇಶ್ವರ, ಅಮಾಸೆಬೈಲು ಠಾಣಾ ವ್ಯಾಪ್ತಿಯ ಹೊಸಂಗಡಿ, ಕೊಲ್ಲೂರು ಠಾಣಾ ವ್ಯಾಪ್ತಿಯ ದಳಿ, ಗಂಗೊಳ್ಳಿ ಠಾಣಾ ವ್ಯಾಪ್ತಿಯ ಮೇಲ್ ಗಂಗೊಳ್ಳಿ, ಮಲ್ಪೆ ಠಾಣಾ ವ್ಯಾಪ್ತಿಯ ಮಲ್ಪೆ ಬೀಚ್ ಮತ್ತು ಉಡುಪಿ ನಗರ ಪೊಲೀಸ್ ಠಾಣಾ ವ್ಯಾಪ್ತಿಯ ಸಿಟಿ ಬಸ್ ನಿಲ್ದಾಣಗಳಲ್ಲಿ ಒಟ್ಟು 10 ಸ್ವಯಂ ಚಾಲಿತ ನಂಬರ್ ಪ್ಲೇಟ್ ರೀಡರ್ ಕ್ಯಾಮರ ಅಳವಡಿಸಲಾಗುವುದು. ಅಲ್ಲದೇ ಉಡುಪಿ ನಗರದ ಕಲ್ಸಂಕ, ಕರಾವಳಿ ಜಂಕ್ಷನ್, ಇಂದ್ರಾಳಿ ಬ್ರಿಡ್ಜ್, ಸಂತೆಕಟ್ಟೆ, ಸರ್ವಿಸ್ ಬಸ್ ನಿಲ್ದಾಣ ಮತ್ತು ಹಳೆ ಕೆಎಸ್‌ಆರ್‌ಟಿಸಿ ನಿಲ್ದಾಣ ಹಾಗೂ ಕುಂದಾಪುರ ಉಪವಿಭಾಗ ವ್ಯಾಪ್ತಿಯ ಎಂ ಕೋಡಿ ಜಂಕ್ಷನ್, ಕಂಡ್ಲೂರು ಪೇಟೆ ಹಾಗೂ ಕಾರ್ಕಳ ಉಪವಿಭಾಗ ವ್ಯಾಪ್ತಿಯ ಬಾರಾಡಿ ಮತ್ತು ನಾರಾವಿ ಸ್ಥಳಗಳಲ್ಲಿ ಒಟ್ಟು 10 ಉತ್ತಮ ಗುಣಮಟ್ಟದ ಕ್ಯಾಮರಾ ಅಳವಡಿಸಲಾಗುವುದು.**

## ಅರಸು ಜನ್ಮ ದಿನ ಆ.20ಕ್ಕೆ

**ಉಡುಪಿ:** ಹಿಂದುಳಿದ ವರ್ಗಗಳ ಧೀಮಂತ ನಾಯಕ ಮಾಜಿ ಮುಖ್ಯಮಂತ್ರಿ ದಿ. ಡಿ. ದೇವರಾಜ ಅರಸು ಅವರ 110 ನೇ ಜನ್ಮ ದಿನವನ್ನು ಆ. 20 ರಂದು ಜಿಲ್ಲಾ ಮಟ್ಟದಲ್ಲಿ ಅರ್ಥಪೂರ್ಣ ಆಚರಣೆಗೆ ಸಕಲ ಸಿದ್ದತೆ ಮಾಡಿಕೊಳ್ಳುವಂತೆ ಎಂದು ಅಪರ ಜಿಲ್ಲಾಧಿಕಾರಿ ಅಬೀದ್ ಗದ್ಯಾಳ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಸಿದ್ಧತಾ ಸಭೆಯಲ್ಲಿ ಮಾತನಾಡಿದರು. ಡಿ. ದೇವರಾಜ ಅರಸು ಅವರ ಜನ್ಮ ದಿನಾಚರಣೆ ಕಾರ್ಯಕ್ರಮವನ್ನು ಅಂದು ಬೆಳಗ್ಗೆ 10 ಗಂಟೆಗೆ ಉಡುಪಿಯ ಬಡಗಬೆಟ್ಟು ಕೋ ಆಪರೇಟಿವ್ ಸೊಸೈಟಿಯ ಜಗನ್ನಾಥ ಸಭಾಭವನದಲ್ಲಿ ಜರುಗಲಿದೆ. ಡಿ. ದೇವರಾಜ ಅರಸು ಅವರ ದೂರದೃಷ್ಟಿ ಹಾಗೂ ಹಿಂದುಳಿದ ವರ್ಗಗಳ ಏಳಿಗೆಯ ಬಗ್ಗೆ ಅವರಿಗಿದ್ದ ಬದ್ಧತೆಯನ್ನು ಕಾರ್ಯಕ್ರಮದಲ್ಲಿ ಸ್ಮರಿಸಲಾಗುವುದು ಎಂದರು.

ಎಸ್ಸೆಸ್ಸೆಲ್ಸಿ, ಪಿ.ಯು.ಸಿ ಹಾಗೂ ಸ್ನಾತಕೋತ್ತರ ಪದವಿಯಲ್ಲಿ ಜಿಲ್ಲಾ ಮಟ್ಟದಲ್ಲಿ ಅತ್ಯಂತ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳಿಗೆ ನಗದು ಬಹುಮಾನ ನೀಡಿ ಸನ್ಮಾನಿಸಲಾಗುವುದು ಎಂದರು, ತಾಲೂಕು ಮಟ್ಟದಲ್ಲಿಯೂ ಅರಸು ಅವರ ಜನ್ಮ ದಿನ ಆಚರಿಸಲು ಕ್ರಮ ವಹಿಸಬೇಕು ಎಂದರು.

ಸಭೆಯಲ್ಲಿ ಎಎಸ್‌ಪಿ ಸುಧಾಕರ ನಾಯಕ್, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಹಾಕಪ್ಪ ಆರ್. ಲಮಾಣಿ, ಪೌರಾಯುಕ್ತ ಮಹಾಂತೇಶ ಹಂಗರಗಿ ಮತ್ತಿತರರು ಉಪಸ್ಥಿತರಿದ್ದರು.

## ಎಸ್‌ಸಿಡಿಸಿಸಿಗೆ ಅಪೆಕ್ಸ್ ಬ್ಯಾಂಕ್ ಪ್ರಶಸ್ತಿ

**ಮಂಗಳೂರು:** ಸಹಕಾರಿ ರಂಗದಲ್ಲಿ ಆಧುನಿಕ ತಂತ್ರಜ್ಞಾನದ ಮೂಲಕ ಬ್ಯಾಂಕಿಂಗ್ ಸೇವೆಯನ್ನು ನೀಡುತ್ತಾ ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಗುರುತಿಸಿಕೊಂಡಿರುವ ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ (ಎಸ್ ಸಿಡಿಸಿಸಿ ಬ್ಯಾಂಕ್)ಗೆ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನ ಪ್ರಥಮ ಪ್ರಶಸ್ತಿ ಲಭಿಸಿದೆ.

ಅಪೆಕ್ಸ್ ಬ್ಯಾಂಕ್ ರಾಜ್ಯದ ಅತ್ಯುತ್ತಮ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿಗೆ ಪ್ರಥಮ ಪ್ರಶಸ್ತಿಯನ್ನು ನೀಡುತ್ತಿದ್ದು ಈ ಪ್ರತಿಷ್ಠಿತ ಪ್ರಶಸ್ತಿಗೆ ಎಸ್ ಸಿಡಿಸಿಸಿ ಬ್ಯಾಂಕ್ ಭಾಜನವಾಗಿದೆ. ನಿರಂತರ ಸಮಾಜಮುಖಿ ಸೇವೆಗಳೊಂದಿಗೆ ತನ್ನ ಗ್ರಾಹಕರಿಗೆ ಸಂತೃಪ್ತ ಸೇವೆಯನ್ನು ನೀಡುತ್ತಿರುವ ಎಸ್ ಸಿಡಿಸಿಸಿ ಬ್ಯಾಂಕ್ 2023-24ರ ಪ್ರಗತಿಯೊಂದಿಗೆ ಲೆಕ್ಕ ಪರಿಶೋಧನೆಯಲ್ಲಿ ' ಎ 'ವರ್ಗವನ್ನು ಪಡೆದು ಪ್ರಥಮ ಪ್ರಶಸ್ತಿಗೆ ಆಯ್ಕೆಗೊಂಡಿರುತ್ತದೆ. ಬ್ಯಾಂಕ್ ವರದಿ ವರ್ಷದಲ್ಲಿ ನೀಡಿದ ಎಲ್ಲಾ ಕೃಷಿ ಸಾಲಗಳು ಶೇಕಡಾ ನೂರು ಮರುಪಾವತಿಯನ್ನು ಕಂಡಿದ್ದು, ಇಂತಹ ಸಾಧನೆಯನ್ನು ಬ್ಯಾಂಕ್ ಕಳೆದ 30 ವರ್ಷಗಳಿಂದ ನಿರಂತರವಾಗಿ ಮಾಡಿರುವುದು ರಾಷ್ಟ್ರೀಯ ದಾಖಲೆಯಾಗಿದೆ.

**23 ಬಾರಿ ಅಪೆಕ್ಸ್ ಬ್ಯಾಂಕ್ ಪ್ರಶಸ್ತಿ :**

ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ 113 ಶಾಖೆಗಳ ಮೂಲಕ ಉತ್ಕೃಷ್ಟ ಬ್ಯಾಂಕಿಂಗ್ ಸೇವೆಯನ್ನು ನೀಡುತ್ತಿರುವ ಎಸ್ ಸಿಡಿಸಿಸಿ ಬ್ಯಾಂಕ್ ಸಹಕಾರ ರತ್ನ ಡಾ।ಎಂ.ಎನ್. ರಾಜೇಂದ್ರ ಕುಮಾರ್ ಅವರ ನಾಯಕತ್ವದಲ್ಲಿ ಸಮರ್ಥವಾಗಿ ಕಾರ್ಯ ನಿರ್ವಹಿಸುತ್ತಿದೆ. ಅಭಿವೃದ್ಧಿಯ ಪಥದಲ್ಲಿರುವ ಎಸ್ ಸಿಡಿಸಿಸಿ ಬ್ಯಾಂಕ್ 'ರಾಜ್ಯದ ಅತ್ಯುತ್ತಮ ಬ್ಯಾಂಕ್' ಎನ್ನುವ ಹೆಗ್ಗಳಿಕೆಗೆ ಪಾತ್ರವಾಗಿ, ರಾಜ್ಯ ಅಪೆಕ್ಸ್ ಬ್ಯಾಂಕ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದೆ. ಅಪೆಕ್ಸ್ ಬ್ಯಾಂಕ್ ನ ಈ ಪ್ರತಿಷ್ಠಿತ ಪ್ರಶಸ್ತಿಯನ್ನು ಎಸ್ ಸಿಡಿಸಿಸಿ ಬ್ಯಾಂಕ್ 23ನೇ ಬಾರಿ ತನ್ನದಾಗಿಸಿಕೊಂಡಿದೆ.

**ಸೇವೆಯೇ ಮುಖ್ಯ ಧ್ಯೇಯ :**

ಗ್ರಾಹಕರ ಸೇವೆಯನ್ನೇ ಮುಖ್ಯ ಧ್ಯೆಯವನ್ನಾಗಿಟ್ಟುಕೊಂಡು ಯಶಸ್ಸಿನ ಪಥದಲ್ಲಿ ಮುನ್ನಡೆಯನ್ನು ಕಾಣುತ್ತಿರುವ ಎಸ್ ಸಿಡಿಸಿಸಿ ಬ್ಯಾಂಕಿಗೆ ವರದಿ ವರ್ಷದಲ್ಲಿ ಕೇಂದ್ರ ಸರಕಾರದ ಅಟಲ್ ಪಿಂಚಣಿ ಯೋಜನೆಯ ಸಮರ್ಪಕ ಅನುಷ್ಠಾನಕ್ಕಾಗಿ ಎಪಿವೈ ರಾಷ್ಟ್ರೀಯ ಪ್ರಶಸ್ತಿ ನಾಲ್ಕನೇ ಬಾರಿ ಲಭಿಸಿದೆ.

ಆ.13ನೇ ಬುಧವಾರದಂದು ಬೆಂಗಳೂರಿನಲ್ಲಿ ನಡೆಯುವ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿನ ವಾರ್ಷಿಕ ಮಹಾಸಭೆಯಲ್ಲಿ ಎಸ್ ಸಿಡಿಸಿಸಿ ಬ್ಯಾಂಕಿನ ಅಧ್ಯಕ್ಷರಾದ ಡಾ. ಎಂ. ಎನ್. ರಾಜೇಂದ್ರ ಕುಮಾರ್ ಅಪೆಕ್ಸ್ ಬ್ಯಾಂಕ್ ಪ್ರಶಸ್ತಿಯನ್ನು ಸ್ವೀಕರಿಸಲಿದ್ದಾರೆ.

## ರಾಜ್ಯದಲ್ಲಿ ಆಯುಷ್ಮಾನ್ ಜಾರಿಗೆ ಚೌಟ ಆಗ್ರಹ

**ನವದೆಹಲಿ:** ದೇಶದಲ್ಲಿ 70 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ ಉಚಿತ ಚಿಕಿತ್ಸೆ ನೀಡುವ ಕೇಂದ್ರದ ಆಯುಷ್ಮಾನ್ ಯೋಜನೆಗೆ ಕರ್ನಾಟಕ ಸರಕಾರ ತನ್ನ ಪಾಲು ನೀಡದ ಕಾರಣ ಯೋಜನೆ ಅನುಷ್ಠಾನ ಪ್ರಕ್ರಿಯೆ ಸ್ಥಗಿತಗೊಂಡಿರುವ ಬಗ್ಗೆ ದಕ್ಷಿಣ ಕನ್ನಡ ಸಂಸದ ಕ್ಯಾ. ಬ್ರಿಜೇಶ್ ಚೌಟ ಅವರು ಲೋಕಸಭೆಯಲ್ಲಿ ಪ್ರಸ್ತಾಪಿಸಿ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದ್ದಾರೆ.

ಈ ಬಗ್ಗೆ ನಿಯಮ 377ರ ಅಡಿಯಲ್ಲಿ ಲೋಕಸಭೆಯಲ್ಲಿ ಈ ಗಂಭೀರ ವಿಷಯವನ್ನು ಪ್ರಸ್ತಾಪಿಸಿರುವ ಸಂಸದರು, ದೇಶಾದ್ಯಂತ 70 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ ಉಚಿತ ಆರೋಗ್ಯ ಸೇವೆ ಒದಗಿಸಲು ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಕಳೆದ ವರ್ಷ 'ಆಯುಷ್ಮಾನ್ ಭಾರತ್ ಪ್ರಧಾನಮಂತ್ರಿ ಜನ ಆರೋಗ್ಯ ಯೋಜನೆ' ಜಾರಿಗೆ ತಂದಿದೆ. ಆದರೆ ಹಿರಿಯ ನಾಗರಿಕರಿಗೆ ಈ ಯೋಜನೆಯ ಲಾಭ ಪಡೆಯುವುದಕ್ಕೆ ಸಾಧ್ಯವಾಗುತ್ತಿಲ್ಲ. ಈ ಯೋಜನೆಗೆ ರಾಜ್ಯ ಸರ್ಕಾರ ತನ್ನ ಪಾಲಿನ ಶೇ.40 ರಷ್ಟು ಪಾಲನ್ನು ನೀಡುವುದಕ್ಕೆ ನಿರಾಕರಿಸಿದೆ. ಇದರಿಂದ ಲಕ್ಷಾಂತರ ಹಿರಿಯ ನಾಗರಿಕರಿಗೆ ಅಗತ್ಯ ಜೀವ ರಕ್ಷಕ ಚಿಕಿತ್ಸೆ ಪಡೆಯಲು ಸಾಧ್ಯವಾಗದೆ ಈ ಸೌಲಭ್ಯಗಳಿಂದ ವಂಚಿತರಾಗುತ್ತಿದ್ದಾರೆ ಎಂದು ಕಳಕಳ ವ್ಯಕ್ತಪಡಿಸಿದ್ದಾರೆ.

ರಾಜ್ಯದ ಹಿರಿಯ ನಾಗರಿಕರ ಆರೋಗ್ಯದ ಹಕ್ಕನ್ನು ಸಂರಕ್ಷಿಸುವುದಕ್ಕೆ ಅಗತ್ಯ ಕ್ರಮ ತೆಗೆದುಕೊಳ್ಳಬೇಕು. ಅಲ್ಲದೆ, ಬಹಳ ಜನಪ್ರಿಯವಾದ ಈ ಆಯುಷ್ಮಾನ್ ಯೋಜನೆ ಮಾನದಂಡಗಳನ್ನು ಪೂರೈಕೆ ಮಾಡುವಂತೆ ಕರ್ನಾಟಕ ಸರಕಾರಕ್ಕೆ ನಿರ್ದೇಶನ ನೀಡಬೇಕೆಂದು ಸಂಸದ ಕ್ಯಾ. ಚೌಟ ಅವರು ಸದನದಲ್ಲಿ ಒತ್ತಾಯಿಸಿದ್ದಾರೆ.

**ದ.ಕ.ಜಿಲ್ಲೆಯಲ್ಲಿ 80 ಸಾವಿರ ಹಿರಿಯ ನಾಗರಿಕರು**

**ಮಂಗಳೂರು ಭಾಗದಲ್ಲಿ 70 ವರ್ಷ ದಾಟಿರುವ ಸುಮಾರು 80 ಸಾವಿರ ಹಿರಿಯ ನಾಗರಿಕರಿದ್ದಾರೆ. ಈ ಆಯುಷ್ಮಾನ್ ಭಾರತ್ ಯೋಜನೆಯಡಿ ವಾರ್ಷಿಕವಾಗಿ 5 ಲಕ್ಷ ರೂ. ವಿಮಾ ಸೌಲಭ್ಯದಡಿ ಆಸ್ಪತ್ರೆಗೆ ದಾಖಲಾಗಿ ಉಚಿತ ಚಿಕಿತ್ಸೆ ಪಡೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ದೇಶದ ಬಡವರ್ಗದವರಿಗೆ ತಮ್ಮ ವೃದ್ಧಾಪ್ಯ ಜೀವನದಲ್ಲಿ ಎದುರಾಗುವ ಕಾಯಿಲೆಗಳಿಗೆ ಗುಣಮಟ್ಟದ ಚಿಕಿತ್ಸೆ ಪಡೆಯಬೇಕೆಂಬ ಕಳಕಳಿಯೊಂದಿಗೆ ಯೋಜನೆಯನ್ನು ಜಾರಿಗೊಳಿಸಿದ್ದಾರೆ ಎಂದು ಚೌಟಾ ಹೇಳಿದ್ದಾರೆ.**

## ಸಂತ್ರಸ್ತೆಯಿಂದ ಪೊಲೀಸ್ ಭದ್ರತೆಗೆ ಮನವಿ

**ಮಂಗಳೂರು:** ಮದುವೆಯಾಗುವುದಾಗಿ ನಂಬಿಸಿ ಸಹಪಾಠಿ ವಿದ್ಯಾರ್ಥಿನಿಯನ್ನು ಲೈಂಗಿಕವಾಗಿ ಬಳಸಿಕೊಂಡು ಇದೀಗ ಮಗುವಿನ ತಾಯಿಯಾಗಿರುವ ಸಂತ್ರಸ್ತೆ ಕುಟುಂಬ ಪೊಲೀಸ್ ಭದ್ರತೆಗಾಗಿ ಪಶ್ಚಿಮ ವಲಯ ಐಜಿಪಿ ಅಮಿತ್ ಸಿಂಗ್ ಅವರಿಗೆ ಮನವಿ ಮಾಡಿದೆ.

ತನ್ನ ಜೊತೆ ಕಲಿಯುತ್ತಿದ್ದ ಸಹಪಾಠಿ ಯುವತಿಯನ್ನು ಲೈಂಗಿಕವಾಗಿ ಬಳಸಿ ಬಳಿಕ ಆಕೆಗೆ ಮಗು ಕರುಣಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಇದೀಗ ಸಂತ್ರಸ್ಥೆ ಕುಟುಂಬದವರು ಇಂದು ಪಶ್ಚಿಮ ವಲಯ ಐಜಿಪಿ ಅಮಿತ್ ಸಿಂಗ್ ಅವರನ್ನು ಭೇಟಿ ಮಾಡಿ ಭದ್ರತೆ ನೀಡಿ ಮನವಿ ಸಲ್ಲಿಸಿದ್ದಾರೆ.

ಬಳಿಕ ಮಾಧ್ಯಮಗಳ ಜೊತೆ ಮಾತನಾಡಿದ ಸಂತ್ರಸ್ತೆ ತಾಯಿ ಇತ್ತೀಚೆಗೆ ಮನೆಯ ಸುತ್ತಮುತ್ತ ಕೆಲವು ಅಪರಿಚಿತ ವ್ಯಕ್ತಿಗಳ ಸಂಚಾರ, ರಾತ್ರಿ ವೇಳೆಯೂ ಗೇಟ್ ಬಡಿಯುವುದು, ಬಾಗಿಲು ಬಡಿಯುವಂತಹ ಘಟನೆಗಳು ನಡೆಯುತ್ತಿವೆ. ಪ್ರಕರಣಕ್ಕೆ ಇರುವ ಸಾಕ್ಷಿ ಎಂದರೆ ಮಗು ಮಾತ್ರ. ಹಾಗಾಗಿ ರಕ್ಷಣೆ ಕೇಳಿದ್ದೇವೆ ಎಂದರು.

ಈ ವೇಳೆ ಕರ್ನಾಟಕ ವಿಶ್ವ ಕರ್ಮ ಮಹಾ ಸಭಾ ರಾಜ್ಯಾಧ್ಯಕ್ಷ ಕೆ.ಪಿ.ನಂಜುಂಡಿ ಉಪಸ್ಥಿತರಿದ್ದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಮ್ಮ ಉದ್ದೇಶ ಹುಡುಗನಿಗೆ ಜೈಲು ಶಿಕ್ಷೆ ಆಗುವಂತೆ ಮಾಡುವುದು ಅಲ್ಲ. ಯುವತಿಯನ್ನು ಮದುವೆಯಾಗಿ, ಸಂಸಾರ ನಡೆಸಬೇಕು ಎನ್ನುವುದು ನಮ್ಮ ಆಶಯ. ಈ ಬಗ್ಗೆ ಕಲ್ಲಡ್ಕ ಪ್ರಭಾಕರ ಭಟ್, ನಳಿನ್ ಕುಮಾರ್ ಕಟೀಲು ಜತೆಗೂ ಮಾತನಾಡಿದ್ದೇನೆ ಎಂದರು. ಸದ್ಯದಲ್ಲೇ ಹುಡುಗನ್ನೂ ಜೈಲಿನಲ್ಲಿ ಭೇಟಿಯಾಗಿ ಮಾತುಕತೆ ನಡೆಸುತ್ತೇನೆ. ನಮ್ಮ ಮನವಿಗೆ ಐಜಿಪಿಯವರು ಸಕಾರಾತ್ಮಕವಾಗಿ ಸ್ಪಂದಿಸಿದ್ದು, ಮಹಿಳಾ ಪೊಲೀಸ್ ಒಬ್ಬರನ್ನು ಮನೆಯ ಬಳಿ ನಿಯೋಜಿಸುವಂತೆ ಎಸ್‌ಪಿಗೆ ಸೂಚನೆ ನೀಡಿದ್ದಾರೆ ಎಂದು ಕೆ.ಪಿ.ನಂಜುಂಡಿ ಹೇಳಿದರು.

ಸಂತ್ರಸ್ತೆ ಕುಟುಂಬ ಪೊಲೀಸ್ ಭದ್ರತೆಗಾಗಿ ಪಶ್ಚಿಮ ವಲಯ ಐಜಿಪಿ ಅಮಿತ್ ಸಿಂಗ್ ಅವರಿಗೆ ಮನವಿ ಸಲ್ಲಿಸಿದೆ.

## ಪದ್ಮಲತಾ ಪ್ರಕರಣ: ಮರು ತನಿಖೆಗೆ ದೂರು

**ಬೆಳ್ತಂಗಡಿ:** 38 ವರ್ಷಗಳ ಹಿಂದೆ ಧರ್ಮಸ್ಥಳ ಗ್ರಾಮದಲ್ಲಿ ನಿಗೂಢವಾಗಿ ಸಾವಿಗೀಡಾದ ಪದ್ಮಲತಾ ಪ್ರಕರಣವನ್ನು ಮರು ತನಿಖೆಗೆ ಒತ್ತಾಯಿಸಿ ಸಾಮೂಹಿಕ ಅಂತ್ಯಕ್ರಿಯೆ ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡಕ್ಕೆ (ಎಸ್‌ಐಟಿ) ದೂರು ನೀಡಿದ್ದಾರೆ. ಪದ್ಮಲತಾ ಅವರ ಸೋದರಿ ಇಂದ್ರಾವತಿ ಸೋಮವಾರ ತಮ್ಮ ಕುಟುಂಬಸ್ಥರೊಂದಿಗೆ ಎಸ್‌ಐಟಿ ಕಚೇರಿಗೆ ಆಗಮಿಸಿ ದೂರು ದಾಖಲಿಸಿದ್ದಾರೆ.

ನೆಲ್ಯಾಡಿ ನಿವಾಸಿ ಇಂದ್ರಾವತಿ ಸಲ್ಲಿಸಿರುವ ದೂರಿನಲ್ಲಿ, ಉಜಿರೆಯ ಎಸ್‌ಡಿಎಂ ಕಾಲೇಜಿನಲ್ಲಿ ದ್ವಿತೀಯ ಪಿಯು ಓದುತ್ತಿದ್ದ ನನ್ನ ಸಹೋದರಿ ಪದ್ಮಲತಾ 1986ರ ಡಿಸೆಂಬರ್ 22 ರಂದು ಧರ್ಮಸ್ಥಳ ತಲುಪಿದ ನಂತರ ನಾಪತ್ತೆಯಾಗಿದ್ದರು. ಅವರ ಕೊಳೆತ ಶವ 1987ರ ಫೆಬ್ರುವರಿ 17 ರಂದು ನೇರಿಯ ಹೊಳೆ ಬಳಿ ಪತ್ತೆಯಾಗಿತ್ತು. ನನ್ನ ತಂದೆಯ ಮನೆ ಮೊದಲು ಬೋಳಿಯಾರ್‌ನಲ್ಲಿತ್ತು. ಸಿಪಿಐಎಂ ನಾಯಕರಾಗಿದ್ದ ನನ್ನ ತಂದೆ ದಿವಂಗತ ದೇವಾನಂದ ಅವರು ನ್ಯಾಯಕ್ಕಾಗಿ ಹೋರಾಡಿದ್ದರು ಮತ್ತು ಅಪಹರಣ, ಅತ್ಯಾಚಾರ ಮತ್ತು ಕೊಲೆ ಆರೋಪದಲ್ಲಿ ಭಾಗಿಯಾಗಿರುವ ಅಪರಾಧಿಗಳಿಗೆ ಕಠಿಣ ಶಿಕ್ಷೆ ವಿಧಿಸಬೇಕೆಂದು ಒತ್ತಾಯಿಸಿದ್ದರು ಎಂದಿದ್ದಾರೆ.

ಸಾರ್ವಜನಿಕ ಒತ್ತಡದ ನಂತರ ಸಿಒಡಿ ತನಿಖೆಯನ್ನು ಪ್ರಾರಂಭಿಸಿತ್ತು. ಈ ವಿಷಯವನ್ನು ವಿಧಾನಸಭಾ ಅಧಿವೇಶನದಲ್ಲಿ ಕೂಡ ಚರ್ಚಿಸಲಾಯಿತು ಮತ್ತು ಆಗಿನ ಸಚಿವ ರಾಚಯ್ಯ ಬೋಳಿಯಾರ್‌ನಲ್ಲಿರುವ ನಮ್ಮ ಮನೆಗೆ ಭೇಟಿ ನೀಡಿ, ನ್ಯಾಯ ಕೊಡಿಸುವ ಭರವಸೆ ನೀಡಿದ್ದರು. ಆದರೆ, ತನಿಖೆಯಿಂದ ನ್ಯಾಯ ಸಿಗಲಿಲ್ಲ ಮತ್ತು ಪ್ರಕರಣವನ್ನು ಮುಚ್ಚಿಹಾಕಲಾಯಿತು. ಅಪಹರಣ, ಅತ್ಯಾಚಾರ ಮತ್ತು ಕೊಲೆಯ ವಿರುದ್ಧ ಒಂದು ದಿನ ನಮಗೆ ನ್ಯಾಯ ಸಿಗುತ್ತದೆ ಎಂಬ ಭರವಸೆಯೊಂದಿಗೆ ನನ್ನ ಸಹೋದರಿಯ ಶವವನ್ನು ಹೂಳಿದೆವು. ಆದ್ದರಿಂದ, ಆಕೆಯ ಶವವನ್ನು ಹೊರತೆಗೆದರೆ, ನಮಗೆ ನ್ಯಾಯ ಸಿಗುತ್ತದೆ ಎಂದು ನಾವು ಭಾವಿಸುತ್ತೇವೆ ಎಂದು ದೂರಿನಲ್ಲಿ ತಿಳಿಸಿದ್ದಾರೆ.

## ಆ.14ರಿಂದ 2 ದಿನ ಅಭಿಮಾನ ಪರ್ವ ವಿವಿಧ ಕಾರ್ಯಕ್ರಮ

**ಶಿವಮೊಗ್ಗ:** ಶ್ರೀಗಂಧ ಸಾಂಸ್ಕೃತಿಕ ಸಂಸ್ಥೆ, ವಾಸವಿ ಪಬ್ಲಿಕ್ ಶಾಲೆ, ನಂದನ ಎಜುಕೇಷನಲ್ ಟ್ರಸ್ಟ್, ವಿಕಾಸ ವಿದ್ಯಾಸಂಸ್ಥೆ, ಫೇಸ್ ಪದವಿಪೂರ್ವ ಕಾಲೇಜು, ಮುಂತಾದ ಸಂಘ-ಸಂಸ್ಥೆಗಳಿಂದ ಆ.14 ಮತ್ತು 15ರಂದು ಸಾರ್ವಜನಿಕ ಸ್ವಾತಂತ್ರ್ಯೋತ್ಸವ ಸಂಭ್ರಮದ 'ಅಭಿಮಾನ ಪರ್ವ' ಗಾಂಧಿಬಜಾರಿನಲ್ಲಿ ಆಚರಿಸಲಾಗುವುದು ಎಂದು ಸಂಚಾಲಕ ಶೇಷಾಚಲ ಹೇಳಿದರು.

ಅವರು ಪತ್ರಿಕಾಗೋಷ್ಠಿಯಲ್ಲಿ ಮಾತ ನಾಡಿ, ಇದೊಂದು ರಾಷ್ಟ್ರಾಭಿಮಾನದ ಹೆಮ್ಮೆಯ ಕಾರ್ಯಕ್ರಮವಾಗಿದೆ. ಪ್ರತಿಯೊಬ್ಬ ನಾಗರೀಕನು ಪಾಲ್ಗೊಳ್ಳಬೇಕು ಎಂಬುದು ಈ ಕಾರ್ಯ ಕ್ರಮದ ಉದ್ದೇಶವಾಗಿದೆ. ಕಾರ್ಯಕ್ರಮದ ಅಂಗವಾಗಿ ಅಂದು ವಿವಿಧ ಕಾರ್ಯಕ್ರಮ ಗಳನ್ನು ಆಯೋಜಿಸಲಾಗಿದೆ ಎಂದರು.

ಆ.14ರಂದು ಗಾಂಧಿಬಜಾರಿನ ಎಲ್ಲಾ ವರ್ತಕರ ಅಂಗಡಿಗಳು ಮತ್ತು ಮನೆಗಳ ಮೇಲೆ ಧ್ವಜಗಳನ್ನು ಕಟ್ಟಲಾಗುತ್ತದೆ. ಹೀಗೆ ಕಟ್ಟಲಾದ ಧ್ವಜಗಳನ್ನು 15ರಂದು ಹಾರಿಸಲಾಗುವುದು. 15ರ ಸಂಜೆ ಧ್ವಜಗಳನ್ನು ತೆರವುಗೊಳಿಸ ಲಾಗುವುದು ಪ್ರತಿಯೊಬ್ಬರು ಖಾದಿ ಧ್ವಜವನ್ನೇ ಹಾರಿಸಬೇಕು ಎಂದು ಮನವಿ ಮಾಡಿದರು.

ರಾಷ್ಟ್ರಭಕ್ತ ಬಳಗದ ಕೆ.ಈ. ಕಾಂತೇಶ್ ಮಾತನಾಡಿ, ಇದೊಂದು ಅಪೂರ್ವ ಕಾರ್ಯಕ್ರಮವಾಗಿದೆ. ರಾಷ್ಟ್ರಭಕ್ತರ ಬಳಗದ ಸಂಚಾಲಕ ಕೆ.ಎಸ್. ಈಶ್ವರಪ್ಪ, ಸಂಸದ ಬಿ.ವೈ. ರಾಘವೇಂದ್ರ, ಸಚಿವ ಮಧುಬಂಗಾರಪ್ಪ, ಶಾಸಕರಾದ ಎಸ್.ಎನ್. ಚನ್ನಬಸಪ್ಪ, ಡಿ.ಎಸ್. ಅರುಣ್, ಧನಂಜಯ ಸರ್ಜಿ ಮುಂತಾದವರು ಭಾಗವಹಿಸುವರು ಎಂದರು.

ರಾಷ್ಟ್ರಭಕ್ತರ ಬಳಗದ ಸಂಚಾಲಕ ಕೆ.ಎಸ್. ಈಶ್ವರಪ್ಪ, ಮಹಾಲಿಂಗಯ್ಯ ಶಾಸ್ತ್ರೀ, ಗಜೇಂದ್ರನಾಥ್, ಗುರುದೇವ್, ಮಂಜುನಾಥ್, ಉಮೇಶ್ ಆರಾಧ್ಯ, ಟಿ.ಆರ್. ಅಶ್ವತ್ಥನಾರಾಯಣ ಶೆಟ್ಟಿ ಇದ್ದರು.

## 17ರಂದು ವಧು-ವರ ಕೇಂದ್ರದ ವೆಬ್‌ಸೈಟ್ ಬಿಡುಗಡೆ

**ಶಿವಮೊಗ್ಗ:** ಶ್ರೀಗುರು ಶಾಂತವೀರೇಶ್ವರ ಸೇವಾ ಸಮಿತಿಯ ರಜತ ಮಹೋತ್ಸವ ನಿಮಿತ್ತ ಆಗಸ್ಟ್ 17ರಂದು ಸಂಜೆ 5 ಗಂಟೆಗೆ ಕುವೆಂಪು ರಂಗಮಂದಿರದಲ್ಲಿ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದು ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಎಸ್. ಮಹಾಲಿಂಗಯ್ಯ ಶಾಸ್ತ್ರಿ ಹೇಳಿದರು. ಅವರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ವೀರಶೈವ-ಲಿಂಗಾಯಿತ ವಧು-ವರರ ಅನ್ವೇಷಣಾ ಕೇಂದ್ರವು ಸ್ಥಾಪನೆಯಾಗಿ 25 ವರ್ಷಗಳು ತುಂಬಿವೆ. ಅಂದು ನೂತನ ಹಿಂದೂ ವಧು-ವರರ ಅನ್ವೇಷಣಾ ಕೇಂದ್ರದ ವೆಬ್‌ಸೈಟ್ ಬಿಡುಗಡೆ, ಯಾತ್ರಾ ಕೈಪಿಡಿ ಬಿಡುಗಡೆ, ಪ್ರತಿಭಾ ಪುರಸ್ಕಾರ, ಬೆಕ್ಕಿನ ಕಲ್ಮಠ ಶ್ರಾವಣ ಚಿಂತನ ಆಯೋಜಿಸಲಾಗಿದೆ ಎಂದರು.

ರಜತ ಮಹೋತ್ಸವದ ಅಂಗವಾಗಿ ಪ್ರತಿಭಾ ಪುರಸ್ಕಾರವನ್ನು ಆಯೋಜಿಸಲಾಗಿದೆ. ಶಿವಮೊಗ್ಗ ನಗರ ವ್ಯಾಪ್ತಿಯಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಶೇ.95ಕ್ಕಿಂತ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು. ಮಾಹಿತಿಗೆ ಮೊ: 8762460130 ಸಂಪರ್ಕಿಸಬಹುದಾಗಿದೆ ಎಂದರು.

**ಮಾನ್ಯ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ, ಸೊರಬ.**
**ಸಿ.ಮಿಸ್.ನಂ 113/2025**
**ಅರ್ಜಿದಾರರು:-**
1. ಬಸವಲಿಂಗಪ್ಪ ಬಿನ್ ಬಸವಣ್ಣಪ್ಪ, ಸುಮಾರು 76 ವರ್ಷ, ವ್ಯವಸಾಯಗಾರರು, ಗಂಗವಳ್ಳಿ ಗ್ರಾಮ, ಆನವಟ್ಟಿ ಹೋಬಳಿ, ಸೊರಬ ತಾಲ್ಲೂಕು.
**ವಿರುದ್ಧ**
**ತಹಶೀಲ್ದಾರ್‌ರವರು, ಸೊರಬ ತಾಲ್ಲೂಕು. ಸೊರಬ**
**ಸಾರ್ವಜನಿಕ ಪತ್ರಿಕಾ ಪ್ರಕಟಣೆ**
ಮೇಲ್ಕಂಡ ಅರ್ಜಿದಾರರು ಎದುರುದಾರರ ವಿರುದ್ದ ಕೆಳಗೆ ನಮೂದಿಸಿದ ವ್ಯಕ್ತಿಯು ಮರಣ ಹೊಂದಿರುವುದರಿಂದ ಮರಣ ದಾಖಲಾತಿಯನ್ನು ಪಡೆದುಕೊಳ್ಳುವ ಸಲುವಾಗಿ ಈ ಕೇಸನ್ನು ದಾಖಲಿಸಿದ್ದು ಇದರ ವಿಚಾರಣೆಯು ದಿನಾಂಕ:01-09-2025 ರಂದು ಬೆಳ್ಳಗ್ಗೆ 11 ಘಂಟೆಗೆ ಇರುವುದರಿಂದ ಈ ವಿಷಯದಲ್ಲಿ ಹಿತಾಸಕ್ತಿ ಇರುವವರು ಅರ್ಜಿದಾರರಾಗಿ ಅಥವಾ ಎದುರುದಾರರಾಗಿ ಅಂದು ಮಾನ್ಯ ನ್ಯಾಯಾಲಯದಲ್ಲಿ ಹಾಜರಾಗಬಹುದು. ಮರಣ ಹೊಂದಿದ ವ್ಯಕ್ತಿಯ ಹೆಸರು, ದಿನಾಂಕ ಮತ್ತು ಸ್ಥಳ ಅರ್ಜಿದಾರರ ತಾಯಿಯಾದ ಪುಟ್ಟಮ್ಮ ಕೋಂ ಬಸವಣ್ಣಪ್ಪ ಇವರು ಸೊರಬ ತಾಲ್ಲೂಕು, ಆನವಟ್ಟಿ ಹೋಬಳಿ, ಗಂಗವಳ್ಳಿ ಗ್ರಾಮದಲ್ಲಿ ದಿನಾಂಕ: 09-08-1956 ರಂದು ಮರಣ ಹೊಂದಿರುತ್ತಾರೆ. ಆ ಸಂಬಂಧ ಅರ್ಜಿದಾರರ ಅವರ ತಾಯಿಯ ಮರಣ ದಾಖಲೆ ಪಡೆಯುವ ಸಂಬಂಧ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ.
**ನ್ಯಾಯಾಲಯದ ಅಪ್ಪಣೆಯ ಮೇರೆಗೆ (ಶಿರಸ್ತೇದಾರರು)**
**ರೋಲ್ ನಂ ಕೆ.ಎ.ಆರ್. 8/2007 .**
**ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಸೊರಬ**
ಅರ್ಜಿದಾರರ ಪರ ವಕೀಲರು.
**ಓಂಕಾರಪ್ಪ ಎಸ್,** ವಕೀಲರು,ಸೊರಬ

**ಮಾನ್ಯ 2ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ಇವರ ನ್ಯಾಯಾಲಯ, ಹರಿಹರ.**
**ಸಿ.ಆರ್.ಮಿಸ್. ನಂ:492/2025**
**ಅರ್ಜಿದಾರರು:-**
**ಶ್ರೀ ಪ್ರವೀಣ ಹೆಚ್,** ತಂದೆ ಲೇಟ್ ಹನುಮಂತ ಗೌಡ. ವಯಸ್ಸು ಸುಮಾರು 29 ವರ್ಷ, ವಾಸ: ವಾಲ್ಮೀಕಿ ಬಡಾವಣೆ ಮಲೇಬೆನ್ನೂರು, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ.
**ವಿರುದ್ಧ**
**ಜನನ ಮತ್ತು ಮರಣ ನೊಂದಾಣಾಧಿಕಾರಿಗಳು ಪುರಸಭೆ ಮಲೇಬೆನ್ನೂರು ಹರಿಹರ ತಾಲ್ಲೂಕು**
**ಸಾರ್ವಜನಿಕ ನೋಟಿಸು**
ಅರ್ಜಿದಾರರ ತಂದೆಯಾದ "ಹನುಮಂತ ಗೌಡ ತಂದೆ ಗುಡ್ಡಪ್ಪ ಗೌಡ" ಇವರು ದಿನಾಂಕ;01-06-1996 ರಂದು ಹರಿಹರ ತಾಲ್ಲೂಕು ಮಲೇಬೆನ್ನೂರಿನ ತಮ್ಮ ಮನೆಯಲ್ಲಿ ಮರಣ ಹೊಂದಿರುತ್ತಾರೆ ಎಂಬ ಅಂಶವನ್ನು ನೋಂದಾಯಿಸಿ ಕೊಂಡು ಮರಣ ಸಮರ್ಥನಾ ಪತ್ರ ನೀಡುವಂತೆ ಎದುರುದಾರನು ಮೇಲ್ಕಂಡ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಈ ಅರ್ಜಿ ಕುರಿತು ಯಾರದ್ದಾದರೂ ತಕರಾರು ಇದ್ದಲ್ಲಿ ದಿನಾಂಕ; 25-09-2025ರಂದು ಬೆಳಿಗ್ಗೆ 11-00 ಗಂಟೆಗೆ ತಾವಾಗಲಿ, ವಕೀಲರ ಮೂಲಕವಾಗಲಿ ಹಾಜರಿದ್ದು, ಅಹವಾಲು ಸಲ್ಲಿಸಬಹುದು. ಇಲ್ಲದಿದ್ದರೆ ಪ್ರಕರಣವನ್ನು ಏಕಪಕ್ಷಿಯವಾಗಿ ನಿರ್ಣಯಿಸಲಾಗುವುದು.
**ನ್ಯಾಯಾಲಯದ ಅಪ್ಪಣೆ ಮೇರೆಗೆ**
**ದಿ:-05-08-2025 ರಂದು ನೀಡಲಾಗಿದೆ.**
**ಶಿರಸ್ತೆದಾರರು, 2ನೇ ಹೆಚ್ಚುವರಿ ಸಿವಿಲ್ & ಪ್ರದ,ನ್ಯಾ.ದಂ, ನ್ಯಾಯಾಲಯ, ಹರಿಹರ.**
ಅರ್ಜಿದಾರರ ಪರ ವಕೀಲರು.
(ಮಲ್ಲಿಕಾರ್ಜುನ ಸಿ.ಎನ್.)
ಸ್ಥಳ : ಹರಿಹರ
ದಿನಾಂಕ;05-08-2025

**ಮಾನ್ಯ 2ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ಇವರ ನ್ಯಾಯಾಲಯ, ಹರಿಹರ.**
**ಸಿ.ಆರ್.ಮಿಸ್. ನಂ:474/2025**
**ಅರ್ಜಿದಾರರು:-**
**ಶ್ರೀ ಹೆಚ್,ನಾಗರಾಜ ತಂದೆ ಗೋದೆಪ್ಪ ವಯಸ್ಸು** ಸುಮಾರು 46 ವರ್ಷ, ವ್ಯವಸಾಯಗಾರರು ವಾಸ: ಬನ್ನಿಕೋಡು ಗ್ರಾಮ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ.
**ವಿರುದ್ಧ**
**ಜನನ ಮತ್ತು ಮರಣ ನೊಂದಾಣಾಧಿಕಾರಿಗಳು ತಹಶೀಲ್ದಾರರ ಕಛೇರಿ, ಹರಿಹರ ತಾಲ್ಲೂಕು ದಾವಣಗೆರೆ ಜಿಲ್ಲೆ**
**ಸಾರ್ವಜನಿಕ ನೋಟಿಸು**
ಅರ್ಜಿದಾರರ ಅಣ್ಣನಾದ "ಬಸವರಾಜಪ್ಪ ತಂದೆ ಗೋದೆಪ್ಪ" ಇವರು ದಿನಾಂಕ; 10-04-1970 ರಂದು ಹರಿಹರ ತಾಲ್ಲೂಕು ಬನ್ನಿಕೋಡು ಗ್ರಾಮದಲ್ಲಿ ಮರಣ ಹೊಂದಿರುತ್ತಾರೆ ಎಂಬ ಅಂಶವನ್ನು ನೋಂದಾಯಿಸಿ ಕೊಂಡು ಮರಣ ಸಮರ್ಥನಾ ಪತ್ರ ನೀಡುವಂತೆ ಎದುರುದಾರನು ಮೇಲ್ಕಂಡ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಈ ಅರ್ಜಿ ಕುರಿತು ಯಾರದ್ದಾದರೂ ತಕರಾರು ಇದ್ದಲ್ಲಿ ದಿನಾಂಕ; 24-09-2025ರಂದು ಬೆಳಿಗ್ಗೆ 11-00 ಗಂಟೆಗೆ ತಾವಾಗಲಿ, ವಕೀಲರ ಮೂಲಕವಾಗಲಿ ಹಾಜರಿದ್ದು, ಅಹವಾಲು ಸಲ್ಲಿಸಬಹುದು. ಇಲ್ಲದಿದ್ದರೆ ಪ್ರಕರಣವನ್ನು ಏಕಪಕ್ಷಿಯವಾಗಿ ನಿರ್ಣಯಿಸಲಾಗುವುದು.
**ನ್ಯಾಯಾಲಯದ ಅಪ್ಪಣೆ ಮೇರೆಗೆ**
**ದಿ:-05-08-2025 ರಂದು ನೀಡಲಾಗಿದೆ.**
**ಶಿರಸ್ತೆದಾರರು, 2ನೇ ಹೆಚ್ಚುವರಿ ಸಿವಿಲ್ & ಪ್ರದ,ನ್ಯಾ.ದಂ, ನ್ಯಾಯಾಲಯ, ಹರಿಹರ.**
ಅರ್ಜಿದಾರರ ಪರ ವಕೀಲರು.
(ಮಲ್ಲಿಕಾರ್ಜುನ ಸಿ.ಎನ್.)
ಸ್ಥಳ : ಹರಿಹರ
ದಿನಾಂಕ; 05-08-2025

## ಶಿವಮೊಗ್ಗ: ಕೆಸರು ಗದ್ದೆ ಕ್ರೀಡೋತ್ಸವ

**ಶಿವಮೊಗ್ಗ:** ರಾಜ್ಯದ ಕರಾವಳಿ ಜಿಲ್ಲೆಗಳಲ್ಲಿ ಪ್ರಸಿದ್ಧವಾಗಿರುವ ಕೆಸರು ಗದ್ದೆ ಕ್ರೀಡೋತ್ಸವವನ್ನು ಶಿವಮೊಗ್ಗದಲ್ಲೂ ನಡೆಸಬೇಕೆಂಬ ಉದ್ದೇಶದಿಂದ ಈ ಕ್ರೀಡೋತ್ಸವವನ್ನು ಪ್ರಪ್ರಥಮ ಬಾರಿಗೆ ನಗರದಲ್ಲಿ ಆಯೋಜಿಸ ಸಿರುವುದಾಗಿ ಜೇಸಿಸ್ ಸ್ಪೋರ್ಟ್ಸ್ ಮತ್ತು ಕಲ್ಚರಲ್ ಕ್ಲಬ್‌ನ ಅಧ್ಯಕ್ಷ ಚಂದ್ರಹಾಸ ಶೆಟ್ಟಿ ಹೇಳಿದರು.

ನಗರದ ಹೊರವಲಯದ ಗೋಂದಿ ಚಟ್ನಳ್ಳಿಯಲ್ಲಿ ಇದೇ ಪ್ರಥಮಬಾರಿಗೆ ಆಯೋಜಿ ಸಿದ್ದ 'ಕೆಸರುಗದ್ದೆ ಕ್ರೀಡೋತ್ಸವಕ್ಕೆ ಚಾಲನೆ ನೀಡಿ ಮಾತನಾಡುತ್ತಿದ್ದರು. ಜನರು ಮಾನಸಿಕ ಒತ್ತಡದಿಂದ, ಸಾಮಾ ಜಿಕ ಜಂಜಾಟದಿಂದ ಹೊರ ಬಂದು ನೆಮ್ಮದಿ ಯಿಂದ ಇರಲು ಇಂಥಹ ಕ್ರೀಡೆಗಳು ಸಹಕಾರಿ.

200 ರಿಂದ 250 ಮಕ್ಕಳು, ಮಹಿಳೆಯರು ಹಾಗೂ ಪುರುಷರು ಈ ಕ್ರೀಡೋತ್ಸವದಲ್ಲಿ ಭಾಗವಹಿಸುತ್ತಿದ್ದಾರೆ. ಸ್ಪರ್ಧಿಗಳಿಗೆ ಮಾತ್ರ ಇದರಲ್ಲಿ ಅವಕಾಶ ಕಲ್ಪಿಸಲಾಗಿದೆ. ಹಗ್ಗ ಜಗ್ಗಾಟ, ಹ್ಯಾಂಡ್ ಬಾಲ್, ನಿಧಿಶೋಧ, ಥ್ರೋಬಾಲ್, ಮಡಿಕೆ ಒಡೆಯುವ ಸ್ಪರ್ಧೆ ಗಳಲ್ಲಿ ಇವರೆಲ್ಲ ಭಾಗವಹಿಸುತ್ತಿದ್ದಾರೆ. ಎಂದರು.

ಶಹರದ ಮಕ್ಕಳಿಗೆ ಹಳ್ಳಿ ಸೊಗಡನ್ನು ಅರ್ಥಮಾಡಿಸುವುದೂ ಇದರ ಇನ್ನೊಂದು ಉದ್ದೇಶ ಎಂದ ಅವರು ಎಲ್ಲ ವಯೋ ಮಾನದವರೂ ಇದರಲ್ಲಿ ಭಾಗವಹಿಸುತ್ತಿ ರುವುದು ಸಂತಸ ಸಂಗತಿ ಎಂದರು.

ಮಹಿಳೆಯರು, ಮಕ್ಕಳು, ಯುವಕರು, ವೃದ್ಧರು ಎಲ್ಲರೂ ಕೆಸರಿನಲ್ಲಿ ಮಿಂದೆದ್ದರು. ಹೊಸ ಅನುಭವ ಪಡೆದರು. ರೊಟ್ಟಿ ಕಡಬು, ಶಾವಿಗೆ, ಒತ್ತು ಶಾವಿಗೆ ಇತ್ಯಾದಿ ಕರಾವಳಿ, ಮಲೆನಾಡಿನ ಹಳ್ಳಿಸೊಗಡಿನ ಊಟದ ವ್ಯವಸ್ಥೆಯನ್ನು ಮಾಡಲಾಗಿತ್ತು.

ಸೂಡಾ ಅಧ್ಯಕ್ಷ ಹೆಚ್.ಎಸ್. ಸುಂದರೇಶ್, ಶಿವಮೊಗ್ಗ ನಗರ ಬಿಜೆಪಿ ಅಧ್ಯಕ್ಷ ಮೋಹನ್‌ರೆಡ್ಡಿ, ಎಸ್.ಎಸ್. ಜ್ಯೋತಿಪ್ರಕಾಶ್, ಕಿರಣ, ಈ. ವಿಶ್ವಾಸ್, ಶರತ್ ಮರಿಯಪ್ಪ, ಜಿ.ಡಿ. ಮಂಜುನಾಥ್, ಎಸ್.ಎನ್. ಶ್ರೀನಾಗ್, ಹೆಚ್.ಪಿ. ಸುದರ್ಶನ್, ಗಾ.ರಾ. ಶ್ರೀನಿವಾಸ್, ನವೀನ್ ತಲಾರಿ, ಪರಮೇಶ್ವರ್ ಇದ್ದರು.

## 13ನೇ ಗುಂಡಿ: 3 ರೌಂಡ್ ಹಾಕಿದ ಡ್ರೋಣ್

**ಧರ್ಮಸ್ಥಳ:** ಗ್ರಾಮದ ವಿವಿಧೆಡೆ ಹಲವಾರು ಮೃತದೇಹಗಳನ್ನು ಹೂತು ಹಾಕಿರುವುದಾಗಿ ಹೇಳಿಕೆ ನೀಡಿದ ಪ್ರಕರಣದ ತನಿಖೆಯಲ್ಲಿ ಅತ್ಯಂತ ಮಹತ್ವದ ಬೆಳವಣಿಗೆ ನಡೆದಿದ್ದು, ಜಿ.ಪಿ.ಆರ್ ಯಂತ್ರವನ್ನು ಉಪಯೋಗಿಸಿ ಎಸ್‌ಐಟಿ ತನಿಖೆ ಆರಂಭಿಸಿದೆ. ಆದರೆ ರಾಡರ್ ಡ್ರೋಣ್ ಸಹಕಾರದೊಂದಿಗೆ 13ನೇ ಪಾಯಿಂಟ್‌ನಲ್ಲಿ ಮೂರು ಸುತ್ತು ಹೊಡೆದು ವಾಪಸ್ ಹೋಗಿದೆ. ಎಸ್.ಐ.ಟಿ ತಂಡ ಹಾಗೂ ಜಿ.ಪಿ.ಆರ್ ತಜ್ಞರ ತಂಡ ಸಾಕ್ಷಿ ದೂರುದಾರ ಗುರುತಿಸಿದ 13ನೆಯ ಸ್ಥಳದಲ್ಲಿ ಜಿ.ಪಿ. ಆರ್ ನಿಂದ ಪರಿಶೀಲನೆಗೆ ಸಿದ್ದತೆಗಳು ನಡೆದಿದ್ದು, ಜಿ.ಪಿ.ಆರ್ ಯಂತ್ರವನ್ನು ನೇತ್ರಾವತಿ ಸ್ನಾನಘಟ್ಟದ ಸಮೀಪ ಗುರುತಿಸಿದ 13ನೆಯ ಸ್ಥಳಕ್ಕೆ ತಂದು ಕಾರ್ಯಾಚರಣೆ ಆರಂಭಿಸಿದರ. ಈ ವರೆಗೆ 12 ಸ್ಥಳ ಹಾಗೂ 14, 15, 16, 16(ಎ) ನೇ ಸ್ಥಳದಲ್ಲಿ ಶೋಧಕಾರ್ಯ ನಡೆಸಿದ್ದು, 13 ನೇ ಸ್ಥಳದಲ್ಲಿ ಮಾತ್ರ ಶೋಧಕಾರ್ಯ ಬಾಕಿ ಉಳಿದಿದೆ. 13 ನೇ ಸ್ಥಳದಲ್ಲಿ ಈ ಹಿಂದೆ ಯೋಜಿಸಿದ್ದಂತೆ , ಜಿಪಿಆರ್ ಬಳಕೆ ಮಾಡಿ ಶೋಧ ಕಾರ್ಯ ಕೂಡ ನಿಖರ ಫಲಿತಾಂಶ ಬರುವ ಸಾಧ್ಯತೆಗಳಿಲ್ಲ. ಹೀಗಾಗಿ 13 ನೇ ಜಾಗದ ಶೋಧ ಕಗ್ಗಂಟಾಗಿದೆ, ಈ ಸ್ಥಳದ ವಿಸ್ತೀರ್ಣವೂ ದೊಡ್ಡದಾಗೊದೆ. ಪಕ್ಕದಲ್ಲೇ ಕಿಂಡಿ ಅಣೆಕಟ್ಟು ಇದೆ. ಮೆಸ್ಕಾಂನ ಟ್ರಾನ್ಸಾರ್ಫ್ಮರ್ ಕಂಬಗಳು ಕೂಡಾ ಇವೆ. ಹೀಗಾಗಿ ಅಗೆಯುವ ಮುನ್ನ ರೇಡಾರ್ ಮೂಲಕ ಭೂಮಿ ಒಳಗಡೆ ಏನಿದೆ ಎಂಬುದನ್ನು ಪತ್ತೆ ಹಚ್ಚಲು ನಿರ್ಧರಿಸಲಾಗಿದೆ. ಮಂಗಳವಾರ ಸಮಾಧಿ ಉತ್ಖನನ ಕಾರ್ಯ ಮುಂದುವರಿಯಲಿದೆ.

ಜಾಲತಾಣಗಳಲ್ಲಿ ಸುಳ್ಳು ಪ್ರಚಾರ | ಶ್ರೀ ಕ್ಷೇತ್ರ ಭಕ್ತಾಭಿಮಾನಿಗಳ ವೇದಿಕೆ ಪ್ರತಿಭಟನೆ

# ಧರ್ಮಸ್ಥಳದ ವಿರುದ್ಧ ವ್ಯವಸ್ಥಿತ ಷಡ್ಯಂತ್ರ

**ಶಿವಮೊಗ್ಗ:** ದಕ್ಷಿಣಕಾಶೀ ಎಂದೇ ಪ್ರಸಿದ್ಧವಾದ ಪವಿತ್ರ ಧಾರ್ಮಿಕ ಕ್ಷೇತ್ರಗಳಲ್ಲೊಂದಾದ 800 ವರ್ಷಗಳ ಇತಿಹಾಸವಿರುವ ಶ್ರೀಕ್ಷೇತ್ರ ಧರ್ಮಸ್ಥಳ ಶ್ರೀ ಮಂಜುನಾಥ ಸ್ವಾಮಿ ದೇವಾಲಯ ಹಾಗೂ ಧರ್ಮಾಧಿಕಾರಿಗಳಾದ ಡಿ. ವೀರೇಂದ್ರ ಹೆಗ್ಗಡೆ ಮತ್ತು ಅವರ ಕುಟುಂಬಸ್ಥರ ಹೆಸರಿಗೆ ಕಳಂಕ ತರುವಂತಹ ಕೀಳುಮಟ್ಟದ ಭಾಷೆ ಉಪಯೋಗಿಸಿ, ವೀಡಿಯೋ ತುಣುಕುಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳುಸುದ್ದಿ ಪ್ರಚಾರ ಮಾಡುತ್ತಿರುವುದನ್ನು ಖಂಡಿಸಿ, ಶ್ರೀ ಧರ್ಮಸ್ಥಳ ಭಕ್ತಾಭಿಮಾನಿಗಳ ವೇದಿಕೆಯಿಂದ ಸೋಮವಾರ ಗೋಪಿವೃತ್ತದಿಂದ ಜಿಲ್ಲಾಧಿಕಾ ರಿಗಳ ಕಚೇರಿವರೆಗೆ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿ, ಜಿಲ್ಲಾಧಿಕಾರಿಗಳ ಮೂಲಕ ರಾಜ್ಯಪಾಲರು ಮತ್ತು ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ, ಸಮಿತಿಯ ಸೊಪ್ಪುಗುಡ್ಡೆ ರಾಘವೇಂದ್ರ, ಇಂದಿನ ಹೋರಾಟ ಬರೀ ಶ್ಯಾಂಪಲ್ ಅಷ್ಟೇ. ರಾಜ್ಯಾದ್ಯಂತ ಒಂದು ಕೋಟಿಗೂ ಹೆಚ್ಚುಜನ ಸೇರಿ ಪ್ರತೀ ತಾಲ್ಲೂಕಿನಲ್ಲೂ ಅಪಪ್ರಚಾರದ ವಿರುದ್ಧ ಹೋರಾಟ ಮಾಡುತ್ತೇವೆ. ಹಿಂದೂಗಳು ತಿರುಗಿನಿಂತರೆ ಪರಿಣಾಮ ಬೇರೆಯೇ ಆಗುತ್ತದೆ. ಧರ್ಮಸ್ಥಳವನ್ನು ಉಳಿಸಿಕೊಳ್ಳುವುದು ನಮಗೆ ಗೊತ್ತಿದೆ. 10 ಸಾವಿರಕ್ಕೂ ಹೆಚ್ಚು ಹಿಂದೂ ದೇವಾಲಯಗಳನ್ನು ಮತ್ತು ಕೆರೆಗಳನ್ನು ಧರ್ಮಸ್ಥಳದ ಮೂಲಕ ಜೀರ್ಣೋದ್ಧಾರ ಮಾಡಲಾಗಿದೆ. ಆಗ ಜೈನರು ಎಂದು ಯಾರೂ ಕೇಳಿಲ್ಲ, ಈಗ ಹಿಂದೂ ಮತ್ತು ಜೈನ್ ಎಂದು ಹೊಡೆಯುವ ಪ್ರಯತ್ನ ಮಾಡುತ್ತಿದ್ದಾರೆ. ಯಾವನೋ ಒಬ್ಬ ಅನಾಮಿಕ ಡಿಸಿ ಕಛೇರಿಯ ಕೆಳಗೆ ನಾಲ್ಕು ಹೆಣ ಹೂತಿದ್ದೇನೆ ಎಂದರೆ ನಾಳೆ ಸರ್ಕಾರ ಅದನ್ನು ಅಗೆಯಲು ಸಿದ್ಧವಿದೆಯೇ ಎಂದು ಪ್ರಶ್ನಿಸಿದರು. ಖಾವಂದರ ಬಗ್ಗೆ ಮಾತನಾಡಿದರೆ ಸಹಿಸುವ ಪ್ರಶ್ನೆಯಿಲ್ಲ. ಶನಿವಾರ ತೀರ್ಥಹಳ್ಳಿಯಿಂದ ಹೋರಾಟ ಪ್ರಾರಂಭಿಸ ್ತೇವೆ. ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲೂ ಕನಿಷ್ಠ 10 ಸಾವಿರ ಜನರನ್ನು ಸೇರಿಸಿ ಅಪಪ್ರಚಾರದ ವಿರುದ್ಧ ಹೋರಾಟ ಮಾಡುತ್ತೇವೆ. ಎಲ್ಲಾ ಹಿಂದೂ ನಾಯಕರು ಮಠಾಧೀಶರು ಈ ಬಗ್ಗೆ ಧ್ವನಿಎತ್ತಬೇಕು ಎಂದರು.

ಧರ್ಮಸ್ಥಳ ಭಕ್ತರು ಜಾಗೃತರಾಗಿದ್ದಾರೆ. ಸುಮ್ಮನೆ ಕೂತಿಲ್ಲ, ಎಲ್ಲರೂ ಎದ್ದರೆ ಈ ಸರಕಾರ ಇರಲ್ಲ. ಅನಾಮಿಕ ಯಾರು ? ಎಸ್‌ಐಟಿ ಅಧಿಕಾರಿಗಳ ಪ್ರವೇಶವನ್ನು ಹಿಂದೂಗಳು ತಡೆದರೆ ಅದನ್ನು ಅಸ್ತ್ರವಾಗಿಟ್ಟುಕೊಂಡು ಗಲಭೆ ಎಬ್ಬಿಸುವ ಭ್ರಮೆಯಲ್ಲಿ ಕೆಲವರಿದ್ದಾರೆ. ಎಸ್‌ಐಟಿ ಅಧಿಕಾರಿಗಳನ್ನು ನಾನು ಅಭಿನಂದಿಸುತ್ತೇನೆ. ಅವರು ಶಾಂತವಾಗಿ ಅನಾಮಿಕ ಹೇಳಿದ ಕಡೆಯಲೆಲ್ಲಾ ಅಗೆದು ತನಿಖೆ ಮಾಡುತ್ತಿದ್ದಾರೆ. ಇದರಿಂದ ರಾಜ್ಯದೆಲ್ಲೆಡೆ ಹಿಂದೂ ಸಮಾಜ ಒಂದು ರೀತಿಯಲ್ಲಿ ಒಟ್ಟಾಗಲು ಸಹಕಾರ ಕೊಡುತ್ತಿದ್ದಾನೆ ಅದಕ್ಕಾಗಿ ಅನಾಮಿಕನಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ಧರ್ಮಸ್ಥಳ ಭಕ್ತಾಭಿಮಾನಿಗಳು ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿ, ಜಿಲ್ಲಾಧಿಕಾರಿಗಳ ಮೂಲಕ ರಾಜ್ಯಪಾಲರು ಮತ್ತು ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಲಾಯಿತು.

> ಧರ್ಮಸ್ಥಳ ಮತ್ತು ಧರ್ಮಾಧಿಕಾರಿಯವರ ಬಗ್ಗೆ ಅವಮಾನ ಮಾಡಿದರೆ ಯಾವುದೇ ತ್ಯಾಗಕ್ಕೂ ನಾವು ಸಿದ್ಧರಿದ್ದೇವೆ ಎಂದು ಈಗಾಗಲೇ ತೀರ್ಮಾನ ಮಾಡಿಯಾಗಿದೆ. ಯಾವುದೇ ಸೂಚನೆ ನೀಡದೆ ಇಷ್ಟು ಜನ ಹಿಂದೂಗಳು ಸೇರಿದ್ದೀರಿ. ಮೊದಲು ಅನಾಮಿಕನನ್ನು ಅರೆಸ್ಟ್‌ಮಾಡಿ. ಆತ ದಿನಕ್ಕೊಂದು ಜಾಗ ತೋರಿಸುತ್ತಿದ್ದಾನೆ. ನಾಳೆ ಸಿಎಂ ಮನೆ ತೋರಿಸಿದರೆ ಅದನ್ನು ಒಡೆದುಹಾಕುತ್ತೀರಾ.
>
> -ಕೆ.ಎಸ್. ಈಶ್ವರಪ್ಪ, ಮಾಜಿ ಉಪಮುಖ್ಯಮಂತ್ರಿ

ಹೆಗ್ಗಡೆಯವರು 25 ಲಕ್ಷಕ್ಕೂ ಹೆಚ್ಚು ಹೆಣ್ಣು ಮಕ್ಕಳಿಗೆ ಸ್ವ-ಉದ್ಯೋಗ ಕಲ್ಪಿಸಿದರು, ನೂರಾರು ಕೆರೆಗಳನ್ನು ಜೀರ್ಣೋದ್ಧಾರ ಮಾಡಿದರು, ಕುಡಿತದ ಚಟವನ್ನು ಬಿಡಿಸಿದರು, ಮತಾಂತರ ನಿಲ್ಲಿಸಿದರು, ಅವರ ವಿರುದ್ಧ ಕೆಲವು ಎಡಪಂಥೀಯರು ಮತ್ತು ಹಿಂದೂ ವಿರೋಧಿಗಳು ಒಗ್ಗಟ್ಟಾಗಿ ಷಡ್ಯಂತ್ರ ಮಾಡಿದರೆ ಹಿಂದೂ ಸಮಾಜ ತಕ್ಕಪಾಠ ಕಲಿಸುತ್ತದೆ ಎಂದರು. ಮಾಜಿ ಶಾಸಕ ಕೆ.ಬಿ. ಪ್ರಸನ್ನಕುಮಾರ್ ಮಾತನಾಡಿ, ಯಾರಿಗೂ ಅನ್ಯಾಯಮಾಡದ ಎಲ್ಲರಿಗೂ ಒಳಿತನ್ನು ಬಯಸುವ ವೀರೇಂದ್ರ ಹೆಗ್ಗಡೆಯವರ ಕುಟುಂಬಕ್ಕೆ ಅನಾಮಿಕನ ಹೆಸರಿನಲ್ಲಿ ಮಾನಸಿಕ ತೊಂದರೆಯನ್ನು ಕೊಡುತ್ತಿರುವ ಧರ್ಮಸ್ಥಳದ ಬಗ್ಗೆ ಅಪಪ್ರಚಾರ ಮಾಡುತ್ತಿರುವ ಎಲ್ಲಾ ದುಷ್ಟಶಕ್ತಿಗಳಿಗೂ ತಕ್ಕ ಉತ್ತರ ಹಿಂದೂಗಳು ನೀಡುತ್ತಾರೆ ಎಂದರು.

ಎಸ್. ದತ್ತಾತ್ರಿ ಮಾತನಾಡಿ, ರಾಷ್ಟ್ರೀಯ ಸ್ವಯಂಸೇವಕ ಸಂಘ ಹಿಂದೂ ಪುಣ್ಯಕ್ಷೇತ್ರಗಳ ಸಂರಕ್ಷಣಾ ಸಮಿತಿ ರಚನೆ ಮಾಡಿದ್ದು, ಧಾರ್ಮಿಕ ಕೇಂದ್ರಗಳ ಶಕ್ತಿ ಕುಗ್ಗಿಸುವ ಕೆಲಸ ಎಲ್ಲಿ ನಡೆಯುತ್ತಿದೆಯೋ ಅಲ್ಲಿ ಜಾಗೃತಿ ಸಮಾವೇಶ ಹಮ್ಮಿಕೊಂಡು, ಹಿಂದೂ ಧಾರ್ಮಿಕ ಕ್ಷೇತ್ರಗಳ ಸಂರಕ್ಷಣೆ ಮಾಡಲು ಪ್ರಾರಂಭಿಸಿದೆ ಎಂದರು.

ಎಡಪಂಥೀಯರ ಮಾತು ಕೇಳಿ ಧರ್ಮಸ್ಥಳದ ಶಕ್ತಿ ಕುಂದಿಸುವ ಯಾವುದೇ ಪ್ರಯತ್ನ ಫಲಿಸುವುದಿಲ್ಲ ಎಂದರು.

ಈ ಸಂದರ್ಭದಲ್ಲಿ ಪ್ರಮುಖರಾದ ಕೆ.ಈ. ಕಾಂತೇಶ್, ಮೋಹನ್‌ಶೆಟ್ಟಿ ನಿಟ್ಟೂರು, ಜಯರಾಜ್ ಬಿ. ಪಾಂಡೆ, ಧನಕೀರ್ತಿ, ಯಶೋಧರ ಹೆಗ್ಗಡೆ, ವಿಜಯ್ ಕುಮಾರ್ ದಿನಕರ್, ಶಾಂತಾ ಸುರೇಂದ್ರ, ರಶ್ಮಿಶ್ರೀನಿವಾಸ್, ಸುರೇಖಾ ಮುರಳೀಧರ್, ಬಳ್ಳೆಕೆರೆ ಸಂತೋಷ್, ದಿವಾಕರ್ ಶೆಟ್ಟಿ, ಜಗದೀಶ್ ಸೇರಿದಂತೆ ಶ್ರೀ ಹೊಂಬುಜ ಜೈನ ಮಠದ ಭಕ್ತಾದಿಗಳು, ಜೈನ್ ಮಿಲನ್ ಶಿವಮೊಗ್ಗ ಸಂಸ್ಥೆಯ ಪದಾಧಿಕಾರಿಗಳು, ದಿಗಂಬರ ಜೈನ ಸಂಘ ಶಿವಮೊಗ್ಗ ಮತ್ತು ಶ್ರೀ ಧರ್ಮಸ್ಥಳ ಭಕ್ತಾಭಿಮಾನಿಗಳ ವೇದಿಕೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

## ಸಮಾಚಾರ ಸಣ್ಣದಲ್ಲ

### ಪರಶುರಾಮ್‌ಗೆ ಸೇವಾರತ್ನ ಪ್ರಶಸ್ತಿ

**ದಾವಣಗೆರೆ:** ನಗರದ ಪ್ರತಿಷ್ಠಿತಿ ಎಸ್‌ಎಎಸ್‌ಎಸ್ ಯೋಗ ಕೇಂದ್ರದ ಸಾಂಸ್ಥಾಪಕರು ಹಾಗೂ ಯೋಗಾಚಾರ್ಯ ಡಾ.ಎನ್ .ಪರಶುರಾಮ್ ಅವರಿಗೆ ಬೆಂಗಳೂರಿನ ಎಜಿಎಸ್ ಎಜುಕೇಶನ್ ಚಾರಿಟೇಬಲ್ ಟ್ರಸ್ಟ್ ಕೊಡಮಾಡುವ 2025ನೇ ಸಾಲಿನ ಕರ್ನಾಟಕ ಸೇವಾರತ್ನ ಪ್ರಶಸ್ತಿ ಲಭಿಸಿದೆ. ಯೋಗ ಕ್ಷೇತ್ರ ಹಾಗೂ ಸಮಾಜ ಸೇವೆಯಲ್ಲಿ ಅವಿರತವಾಗಿ ಶ್ರಮಿಸುತ್ತಿರುವ ಹಾಗೂ ರಾಜ್ಯ, ಅಂತಾರಾಷ್ಟ್ರೀಯ ಮಟ್ಟದ ಯೋಗ ಕ್ಷೇತ್ರದಲ್ಲಿ ಉತ್ತಮ ಸಾಧನೆಯನ್ನು ಗುರುತಿಸಿ ಸರಕಾರದ ಮಾನ್ಯತೆ ಪಡೆದಿರುವ ಪ್ರತಿಷ್ಠಿತ ಎಜಿಎಸ್ ಎಜುಕೇಶನ್ ಚಾರಿಟೇಬಲ್ ಟ್ರಸ್ಟ್ ಪ್ರತಿವರ್ಷ ಕೊಡಮಾಡುವ ವಾರ್ಷಿಕ ಕರ್ನಾಟಕ ಸವಾರತ್ನ ಪ್ರಶಸ್ತಿಗೆ ಡಾ.ಎನ್ .ಪರಶುರಾಮ್ ಅವರನ್ನು ಆಯ್ಕೆ ಮಾಡಿದೆ.

### ಡಾ.ವಿಷ್ಣು ಸಮಾಧಿ: ಕ್ರಮಕ್ಕೆ ಒತ್ತಾಯ

**ಚಿತ್ರದುರ್ಗ:** ಸಾಹಸ ಸಿಂಹ ನಟ ಡಾ.ವಿಷ್ಣುವರ್ಧನ್‌ರವರ ಸಮಾಧಿಯನ್ನು ರಾತ್ರೋ ರಾತ್ರಿ ನೆಲಸಮ ಮಾಡಿರುವವರ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ವಿಷ್ಣುಸೇನಾ ಸಮಿತಿಯಿಂದ ಜಿಲ್ಲಾಧಿಕಾರಿ ಕಚೇರಿ ಎದುರು ಸೋಮವಾರ ಪ್ರತಿಭಟನೆ ನಡೆಸಿ ಅಪರ ಜಿಲ್ಲಾಧಿಕಾರಿ ಮೂಲಕ ರಾಜ್ಯದ ಮುಖ್ಯ ಮಂತ್ರಿಗೆ ಮನವಿ ಸಲ್ಲಿಸಲಾಯಿತು. ನಾಗರಹಾವು ಚಿತ್ರದ ಮೂಲಕ ಐತಿಹಾಸಿಕ ಚಿತ್ರದುರ್ಗದ ಕೋಟೆಯನ್ನು ನಾಡಿನಾದ್ಯಂತ ಪರಿಚಯಿಸಿದ ಡಾ. ವಿಷ್ಣುವರ್ಧನ್‌ರವರ ಸಮಾಧಿಯನ್ನು ಕಿಡಿಗೇಡಿಗಳು ನೆಲಸಮ ಮಾಡಿರುವುದು ಕೋಟ್ಯಾಂತರ ಅಭಿಮಾನಿಗಳ ಮನಸ್ಸಿಗೆ ನೋವುಂಟಾಗಿದೆ. ಮರಣೋತ್ತರವಾಗಿ ವಿಷ್ಣುರವರಿಗೆ ಕರ್ನಾಟಕ ರತ್ನ ಪ್ರಶಸ್ತಿ ಘೋಷಿಸಿ ಸಮಾಧಿ ಸ್ಥಳದಲ್ಲಿ ಗೋಪುರ ಮರು ನಿರ್ಮಾಣವಾಗಬೇಕೆಂದು ಪ್ರತಿಭಟನಾಕಾರರು ಆಗ್ರಹಿಸಿದರು. ವಿಷ್ಣು ಸೇನಾ ಸಮಿತಿ ಅಧ್ಯಕ್ಷ ಆರ್. ರಮೇಶ್ ಮದಕರಿಪುರ, ಎ.ಸಾಧಿಕ್‌ವುಲ್ಲಾ, ಸಿ. ಯೋಗೇಶ್, ಎನ್.ರಾಮಪ್ಪ, ರವಿಕುಮಾರ್, ಮಣಿಕಂಠ, ಮಾದೇವಚಾರಿ, ಶಿವಲಿಂಗಪ್ಪ, ಶ್ರೀರಾಮ್, ಡಿ.ಕುಮಾರಸ್ವಾಮಿ, ಎಂ.ಡಿ.ಉಸ್ಮಾನ್ ಇವರುಗಳು ಈ ಸಂದರ್ಭದಲ್ಲಿ ಹಾಜರಿದ್ದರು.

### ಕೆರೆ ಒತ್ತುವರಿ: ಕಾರ್ಯಾಚರಣೆ ಆರಂಭ

**ಚಿತ್ರದುರ್ಗ:** ಚಿತ್ರದುರ್ಗ ತಾಲೂಕಿನ ಅನ್ನೇಹಾಳ್ ಕೆರೆ ಒತ್ತುವರಿ ತೆರವುಗೊಳಿಸುವ ಕಾರ್ಯಾಚರಣೆ ಸೋಮವಾರದಿಂದ ಆರಂಭವಾಗಿದೆ ಎಂದು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಉಪವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ತಿಳಿಸಿದ್ದಾರೆ.

### ಈಡೇರಿಸದಿದ್ದರೆ ಸೆ.4ರಿಂದ ಹೋರಾಟ

**ಚಿತ್ರದುರ್ಗ:** ಶಿಕ್ಷಕರ ಬೇಡಿಕೆ ಈಡೇರಿಸದಿದ್ದರೆ ಸೆ. 4ರಿಂದ ಹೋರಾಟ ನಿರಂತರವಾಗಿ ಮುಂದುವರಿಯಲಿದೆ ಎಂದು ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಜಿ.ಬಿ. ಮಹಂತೇಶ್ ಎಚ್ಚರಿಸಿದರು. ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಬೋಧನೆ ಹೊರತುಪಡಿಸಿ ಆನ್‌ಲೈನ್ ಒಳಗೊಂಡು ಅನ್ಯ ಕಾರ್ಯಗಳಿಂದ ಮುಕ್ತಿಗೊಳಿಸುವುದು ಸೇರಿ ವಿವಿಧ ಬೇಡಿಕೆ ಈಡೇರಿಸುವಂತೆ ಸರ್ಕಾರಕ್ಕೆ ಒತ್ತಾಯಿಸಲಾಗುವುದು ಎಂದರು. 2017 ರವರೆಗೆ ನೇಮಕವಾದವರನ್ನು 1ರಿಂದ 7ನೇ ತರಗತಿ ಶಿಕ್ಷಕರೆಂದು ಪರಿಗಣಿಸಬೇಕು. ಆನಂತರ ನೇಮಕವಾದ ಶಿಕ್ಷಕರಿಗೂ ಇದು ಅನ್ವಯಿಸಬೇಕು. 2016ಕ್ಕಿಂತ ಮೊದಲು ನೇಮಕಾತಿ ಆದವರಿಗೆ ಪದವೀಧರ ಶಿಕ್ಷಕರೆಂದು, ಪದವಿ ಪೂರೈಸಿದ ಎಲ್ಲರಿಗೂ ಸೇವಾ ಜೇಷ್ಠತೆ ನೀಡಬೇಕು ಎಂದು ಆಗ್ರಹಿಸಿದರು. ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಜಿ.ಟಿ. ಹನುಮಂತಪ್ಪ ಮಾತನಾಡಿ, ಕಳೆದ ವರ್ಷ ಧರಣಿ ಕೈಗೊಂಡಾಗ ಸಿಎಂ, ಶಿಕ್ಷಣ ಸಚಿವರು ನೀಡಿದ್ದ ಭರವಸೆ ಈಡೇರದ ಕಾರಣ ರಾಜ್ಯ ಸಂಘ ಹೋರಾಟಕ್ಕೆ ತೀರ್ಮಾನಿಸಿದೆ. ಆ. 12 ರಂದು ಸಾಂಕೇತಿಕವಾಗಿ ಜಿಲ್ಲಾ ಉಸ್ತುವಾರಿ ಸಚಿವರಿಗೆ, ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಲಿದ್ದೇವೆ ಎಂದರು. ಸಂಘದ ಗೌರವಾಧ್ಯಕ್ಷ ಕೆ. ವೀರಣ್ಣ, ಕಾರ್ಯಾಧ್ಯಕ್ಷ ಆರ್. ಕೃಷ್ಣಪ್ಪ, ಖಂಜಾಚಿ ಎ. ಮಲ್ಲಿಕಾರ್ಜುನಪ್ಪ, ತಾಲೂಕು ಅಧ್ಯಕ್ಷ ಕೆಂಚಪ್ಪ ಇದ್ದರು.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ಆಗ್ನೇಯ ಕ್ಷೇತ್ರದ ಸಮಾಲೋಚನಾ ಸಭೆ | ಮಾಜಿ ಸಚಿವೆ ಲಲಿತಾ ನಾಯಕ್

# ರಾಜಕಾರಣ ಶುದ್ಧೀಕರಿಸುವ ಕೆಲಸವಾಗಲಿ

**ದಾವಣಗೆರೆ:** ಪ್ರಸ್ತುತ ರಾಜಕಾರಣ ಸ್ವಾರ್ಥದಿಂದ ಕೂಡಿದ್ದು, ಅದನ್ನು ಶುದ್ಧೀಕರಿಸುವ ಕೆಲಸ ಆಗಬೇಕು ಎಂದು ಮಾಜಿ ಸಚಿವೆ ಬಿ.ಟಿ. ಲಲಿತಾ ನಾಯಕ್ ಹೇಳಿದರು.

ಭಾನುವಾರ ನಗರದ ನಿವೃತ್ತ ಪೊಲೀಸರ ಭವನದಲ್ಲಿ ನಡೆದ ಆಗ್ನೇಯ ಪದವೀಧರರ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ ಅನೀಸ್ ಪಾಷರವರ ಚುನಾವಣಾ ಪೂರ್ವಭಾವಿ ಸಮಾಲೋಚನಾ ಸಭೆ ಉದ್ಘಾಟಿಸಿ ಮಾತನಾಡಿ, ರಾಜಕಾರಣದಲ್ಲಿ ಹಣವಂತರು ಬಂದಲು, ಮಾನವೀಯ ಆಲೋಚನೆ ಇರುವವರು ಬಂದರೆ ಅದು ಶುದ್ಧಿಯಾಗಲಿದೆ. ಈ ನಿಟ್ಟಿನಲ್ಲಿ ಅನೀಸ್ ಪಾಷಾ ವಿಧಾನ ಪರಿಷತ್ತಿಗೆ ಸ್ಪರ್ಧಿಸಲು ಮುಂದಾಗಿದ್ದಾರೆ. ಇದನ್ನು ಎಲ್ಲರೂ ಸ್ವಾಗತಿಸಬೇಕು. ಇವರಿಗೆ ಟಿಕೆಟ್ ನೀಡುವಂತೆ ನಾವು ಕಾಂಗ್ರೆಸ್ ನಾಯಕರ ಮೇಲೆ ಒತ್ತಡ ಹೇರುತ್ತೇವೆ ಎಂದರು.

ಪ್ರಗತಿಪರ ಚಿಂತಕ ಕೆ.ಎಲ್. ಅಶೋಕ್ ಮಾತನಾಡಿ, ''ರಾಜಕಾರಣ ಸರಿ ಇಲ್ಲ ಎಂದು ಮಾತಾನಾಡುವುದು ಸಲಭ. ಆದರೆ, ಅದನ್ನು ಸರಿ ಮಾಡಿ ರಚನಾತ್ಮಕವಾಗಿ ಹೊಸ ಬಗೆಯ ರಾಜಕಾರಣ ಕಟ್ಟುವುದು ಹೇಗೆಂಬ ಚಿಂಥನ-ಮಂಥನ ನಮ್ಮ ಹೃದಯದಲ್ಲಿ ನಡೆಯಬೇಕು. ವಿದ್ಯಾವಂತರ ಕ್ಷೇತ್ರವಾಗಿರುವ ವಿಧಾನ ಪರಿಷತ್‌ನಲ್ಲಿ ಹೋರಾಟದ ಹಿನ್ನೆಲೆ ಹೊಂದಿರುವ ಅನೀಸ್ ಪಾಷಾ ಪರವಾಗಿ ಎದ್ದೇಳು ಕರ್ನಾಟಕ, ಮಾನವ ಬಂಧುತ್ವ ವೇದಿಕೆ ಸೇರಿ ನಾನಾ ಸಂಘಟನೆಗಳು ಒಂದೂವರೆ ಲಕ್ಷ ಯುವಕರನ್ನು ನೋಂದಣಿ ಮಾಡಿಸಿ, ಗೆಲ್ಲಿಸಿಕೊಂಡು ಬರೋಣ ಎಂದು ಸಲಹೆ ನೀಡಿದರು.

ನಗರದ ನಿವೃತ್ತ ಪೊಲೀಸರ ಭವನದಲ್ಲಿ ನಡೆದ ಆಗ್ನೇಯ ಪದವೀಧರರ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ ಅನೀಸ್ ಪಾಷರವರ ಚುನಾವಣಾ ಪೂರ್ವಭಾವಿ ಸಮಾಲೋಚನಾ ಸಭೆಯನ್ನು ಗಣ್ಯರು ಉದ್ಘಾಟಿಸಿದರು.

> ಪ್ರಸ್ತುತ ಧಾರ್ಮಿಕತೆಯ ಮಬ್ಬು ಆವರಿಸಿದೆ. ಇದನ್ನ ದುರುಪಯೋಗ ಪಡೆಯುವ ಬಿಜೆಪಿ ಚುನಾವಣೆ ವೇಳೆ ಅರಿಶಿಣ, ಕುಂಕುಮ ನೀಡಿ ಆಣೆ ಮಾಡಿಸಿ ಮತದಾರರನ್ನ ಧಾರ್ಮಿಕವಾಗಿ ಸೆಳೆಯುತ್ತದೆ. ಇದಕ್ಕೆ ಪದವೀಧರರು ಮರುಳಾಗಬಾರದು.
>
> -ಬಿ.ಟಿ. ಲಲಿತಾ ನಾಯಕ್, ಮಾಜಿ ಸಚಿವೆ

ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ ಅನೀಸ್ ಪಾಷಾ ಮಾತನಾಡಿ, ''ಹಲವರ ಅಪೇಕ್ಷೆ ಮೇರೆಗೆ ನಾನು ವಿಧಾನ ಪರಿಷತ್‌ಗೆ ಸ್ಪರ್ಧಿಸಲು ನಿರ್ಧರಿಸಿದ್ದೇನೆ. ಈ ಹಿನ್ನೆಲೆ ಈಗಾಗಲೇ ಸಚಿವರಾದ ಎಸ್.ಎಸ್. ಮಲ್ಲಿಕಾರ್ಜುನ್, ಸತೀಶ್ ಜಾರಕಿಹೊಳಿ, ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್, ಮಾಜಿ ಸಚಿವರ ಎಚ್. ಆಂಜನೇಯ ಸೇರಿ ಮತ್ತಿತರರೊಡನೆ ಚರ್ಚಿಸಿದ್ದು, ಅವರೆಲ್ಲರೂ ನನ್ನ ಜೊತೆಯಾಗಿ ಇರುವುದಾಗಿ ಭರವಸೆ ನೀಡಿದ್ದಾರೆ. ಭ್ರಷ್ಟಾಚಾರ ಮುಕ್ತ ಆಡಳಿತ, ಉಚಿತ ಶಿಕ್ಷಣ, ಉದ್ಯೋಗ ಸೃಷ್ಟಿ ಸೇರಿ ನಾನಾ ವಿಚಾರಗಳ ಬಗ್ಗೆ ಪರಿಷತ್‌ನಲ್ಲಿ ಧ್ವನಿ ಎತ್ತುವ ಕನಸು ನನ್ನದಾಗಿದೆ ಎಂದರು.

ಕಾರ್ಯಕ್ರಮದಲ್ಲಿ ದೂಡಾ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ, ನಿವೃತ್ತ ಪೊಲೀಸ್ ಅಕಾರಿ ರವಿನಾರಾಯಣ, ನಿವೃತ್ತ ಪ್ರಾಂಶುಪಾಲ ಪ್ರೊ.ದಾದಾಪೀರ್ ನವಿಲೇಹಾಳ್, ಮಾನವ ಬಂಧುತ್ವ ವೇದಿಕೆ ಸಂಚಾಲಕ ಡಾ.ಎ.ಬಿ. ರಾಮಚಂದ್ರಪ್ಪ, ವಕೀಲ ಜಸ್ಟಿನ್ ಜಯಕುಮಾರ್ ಇದ್ದರು.

# ದಿ.ರಾಜೀವ್ ಸದ್ಭಾವನಾ ಜ್ಯೋತಿ ಯಾತ್ರೆಗೆ ಸ್ವಾಗತ

ದಿ.ರಾಜೀವ್‌ಗಾಂಧಿಯವರ 34ನೇ ವರ್ಷದ ಸದ್ಭಾವನಾ ಜ್ಯೋತಿ ಯಾತ್ರೆ.

**ಚಿತ್ರದುರ್ಗ:** ದೇಶಕ್ಕೆ ರಾಜೀವಗಾಂಧಿಯವರು ಪ್ರಧಾನ ಮಂತ್ರಿಯಾಗಿ ಉತ್ತಮವಾದ ಕೊಡುಗೆಯನ್ನು ನೀಡಿದ್ದಾರೆ. ಅವುಗಳನ್ನು ಇಂದು ನಾವುಗಳು ಸ್ಮರಣೆಯನ್ನು ಮಾಡಬೇಕಿದೆ ಎಂದು ರಾಜೀವಗಾಂಧಿ ಜ್ಯೋತಿ ಯಾತ್ರಾ ಸಮಿತಿಯ ಉಪಾಧ್ಯಕ್ಷರಾದ ಶ್ರೀನಿವಾಸ್ ತಿಳಿಸಿದ್ದಾರೆ. ನಮ್ಮನ್ನು ಆಗಲಿದ ನಾಯಕ ದೇಶದ ಮಾಜಿ ಪ್ರಧಾನ ಮಂತ್ರಿ ದಿ.ರಾಜೀವ್ ಗಾಂಧಿಯವರ 34ನೇ ವರ್ಷದ ಸದ್ಭಾವನಾ ಜ್ಯೋತಿ ಯಾತ್ರೆ ಆ. 9 ರಂದು ಪೆರುಂಬುದೂರಿನಿಂದ ಪ್ರಾರಂಭವಾಗಿ ಆ. 19ರಂದು ನವದೆಹಲಿಯನ್ನು ತಲುಪಲಿದೆ ದಾರಿಯ ಮಧ್ಯದಲ್ಲಿ ಸೋಮವಾರ ಚಿತ್ರದುರ್ಗಕ್ಕೆ ಬೇಟಿ ನೀಡಿದಾಗ ಚಿತ್ರದುರ್ಗ ಜಿಲ್ಲಾ ಕಾಂಗ್ರೆಸ್‌ವತಿಯಿಂದ ಅದ್ದೂರಿಯಾದ ಸ್ವಾಗತವನ್ನು ಮಾಡಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಅವರು ರಾಜೀವಗಾಂಧಿಯವರವರು ದೇಶದ ಪ್ರಧಾನ ಮಂತ್ರಿಯಾಗಿದ್ದಾಗ ಭಾರತ ದೇಶ ಬೇರೆ ದೇಶಗಳಂತೆ ಪ್ರಗತಿಯನ್ನು ಕಾಣಬೇಕು, ಯುವ ಜನತೆ ಸದಾ ಚಟುವಟಕೆಯಿಂದ ಇರಬೇಕಿದೆ ಇದಕ್ಕಾಗಿ 21 ವರ್ಷಕ್ಕೆ ಇದ್ದ ಮತದಾನದ ಹಕ್ಕನ್ನು 18 ವರ್ಷಕ್ಕೆ ಇಳಿಸುವುದರ ಮೂಲಕ ದೇಶದ ಯುವ ಜನತೆ ಸಹಾ ದೇಶದ ಮತದಾನದಲ್ಲಿ ಭಾಗವಹಿಸುವಂತೆ ಮಾಡಿದರು ಎಂದರು. ಅಂದು ನಡೆಯುವ ಕಾರ್ಯಕ್ರಮದಲ್ಲಿ ಸೋನಿಯಾಗಾಂಧಿ, ರಾಹುಲ್ ಗಾಂಧಿ, ಮಲ್ಲಿಕಾರ್ಜನ ಖರ್ಗೆ, ಪ್ರಿಯಾಂಕಗಾಂಧಿ ವಾದ್ರಾ, ಹರಿಪ್ರಸಾದ್, ವೇಣುಗೋಪಾಲ್, ಪ್ರಿಯಾ ಕೃಷ್ಣ ಸೇರಿದಂತೆ ಇತರರು ಭಾಗವಹಿಸಲಿದ್ದಾರೆ ಎಂದರು.

> ರಾಜೀವಗಾಂಧಿಯವರು ತಮ್ಮ ಅಧಿಕಾರದ ಅವಧಿಯಲ್ಲಿ ಉತ್ತಮವಾದ ಕಾರ್ಯವನ್ನು ಜಾರಿ ಮಾಡಿದ್ದಾರೆ, ಪಂಚಾಯಿತಿ ರಾಜ್ ಜಾರಿ ಮಾಡಿದರು, ನಮ್ಮ ದೇಶ ಬೇರೆ ದೇಶಗಳಂತೆ ತಂತ್ರಜ್ಞಾನದಲ್ಲಿ ಮುಂದುವರೆಯಬೇಕೆಂದು ತಂತ್ರಜ್ಞಾನವನ್ನು ನಮ್ಮ ದೇಶದಲ್ಲಿ ಅಳವಡಿಕೆ ಮಾಡಿದರು. ರಾಜೀವಗಾಂಧಿಯವರ ಆಕಾಲಿಕ ಮರಣಕ್ಕೆ ತುತ್ತಾಗದಿದ್ದರೆ ನಮ್ಮ ದೇಶ ಮತ್ತಷ್ಟು ಪ್ರಗತಿಯನ್ನು ಕಾಣುತ್ತಿತ್ತು.
>
> -ಶ್ರೀನಿವಾಸ್, ಉಪಾಧ್ಯಕ್ಷರು

ಕಾರ್ಯಕ್ರಮದಲ್ಲಿ ಡಿಸಿಸಿ ಅಧ್ಯಕ್ಷ ತಾಜ್ ಪೀರ್ ಕಾರ್ಯಾಧ್ಯಕ್ಷರಾದ ಹಾಲಸ್ವಾಮಿ, ಪ್ರಧಾನ ಕಾರ್ಯದರ್ಶಿಗಳಾದ ಸಂಪತ್ ಕುಮಾರ್, ಮೈಲಾರಪ್ಪ, ಓಬಿಸಿ ಅಧ್ಯಕ್ಷ ಎನ್ .ಡಿ.ಕುಮಾರ್, ಕುಶಲಕರ್ಮಿ ರಾಜ್ಯಧ್ಯಕ್ಷ ಪ್ರಸನ್ನ ಕುಮಾರ್, ಖಾಸಿಂಆಲಿ, ಅಂಜನಪ್ಪ, ಮಹಡಿ ಶಿವಮೂರ್ತಿ, ಖುದ್ದುಸ್, ಮುದಸಿರ್, ಸುರೇಶ್ ಕಂದಿಕೆರೆ, ನೇತಾ, ಮಧುಗೌಡ ಸೇರಿದಂತೆ ಇತರರು ಭಾಗವಹಿಸಿದ್ದರು.

# ಮೂಲ ಸೌಕರ್ಯ ಅಭಿವೃದ್ಧಿಗೆ ಕ್ರಮವಹಿಸಿ

**ಚಿತ್ರದುರ್ಗ:** ಜಿಲ್ಲೆಯ ಕೈಗಾರಿಕಾ ಪ್ರದೇಶ, ಕೈಗಾರಿಕಾ ಘಟಕಗಳಲ್ಲಿ ಮೂಲ ಸೌಕರ್ಯ ಅಭಿವೃದ್ಧಿಗೆ ಹೆಚ್ಚಿನ ಗಮನಹರಿಸಬೇಕು ಎಂದು ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಸೂಚನೆ ನೀಡಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸೋಮವಾರ ಜಿಲ್ಲಾಮಟ್ಟದ ಏಕಗವಾಕ್ಷಿ ಸಮಿತಿ, ಕೈಗಾರಿಕಾ ಸ್ಪಂದನಾ ಹಾಗೂ ಪಿಎಂಇಜಿಪಿ ಯೋಜನೆಯ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯ ಅಕ್ಷಯ ಫುಡ್ ಪಾರ್ಕ್, ಕೆಳಗೋಟೆ ಕೈಗಾರಿಕಾ ಪ್ರದೇಶ, ಚಳ್ಳಕೆರೆ ಕೈಗಾರಿಕಾ ವಸಾಹತು, ಮೇಟಿಕುರ್ಕೆ ಕೈಗಾರಿಕಾ ಪ್ರದೇಶಕ್ಕೆ ನೀರು, ವಿದ್ಯುತ್, ರಸ್ತೆ ಸೇರಿದಂತೆ ಇನ್ನಿತರೆ ಅಗತ್ಯ ಮೂಲ ಸೌಕರ್ಯಗಳ ಕಲ್ಪಿಸಬೇಕು ಎಂದು ತಿಳಿಸಿದರು. ಹಿರಿಯೂರು ತಾಲೂಕಿನ ಹುಚ್ಚವ್ವನಹಳ್ಳಿ ಗ್ರಾಮದಲ್ಲಿ ಸ್ಥಾಪಿತವಾಗಿರುವ ಅಕ್ಷಯಫುಡ್ ಪಾರ್ಕ್‌ಗೆ ಹೋಗಲು ಸಂಪರ್ಕ ರಸ್ತೆ ಇಲ್ಲದೇ ತುಂಬಾ ಸಮಸ್ಯೆಯಾಗುತ್ತಿದೆ ಎಂದು ಉದ್ದಿಮೆದಾರರು ಸಭೆಯ ಗಮನಕ್ಕೆ ತಂದರು. ಅಕ್ಷಯ್ ಫುಡ್ ಪಾರ್ಕ್‌ನ ಸಂಪರ್ಕ ರಸ್ತೆಯನ್ನು ಕೈಗೊಳ್ಳಲು ಹಿರಿಯೂರು ನಗರಸಭೆ ಹಾಗೂ ಲೋಕೋಪಯೋಗಿ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿ, ಸಂಚಾರಕ್ಕೆ ಸಮಸ್ಯೆಯಾಗದಂತೆ ಅಗತ್ಯ ಕ್ರಮವಹಿಸಬೇಕು ಎಂದು ಜಿಲ್ಲಾಧಿಕಾರಿಗಳು ಸೂಚಿಸಿದರು. ಇಂಡಸ್ಟ್ರೀಯಲ್ ಕಾರಿಡಾರ್ ಯೋಜನೆಗೆ ಭೂ ಸ್ವಾಧೀನವಾಗಿರುವ ಮೇಟಿಕುರ್ಕೆ ಮತ್ತು ಕರಿಓಬನಹಳ್ಳಿ ಗ್ರಾಮದಲ್ಲಿ ಭೂಸ್ವಾಧೀನ ಜಮೀನು ಪೈಕಿ ಕೆಐಎಡಿಬಿ ಕಾಯ್ದೆ ಕಲಂ 28 (8) ರಡಿ ಅಭಿವೃದ್ಧಿ ಶಾಖೆಗೆ ಈಗಾಗಲೇ ಹಸ್ತಾಂತರವಾಗಿರುವ 920-06 ಎಕರೆ ಜಮೀನು ಹಾಗೂ ಹಸ್ತಾಂತರಿಸಲು ಬಾಕಿ ಇರುವ 236-06 ಎಕರೆ ಜಮೀನು ಹಸ್ತಾಂತರಕ್ಕೆ ಅಗತ್ಯ ಕ್ರಮವಹಿಸಬೇಕು ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾಮಟ್ಟದ ಏಕಗವಾಕ್ಷಿ ಸಮಿತಿ, ಕೈಗಾರಿಕಾ ಸ್ಪಂದನಾ ಹಾಗೂ ಪಿಎಂಇಜಿಪಿ ಯೋಜನೆಯ ಪ್ರಗತಿ ಪರಿಶೀಲನಾ ಸಭೆ ನೆಯಿತು.

ಪ್ರಧಾನಮಂತ್ರಿಗಳ ಉದ್ಯೋಗ ಸೃಜನೆ ಯೋಜನೆಗಳ ಜಿಲ್ಲಾಮಟ್ಟದ ಕಾರ್ಯಕಾರಿ ಸಮಿತಿ ಸಭೆ: ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಆನಂದ್ ಮಾತನಾಡಿ, 2025-26ನೇ ಸಾಲಿಗೆ ಪ್ರಧಾನಮಂತ್ರಿಗಳ ಉದ್ಯೋಗ ಸೃಜನೆ ಯೋಜನೆಯನ್ನು ಅನುಷ್ಠಾನಗೊಳಿಸಲು ಜಿಲ್ಲಾ ಕೈಗಾರಿಕಾ ಕೇಂದ್ರ, ಕೆವಿಐಬಿ ಮತ್ತು ಕೆವಿಐಸಿ ಬೆಂಗಳೂರು ಅವರಿಗೆ ಆನ್‌ಲೈನ್‌ನಲ್ಲಿ ಅರ್ಜಿ ಹಾಕಲು ಕೇಂದ್ರ ಸ್ಕಾರದಿಂದ ಅವಕಾಶ ಕಲ್ಪಿಸಿರುತ್ತಾರೆ. ಆದರೆ ಪ್ರಸ್ತುತ ಸಾಲಿಗೆ ಯಾವುದೇ ಗುರಿ ನಿಗದಿಪಡಿಸದೇ ಇರುವುದರಿಂದ ಆನ್‌ಲೈನ್‌ನಲ್ಲಿ ಸಲ್ಲಿಸಿದ ಅರ್ಜಿಗಳನ್ನು ಗುರಿ ಬಂದ ನಂತರ ಬ್ಯಾಂಕಿಗೆ ಶಿಫಾರಸ್ಸು ಮಾಡಲಾಗುವುದು ಎಂದು ಸಭೆಗೆ ತಿಳಿಸಿದರು. ಇದೇ ಸಂದರ್ಭದಲ್ಲಿ ಪಿಎಂ ವಿಶ್ವಕರ್ಮ ಯೋಜನೆಯ ಪ್ರಗತಿ ಪರಿಶೀಲನೆ ನಡೆಸಲಾಯಿತು. ಸಭೆಯಲ್ಲಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ.ಎಸ್.ಆಕಾಶ್, ಜಿಲ್ಲಾ ಕೈಗಾರಿಕಾ ಕೇಂದ್ರದ ಉಪನಿರ್ದೇಶಕ ಮಂಜುನಾಥ್ ಇದ್ದರು.

ಹಿರಿಯೂರು ತಾಲೂಕಿನ ಹೊಸಹಳ್ಳಿ ಬ್ಯಾರೇಜ್ ಹಾಗೂ ಸೂಗುರು, ಮುಂಗಸವಳ್ಳಿ, ಧರ್ಮಪುರ, ಶ್ರವಣಗೆರೆ ಸೇರಿದಂತೆ ಒಟ್ಟು 4 ಕೆರೆಗಳಿಗೆ ಸಚಿವರಾದ ಡಿ ಸುಧಾಕರ್ ಅವರು ಭೇಟಿ ನೀಡಿ ಪರಿಶೀಲನೆ ನಡೆಸಿದರು. ರೈತರೊಂದಿಗೆ ಸಚಿವರು ಸಂತಸ ವ್ಯಕ್ತಪಡಿಸಿ ಈ ಭಾಗದ ಕೆರೆಗಳು ಭರ್ತಿಯಾದರೆ ರೈತರಿಗೆ ಬೆಳೆ ಬೆಳೆಯಲು ಅನುಕೂಲವಾಗುತ್ತದೆ ಎಂದರು. ಈ ಸಂದರ್ಭದಲ್ಲಿ ಗ್ಯಾರಂಟಿ ಯೋಜನೆಯ ಜಿಲ್ಲಾ ಉಪಾಧ್ಯಕ್ಷ ಖಾದಿ ರಮೇಶ್, ಈರಲಿಂಗೇಗೌಡ, ಚಂದ್ರಶೇಖರ್ ಶ್ರವಣ ಗೆರೆ ಚಂದ್ರು ಸೇರಿದಂತೆ ಇತರರಿದ್ದರು.

## ಶ್ರೀರಾಘವೇಂದ್ರ ಸ್ವಾಮಿ 354ನೇ ಆರಾಧನೆ

**ಶಿವಮೊಗ್ಗ:** ಶ್ರೀ ಗುರು ರಾಘವೇಂದ್ರ ಸ್ವಾಮಿಗಳ 354ನೇ ಆರಾಧನೆಯು ಭಾನುವಾರ ಅತ್ಯಂತ ಶ್ರದ್ಧಾ ಭಕ್ತಿಯಿಂದ ಜರುಗಿತು. ತಿಲಕನಗರದಲ್ಲಿರುವ ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, ಹೊರವಲಯ ಬೊಮ್ಮನಕಟ್ಟೆಯ ಶ್ರೀ ರಾಘವೇಂದ್ರಸ್ವಾಮಿಗಳ ಮಠವಲ್ಲದೆ ಜಿಲ್ಲೆಯ ಬೇರೆ ಬೇರೆ ಸ್ಥಳದಲ್ಲಿರುಚವ ಶ್ರೀ ರಾಯರ ಮಠದಲ್ಲಿಯೂ ಶ್ರೀ ಸ್ವಾಮಿಗಳ ಆರಾಧನೆಯಲ್ಲಿ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡು ಪುನೀತರಾದರು. ಬೆಳಗ್ಗೆಯಿಂದಲೇ ಭಕ್ತರು ಶ್ರೀ ರಾಯರ ಮಠಕ್ಕೆ ಆಗಮಿಸಿ ಪೂಜಾ ಕೈಂಕರ್ಯಗಳಲ್ಲಿ ಭಾಗಿಯಾದರು. ವೇದವ್ಯಾಸ ದೇವರ ಪ್ರತಿಷ್ಠಾಪನೆ, ಅಷ್ಟೋತ್ತರ, ಪಂಚಾಮೃತ, ಮನೆ ಮನೆ ಪಾದಪೂಜೆ, ಮಹಾ ನೈವೇದ್ಯ, ತೀರ್ಥ ಪ್ರಸಾದ, ಸಂಜೆ ಪಲ್ಲಕ್ಕಿ ಸೇವೆ, ಅಷ್ಟಾವಧಾನ ಸೇವೆ, ತೊಟ್ಟಿಲು ಸೇವೆ ನೆರವೇರಿತು. ಶ್ರೀ ಗುರು ರಾಘವೇಂದ್ರ ಸ್ವಾಮಿಗಳ ದ್ವಿತೀಯ ಮೃತ್ತಿಕಾ ವೃಂದಾವನ ಎಂದೇ ಖ್ಯಾತಿ ಪಡೆದಿರುವ ಶಿಕಾರಿಪುರ ತಾಲೂಕಿನ ಉಡುಗಣಿಯಲ್ಲಿ, ತೀರ್ಥಹಳ್ಳಿ ತಾಲುಕಿನ ಕಮ್ಮರಡಿಯ ಶ್ರೀ ರಾಘವೇಂದ್ರ ಸ್ವಾಮಿ ಮಠದಲ್ಲಿ, ಮತ್ತು ಅದೇ ತಾಲೂಕಿನ ಬಾಳಗಾರು ಶ್ರೀ ರಾಘವೇಂದ್ರ ಸ್ವಾಮಿ ಮಠದಲ್ಲಿ ಶ್ರೀಗಳ ಆರಾಧನೆ ಅತ್ಯಂತ ವಿಜೃಂಭಣೆಯಿಂದ ಜರುಗಿತು. ಭಾಳಗಾರು ಮಠದಲ್ಲಿ ಗುರುರಾಯರಿಗೆ ನೂತನ ರಥ ಸಮರ್ಪಣೆ ಕಾರ್ಯವೂ ನಡೆಯಿತು. ಅವಭೃತ, ಮಹಾನೈವೇದ್ಯ, ಇತ್ಯಾದಿ ಗಾಯಕರಿಂದ ಗೀತಗಾಯನ, ದಾಸ ಸಂಭ್ರಮ ಸಂಗೀತ ಮೊದಲಾದ ಸಾಂಸ್ಕೃತಿಕ ಕಾರ್ಯಕ್ರಮಗಳೂ ನಡೆಯಲಿವೆ.

{ಬಸನಗೌಡ ಪಾಟೀಲ ಯತ್ನಾಳ} ಶಾಸಕ

> ರಾಜ್ಯದಲ್ಲಿ ಮುಸ್ಲಿಂ ವ್ಯಕ್ತಿ ಕೊಲೆಯಾಗಿದ್ದರೆ ರಾಜ್ಯ ಸರಕಾರ ಯಾವ ಮಾನದಂಡ ಆಧರಿಸಿ ಪರಿಹಾರ ಹಾಗೂ ನೌಕರಿ ಕೊಡುತ್ತಿತ್ತು, ಅದೇ ರೀತಿ ಹಿಂದೂ ವ್ಯಕ್ತಿ ಕೂಡ ಹತ್ಯೆಯಾದಾಗ ಪರಿಹಾರ ನೀಡಬೇಕು.

## ಸರಕಾರಿ ಬಸ್ಸೇ ಕಾಣದ ಊರಿಗೆ ಬಂತು ಬಸ್

**ದಾವಣಗೆರೆ:** ಸರಕಾರಿ ಬಸ್ಸೇ ಕಾಣದ ಊರಿಗೆ ಶಾಸಕ ಕೆ.ಎಸ್.ಬಸವಂತಪ್ಪ ಸೋಮವಾರ ಸರಕಾರಿ ಬಸ್ ಸೌಲಭ್ಯ ಕಲ್ಪಿಸಿ ಸಂಚಾರಕ್ಕೆ ಚಾಲನೆ ನೀಡುವ ಮೂಲಕ ಗ್ರಾಮಸ್ಥರ ಕೃತಜ್ಞತೆಗೆ ಪಾತ್ರರಾದರು.

ಮಾಯಕೊಂಡ ಕ್ಷೇತ್ರದ ವ್ಯಾಪ್ತಿಯ ವಿಠಲಪುರ ಗ್ರಾಮಕ್ಕೆ ರಾಜ್ಯ ರಸ್ತೆ ಸಾರಿಗೆ ಬಸ್ ಸೌಲಭ್ಯ ಇರಲಿಲ್ಲ. ಕಳೆದ 40 ವರ್ಷಗಳಿಂದ ಸರಕಾರಿ ಬಸ್ ಸೌಲಭ್ಯ ಕಲ್ಪಿಸುವಂತೆ ಗ್ರಾಮಸ್ಥರ ಬೇಡಿಕೆ ಇತ್ತು. ಹಿಂದಿನ ಜನಪ್ರತಿನಿಧಿಗಳು ಗ್ರಾಮಸ್ಥರ ಕೂಗಿಗೆ ಸ್ಪಂದಿಸಿರಲಿಲ್ಲ. ಆದರೆ ಶಾಸಕ ಕೆ.ಎಸ್.ಬಸವಂತಪ್ಪ ಈ ಗ್ರಾಮಕ್ಕೆ ಬಸ್ ಸೌಲಭ್ಯ ಕಲ್ಪಿಸಿ ಇಂದು ಬಸ್ ಸಂಚಾರಕ್ಕೆ ಚಾಲನೆ ನೀಡಿ ಗ್ರಾಮಸ್ಥರೊಂದಿಗೆ ಬಸ್ಸಿನಲ್ಲಿ ಪ್ರಯಾಣ ಬೆಳೆಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕ ಕೆ.ಎಸ್.ಬಸವಂತಪ್ಪ, ಸುಮಾರು 40ಕ್ಕೂ ಹೆಚ್ಚು ವರ್ಷಗಳಿಂದ ಈ ಗ್ರಾಮಕ್ಕೆ ಸರ್ಕಾರಿ ಬಸ್ ಸೌಲಭ್ಯ ಇಲ್ಲದೆ ಪರಿತಪಿಸುತ್ತಿದ್ದರು. ಗ್ರಾಮಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಗ್ರಾಮಸ್ಥರು ಬಸ್ ಸಂಚಾರಕ್ಕೆ ಬೇಡಿಕೆ ಇಟ್ಟಿದ್ದರು. ಈಗ ಗ್ರಾಮಸ್ಥರ 40 ವರ್ಷಗಳ ಕನಸನ್ನು ನನಸು ಮಾಡಿದ್ದೇನೆ. ಅದೇ ರೀತಿ ರಸ್ತೆ ಅಭಿವೃದ್ಧಿ, ಮೂಲಸೌಲಭ್ಯ ಕಲ್ಪಿಸಲು ಹೆಚ್ಚಿನ ಗಮನ ನೀಡುತ್ತೇನೆ ಎಂದರು.

ಬಾಡ-ವಿಠಲಪುರ-ಒಂಟಿಹಾಳು ಹೊಸ ಮಾರ್ಗವಾಗಿ ಮಾಯಕೊಂಡಕ್ಕೆ ಪ್ರತಿನಿತ್ಯ ಬಸ್ ಸಂಚಾರ ಮಾಡಲಿದೆ. ಇದರ ಜತೆಗೆ ಲೋಕಿಕೆರೆ-ಗಿರಿಯಾಪುರ, ದಾವಣಗೆರೆ-ಕ್ಯಾಸೆಟೆಹಳ್ಳಿ ಹೊಸ ಮಾರ್ಗಗಳಿಗೂ ಬಸ್ ಸಂಚಾರಕ್ಕೆ ಚಾಲನೆ ನೀಡಲಾಗಿದೆ. ಇದೇ ರೀತಿ ಕ್ಷೇತ್ರದ ವ್ಯಾಪ್ತಿಯ ಹೊಸ ಮಾರ್ಗಗಳಲ್ಲಿ ಸರಕಾರಿ ಬಸ್ ಸೌಲಭ್ಯವಿಲ್ಲದ ಗ್ರಾಮಗಳಿಗೆ ಬಸ್ ಸೌಲಭ್ಯ ಕಲ್ಪಿಸಲು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಭರವಸೆ ನೀಡಿದರು. ಈ ಸಂದರ್ಭದಲ್ಲಿ ಕೆಎಸ್‌ಆರ್‌ಟಿಸಿ ಡಿಟಿಒ ಫಕ್ರುದ್ದೀನ್, ಸಿಡಿಎಂ ಕುಮಾರ್, ಬಾಡ ರುದ್ರಸ್ವಾಮಿ, ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ಮಹಾರುದ್ರಪ್ಪ, ಗ್ರಾಪಂ ಸದಸ್ಯರಾದ ರಾಜಪ್ಪ, ಅಣಬೇರು ರಾಜಪ್ಪ, ಎಂ.ಡಿ.ಸುರೇಶ್, ಬಾಡ ಸೈಫುಲ್ಲ, ದಿನೇಶ್, ಕುಮಾರಣ್ಣ ಇದ್ದರು.

ಶಾಸಕ ಕೆ.ಎಸ್.ಬಸವಂತಪ್ಪ ಈ ಗ್ರಾಮಕ್ಕೆ ಬಸ್ ಸೌಲಭ್ಯ ಕಲ್ಪಿಸಿ ಬಸ್ ಸಂಚಾರಕ್ಕೆ ಚಾಲನೆ ನೀಡಲಾಯಿತು.

## 16ಕ್ಕೆ ಕನ್ನಡ ಚಲನಚಿತ್ರ ಗೀತೆಗಳ ಗಾಯನ ಸ್ಪರ್ಧೆ

**ಶಿವಮೊಗ್ಗ:** ಶಿವಮೊಗ್ಗ ಜಿಲ್ಲಾ ಸಾಂಸ್ಕೃತಿಕ ಕಲಾವಿದರ ಸಂಘ ಮತ್ತು ಶ್ರೀ ಬಸವೇಶ್ವರ ಧರ್ಮ ಸಂಸ್ಥೆ ಸಂಯುಕ್ತಾಶ್ರಯದಲ್ಲಿ ಸಂಘದ ಐದನೇ ವರ್ಷದ ವಾರ್ಷಿಕೋತ್ಸವದ ಅಂಗವಾಗಿ ರಾಜ್ಯ ಮಟ್ಟದ ಕನ್ನಡ ಚಲನಚಿತ್ರಗೀತೆಗಳ ಗಾಯನ ಸ್ಪರ್ಧೆ ''ಕರ್ನಾಟಕ ಸ್ಟಾರ್ ಸಿಂಗರ್-2025 ಸೀಜನ್-2'' ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಅಧ್ಯಕ್ಷ ಬಿ.ಎ. ಮಂಜುನಾಥ್ ಹೇಳಿದರು. ಅವರು ಬೆಳಗ್ಗೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸ್ಪರ್ಧೆಯ ಆಡಿಷನ್ ಆಗಸ್ಟ್ 16 ರಂದು ಭದ್ರಾವತಿಯ ಲಯನ್ಸ್ ಕ್ಲಬ್ ಶುಗರ್ ಟೌನ್ ಇಲ್ಲಿ ನಡೆಯುತ್ತದೆ. ಆಡಿಷನ್‌ನಲ್ಲಿ ಆಯ್ಕೆ ಯಾದ ಗಾಯಕ-ಗಾಯಕಿಯರಿಗೆ ಸೆಮಿಫೈನಲ್ ರೌಂಡ್ ಆ.17ರಂದು ಲಯನ್ಸ್ ಕ್ಲಬ್ ಜೆಟಿಎಸ್ ಸ್ಕೂಲ್ ಪಕ್ಕ, ಶುಗರ್ ಟೌನ್ ಇಲ್ಲಿ ನಡೆಯುತ್ತದೆ. ಸೆಮಿಫೈನಲ್‌ನಲ್ಲಿ ಆಯ್ಕೆಯಾದ ಗಾಯಕ-ಗಾಯಕಿಯರಿಗೆ ರಾಜ್ಯಮಟ್ಟದ ಚಲನಚಿತ್ರಗೀತೆಗಳ ಫೈನಲ್ ಮತ್ತು ಗ್ರ್ಯಾಂಡ್‌ಫಿನಾಲೆ ಸ್ಪರ್ಧೆಯು ಆ.24ರ ಭಾನುವಾರ ಭದ್ರಾವತಿಯ ಸಿದ್ಧಾರೂಢ ನಗರದಲ್ಲಿರುವ ಶ್ರೀ ಬಸವೇಶ್ವರ ಸಭಾಭವನದಲ್ಲಿ ನಡೆಯಲಿದೆ ಎಂದರು. ಸೆಮಿಫೈನಲ್ ಮತ್ತು ಫೈನಲ್‌ನಲ್ಲಿ ಜೀ ಟಿವಿಯ ಸರಿಗಮಪ ಮತ್ತು ಹಲವು ರಿಯಾಲಿಟಿ ಶೋಗಳಲ್ಲಿ ಭಾಗವಹಿಸಿದ ನುರಿತ ವಾದ್ಯಗಾರರು ಭಾಗವಹಿಸಲಿದ್ದಾರೆ. ವೈ.ಕೆ. ಹನುಮಂತಯ್ಯ, ಚರಣ್ ಕವಾಡ್, ಚಿದಾನಂದ, ಪ್ರಶಾಂತ್ ಎ. ಉಪಸ್ಥಿತರಿದ್ದರು.

## ಸಮಾಚಾರ ಸಣ್ಣದಲ್ಲ

### ಕೃಷಿ ಹೊಂಡಕ್ಕೆ ಬಿದ್ದು ಇಬ್ಬರು ಮಕ್ಕಳು ಸಾವು

**ಕೊಪ್ಪಳ:** ಹೊಲದಲ್ಲಿನ ಕೃಷಿ ಹೊಂಡಕ್ಕೆ ಬಿದ್ದು ಇಬ್ಬರು ಮಕ್ಕಳು ದಾರುಣವಾಗಿ ಮೃತಪಟ್ಟಿರುವ ಘಟನೆ ಕುಷ್ಟಗಿ ತಾಲೂಕಿನ ಬಿಜಕಲ್ ಗ್ರಾಮದ ಹೊರವಲಯದಲ್ಲಿ ನಡೆದಿದೆ. ಬಿಜಕಲ್ ಗ್ರಾಮದ

ನೀಲಪ್ಪ ತೆಗ್ಗಿನ ಮನಿ, ಸಂಗಪ್ಪ ತೆಗ್ಗಿನಮನಿ ಎಂಬ ಸಹೋದರರ ಮಕ್ಕಳಾದ ಮಲ್ಲಮ್ಮ ತೆಗ್ಗಿನಮನಿ (11), ಶ್ರವಣಕುಮಾರ ತಂದೆ ಸಂಗಪ್ ತೆಗ್ಗಿನಮನಿ (8) ಮೃತಪಟ್ಟ ಮಕ್ಕಳು. ಕುಟುಂಬ ಸದಸ್ಯರೊಂದಿಗೆ ಹೊಲಕ್ಕೆ ಹೋಗಿದ್ದ ಮಕ್ಕಳು ಕಾಲು ಜಾರಿ ಕೃಷಿ ಹೊಂಡಕ್ಕೆ ಬಿದ್ದಿದ್ದಾರೆ. ಕಳೆದ ಮೂರ್ನಾಲ್ಕು ದಿನದಿಂದ ಸುರಿದಿದ್ದ ಮಳೆ ಯಿಂದ ಕೃಷಿಹೊಂಡ ತುಂಬಿಕೊಂಡಿತ್ತು. ಈ ವೇಳೆ ಇಬ್ಬರು ಮಕ್ಕಳು ತುಂಬಿದ ಕೃಷಿ ಹೊಂಡದಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ. ಮೃತದೇಹಗಳನ್ನು ಹೊರತೆಗೆಯಲಾಗಿದ್ದು, ಕುಷ್ಟಗಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಲಾಗಿದೆ. ಈ ವೇಳೆ ಪೋಷಕರ ಆಕ್ರಂದನ ಮುಗಿಲು ಮುಟ್ಟಿತ್ತು.

### ರಹಿಮಾನ್ ಹತ್ಯೆ: ಮತ್ತೊಬ್ಬ ಆರೋಪಿ ಸೆರೆ

**ಬಂಟ್ವಾಳ:** ತಾಲೂಕಿನ ಕುರಿಯಾಳ ಗ್ರಾಮದ ಇರಾಕೋಡಿಯಲ್ಲಿ ನಡೆದ ಅಬ್ದುಲ್ ರಹಿಮಾನ್ ಹತ್ಯೆ ಸಂಬಂಧ ದಕ್ಷಿಣ ಕನ್ನಡ ಜಿಲ್ಲಾ ಪೊಲೀಸರು ಮತ್ತೊಬ್ಬ ಆರೋಪಿಯನ್ನು ಬಂಧಿಸಿದ್ದಾರೆ. ಇದರೊಂದಿಗೆ ಈ ಪ್ರಕರಣದಲ್ಲಿ ಬಂಧಿತರ ಸಂಖ್ಯೆ 12ಕ್ಕೆ ಏರಿದೆ. ಬಂಟ್ವಾಳ ತಾಲ್ಲೂಕಿ ಪುದು ಗ್ರಾಮದ ರಂಜಿತ್ ಅಲಿಯಾಸ್ ರಂಜು (35) ಬಂಧಿತ ಆರೋಪಿ. ಆತನನ್ನು ಬಂಟ್ವಾಳ ತಾಲೂಕಿನ ರಾಯಿಯಲ್ಲಿ ಬಂಧಿಸಿ, ನ್ಯಾಯಾಲಯಕ್ಕೆ ಸೋಮವಾರ ಹಾಜರುಪಡಿಸಲಾಗಿದೆ. ನ್ಯಾಯಾಲಯವು ಹೆಚ್ಚಿನ ವಿಚಾರಣೆಗಾಗಿ ಆರೋಪಿಯನ್ನು ಪೊಲೀಸ್ ವಶಕ್ಕೆ ನೀಡಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಕೊಳತ್ತಮಜಲು ನಿವಾಸಿ ಅಬ್ದುಲ್ ರಹಿಮಾನ್ ಅವರನ್ನು ಇರಾಕೋಡಿಯಲ್ಲಿ ಮೇ 27ರಂದು ಹತ್ಯೆ ಮಾಡಲಾಗಿತ್ತು. ಅವರ ಜತೆಗಿದ್ದ ಕಲಂದರ್ ಶಾಫಿ ಎಂಬವರ ಮೇಲೆ ಹಲ್ಲೆ ನಡೆಸಲಾಗಿತ್ತು.

ವಿಶ್ವವಾಣಿ ಕ್ಲಬ್ ಹೌಸ್
11.8.2025
ಸಂಜೆ 06.55 ರಿಂದ 08.05 ವರೆಗೆ
ಮಂಗಳವಾರದ ಅತಿಥಿಗಳು

ಶ್ರೀ ಸತ್ಯೇಶ್ ಬೆಳ್ಳೂರು
ಶ್ರೀಮತಿ ಪಲ್ಲವಿ ಭಟ್
ವಿಷಯ
ಹದಿಬದೆಯ ಧರ್ಮ - 1
vishwavani.news

# ವಿಜೃಂಭಣೆಯಿಂದ ನಡೆದ ರಾಯರ ಚಿನ್ನದ ರಥೋತ್ಸವ

## ರಾಯರ 354ನೇ ಆರಾಧನಾ ಉತ್ಸವ | ಪೀಠಾಧಿಪತಿ ಸುಬುಧೇಂದ್ರ ತೀರ್ಥರಿಂದ ಚಾಲನೆ

**ರಾಯಚೂರು:** ಮಂತ್ರಾಲಯ ರಾಯರ ಮಠದಲ್ಲಿ 354ನೇ ಆರಾಧನಾ ಮಹೋತ್ಸವ ಸಂಭ್ರಮ ಸಡಗರದಿಂದ ಆಚರಿಸಲಾಗುತ್ತಿದೆ. ಮುಖ್ಯ ಘಟ್ಟವಾದ ಮಧ್ಯಾರಾಧನೆಯ ಅಂಗವಾಗಿ ಮಠದ ಪ್ರಾಕಾರದಲ್ಲಿ ಚಿನ್ನದ ರಥೋತ್ಸವ ಅದ್ದೂರಿಯಾಗಿ ಸೋಮವಾರ ಜರುಗಿತು. ರಾಯರು ರಚಿಸಿದ ಪರಿಮಳ ಗ್ರಂಥ ಹಾಗೂ ಮೃತ್ತಿಕಾ ಬೃಂದಾವನವನ್ನಿಟ್ಟು ಮಠದ ಪ್ರಾಂಗಣದಲ್ಲಿ ಸ್ವರ್ಣ ರಥೋತ್ಸವ ನೆರವೇರಿಸಲಾಯಿತು. ಮಠದ ಪೀಠಾಧಿಪತಿ ಸುಬುಧೇಂದ್ರ ತೀರ್ಥರ ನೇತೃತ್ವದಲ್ಲಿ ನಡೆದ ಚಿನ್ನದ ರಥೋತ್ಸವದ ವೇಳೆ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಭಾಗವಹಿಸಿದ್ದರು.

ಇದಕ್ಕೂ ಮುನ್ನ ವಿಶೇಷವಾಗಿ ಸ್ವತಃ ಮಠದ ಪೀಠಾಧಿಪತಿ ಸುಬುಧೇಂದ್ರ ತೀರ್ಥ ಸ್ವಾಮಿ ರಾಯರ ವೃಂದಾವನಕ್ಕೆ ಮಹಾಪಂಚಾಮೃತ ಅಭಿಷೇಕವನ್ನು ನೆರವೇರಿಸಿದರು. ಹಾಲು, ಮೊಸರು, ತುಪ್ಪ, ಜೇನುತುಪ್ಪ, ಹಣ್ಣು, ಗೋಡಂಬಿ, ಒಣದ್ರಾಕ್ಷಿ ಸೇರಿ ವಿವಿಧ ಪದಾರ್ಥಗಳಿಂದ ಶ್ರೀಗಳು ವೃಂದಾವನದ ನಾಲ್ಕು ದಿಕ್ಕಿಗೂ ಅಭಿಷೇಕ ಮಾಡಿದರು. ಬಳಿಕ ಚಿನ್ನದ ಕವಚದೊಂದಿಗೆ ಅಲಂಕಾರ ಪೂಜೆ ನಡೆಯಿತು.

ಶ್ರೀಮಠದ ಪೀಠಾಧಿಪತಿ ಶ್ರೀಸುಬುಧೇಂದ್ರ ತೀರ್ಥರು ಚಿನ್ನದ ರಥೋತ್ಸವಕ್ಕೆ ಚಾಲನೆ ನೀಡಿದರು.

### ಮಧ್ಯಾರಾಧನೆಯಲ್ಲಿ ಚಿತ್ರನಟ ಜಗ್ಗೇಶ್ ಭಾಗಿ

ಮಂತ್ರಾಲಯದಲ್ಲಿ ರಾಯರ ದರ್ಶನ ಪಡೆದ ನಂತರ ನಟ ಜಗ್ಗೇಶ್ ಸುದ್ದಿಗಾರರ ಜತೆ ಮಾತನಾಡಿ, ಪರಿಮಳ ತೀರ್ಥ ಪುಷ್ಕರಣಿ ನೂತನವಾಗಿ ನಿರ್ಮಾಣ ಮಾಡಲಾಗಿದೆ. ಪ್ರತಿ ವರ್ಷದಂತೆ ಮಧ್ಯಾರಾಧನೆ ದಿನ ಆಗಮಿಸಿ ರಾಘವೇಂದ್ರ ಸ್ವಾಮಿಗಳ ದರ್ಶನ ಪಡೆಯುತ್ತಾ ಬಂದಿದ್ದೇನೆ. ರಾಯರ ಆರಾಧನೆಯ ಸಂಭ್ರಮ ಕಣ್ತುಂಬಿಕೊಂಡಿದ್ದು, ಖುಷಿಯಾಗುತ್ತಿದೆ. ಶ್ರೀಗಳ ನೇತೃತ್ವದಲ್ಲಿ ಅವರ ಪರಿಶ್ರಮದಿಂದ ಮಂತ್ರಾಲಯಕ್ಕೆ ಹೈಟೆಕ್ ಟಚ್ ಸಿಕ್ಕಿದೆ. ರಾಯರ ಮೂರ್ತಿಗಳನ್ನ ವಿದೇಶಗಳಲ್ಲೂ ಭಕ್ತರು ಪೂಜಿಸಿ, ಆರಾಧಿಸುತ್ತಿದ್ದಾರೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಜತೆ ಮಾತನಾಡಿ ಮಂತ್ರಾಲಯ ರಾಘವೇಂದ್ರ ಸ್ವಾಮಿಗಳ ಪವಾಡಗಳ ಬಗ್ಗೆ ಹೇಳಿದ್ದೇನೆ. ರಾಯರ ಮಹಿಮೆಗಳ ಬಗ್ಗೆ ಉತ್ಸಾಹದಿಂದ ಪ್ರಧಾನಿಗೆ ತಿಳಿಸಿದ್ದೇನೆ. ಎಷ್ಟೋ ಬಳುವಳಿಗಳು ನಿಮಗೆ ಬರುತ್ತೆ. ರಾಯರ ಆಶೀರ್ವಾದ ಇರಲಿ ಅಂತ ಶಾಲು, ಮಂತ್ರಾಕ್ಷತೆ ಕೊಟ್ಟಿದ್ದೆ ಎಂದು ತಿಳಿಸಿದರು.

ಮಂತ್ರಾಲಯದಲ್ಲಿ ಏರೋಡ್ರಮ್ ನಿರ್ಮಾಣ ಮಾಡುವ ವಿಚಾರಕ್ಕೆ ಸಂಬಂಧಿಸಿದಂತೆ ಸುಧಾಮೂರ್ತಿ ಹಾಗೂ ನಾನು ಪ್ರಯತ್ನ ಮಾಡುತ್ತಿದ್ದೇವೆ. ನಮ್ಮ ಬೇಡಿಕೆಯನ್ನು ಸದನದಲ್ಲಿ ಇಟ್ಟಿದ್ದೇವೆ. ಮುಂದೊಂದು ದಿನ ಮಂತ್ರಾಲಯದಲ್ಲಿ ಏರೋಡ್ರಮ್ ಆಗುವ ನಿರೀಕ್ಷೆಯಿದೆ.

-ಜಗ್ಗೇಶ್ ನಟ

# ವೈದ್ಯ ಅಳಿಯನಿಂದ ಅತ್ತೆಯ ಭೀಕರ ಕೊಲೆ

**ತುಮಕೂರು:** ರಸ್ತೆ ಬದಿ ಅಲ್ಲಲ್ಲಿ ಪತ್ತೆಯಾಗಿದ್ದ ದೇಹ ತುಂಡರಿಸಿ ಕವರ್‌ಗಳಿಗೆ ತುಂಬಿ ಎಸೆದಿದ್ದ ಪ್ರಕರಣವನ್ನು ಭೇದಿಸಿದ್ದು, ದಂತ ವೈದ್ಯ ರಾಮಚಂದ್ರ, ಸೇರಿ ಮೂವರು ಆರೋಪಿಗಳನ್ನು ಕೊರಟಗೆರೆ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕೊರಟಗೆರೆಯ ಚಿಂಪುಗಾನಹಳ್ಳಿಯ ಮುತ್ಯಾಲಮ್ಮ ದೇವಸ್ಥಾನದ ಬಳಿಯಿಂದ ಸಿದ್ದರಬೆಟ್ಟದ ರಸ್ತೆವರೆಗೂ ಸರಿಸುಮಾರು 30 ಕಿಮೀ ವ್ಯಾಪ್ತಿಯ, 17 ಸ್ಥಳಗಳಲ್ಲಿ ಪತ್ತೆಯಾದ ಕಪ್ಪು, ಹಳದಿ ಕವರ್‌ಗಳಲ್ಲಿ ಮಹಿಳೆ ದೇಹದ ಅಂಗಾಂಗಳು ಇತ್ತೀಚೆಗೆ ದೊರಕಿದ್ದವು. ಪ್ರಕರಣದ ಬಗ್ಗೆ ತನಿಖೆ ನಡೆಸಿದ ಪೊಲೀಸರು ಕವರ್‌ಗಳಲ್ಲಿ ಪತ್ತೆಯಾದ ತುಂಡರಿಸಿದ ದೇಹ ತಾಲೂಕಿನ ಬೆಳ್ಳಾವಿಯ ಲಕ್ಷ್ಮಿದೇವಮ್ಮ (42) ಎಂಬವರದ್ದು ಎಂದು ದೃಢಪಡಿಸಿದ್ದರು. ತನಿಖೆಯಲ್ಲಿ ಸ್ಫೋಟಕ ಅಂಶ ಬೆಳಕಿಗೆ ಬಂದಿದ್ದು, ಅತ್ತೆಯನ್ನು ಕೊಲೆ ಮಾಡಿ ಅಳಿಯನೆ ಶವಸಾಗಟ ಮಾಡಿದ್ದಾನೆ ಎನ್ನಲಾಗಿದೆ. ಈ ಸಂಬಂಧ ದಂತ ವೈದ್ಯನಾಗಿದ್ದ ಅಳಿಯ ರಾಮಚಂದ್ರ, ಆತನಿಗೆ ಸಹಕರಿಸಿದ್ದ ಸತೀಶ್(38), ಕಿರಣ್(32) ಬಂಧಿಸಲಾಗಿದೆ.

**ಕಾಣೆಯಾದ ಬಗ್ಗೆ ದೂರು:** ಆ.3ರಂದು ಲಕ್ಷ್ಮಿದೇವಮ್ಮ ಮಗಳನ್ನು ನೋಡಿ ಬರಲು ಮನೆಯಿಂದ ಹೋಗಿದ್ದರು. ಆ.7ರಂದು ಮಧ್ಯವೆಂಕಟಾಪುರ ಹಾಗೂ ಚನ್ನರಾಯನದುರ್ಗಾ ಹೋಬಳಿ ವ್ಯಾಪ್ತಿಯ ಬೆಂಡೋಣೆ ಗ್ರಾಮದ ಬಳಿ ದೇಹದ ಕೆಲ ಅಂಗಾಂಗಗಳು ಪತ್ತೆಯಾಗಿದ್ದವು. ಅದೇ ದಿನ ರಾತ್ರಿ ಸಿದ್ಧರಬೆಟ್ಟದ ಸಮೀಪದಲ್ಲಿ ಕೊಳೆತ ಸ್ಥಿತಿಯಲ್ಲಿ ತಲೆ ಹಾಗೂ ಉಡುಪು ಸಿಕ್ಕಿತ್ತು. ಲಕ್ಷ್ಮಿದೇವಮ್ಮ ಕಾಣೆಯಾದ ಬಗ್ಗೆ ಬೆಳ್ಳಾವಿ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಅವರ ಕುಟುಂಬಸ್ಥರನ್ನು ಕರೆದು ವಿಚಾರಿಸಿದ್ದು, ಕೈ ಮೇಲಿನ ಅಚ್ಚೆ, ಮುಖದ ಮೇಲಿನ ಕೆಲವು ಗುರುತು, ಉಡುಪುಗಳ ಆಧಾರದ ಮೇಲೆ ಕೊಲೆಯಾಗಿರುವುದು ಲಕ್ಷ್ಮಿದೇವಮ್ಮ ಎಂಬುವುದು ದೃಢಪಟ್ಟಿತ್ತು ಎಂದು ಪೊಲೀಸ್ ವರಿಷ್ಠಾಧಿಕಾರಿ ಅಶೋಕ್ ತಿಳಿಸಿದರು.

### ಅತ್ತೆ ಕಾಟಕ್ಕೆ ಬೇಸತ್ತು ಕೊಲೆ

ಕೊಲೆಯಾದ ಲಕ್ಷ್ಮಿದೇವಮ್ಮ ಮಗಳನ್ನು ಅನೈತಿಕ ಚಟುವಟಿಕೆಗಳಿಗೆ ಬಳಸಿಕೊಳ್ಳಲು ಒತ್ತಾಯಿಸುತ್ತಿದ್ದರು, ಇದರಿಂದ ಬೇಸತ್ತ ಅಳಿಯ ದಂತ ವೈದ್ಯ ರಾಮಚಂದ್ರ, ತನ್ನ ಸ್ನೇಹಿತರಾದ ಸತೀಶ್ ಮತ್ತು ಕಿರಣ್ ಜತೆ ಸೇರಿ ಕೋಳಾಲ ಬಳಿಯ ಫಾರ್ಮ್‌ಹೌಸ್‌ನಲ್ಲಿ ಕೊಲೆ ಮಾಡಿ, ಮೂರು ದಿನ ಶವವನ್ನು ತಮ್ಮ ಬಳಿಯೇ ಇಟ್ಟುಕೊಂಡಿದ್ದರು. ನಂತರ ಆ.6ರಂದು ಯಾರಿಗೂ ಅನುಮಾನ ಬಾರದಿರಲಿ ಎಂದು ವಿವಿಧೆಡೆ ಅಂಗಾಂಗ ಎಸೆದಿದ್ದರು. ನಂತರ ಧರ್ಮಸ್ಥಳ ಪ್ರವಾಸಕ್ಕೆ ಹೋಗಿದ್ದರು. ಇದು ಅನುಮಾನಕ್ಕೆ ಕಾರಣವಾಗಿತ್ತು. ಆರೋಪಿಗಳನ್ನು ಧರ್ಮಸ್ಥಳದಲ್ಲಿ ಬಂಧಿಸಿ ಮುಂದಿನ ಕ್ರಮ ಕೈಗೊಳ್ಳಲಾಗಿದೆ.

# ಲಿಂಬಾವಳಿಗೆ ಮಾತೃ ವಿಯೋಗ

## ಭೀಮಾಬಾಯಿ ವೆಂಕಟರಾವ ಲಿಂಬಾವಳಿ ನಿಧನಕ್ಕೆ ಗಣ್ಯರ ಸಂತಾಪ

**ಬಾಗಲಕೋಟೆ:** ಮಾಜಿ ಸಚಿವ ಅರವಿಂದ ಲಿಂಬಾವಳಿ ಅವರ ತಾಯಿ ಭೀಮಾಬಾಯಿ ವೆಂಕಟರಾವ ಲಿಂಬಾವಳಿ (84) ಸೋಮವಾರ ನಿಧನರಾದರು.

ನಗರದ ದೀಪಂ ಕಾಲೋನಿಯ ನಿವಾಸಿಯಾಗಿರುವ ಭೀಮಾಬಾಯಿ ಅವರಿಗೆ ಸುರೇಶ ಲಿಂಬಾವಳಿ, ವಿಜಯ ಲಿಂಬಾವಳಿ, ಅಶೋಕ ಲಿಂಬಾವಳಿ, ಅರವಿಂದ ಲಿಂಬಾವಳಿ ಹಾಗೂ ರಾಜು ಲಿಂಬಾವಳಿ ಸೇರಿ ಐವರು ಪುತ್ರರು ಹಾಗೂ ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಬಳಗವನ್ನು ಅಗಲಿದ್ದಾರೆ.

ಅರವಿಂದ ಲಿಂಬಾವಳಿ ತಾಯಿ ನಿಧನದ ಸುದ್ದಿ ತಿಳಿದು ಭೋವಿ ಗುರುಪೀಠದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ, ವಿಜಯಪುರ ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ, ಸಂಸದ ಬಸವರಾಜ ಬೊಮ್ಮಾಯಿ, ಮಾಜಿ ಸಚಿವ ಎಸ್.ಆರ್.ಪಾಟೀಲ, ವಿಪ ಮಾಜಿ ಸದಸ್ಯ ಅರುಣ ಶಹಾಪುರ, ಮಾಜಿ ಶಾಸಕ ವೀರಣ್ಣ ಚರಂತಿಮಠ, ಬಿವಿವಿ ಸಂಘದ ಬಸವೇಶ್ವರ ವಿಜ್ಞಾನ ಮಹಾವಿದ್ಯಾಲಯದ ನಿವೃತ್ತ ಪ್ರಾಚಾರ್ಯ ಡಾ.ರಾಘವೇಂದ್ರ ಪತ್ತೇಪುರ ಸೇರಿದಂತೆ ಜಿಲ್ಲೆಯ ವಿವಿಧ ಪಕ್ಷಗಳ ಮುಖಂಡರು ಭೇಟಿ ನೀಡಿ ಕುಟುಂಬಕ್ಕೆ ಸಂತಾಪ ಸೂಚಿಸಿ, ಮೃತರ ಆತ್ಮಕ್ಕೆ ಶಾಂತಿ ಕೋರಿದರು. ಭೀಮಾಬಾಯಿ ವೆಂಟಕರಾವ ಲಿಂಬಾವಳಿ ಅವರ ಅಂತ್ಯಕ್ರಿಯೆ

ತುಳಸಿಗೇರಿ ಸಮೀಪದ ಲಿಂಬಾವಳಿ ಅವರಿಗೆ ಸೇರಿದ ಜಮೀನಿನಲ್ಲಿ ಸೋಮವಾರ ಸಂಜೆ ನೆರವೇರಿತು.

**ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಸಂತಾಪ:** ಅರವಿಂದ ಲಿಂಬಾವಳಿ ತಾಯಿ ನಿಧನದ ಸುದ್ದಿ ತಿಳಿದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಟ್ವೀಟ್ ಮೂಲಕ ಸಂತಾಪ ಸೂಚಿಸಿದ್ದಾರೆ. ತಾಯಿ ಅಗಲಿಕೆ ದುಃಖದಲ್ಲಿರುವ ಅರವಿಂದ ಲಿಂಬಾವಳಿ ಹಾಗೂ ಅವರ ಕುಟುಂಬ ವರ್ಗದವರಿಗೆ ದುಃಖ ತಡೆದುಕೊಳ್ಳುವ ಶಕ್ತಿಯನ್ನು ಭಗವಂತ ಕರುಣಿಸಲಿ. ಮೃತರ ಆತ್ಮಕ್ಕೆ ಚಿರಶಾಂತಿ ದೊರೆಯಲಿ ಎಂದು ಕೋರಿದ್ದಾರೆ.

# ರಾಜಣ್ಣ ತಲೆದಂಡ

← ಮೊದಲಪುಟದಿಂದ

ಇದರ ಬೆನ್ನಲ್ಲೇ, ರಾಜ್ಯಪಾಲರ ವಿಶೇಷ ಕಾರ್ಯದರ್ಶಿ ಆರ್.ಪ್ರಭುಶಂಕರ್ ಅವರು ರಾಜ್ಯ ಸರಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಪತ್ರ ಬರೆದಿದ್ದು, ರಾಜ್ಯಪಾಲರು ರಾಜಣ್ಣ ಅವರನ್ನು ತಕ್ಷಣ ಸಂಪುಟದಿಂದ ಕೈಬಿಡಲು ಸಹಿ ಹಾಕಿದ್ದಾರೆ ಎಂದು ಬರೆಯಲಾಗಿದೆ.



ರಾಜಣ್ಣ ಹೇಳಿದ್ದೇನು?: 'ವೋಟರ್ ಲಿಸ್ಟ್ ಯಾವ ಕಾಲದಲ್ಲಿ ಮಾಡಿದ್ದು? ನಮ್ಮದೇ ಸರಕಾರ ಇರುವಾಗ ಮಾಡಿರೋದು ಅಲ್ಲವೇ? ಆವಾಗ ಎಲ್ಲರೂ ಕಣ್ಣು ಮುಚ್ಚಿ ಕುಳಿತಿದ್ದರಾ? ಮತಪಟ್ಟಿ ಅಕ್ರಮಗಳು ನಡೆದಿರುವುದು ಸತ್ಯ. ಆದರೆ, ಆ ಅಕ್ರಮಗಳು ನಮ್ಮ ಕಣ್ಮುಂದೆನೇ ನಡೆದಿದ್ದಲ್ಲ. ನಮಗೆ ಅವಮಾನ ಆಗಬೇಕು. ನಾವು ನೋಡಿಕೊಳ್ಳಲಿಲ್ಲವಲ್ಲ ಅಂತ' ಎಂದು ತುಮಕೂರಿನಲ್ಲಿ ಹೇಳಿದ್ದರು.

**ಸುರ್ಜೇವಾಲಗೆ ದೂರು:** ರಾಹುಲ್ ಗಾಂಧಿ ಅವರು ಬೆಂಗಳೂರಿಗೆ ಭೇಟಿ ನೀಡಿ ಮತಗಳ್ಳತನದ ವಿರುದ್ಧ ಧ್ವನಿ ಎತ್ತಿದ್ದರು. ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ ಶಿವಕುಮಾರ್ ಸೇರಿದಂತೆ ಇಡೀ ಸಚಿವ ಸಂಪುಟ ಸಭೆ ಒಗ್ಗಟ್ಟಿನಿಂದ ಪ್ರತಿಭಟಿಸಿದ್ದಾರೆ. ಹೀಗಿರುವಾಗ ಕಾಂಗ್ರೆಸ್‌ನ ಸಚಿವರೇ ಆದ ರಾಜಣ್ಣ ಅವರೇ ಈ ಪ್ರತಿಭಟನೆಯನ್ನೇ ಪ್ರಶ್ನಿಸಿರುವುದು ಎಷ್ಟು ಸರಿ ಎಂದು ಬೆಂಗಳೂರು ನಗರ ಕಾಂಗ್ರೆಸ್ ಪ್ರಚಾರ ಸಮಿತಿಯು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರಿಗೆ ದೂರು ಸಲ್ಲಿಸಿತ್ತು.

### ಆಪ್ತರೊಂದಿಗೆ ಸಿಎಂ ಸಭೆ

ರಾಜಣ್ಣ ಅವರನ್ನು ಸಂಪುಟದಿಂದ ತೆಗೆಯಬೇಕು ಎನ್ನುವ ಸೂಚನೆ ಬರುತ್ತಿದ್ದಂತೆ ಸಿಎಂ ಸಿದ್ದರಾಮಯ್ಯ ಅವರು ಗೃಹ ಸಚಿವ ಪರಮೇಶ್ವರ ಅವರನ್ನು ತಮ್ಮ ಕಚೇರಿಗೆ ಕರೆಸಿಕೊಂಡು ಚರ್ಚಿಸಿದರು. ಇನ್ನೊಂದೆಡೆ ಸತೀಶ್ ಜಾರಕಿಹೊಳಿ ಕೊಠಡಿಯಲ್ಲಿ ರಾಜಣ್ಣ ಅವರು ತಮ್ಮ ಆಪ್ತರೊಂದಿಗೆ ಸಭೆ ನಡೆಸಿದರು. ಸುಮಾರು ಒಂದು ಗಂಟೆ ಸಭೆ ನಡೆಸಿದ ಬಳಿಕ ಸಿದ್ದರಾಮಯ್ಯ ಅವರು, ರಾಜಣ್ಣ ಅವರನ್ನು ವಜಾಗೊಳಿಸಲು ತೀರ್ಮಾನಿಸಿದರು ಎಂದು ಮೂಲಗಳು ತಿಳಿಸಿವೆ.

ಸಚಿವ ರಾಜಣ್ಣ ಅವರ ರಾಜೀನಾಮೆ ಪಡೆಯುವ ಮೂಲಕ ರಾಹುಲ್ ಗಾಂಧಿಯವರ ಮತ್ತು ದಲಿತರ ಬಗ್ಗೆ ಮೊಸಳೆ ಕಣ್ಣೀರು ಸುರಿಸುವ ಕಾಂಗ್ರೆಸ್ ಪಕ್ಷದ ನಿಜ ಬಣ್ಣ ಬಯಲಾಗಿದೆ. ಸತ್ಯ ಸಹಿಸಲಾಗದ ಕಾಂಗ್ರೆಸ್ ಹೈಕಮಾಂಡ್, ರಾಹುಲ್ ಗಾಂಧಿ ಪರಿಶಿಷ್ಟ ಪಂಗಡಕ್ಕೆ ಸೇರಿದ ಹಿರಿಯ ರಾಜಣ್ಣ ಅವರ ರಾಜೀನಾಮೆಯನ್ನು ಬೇಷರತ್ತಾಗಿ ಪಡೆದಿದೆ. ಇದು ಖಂಡಿತ ಸರಿಯಲ್ಲ.

- ಬಿ.ವೈ.ವಿಜಯೇಂದ್ರ ಬಿಜೆಪಿ ರಾಜ್ಯಾಧ್ಯಕ್ಷ

ನನಗೆ ತಿಳಿದಿರುವಂತೆ ಸಚಿವ ಸಂಪುಟದಿಂದ ರಾಜಣ್ಣ ಅವರನ್ನು ವಜಾ ಮಾಡಿರುವುದು ಪಕ್ಷದ ತೀರ್ಮಾನ. ಇದರ ಹೊರತಾಗಿ ಬೇರೆ ವಿಚಾರ ನನಗೆ ತಿಳಿದಿಲ್ಲ. ಈ ಬಗ್ಗೆ ಸಿಎಂ ಬಳಿ ಕೇಳಿದೆ. ಅವರು ತಮಗೆ ಬಂದ ಮಾಹಿತಿ ನೀಡಿದ್ದಾರೆ. ನನಗೆ ಬೇರೆ ಯಾವುದೇ ವಿಚಾರ ಗೊತ್ತಿಲ್ಲ. ಇದರಿಂದ ನನಗೂ ನೋವಾಗಿದೆ. ರಾಜಣ್ಣ ಅವರು ನನ್ನ ಒಳ್ಳೆಯ ಸ್ನೇಹಿತರು, ಆಪ್ತರು. ಕಳೆದ 25 ವರ್ಷಗಳಿಂದ ಜತೆಯಲ್ಲಿ ರಾಜಕಾರಣ ಮಾಡಿಕೊಂಡು ಬಂದಿದ್ದೇವೆ.

- ಡಿ.ಕೆ.ಶಿವಕುಮಾರ್ ಕೆಪಿಸಿಸಿ ಅಧ್ಯಕ್ಷ

# ಗವಿಸಿದ್ದಪ್ಪ ನಾಯಕ ಹತ್ಯೆ: ಎನ್ಐಎ, ಸಿಬಿಐ ತನಿಖೆಗೆ ಆಗ್ರಹ

**ಬೆಂಗಳೂರು:** ಕೊಪ್ಪಳದಲ್ಲಿ ಇತ್ತೀಚೆಗೆ ವಾಲ್ಮೀಕಿ ಸಮುದಾಯದ ಯುವ ಮುಖಂಡ ಗವಿಸಿದ್ದಪ್ಪ ನಾಯಕ ಅವರ ಬರ್ಬರ ಹತ್ಯೆ ಮಸೀದಿ ಮುಂದೆಯೇ ನಡೆದಿದ್ದು, ಅವರ ಆತ್ಮಕ್ಕೆ ಶಾಂತಿ ಲಭಿಸುವ ಸಲುವಾಗಿ ರಾಜ್ಯ ಸರಕಾರ ಈ ಪ್ರಕರಣದ ತನಿಖೆಯನ್ನು ಎನ್ಐಎ ಗೆ ವಹಿಸಬೇಕು ಅಥವಾ ಸಿಬಿಐಗೆ ಹಸ್ತಾಂತರ ಮಾಡಬೇಕೆಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಆಗ್ರಹಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ರಾಜ್ಯ ಸರಕಾರವು ಈ ಘಟನೆಯನ್ನು ಹಗುರವಾಗಿ ಪರಿಗಣಿಸಬಾರದು. ಈ ಹತ್ಯೆಯಿಂದ ಇಡೀ ಕೊಪ್ಪಳ ಜಿಲ್ಲೆಯಲ್ಲಿ ಆತಂಕ ಉಂಟಾಗಿದೆ. ಕೊಲೆಗಡುಕರು, ಹಿಂದೂ ಕಾರ್ಯಕರ್ತರನ್ನು ಟಾರ್ಗೆಟ್

ಮಾಡುವ ಸಮಾಜ ಘಾತುಕ ಶಕ್ತಿಗಳು, ದೇಶದ್ರೋಹಿಗಳ ಚಟುವಟಿಕೆ ಹಿಂದೆ ಕರಾವಳಿ ಭಾಗದಲ್ಲಿತ್ತು. ಈಗ ಹಿಂದೂ ಕಾರ್ಯಕರ್ತರ ಹತ್ಯೆಯು ಕೊಪ್ಪಳ ಜಿಲ್ಲೆಗೂ ವಿಸ್ತರಣೆ ಆಗಿದೆ. ಇದು ಖಂಡನೀಯ ಎಂದರು. ಈ ಘಟನೆಯನ್ನು ಗೃಹ ಸಚಿವರು ಗಂಭೀರವಾಗಿ ತೆಗೆದುಕೊಳ್ಳಬೇಕು. ತನಿಖೆಯನ್ನು ಎನ್ಐಎ ಅಥವಾ ಸಿಬಿಐಗೆ ಹಸ್ತಾಂತರ ಮಾಡಬೇಕು. ಅಲ್ಲಿನ ಎಸ್ಪಿ ದಿನಕ್ಕೆ ಒಂದೊಂದು ಹೇಳಿಕೆ ಕೊಡುತ್ತಿರುವುದು ದುರಂತ. ಈ ವಿಷಯದಲ್ಲಿ ಸಮರ್ಪಕ ತನಿಖೆ ಆಗುವ ಹಾಗೂ ಈ ಸಾವಿಗೆ ನ್ಯಾಯ ಸಿಗುವ ಭರವಸೆ ಉಳಿದಿಲ್ಲ ಎಂದರು.

# ರಾಗಾ ವಶ

← ಮೊದಲಪುಟದಿಂದ

ಪ್ರತಿಭಟನೆಗೆ ಅಧಿಕಾರಿಗಳು ಅನುಮತಿ ನೀಡದ ಹಿನ್ನೆಲೆಯಲ್ಲಿ ಸಂಸದರು ಹಾಗೂ ಕಾಂಗ್ರೆಸ್ ನಾಯಕರು ರಸ್ತೆಯಲ್ಲೇ ಕುಳಿತು ಚುನಾವಣಾ ಆಯೋಗ ಹಾಗೂ ಕೇಂದ್ರ ಸರಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ವಾದ್ರಾ, ಸಂಜಯ್ ರಾವತ್ ಮತ್ತು ಸಾಗರಿಕಾ ಘೋಷ್ ಸೇರಿ ಇಂಡಿಯಾ ಮೈತ್ರಿಕೂಟದ ಹಲವು ಸಂಸದರನ್ನು ವಶಕ್ಕೆ ಪಡೆದು, ಬಿಡುಗಡೆ ಮಾಡಿ ದ್ದಾರೆ. ಪ್ರತಿಭಟನೆಯಲ್ಲಿ ಕಾಂಗ್ರೆಸ್, ಸಮಾಜವಾದಿ ಪಕ್ಷ, ಟಿಎಂಸಿ, ಡಿಎಂಕೆ, ಎಎಪಿ, ಎಡ ಪಕ್ಷಗಳು, ಆರ್‌ಜೆಡಿ, ಎನ್‌ಸಿಪಿ (ಎಸ್‌ಪಿ), ಶಿವಸೇನೆ (ಯುಬಿಟಿ) ಮತ್ತು ನ್ಯಾಷನಲ್ ಕಾನ್ಫರೆನ್ಸ್ ಸೇರಿ ಹಲವು ಪಕ್ಷಗಳು ಭಾಗಿಯಾಗಿದ್ದವು.

# 500 ಹಣಕ್ಕಾಗಿ ವ್ಯಕ್ತಿಯ ಕೊಲೆ

**ಬೆಳಗಾವಿ :** ಕೇವಲ 500 ರು.ಗಾಗಿ ನಡೆದ ಜಗಳ ಕೊಲೆಯಲ್ಲಿ ಅಂತ್ಯವಾದ ಘಟನೆ ಬೆಳಗಾವಿ ತಾಲೂಕಿನ ಯಳ್ಳೂರು ಗ್ರಾಮದಲ್ಲಿ ನಡೆದಿದೆ. ಹುಸೇನ್ ತಾಶೇವಾಲೆ(45) ಮೃತ ದುರ್ದೈವಿ. ಗುಜರಿ ಸಾಮಗ್ರಿ ವಿಚಾರಕ್ಕೆ ಯಳ್ಳೂರು ಗ್ರಾಮದ ಮಿಥುನ್ ಮತ್ತು ಮನೋಜ್ ಎಂಬುವವರು ಹುಸೇನ್ ಜತೆ ಜಗಳವಾಡಿದ್ದಾರೆ. ಐನೂರು ರೂಪಾಯಿಗೆ ಸಂಬಂಧಿಸಿದಂತೆ ಮಾತಿಗೆ ಮಾತು ಬೆಳೆದಿದೆ. ಸ್ನೇಹಿತರ ನಡುವಿನ ಜಗಳ ವಿಕೋಪಕ್ಕೆ ತೆರಳಿ ಹುಸೇನ್ ಹೊಟ್ಟೆಯ ಭಾಗಕ್ಕೆ ಕೈಯಿಂದ ಇಬ್ಬರೂ ಆರೋಪಿಗಳು ಗುದ್ದಿದ್ದಾರೆ. ಹೊಟ್ಟೆಯ ಭಾಗಕ್ಕೆ ಬಲವಾಗಿ ಪೆಟ್ಟು ಬಿದ್ದದ್ದರಿಂದ ಹುಸೇನ್ ಗಂಭೀರವಾಗಿ ಗಾಯಗೊಂಡಿದ್ದ. ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡುವ ವೇಳೆ ಹುಸೇನ್ ಸಾವನ್ನಪ್ಪಿದ್ದಾನೆ. ಈ ಕುರಿತು ಬೆಳಗಾವಿ ಗ್ರಾಮಿಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರ, ರಾಯಚೂರು
# ಐ.ಡಿ.ಎಸ್.ಎಮ್.ಟಿ. ಲೇಔಟ್, ಮಂತ್ರಾಲಯ ರಸ್ತೆ, ರಾಯಚೂರು Email: rudaraichur@gmail.com
ಸಂಖ್ಯೆ: ನಪ್ರಾರಾ/ತಾಂತ್ರಿಕ/ಸಿ.ಎ.ನಿ/ಹಂಚಿಕೆ/10/2025-26/ ದಿನಾಂಕ:07-08-2025
ನಾಗರೀಕ ಸೌಲಭ್ಯ(ಸಿ.ಎ.) ನಿವೇಶನಗಳ ಹಂಚಿಕೆಯ ಅವಧಿ ವಿಸ್ತರಣೆ ಪ್ರಕಟಣೆ.
ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ನಾಗರೀಕ ಸೌಲಭ್ಯ ನಿವೇಶನಗಳ ಹಂಚಿಕೆ) ನಿಯಮಗಳು 1991ರ ನಿಯಮ 3(3) ರನ್ವಯ:
ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಅನುಮೋದಿತ ಖಾಸಗಿ ಬಡಾವಣೆಗಳಲ್ಲಿ ಲಭ್ಯವಿರುವ ನಾಗರೀಕ ಸೌಲಭ್ಯ(Civic Amenity Site) ನಿವೇಶನಗಳನ್ನು ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ನಿಗಮಗಳು ಮತ್ತು ಕೇಂದ್ರ ಸರ್ಕಾರ/ರಾಜ್ಯ ಸರ್ಕಾರದಿಂದ ಸ್ಥಾಪಿಸಲ್ಪಟ್ಟ ಸಂಸ್ಥೆಗಳಿಗೆ ಹಾಗೂ ಅರ್ಹ ಸಂಘ ಸಂಸ್ಥೆಗಳಿಗೆ ವಿವಿಧ ಉದ್ದೇಶಗಳಿಗೆ 30 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಹಂಚಿಕೆ ಮಾಡಲು ದಿನಾಂಕ: 05-08-2025 ರಂದು ಕೊನೆಯ ದಿನಾಂಕವನ್ನು ನಿಗದಿಪಡಿಸಲಾಗಿರುತ್ತದೆ. ಆದರೆ ಕೆಲವು ಕಾರಣಾಂತರಗಳಿಂದ ಕೊನೆಯ ದಿನಾಂಕವನ್ನು ವಿಸ್ತರಿಸಿ ಅರ್ಜಿಗಳನ್ನು ಆಹ್ವಾನಿಸಿದೆ.
ನಿಗದಿತ ಅರ್ಜಿ ನಮೂನೆಯನ್ನು ಪ್ರಾಧಿಕಾರದ ಕಛೇರಿ ವೇಳೆಯಲ್ಲಿ ಪ್ರಕಟಣೆಗೊಂಡ ದಿನಾಂಕದಿಂದ ರೂ.1,000/- (ಒಂದು ಸಾವಿರ ಮಾತ್ರ) ಗಳನ್ನು ಪಾವತಿ ಮಾಡಿ ಪಡೆಯಬಹುದು. ಭರ್ತಿ ಮಾಡಿದ ಅರ್ಜಿ ನಮೂನೆಯನ್ನು ಖುದ್ದಾಗಿ ಇಲ್ಲವೇ ನೋಂದಾಯಿತ ಅಂಚೆ ಮುಖಾಂತರ ಆಯುಕ್ತರು, ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರ, ರಾಯಚೂರು ಇವರಿಗೆ ದಿನಾಂಕ: 20-08-2025 ಸಂಜೆ 05:30ಗಂಟೆ ಒಳಗಾಗಿ ಸಲ್ಲಿಸತಕ್ಕದ್ದು. ನಂತರ ಬಂದ ಅರ್ಜಿಗಳನ್ನು ಇಲ್ಲವೇ ಸರಿಯಾಗಿ ಭರ್ತಿ ಮಾಡದೆ ಇರುವ ಅರ್ಜಿಗಳನ್ನು ಪರಿಗಣಿಸದೇ ತಿರಸ್ಕರಿಸಲಾಗುವುದು. ಹೆಚ್ಚಿನ ಮಾಹಿತಿ/ವಿವರಗಳಿಗೆ ಕಚೇರಿಯ ವೇಳೆಯಲ್ಲಿ ಪ್ರಾಧಿಕಾರದ ಕಚೇರಿಯನ್ನು ಸಂಪರ್ಕಿಸಬಹುದು ಮತ್ತು ಸೂಚನಾಫಲಕಕ್ಕೆ ಪ್ರಕಟಿಸಲಾಗಿದೆ.
ಸಹಿ/- ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ ರಾಯಚೂರು,
ಸಹಿ/- ಅಧ್ಯಕ್ಷರು, ನಗರಾಭಿವೃದ್ಧಿ ಪ್ರಾಧಿಕಾರ ರಾಯಚೂರು,
DIP/RCR/325/KSMCA/326/2025-26

ಕರ್ನಾಟಕ ಸರಕಾರ
ಕಾರ್ಯಪಾಲಕ ಇಂಜಿನೀಯರರವರ ಕಛೇರಿ
ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಯಾದಗಿರಿ
ಸಂಖ್ಯೆ:ಕಾಪಾಅ/ಗ್ರಾನೀಸಮತ್ತುನೈ/ವಿಯಾ/ಟೆ.ಪ್ರ/JJM/2025-26/509 ದಿನಾಂಕ:08-08-2025
ಮರು ಟೆಂಡರ ಪ್ರಕಟಣೆ "ಇ-ಪ್ರೊಕ್ಯೂರ್ಮೆಂಟ್" ಮೂಲಕ
ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನೀಯರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಯಾದಗಿರಿ ರವರಿಂದ ಕುಡಿಯುವ ನೀರು ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರ ಆಹ್ವಾನಿಸಲಾಗಿದ್ದು ವಿವರ ಈ ಕೆಳಗಿನಂತಿದೆ.
Sl.No:Taluka:Shorapur, Village Name:KANNALLI. Estimate cost (Rs.in lakhs): 249.00. Indent No.: RWSSD/2024-25/WS/WORK INDENT 8984/CALL-2. Eligibility of Contractor: Class-III & above. Period of Completion: 180 Day's
1) ಲೆಕ್ಕ ಶೀರ್ಷಿಕೆ: JAL Jeevan Mission-2022-23. 2)ಗುತ್ತೆದಾರರ ಅರ್ಹತೆ: 3ನೇ, 2ನೇ ದರ್ಜೆ ಹಾಗೂ ಮೆಲ್ಪಟ್ಟು 3)ಟೆಂಡರ್ ಫಾರಂ ಪಡೆಯುವ ದಿನಾಂಕ: 11-08-2025 ರಿಂದ 20-08-2025. 4) ಟೆಂಡರ್ ಅರ್ಜಿ ಬೆಲೆ ಮತ್ತು ಇ.ಎಂ.ಡಿ ಮೊತ್ತ: "ಇ-ಪ್ರೊಕ್ಯೂರ್ಮೆಂಟ್" ಪ್ರಕಾರ. 5) Pre Bid Meeting Date: 14-08-2025 & Address: Office of the Executive Engineer, RDW&S Division Yadgir at 11.00 am 6)ಟೆಂಡರ್ ಫಾರಂ ಸಲ್ಲಿಸುವ ಅಂತಿಮ ದಿನಾಂಕ: 20-08-2025 ಸಾಯಂಕಾಲ 4.30 ಗಂಟೆವರೆಗೆ, 7) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 21-08-2025 ಸಾಯಂಕಾಲ 5.00 ಗಂಟೆಯ ನಂತರ, 8) ಆರ್ಥಿಕ ಬಿಡ್ಡುಗಳನ್ನು ತೆರೆಯುವ ದಿನಾಂಕ: 28-08-2025 ಬೆಳಿಗ್ಗೆ 11.00 ಗಂಟೆಯ ನಂತರ 9) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ: ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ರೈಲ್ವೇ ನಿಲ್ದಾಣದ ಹತ್ತಿರ ಯಾದಗಿರ. 10) ಅಂತರ್ಜಾಲ ತಾಣದ ವಿಳಾಸ: www.kppp.karnataka.gov.in.
ಸಹಿ/- ಕಾರ್ಯಪಾಲಕ ಇಂಜಿನೀಯರರು, ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಯಾದಗಿರಿ.
ವಾ.ಸಾ.ಸಂ.ಇ/ಯಾದಗಿರಿ/197/ಕೆ.ಎಸ್.ಎಂ.ಸಿ.&ಎ/2025-26

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಕಾರ್ಯಪಾಲಕ ಅಭಿಯಂತರರವರ ವಿಭಾಗ ಕಚೇರಿ, ಎಂ.ಜಿ ರಸ್ತೆ, ಕಾರವಾರ-581301
Email: eekuwsdbkwr@gmail.com ದೂ. ಸಂಖ್ಯೆ: 08382201080
ಟೆಂಡರ್ ಅಧಿಸೂಚನೆ
(ಕೆ.ಪಿ.ಪಿ ಪೋರ್ಟಲ್ ಮುಖಾಂತರ ಮಾತ್ರ)
ಈ ಕೆಳಗಿನ ಕಾಮಗಾರಿಗಳಿಗೆ ತಾಂತ್ರಿಕ ಮತ್ತು ಆರ್ಥಿಕ ಅರ್ಹತಾ ಅಗತ್ಯತೆಗಳನ್ನು ತೃಪ್ತಿಕರವಾಗಿ ಅರ್ಹರಿರುವ ಸಂಸ್ಥೆ/ಗುತ್ತಿಗೆದಾರರಿಂದ ಕೆ.ಪಿ.ಪಿ ಪೋರ್ಟಲ್ https://kppp.karnataka.gov.in ಮೂಲಕ (ದ್ವಿ-ಟೆಂಡರ್ ದಾಖಲೆ ಪದ್ಧತಿಯಲ್ಲಿ) ಟೆಂಡರ್ ಆಹ್ವಾನಿಸಲಾಗಿದೆ. ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ: 743, ದಿನಾಂಕ: 11/08/2025.
2025-26 ನೇ ಸಾಲಿನ ಕಾರವಾರ-ಅಂಕೋಲಾ ನಗರ ನೀರು ಸರಬರಾಜು ಯೋಜನೆಯ ನಿರ್ವಹಣೆ ಮತ್ತು ದುರಸ್ಥಿ ಕಾಮಗಾರಿಯಡಿಯಲ್ಲಿ ಎಂ.ಎಸ್ ಏರು / ಗುರುತ್ವಾಕರ್ಷಣಾ ಕೊಳವೆ ಮಾರ್ಗದ ನೇರದಲ್ಲಿ ವಿವಿಧ ಪ್ರದೇಶಗಳಲ್ಲಿ ಸ್ಲೂಯಿಸ್ ಹಾಗೂ ಏರ್ ವಾಲ್ವ ಅಳವಡಿಕೆ ಮತ್ತು ಹಾಗೂ ನವಗದ್ದೆಯಲ್ಲಿರುವ ನೆಲಮಟ್ಟದ ಜಲಸಂಗ್ರಹಾಗಾರಕ್ಕೆ ಬಲ್ಕ್‌ಪ್ಲೋ ಮೀಟರ್ ಅಳವಡಿಸುವ ಕಾಮಗಾರಿ (ಐಟಂ ದರದ ಟೆಂಡರ್). KUWSDB/2025-26/WS/WORK_INDENT367. ಹೆಚ್ಚಿನ ವಿವರಗಳಿಗಾಗಿ ಕೆ.ಪಿ.ಪಿ ಪೋರ್ಟಲ್‌ನಲ್ಲಿ ನೋಡುವುದು ಅಥವಾ ಕಾರ್ಯಪಾಲಕ ಅಭಿಯಂತರರು, ಕನನೀಸ ಮತ್ತು ಒಚ ಮಂಡಳಿ, ವಿಭಾಗ, ಕಾರವಾರ ಕಚೇರಿಯನ್ನು ಸಂಪರ್ಕಿಸಬಹುದು.
ಸಹಿ/- ಕಾರ್ಯಪಾಲಕ ಅಭಿಯಂತರು, ಕ.ನ.ನೀ.ಸ ಮತ್ತು ಒಳಚರಂಡಿ ಮಂಡಳಿ, ವಿಭಾಗ, ಕಾರವಾರ
DIPR/ADK/KSMCA/370/25-26 dt. 11.08.2025

ಕರ್ನಾಟಕ ಸರ್ಕಾರ
ಮಕ್ಕಳ ರಕ್ಷಣಾ ನಿರ್ದೇಶನಾಲಯ
ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಬೆಂಗಳೂರು ದಕ್ಷಿಣ (ಕೆಂಗೇರಿ)
ನಂ: 27/17, 2ನೇ ಮಹಡಿ, ಅಕ್ಷಯ ಸ್ಕ್ವೇರ್, ಪಾಪರೆಡ್ಡಿಪಾಳ್ಯ, 80 ಅಡಿ ರಿಂಗ್ ರಸ್ತೆ, ನಾಗರಭಾವಿ-2ನೇ ಹಂತ, ಬೆಂಗಳೂರು-560072.
ಇಮೇಲ್- southdcpo@gmail.com ದೂರವಾಣಿ ಸಂಖ್ಯೆ: 080-23442233.
ಸಂಖ್ಯೆ:ಜಿ.ಮ.ರ.ಘ/ಬೆಂ(ದ)/ಮಾಸಂಸೇ/ಹೊಗುಸಿ/ಇ-ಟೆಂಡರ್/ಪ್ರಕಟಣೆ/2025-26 ದಿನಾಂಕ: 06.08.2025
ಇ-ಟೆಂಡರ್ ಪ್ರಕಟಣೆ
2025-26 ನೇ ಸಾಲಿಗೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಬೆಂಗಳೂರು ದಕ್ಷಿಣ (ಕೆಂಗೇರಿ) ಕಛೇರಿಗೆ ಮಾನವ ಸಂಪನ್ಮೂಲ ಸೇವೆಯನ್ನು ಅರ್ಹ ಸೆಕ್ಯೂರಿಟಿ ಸಂಸ್ಥೆಗಳ/ಏಜೆನ್ಸಿಗಳ ಮುಖಾಂತರ ಹೊರಗುತ್ತಿಗೆ ಆಧಾರದಲ್ಲಿ ನೇಮಕಾತಿ ಮಾಡಿಕೊಳ್ಳಲು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ಪದ್ಧತಿಯಂತೆ ಆನ್‌ಲೈನ್ ಮುಖಾಂತರ ಮಾತ್ರ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆಯ ಅಪ್‌ಲೋಡ್ ದಿನಾಂಕ: 05.08.2025. ಇ-ಪ್ರೊಕ್ಯೂರ್‌ಮೆಂಟ್ ಅಡಿ ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: 06.09.2025 ಟೆಕ್ನಿಕಲ್ ಬಿಡ್ ತೆರೆಯುವ ದಿನಾಂಕ: 08.09.2025, ಆರ್ಥಿಕ ಬಿಡ್ ತೆರೆಯುವ ದಿನಾಂಕ: 11.09.2025 ಮತ್ತು ಇ.ಎಂ.ಡಿ. ಮೊತ್ತ ರೂ.2,00,000/- ಆಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸುವುದು.
ಸಹಿ/- ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಬೆಂಗಳೂರು ದಕ್ಷಿಣ (ಕೆಂಗೇರಿ)
ವಾಸಾಸಂಇ/ವಾಪ್ರ/2271/ಎಸ್‌ಎಸ್‌ಸಿ/2025-26

ರಾಷ್ಟ್ರೀಯಆರೋಗ್ಯ ಅಭಿಯಾನ
ಕರ್ನಾಟಕ ಸರ್ಕಾರ
ಕೊಡಗುಜಿಲ್ಲಾಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ, ಮಡಿಕೇರಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆಯ ಅಂಗ ಸಂಸ್ಥೆ)
ದೂರವಾಣಿ: 08272-295457. Email:rchokodagu2@gmail.com
ಸಂಖ್ಯೆ: ಡಿ.ಪಿ.ಎಂ.ಯು/ಮಾ.ಸ/03/2025-26 ದಿನಾಂಕ: 11-08-2025
ಪತ್ರಿಕಾ ಪ್ರಕಟಣೆ
ರಾಷ್ಟ್ರೀಯ ಆರೋಗ್ಯ ಅಭಿಯಾನ ಯೋಜನೆಯಡಿಯಲ್ಲಿ ಗುತ್ತಿಗೆ ಆಧಾರದ ಮೇಲೆ ಜಿಲ್ಲೆಗೆ ಶುಶ್ರೂಷಕಿಯವರ ಹುದ್ದೆಗೆ ಎನ್.ಹೆಚ್.ಎಮ್ ಮಾರ್ಗಸೂಚಿಯನ್ವಯ ನಿಯಮಾನುಸಾರ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳನ್ನು ದಿನಾಂಕ 12-08-2025 ರಿಂದ 16-08-2025 ರವರಗೆ ಬೆಳಗ್ಗೆ 10.00 ರಿಂದ 5-00 ಗಂಟೆ ಒಳಗಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿಯಲ್ಲಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ.
* ಹುದ್ದೆಗಳ ವಿವರ:
1. ಶುಶ್ರೂಷಕ ಅಧಿಕಾರಿ: ಹುದ್ದೆ: =2, [NPPC-1, BLOOD BANK-1], ವಿದ್ಯಾರ್ಹತೆ: NPPC-1 ಜಿ.ಎನ್.ಎಂ ನರ್ಸಿಂಗ್, BLOOD BANK 1 ಬಿ.ಎಸ್ಸಿ, ನರ್ಸಿಂಗ್/ಜಿ.ಎನ್.ಎಂ ನರ್ಸಿಂಗ್ ವೇತನ: ರೂ.15,555/-, ವಯೋಮಿತಿ: <40 ವರ್ಷ, ಮೀಸಲಾತಿ: ಸಾಮಾನ್ಯದಲ್ಲಿ ಮಾಜಿ ಸೈನಿಕ- 1 ಹುದ್ದೆ, ಪ.ಜಾತಿ ಅಂಗವಿಕಲ-1, ಅನುಭವ (NPPC): ಸಾರ್ವಜನಿಕ ಆರೋಗ್ಯ ಮತ್ತು ಸರಕಾರದ ಆರೋಗ್ಯ ಕಾರ್ಯಕ್ರಮದಲ್ಲಿ ಕನಿಷ್ಠ 1 ವರ್ಷದ ಅನುಭವ. (ಅದ್ಯತೆ: ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಸೇವೆಗೆ), BLOOD BANK ಶುಶೂಷಕ ಅಧಿಕಾರಿ ಹುದ್ದೆಗೆ ಗಣಕ ಯಂತ್ರ ಜ್ಞಾನ ಹೊಂದಿರಬೇಕು.
ಸೂಚನೆ:- ದಿನಾಂಕ 12-08-2025 ರಿಂದ 16-08-2025 ರವರಗೆ ಬೆಳಗ್ಗೆ 10.00 ರಿಂದ 5-00 ಗಂಟೆ ಒಳಗಾಗಿ ಅರ್ಜಿ ಸಲ್ಲಿಸುವುದು. ನಂತರ ಬಂದವರನ್ನು ಪರಿಗಣಿಸಲಾಗುವುದಿಲ್ಲ. ದಿನಾಂಕ: 18-08-2025 ರಂದು ಅಭ್ಯರ್ಥಿಗಳ ಶಾರ್ಟ್‌ಲಿಸ್ಟ್ ಪಟ್ಟಿಯನ್ನು ಸಿದ್ದಪಡಿಸಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲಾಗುವುದು. ದಿನಾಂಕ : 20-08- 2025 ರಂದು ಎಲ್ಲಾ ಮೂಲ ದಾಖಲಾತಿಗಳು ಮತ್ತು ಒಂದು ದೃಡೀಕೃತ ನಕಲು ಪ್ರತಿಯೊಂದಿಗೆ ಸಂದರ್ಶನಕ್ಕೆ ಹಾಜರಾಗುವುದು.
1. ಹುದ್ದೆ ತಕ್ಕಂತ ವಿದ್ಯಾರ್ಹತೆ ಇಲ್ಲದವರನ್ನು, ಮೂಲ ದಾಖಲಾತಿಗಳು ಇಲ್ಲದವರನ್ನು ಹಾಗೂ ಅನುಭವಕ್ಕೆ ಆದ್ಯತೆ ಹುದ್ದೆಗಳಲ್ಲಿ ಸದರಿ ಹುದ್ದೆಗೆ ಸಂಬಂಧಿಸಿದ ಕ್ಷೇತ್ರದಲ್ಲಿ ಅನುಭವವಿಲ್ಲದವರನ್ನು ಆಯ್ಕೆಗೆ ಕಡ್ಡಾಯವಾಗಿ ಪರಿಗಣಿಸಲಾಗುವುದಿಲ್ಲ. ಆಯ್ಕೆ ಸಮಿತಿಯ ನಿರ್ಣಯ ಅಂತಿಮವಾಗಿರುತ್ತದೆ.
2. ಶುಶೂಷಕ ಅಧಿಕಾರಿ ಹುದ್ದೆಗೆ ಐಎಅ ನೊಂದಣಿ ಆಗಿರಬೇಕು/ಅರ್ಜಿ ಸಲ್ಲಿಸುವ ವೇಳೆಯಲ್ಲಿ ನವೀಕೃತಗೊಂಡು ಚಾಲ್ತಿಯಲ್ಲಿ ಇರಬೇಕು.
3. ಈ ನೇಮಕಾತಿಯು ಎನ್.ಹೆಚ್.ಎಂ / ರಾಜ್ಯ ವಲಯದ ನಿಯಮಾವಳಿ, ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.
4. ಮೀಸಲಾತಿ ಅನ್ವಯವಾಗುವ ಹುದ್ದೆಗಳಲ್ಲಿ ಮೀಸಲಾತಿ ಬಯಸುವ ಅಭ್ಯರ್ಥಿಗಳು ಕಡ್ಡಾಯವಾಗಿ ಜಾತಿ ದೃಢೀಕರಣ ಪತ್ರ ಹಾಜರುಪಡಿಸುವುದು. ಜಾತಿ ದೃಢೀಕರಣ ಪತ್ರ ಪ್ರಸ್ತುತ ಚಾಲ್ತಿಯಲ್ಲಿ ಇರಬೇಕು.
5. ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ NHM ಅಭ್ಯರ್ಥಿಗಳು ಸಂಬಂಧಿಸಿದ ಕಾರ್ಯಕ್ರಮಾಧಿಕಾರಿಗಳಿಂದ NOC ಪಡೆದುಕೊಂಡಿರಬೇಕು.
6. ಸ್ಥಳ ಆಯ್ಕೆಯನ್ನು ಸಂದರ್ಶನದ ಮೂಲಕ ನಡೆಸಲಾಗುವುದು.
ಹೆಚ್ಚಿನ ವಿವರಗಳಿಗೆ ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಗಳನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಲು ಕೋರಿದೆ.
ಕಛೇರಿ ಫೋನ್ ನಂಬರ್: 08272-295457
ಸಹಿ/- ಉಪಾಧ್ಯಕ್ಷರು ಹಾಗೂ ಸದಸ್ಯ ಕಾರ್ಯದರ್ಶಿ, ಜಿಲ್ಲಾ ಆರೋಗ್ಯ ಸಂಘ

ಇತ್ತೀಚಿನ ವರ್ಷಗಳಲ್ಲಿ ಅರಣ್ಯ ಹೊರಭಾಗದಲ್ಲಿ ಆನೆಗಳು ಬೀಡುಬಿಟ್ಟಿದ್ದು, ರೈತರ ಜಮೀನುಗಳ ಅಪಾರ ಪ್ರಮಾಣದ ಬೆಳೆ ನಾಶಪಡಿಸುತ್ತಿವೆ. ಕೊಡಗಿನ ಕಾಫಿ ಎಸ್ಟೇಟ್‌ಗಳಲ್ಲಿ 114, ಹಾಸನದಲ್ಲಿ 14 ಹಾಗೂ ಚಿಕ್ಕಮಗಳೂರಿನಲ್ಲಿ ಕೆಲ ಆನೆಗಳಿದ್ದು ದಾಳಿ ಮಾಡುತ್ತಿರುವ ಪ್ರಕರಣಗಳ ಬಗ್ಗೆ ವರದಿಯಾಗುತ್ತಿವೆ. ಪುಂಡಾನೆಗಳ ದಾಳಿ ತಪ್ಪಿಸಲು ಅವುಗಳನ್ನ ಸೆರೆಹಿಡಿಯಲು ರಾಜ್ಯದ ಏಳು ಪ್ರದೇಶಗಳಲ್ಲಿ ಆನೆ ಶಿಬಿರಗಳನ್ನ ತೆರೆಯಲಾಗಿದೆ.

-ಈಶ್ವರ್ ಖಂಡ್ರೆ, ಅರಣ್ಯ ಸಚಿವ

ಕಾಂಗ್ರೆಸ್ ಪಕ್ಷಕ್ಕೆ ಸತ್ಯ ಎಂದರೆ ಅಲರ್ಜಿ, ಸುಳ್ಳು ಎಂದರೆ ಎನರ್ಜಿ. ರಾಹುಲ್ ಗಾಂಧಿ ಅವರ ಮತಗಳ್ಳತನ ಸುಳ್ಳಿಗೆ ಕನ್ನಡಿ ಹಿಡಿದಿದ್ದೆ ಸಚಿವ ರಾಜಣ್ಣನವರ ತಪ್ಪಾ? ಸತ್ಯ ಹೇಳಿದ್ದಕ್ಕೆ ರಾಜೀನಾಮೆ ಶಿಕ್ಷೆನಾ? ಸತ್ಯದ ಮೇಲೆ ಪ್ರಮಾಣ ವಚನ ಸ್ವೀಕರಿಸಿದ ಸಿಎಂ ಸಿದ್ದರಾಮಯ್ಯ ರಿಗೆ ಸತ್ಯಕ್ಕಿಂತ, ದಲಿತ ಸಚಿವರೊಬ್ಬರ ಗೌರವಕ್ಕಿಂತ ಹೈಕಮಾಂಡ್ ಗುಲಾಮಗಿರಿಯೇ ಹೆಚ್ಚಾಗಿದ್ದು ದುರಂತ. ರಾಜಣ್ಣನವರನ್ನು ಈ ರೀತಿ ಅಗೌರವವಾಗಿ ಸಂಪುಟದಿಂದ ವಜಾ ಮಾಡಿರುವುದು, ಆ ಪಕ್ಷದ ದಲಿತ ವಿರೋಧಿ ಮನಸ್ಥಿತಿಗೆ ಮತ್ತೊಂದು ತಾಜಾ ಉದಾಹರಣೆ. ಬಾಬಾಸಾಹೇಬ್ ಅಂಬೇಡ್ಕರ್ ಅವರನ್ನೇ ಸೋಲಿಸಿದ ಕಾಂಗ್ರೆಸ್ ರಾಜಣ್ಣ ಅವರ ಸತ್ಯವನ್ನು ಸಹಿಸುತ್ತಾರಾ?

- ಆರ್.ಅಶೋಕ, ಪ್ರತಿಪಕ್ಷ ನಾಯಕ



ವಿಧಾನ ಮಂಡಲ ಮಧ್ಯದೊಳಗೆ

## ಸಮಾಚಾರ ಸಣ್ಣದಲ್ಲ

### ದಿನೇಶ್ ಗೂಳಿಗೌಡ ರಾಜ್ಯ ಉಪಾಧ್ಯಕ್ಷ

**ಬೆಂಗಳೂರು:** ರಾಜ್ಯ ಸರಕಾರದ ಗ್ಯಾರಂಟಿ ಅನುಷ್ಠಾನ ಸಮಿತಿಯ ರಾಜ್ಯ ಉಪಾಧ್ಯಕ್ಷರನ್ನಾಗಿ ದಿನೇಶ್ ಗೂಳಿಗೌಡ ಅವರನ್ನು ರಾಜ್ಯ ಸರಕಾರ ನೇಮಿಸಿ ಆದೇಶ ಹೊರಡಿಸಿದೆ. ಪ್ರಸ್ತುತ ದಿನೇಶ್ ಗೂಳಿಗೌಡ ಅವರು ಮಂಡ್ಯ ಸ್ಥಳೀಯ ಸಂಸ್ಥೆಗಳ ಕ್ಷೇತ್ರಗಳಿಂದ ವಿಧಾನಪರಿಷತ್ತಿನ ಶಾಸಕರಾಗಿ ಕಾರ್ಯನಿರ್ವ ಹಿಸುತ್ತಿದ್ದಾರೆ. ಈ ಹಿಂದೆ ಕೆಪಿಸಿಸಿ ಮಾಧ್ಯಮ ವಿಭಾಗದ ಮುಖ್ಯಸ್ಥರಾಗಿ ಹಾಗೂ ಕೆಪಿಸಿಸಿ ಮಾಧ್ಯಮ ಘಟಕದ ಉಪಾಧ್ಯಕ್ಷರಾಗಿ ಹತ್ತಾರು ವರ್ಷಗಳ ಕಾಲ ಕಾರ್ಯ ನಿರ್ವಹಿಸಿದ್ದಾರೆ. ಗ್ಯಾರಂಟಿ ಸಮಿತಿಗೆ ಉಪಾಧ್ಯಕ್ಷರನ್ನಾಗಿ ನೇಮಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹಾಗೂ ಪಕ್ಷದ ಹೈಕಮಾಂಡ್‌ಗೆ ದಿನೇಶ್ ಗೂಳಿಗೌಡ ಅವರು ಧನ್ಯವಾದ ಸಲ್ಲಿಸಿದ್ದಾರೆ,.

### ಪರಿಹಾರ ನೀಡಿಲ್ಲ

**ವಿಧಾನಪರಿಷತ್:** ಕೇರಳದ ಆನೆಗಳಿಂದ ದಾಳಿಗೊಳಗಾಗಿ ಮೃತಪಟ್ಟ ಅವಲಂಬಿತ ಕುಟುಂಬಸ್ಥರಿಗೆ ಪರಿಹಾರ ರೂಪದಲ್ಲಿ ರಾಜ್ಯ ಸರಕಾರ ನಯಾ ಪೈಸೆ ನೀಡಿಲ್ಲ ಎಂದು ಅರಣ್ಯ ಸಚಿವ ಈಶ್ವರ್ ಖಂಡ್ರೆ ಸಮರ್ಥಿಸಿಕೊಂಡಿದ್ದಾರೆ. ಮಾನವ-ವನ್ಯಜೀವಿಗಳ ಸಂಘರ್ಷ ದಿನೇ ದಿನೇ ಹೆಚ್ಚಾಗುತ್ತಿದೆ. ಭೌಗೋಳಿ ಕವಾಗಿ ಅರಣ್ಯ ಪ್ರದೇಶ ಕಡಿಮೆ ಆಗುತ್ತಿರುವುದರಿಂದ ನಾಡಿಗೆ ಆನೆಗಳು ಲಗ್ಗೆ ಇಡುತ್ತಿವೆ. ಮಾನವ ಮತ್ತು ಆನೆ ಸಂಘರ್ಷ ಹೆಚ್ಚಿರುವ ರಾಜ್ಯದ 10 ಜಿಲ್ಲೆಗಳಲ್ಲಿ 2022 ರಿಂದ ಈವರೆಗೂ 129 ಮಂದಿ ಸಾವನ್ನಪ್ಪಿ ದ್ದಾರೆ. ಮೃತರ ಕುಟುಂಬಗಳಿಗೆ ನೀಡಲಾಗುತ್ತಿದ್ದ ಪರಿಹಾರವನ್ನು 15 ರಿಂದ 20 ಲಕ್ಷಕ್ಕೆ ಏರಿಸಲಾಗಿದೆ. ಕೇರಳದಲ್ಲಿ ಆನೆ ದಾಳಿಯಿಂದ ಸಾವನ್ನಪ್ಪಿದ ವ್ಯಕ್ತಿಗಳ ಕುಟುಂಬಕ್ಕೆ ಸರಕಾರದಿಂದ ಪರಿಹಾರ ನೀಡಿಲ್ಲ ಎಂದರು. ಇನ್ನು ಬಿಜೆಪಿ ಸದಸ್ಯ ಕಿಶೋರ್ ಕುಮಾರ್, ಕೆ.ಪ್ರತಾಪ್ ಸಿಂಹ ಅವರ ಪ್ರಶ್ನೆಗಳಿಗೆ ಉತ್ತರಿಸಿದ ಸಚಿವರು, ರಾಜ್ಯದಲ್ಲಿ 6,395 ಆನೆಗಳಿವೆ. ದೇಶದಲ್ಲಿ ಹೆಚ್ಚು ಆನೆಗಳಿರುವ ರಾಜ್ಯಗಳಲ್ಲಿ ಕರ್ನಾಟಕ ಮೊದಲ ಸ್ಥಾನದಲ್ಲಿದೆ. ಕಾಲಕ್ರಮೇಣ ಅರಣ್ಯ ಪ್ರದೇಶ ಕಡಿಮೆಯಾಗುತ್ತಿದ್ದು, ಪ್ರತಿ ವರ್ಷ ಸರಾಸರಿ 50 ಮಂದಿ ಸಾವನ್ನಪ್ಪುತ್ತಿರುವುದು ಕಳವಳಕಾರಿಯಾಗಿದೆ. ಬಿಗುಡಾಯಿಸುತ್ತಿರುವ ಮಾನವ-ಆನೆ ಸಂಘರ್ಷ ತಪ್ಪಿಸಲು 116 ಕಿ.ಮೀ ರೈಲ್ವೆ ಬ್ಯಾರಿಕೇಡ್ ಹಾಕಲಾ ಗಿದೆ. 200 ಕಿ.ಮೀ ಬ್ಯಾರಿಕೇಡ್ ಹಾಕಲು ಸಿಎಂ ಒಪ್ಪಿಗೆ ನೀಡಿದ್ದಾರೆ. ಇನ್ನು 300 ಕಿ.ಮೀ ಆನೆ ಕಂದಕ ನಿರ್ಮಿಸಲು ಬೇಡಿಕೆಯಿದೆ ಎಂದರು.

### ವೇತನ ಬಡ್ತಿ ತಡೆಯದಂತೆ ಸೂಚನೆ

**ವಿಧಾನಪರಿಷತ್:** ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ ಶೇ.60ಕ್ಕಿಂತ ಕಡಿಮೆ ಫಲಿತಾಂಶ ಪಡೆದಿರುವ ವಿಷಯ ಶಿಕ್ಷಕರಿಗೆ ವಾರ್ಷಿಕ ವೇತನ ಬಡ್ತಿಯನ್ನು ತಡೆಯದಂತೆ ಮೌಖಿಕವಾಗಿ ಇಲಾಖಾ ಆಯುಕ್ತರಿಗೆ ಸೂಚಿಸಲಾಗಿದೆ ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ತಿಳಿಸಿದ್ದಾರೆ. ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ ಶೇ.60ಕ್ಕಿಂತ ಕಡಿಮೆ ಫಲಿತಾಂಶ ಪಡೆದಿರುವ ವಿಷಯ ಶಿಕ್ಷಕರಿಗೆ ವಾರ್ಷಿಕ ವೇತನ ಬಡ್ತಿಗೆ ತಡೆ ಹಾಗೂ ನಿರಂತರ 3 ವರ್ಷಗಳಿಂದ ಕಡಿಮೆ ಫಲಿತಾಂಶ ನೀಡಿದ ವಿಷಯ ಶಿಕ್ಷಕರ ವೇತನ ಅನುದಾನ ತಡೆ ಹಿಡಿಯುವ ಕ್ರಮ ಸರಿಯಲ್ಲ. ಉತ್ತಮ ಫಲಿತಾಂಶ ಬರದಿರಲು ಶಿಕ್ಷಕರೇ ಕಾರಣರಾಗಿರುವುದಿಲ್ಲ. ವಿದ್ಯಾರ್ಥಿ ಗಳು ಹಾಗೂ ಪೋಷಕರು ಕಾರಣಕರ್ತರಾಗಿರುತ್ತಾರೆ. ಇದನ್ನು ಸರಕಾರ ಮನಗಂಡು ಕೂಡಲೇ ವೇತನ ಬಡ್ತಿ ತಡೆ ಆದೇಶ ಹಿಂಪಡೆಯಬೇಕೆಂದು ಬಿಜೆಪಿ ಸದಸ್ಯ ಎಸ್. ವ್ಹಿ. ಸಂಕನೂರು ಆಗ್ರಹಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಚಿವ ಮಧು ಬಂಗಾರಪ್ಪ, ವೇತನ ಬಡ್ತಿ ತಡೆ ಆದೇಶವನ್ನು 2019ರಲ್ಲಿ ಬಿಜೆಪಿ ಸರಕಾರ ಮಾಡಿತ್ತು.

ಹೈಕಮಾಂಡ್ ಎಚ್ಚರಿಕೆಯ ನಡುವೆಯೂ ನಿಲ್ಲಿಸದ ಹೇಳಿಕೆ | ಸಿಎಂ ಬದಲಾವಣೆ, ಕೆಪಿಸಿಸಿ ಬದಲಾವಣೆ ಬಗ್ಗೆ ಹೇಳಿಕೆ ನೀಡಿದ್ದ ರಾಜಣ್ಣ | ಡಿ.ಕೆ.ಗುಂಪಿನಿಂದ ಹೈಕಮಾಂಡ್, ರಾಗಾ ವಿರುದ್ಧ ಹೇಳಿಕೆ ವರದಿ ರವಾನೆ

# ರಾಜಣ್ಣಗೆ ಮುಳುವಾದ ಲೂಸ್ ಟಾಕ್

ರಂಜಿತ್ ಎಚ್. ಅಶ್ವತ್ಥ ಬೆಂಗಳೂರು

ಸೆಪ್ಟಂಬರ್ ಕ್ರಾಂತಿಗೂ ಮೊದಲೇ ರಾಜ್ಯ ಕಾಂಗ್ರೆಸ್‌ಗೆ ಮಗ್ಗಲ ಮುಳ್ಳಾಗಿದ್ದ ಕೆ.ಎನ್. ರಾಜಣ್ಣ ಸಚಿವ ಸಂಪುಟದಿಂದ ವಜಾಗೊಂಡಿದ್ದಾರೆ. ಈ ಮೂಲಕ ಲೂಸ್ ಟಾಕ್‌ಗಳಿಗೆ ಬೆಲೆ ತೆತ್ತಿದ್ದಾರೆ ಎನ್ನುವ ವಿಶ್ಲೇಷಣೆಗಳು ಆರಂಭವಾಗಿದೆ.

ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದಾಗಿನಿಂದಲೂ ಒಂದಿಲ್ಲೊಂದು ಹೇಳಿಕೆಯಿಂದ ಪಕ್ಷಕ್ಕೆ ಹಾಗೂ ಸರಕಾರಕ್ಕೆ ಮುಜುಗರ ಉಂಟು ಮಾಡುತ್ತಿದ್ದ ರಾಜಣ್ಣ ಅವರ ವಿರುದ್ಧ ಪಕ್ಷದೊಳಗೆ ತೀವ್ರ ಆಕ್ಷೇಪವಿದ್ದರೂ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಪ್ತ ಹಾಗೂ ದಲಿತ ನಾಯಕ ಎನ್ನುವ ಕಾರಣಕ್ಕೆ ಎಚ್ಚರಿಕೆ ಹೊರತಾಗಿ ಯಾವುದೇ ಕ್ರಮವಹಿಸಲು ಸಾಧ್ಯವಾಗಿರಲಿಲ್ಲ. ಆದರೀಗ ಸ್ವತಃ ರಾಹುಲ್ ಗಾಂಧಿ ಅವರ ಪ್ರತಿಭಟ ನೆಯನ್ನೇ ಟೀಕಿಸಿದ್ದರಿಂದ ಸಂಪುಟದಿಂದಲೇ ವಜಾಗೊ ಳಿಸುವ ತೀರ್ಮಾನಕ್ಕೆ ಬರಲಾಗಿದೆ ಎನ್ನಲಾಗುತ್ತಿದೆ.

ಕಾಂಗ್ರೆಸ್ ಮೂಲಗಳ ಪ್ರಕಾರ ರಾಜಣ್ಣ ಅವರನ್ನು ಸಂಪುಟದಿಂದಷ್ಟೇ ಅಲ್ಲದೇ ಪಕ್ಷದಿಂದಲೇ ಹೊರಹಾಕುವಂತೆ ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ ಸೂಚನೆ ನೀಡಿದ್ದಾರೆ. ಆದರೆ ಸಂಪುಟದಿಂದ ವಜಾಗೊಳಿಸಿರುವ ಸಿದ್ದರಾಮಯ್ಯ ಅವರು, ಪಕ್ಷದಲ್ಲಿ ಉಳಿಸಿಕೊಳ್ಳುವ ಪ್ರಯತ್ನವನ್ನು ಮಾಡುತ್ತಿದ್ದಾರೆ ಎನ್ನಲಾಗಿದೆ. ಆದರೆ ಮತಗಳ್ಳತನ ವಿಷಯದಲ್ಲಿ ಯಾವುದೇ ಕಾರಣಕ್ಕೂ ಸಹಿಸಿಕೊಳ್ಳಲು ಸಾಧ್ಯವಿಲ್ಲ ಎನ್ನುವ ಮನಸ್ಥಿತಿಯಲ್ಲಿ ರಾಹುಲ್ ಗಾಂಧಿಯಿರುವುದರಿಂದ ಪಕ್ಷದಲ್ಲಿ ಉಳಿಯುವರೋ ಇಲ್ಲವೋ ಎನ್ನುವ ಅನುಮಾನಗಳಿಗೆ ಸ್ಪಷ್ಟನೆ ಸಿಕ್ಕಿಲ್ಲ.

**ಸೆಪ್ಟಂಬರ್ ಕ್ರಾಂತಿಯೇ ಮೂಲ:** ಆದರೆ ರಾಜಣ್ಣ ಅವರ ತಲೆದಂಡ ಮತಗಳ್ಳತನ ವಿಷಯಕ್ಕೆ ಆಗಿದ್ದರೂ, ಈ ಹಿಂದೆ ಅವರು 'ಸೆಪ್ಟಂಬರ್ ಕ್ರಾಂತಿ' ಹೇಳಿಕೆ ನೀಡಿದಾಗಲೇ ಅವರನ್ನು ಸಂಪುಟದಿಂದ ಕೈಬಿಡಬೇಕು ಎನ್ನುವ ಬೇಡಿಕೆಯನ್ನು ಹಲವು ನಾಯಕರು ಹೈಕಮಾಂಡ್ ಮುಂದಿಟ್ಟಿದ್ದರು. ಆ ಸಮಯದಲ್ಲಿ ಡಿ.ಕೆ.ಶಿವಕುಮಾರ್ ಅವರನ್ನು ಕೆಪಿಸಿಸಿ ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಸಬೇಕು ಎನ್ನುವ ಹೇಳಿಕೆಯೊಂದಿಗೆ, ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ವಿರುದ್ಧವೂ ಹೇಳಿಕೆ ನೀಡಿದ್ದರು. ಈ ಎಲ್ಲ ಹೇಳಿಕೆಗಳ ವಿರುದ್ಧವೂ ಪಕ್ಷದ ವರಿಷ್ಠರಿಗೆ ದೂರು ಸಲ್ಲಿಸಿದರೂ, ಸಿದ್ದರಾಮಯ್ಯ ಅವರ ಆಪ್ತ ಎನ್ನುವ ಕಾರಣಕ್ಕೆ ಯಾವುದೇ ಕ್ರಮ ಕೈಗೊಳ್ಳಲು ಸಾಧ್ಯವಾಗಿರಲಿಲ್ಲ. ಆದರೀಗ ನಕಲಿ ಮತದಾನದ ಬಗ್ಗೆ ಎರಡು ವರ್ಷದ ಹಿಂದೆಯೇ ನೋಡಿಕೊಳ್ಳದೇ ಈಗ ಮಾತನಾಡುವುದು ರಾಜ್ಯ ಸರಕಾರ ಹಾಗೂ ಕಾಂಗ್ರೆಸ್‌ನದ್ದೇ ತಪ್ಪು ಎನ್ನುವ ಹೇಳಿಕೆ ತಲೆದಂಡಕ್ಕೆ ಸೂಕ್ತ ಕಾರಣವಾಯಿತು. ರಾಜಣ್ಣ ಅವರ ಈ ಹೇಳಿಕೆಯನ್ನು ಸಿದ್ದರಾಮಯ್ಯ ಅವರಿಗೂ ಸಮರ್ಥಿಸಿಕೊಳ್ಳಲು ಸಾಧ್ಯವಾಗಿಲ್ಲ. ಆದ್ದರಿಂದ ವಜಾ ಶಿಕ್ಷೆಗೆ ಒಪ್ಪಿದ್ದಾರೆ ಎನ್ನಲಾಗಿದೆ.

### ಕೆ.ಎನ್. ರಾಜಣ್ಣ ನೀಡಿದ್ದ ವಿವಾದಾತ್ಮಕ ಹೇಳಿಕೆ

- ರಾಜ್ಯದಲ್ಲಿ ಸೆಪ್ಟಂಬರ್‌ನಲ್ಲಿ ದೊಡ್ಡ ರಾಜಕೀಯ ಕ್ರಾಂತಿ ಸಂಭವಿಸಲಿದೆ. ಆಗ ಸಚಿವ ಸಂಪುಟ ಬದಲಾವಣೆ.
- ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ರಾಜ್ಯದಲ್ಲಿ 5 ವರ್ಷ ಸಿಎಂ ಆಗಿರುತ್ತಾರೆ. ಸಿಎಂ ಹುದ್ದೆ ರಾಜ್ಯದಲ್ಲಿ ಖಾಲಿ ಇಲ್ಲ.
- 2028ಕ್ಕೂ ಸಿದ್ದರಾಮಯ್ಯ ಅವರದ್ದೇ ನಾಯಕತ್ವ, ಅವರೇ ಸಿಎಂ
- ಡಿಸಿಎಂ ಸ್ಥಾನ ಎಂದರೆ ತಲೆ ಮೇಲೆ ಕಿರೀಟ ಇರೊಲ್ಲ
- ಕಾಂಗ್ರೆಸ್ ಉಸ್ತುವಾರಿ ಸುರ್ಜೇವಾಲಾ ಅವರು ಶಾಸಕರು ಮತ್ತು ಸಚಿವರ ಸಭೆ ನಡೆಸಿದ್ದರ ವಿರುದ್ಧ ಬಹಿರಂಗವಾಗಿ ಆಕ್ರೋಶ ವ್ಯಕ್ತಪಡಿಸಿದ್ದರು.
- ರಾಜ್ಯದ 48 ರಾಜಕೀಯ ನಾಯಕರ ವಿರುದ್ಧ ಹನಿಟ್ರ್ಯಾಪ್ ಮಾಡಲಾಗಿದೆ.
- ಕೆಪಿಸಿಸಿ ಅಧ್ಯಕ್ಷ ಸ್ಥಾನದಿಂದ ಡಿ.ಕೆ. ಶಿವಕುಮಾರ್ ಅವರನ್ನು ಬದಲಾಯಿಸಬೇಕು
- ರಾಜ್ಯದಲ್ಲಿ ಸಮುದಾಯಕ್ಕೆ ಒಬ್ಬರಂತೆ 5 ಡಿಸಿಎಂ ಹುದ್ದೆ ಸೃಷ್ಟಿಸಬೇಕು.

### ಡಿ.ಕೆ. ಶಿವಕುಮಾರ್ ಆಪ್ತರಿಂದಲೇ ವರದಿ ಸಲ್ಲಿಕೆ

ಸೆಪ್ಟಂಬರ್ ಕ್ರಾಂತಿ ಹೇಳಿಕೆ ಮೊದಲಿನಿಂದಲೂ ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ವಿಷಯದಲ್ಲಿ ಪದೇಪದೆ ಡಿಸಿಎಂ ಡಿ.ಕೆ.ಶಿವಕುಮಾರ್ ಅವರನ್ನು ರಾಜಣ್ಣ ಕೆಣಕುತ್ತಿದ್ದರು. ಈ ಹಿಂದೆಯೂ ಡಿ.ಕೆ.ಶಿವಕುಮಾರ್ ಹಾಗೂ ಅವರ ಆಪ್ತರು ರಾಜಣ್ಣ ಹೇಳಿಕೆಗಳನ್ನು ಪಕ್ಷದ ಹೈಕಮಾಂಡ್ ಗಮನಕ್ಕೆ ತರುತ್ತಲೇ ಬಂದಿದ್ದಾರೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಹಲವು ಬಾರಿ 'ಬಾಯ್ ಮುಚ್ಚುವಂತೆ' ರಾಜಣ್ಣ ಅವರಿಗೆ ಹೈಕಮಾಂಡ್ ಸೂಚನೆ ನೀಡಿದರೂ, ತಮ್ಮ ಹೇಳಿಕೆಯನ್ನು ಬದಲಿಸಿಕೊಂಡಿರಲಿಲ್ಲ. ಆದರೀಗ ನೇರವಾಗಿ ರಾಹುಲ್ ಗಾಂಧಿ ಅವರ ವಿರುದ್ಧವೇ ಮಾತನಾಡಿದ್ದನ್ನು ಡಿಕೆಶಿ ಆಪ್ತರು 'ದಾಖಲೆ' ಸಮೇತ ದೆಹಲಿ ನಾಯಕರಿಗೆ ತಲುಪಿಸಿದ್ದಾರೆ. ನೇರವಾಗಿ ರಾಹುಲ್ ಗಾಂಧಿ ಅವರಿಗೆ ದಾಖಲೆಗಳನ್ನು ನೀಡಿದ್ದರಿಂದ ರಾಜಣ್ಣ ನಡೆಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿ ರಾಜಣ್ಣ ಅವರನ್ನು ಪಕ್ಷದಿಂದಲೇ 'ಉಚ್ಚಾಟಿಸಲು' ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರಿಗೆ ಸೂಚನೆ ನೀಡಿದ್ದಾರೆ. ರಾಹುಲ್ ಆದೇಶವನ್ನು ಪಾಲಿಸಲು ಮುಂದಾದ ಸುರ್ಜೇವಾಲ ಅವರಿಗೆ, ಉಚ್ಚಾಟನೆ ಬೇಡ ಸಂಪುಟದಿಂದ ವಜಾಗೊಳಿಸೋಣ ಎಂದು ಸಿದ್ದರಾಮಯ್ಯ ಅವರು ಮನವೊಲಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಸಭಾಧ್ಯಕ್ಷರ ಪೀಠಕ್ಕೆ ಅಗೌರವ ಸೂಚಿಸಿದ್ದ ಶಾಸಕರು

## ಬಿಜೆಪಿಯ 18 ಶಾಸಕರ ಅಮಾನತು ವಾಪಸು

**ವಿಧಾನಸಭೆ:** ಸಭಾಧ್ಯಕ್ಷರ ಪೀಠಕ್ಕೆ ಅಗೌರವ ಸೂಚಿಸಿದ್ದ ಆರೋಪದ ಮೇಲೆ 6 ತಿಂಗಳು ಬಿಜೆಪಿಯ 18 ಶಾಸಕರನ್ನು ಅಮಾನತುಗೊಳಿಸಿದ್ದ ನಿರ್ಣಯ ಹಿಂಪಡೆದಿರುವುದನ್ನು ವಿಧಾನಸಭೆಯಲ್ಲಿ ಸೋಮವಾರ ಅಧಿಕೃತವಾಗಿ ಹಿಂಪಡೆಯಲಾಯಿತು.

ಕಳೆದ ಅಧಿವೇಶನದಲ್ಲಿ ಬಿಜೆಪಿಯ 18 ಶಾಸಕರನ್ನು ಅಮಾನತುಗೊಳಿಸಿ ನಿರ್ಣಯ ಕೈಗೊಳ್ಳಲಾಗಿತ್ತು. ಆದರೆ ಪ್ರತಿಪಕ್ಷ ನಾಯಕ ಅಶೋಕ್, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಭಾಧ್ಯಕ್ಷ ಯು.ಟಿ. ಖಾದರ್ ನೇತೃತ್ವದಲ್ಲಿ ಸಂಧಾನ ಸಭೆ ನಡೆಸಿ ಅಮಾನತನ್ನು ಹಿಂಪಡೆಯಲಾಗಿತ್ತು. ಆದರೆ ಸದನದಲ್ಲಿ ನಿರ್ಣಯ ಕೈಗೊಂಡಿದ್ದರಿಂದ, ಸದನದಲ್ಲಿಯೇ ಮಂಡಿಸಿ ಅನುಮೋದನೆ ಪಡೆಯಲಾಯಿತು.

ಕಾನೂನು ಸಚಿವ ಎಚ್.ಕೆ.ಪಾಟೀಲ್ ಅವರು ಸ್ಥಿರೀಕರಣ ಪ್ರಸ್ತಾವವನ್ನು ಸದನದಲ್ಲಿ ಮಂಡಿಸಿ, ಬಿಜೆಪಿ 18 ಶಾಸಕರನ್ನು ಆರು ತಿಂಗಳ ಅಮಾನತು ಮಾಡಲಾಗಿತ್ತು. ಅಮಾನತುಗೊಳಿಸಿದ ನಿರ್ಣಯವನ್ನು ಮೇ 25 ರಿಂದ ಜಾರಿಗೆ ಬರುವಂತೆ ಹಿಂಪಡೆಯಾಗಿದೆ. ಈ ಸ್ಥಿರೀಕರಣ ಪ್ರಸ್ತಾವಕ್ಕೆ ಸದನ ಅನುಮೋದನೆ ನೀಡಬೇಕು ಎಂದು ಕೋರಿದರು. ವಿಧಾನಸಭೆ ಸ್ಪೀಕರ್ ಯು.ಟಿ.ಖಾದರ್ ಪ್ರಸ್ತಾವವನ್ನು ಮತಕ್ಕೆ ಹಾಕಿದಾಗ, ಧ್ವನಿಮತದ ಮೂಲಕ ಅನುಮೋದನೆ ಪಡೆಯಲಾಯಿತು.

### ಸ್ಪೀಕರ್ ಖಾದರ್ ಗರಂ

ಇದಕ್ಕೂ ಮೊದಲು ಸಂತಾಪ ಸೂಚನಾ ನಿರ್ಣಯದ ಮೇಲೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡುತ್ತಿದ್ದಾಗ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿ ಅವರು ಸದನದ ಒಳಗೆ ಅಲ್ಲಲ್ಲಿ ಓಡಾಡುತ್ತಾ ಸದಸ್ಯರೊಬ್ಬರ ಜತೆ ಮಾತನಾಡುತ್ತಿರುವುದಕ್ಕೆ ಸ್ಪೀಕರ್ ಖಾದರ್ ಗರಂ ಆದ ಘಟನೆ ವಿಧಾನಸಭೆಯಲ್ಲಿ ನಡೆಯಿತು. ಸದನದಲ್ಲಿ ಸಂತಾಪ ಕಲಾಪ ನಡೆಯುತ್ತಿದೆ. ಇದಕ್ಕೊಂದು ಪಾವಿತ್ರ್ಯತೆ ಬೇಡವೇ, ನೀವು ಹೀಗೆ ಮಾತನಾಡುವುದು ಸರಿಯಲ್ಲ. ಸದನದ ಹೊರಗೆ ಹೋಗಿ ಮಾತನಾಡಿ ಎಂದು ಸಿಟ್ಟಿನಿಂದ ಹೇಳಿದರು. ಆಗ ಮುಖ್ಯಮಂತ್ರಿ ಸಿದ್ದರಾಮಯ್ಯ ಸಹ ಸಚಿವ ತಂಗಡಗಿಯವರಿಗೆ ತಮ್ಮ ಆಸನಕ್ಕೆ ಬರುವಂತೆ ಹೇಳಿದರು. ಆಗ ಎದ್ದು ನಿಂತ ಪ್ರತಿಪಕ್ಷದ ಉಪನಾಯಕ ಅರವಿಂದ ಬೆಲ್ಲದ್ ಅವರು ಶಿವರಾಜ್ ತಂಗಡಿ ಅವರು ಕನ್ನಡ ಸಂಸ್ಕೃತಿ ಇಲಾಖೆಯ ಸಚಿವರು ಎಂದು ಛೇಡಿಸಿದರು.

- ರಾಜ್ಯದಲ್ಲಿ ಸೆಪ್ಟಂಬರ್‌ನಲ್ಲಿ ದೊಡ್ಡ ರಾಜಕೀಯ ಕ್ರಾಂತಿ ಸಂಭವಿಸಲಿದೆ. ಆಗ ಸಚಿವ ಸಂಪುಟ ಬದಲಾವಣೆ.
- ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ರಾಜ್ಯದಲ್ಲಿ 5 ವರ್ಷ ಸಿಎಂ ಆಗಿರುತ್ತಾರೆ. ಸಿಎಂ ಹುದ್ದೆ ರಾಜ್ಯದಲ್ಲಿ ಖಾಲಿ ಇಲ್ಲ.
- 2028ಕ್ಕೂ ಸಿದ್ದರಾಮಯ್ಯ ಅವರದ್ದೇ ನಾಯಕತ್ವ, ಅವರೇ ಸಿಎಂ
- ಡಿಸಿಎಂ ಸ್ಥಾನ ಎಂದರೆ ತಲೆ ಮೇಲೆ ಕಿರೀಟ ಇರೊಲ್ಲ
- ಕಾಂಗ್ರೆಸ್ ಉಸ್ತುವಾರಿ ಸುರ್ಜೇವಾಲಾ ಅವರು ಶಾಸಕರು ಮತ್ತು ಸಚಿವರ ಸಭೆ ನಡೆಸಿದ್ದರ ವಿರುದ್ಧ ಬಹಿರಂಗವಾಗಿ ಆಕ್ರೋಶ ವ್ಯಕ್ತಪಡಿಸಿದ್ದರು.
- ರಾಜ್ಯದ 48 ರಾಜಕೀಯ ನಾಯಕರ ವಿರುದ್ಧ ಹನಿಟ್ರ್ಯಾಪ್ ಮಾಡಲಾಗಿದೆ.
- ಕೆಪಿಸಿಸಿ ಅಧ್ಯಕ್ಷ ಸ್ಥಾನದಿಂದ ಡಿ.ಕೆ. ಶಿವಕುಮಾರ್ ಅವರನ್ನು ಬದಲಾಯಿಸಬೇಕು
- ರಾಜ್ಯದಲ್ಲಿ ಸಮುದಾಯಕ್ಕೆ ಒಬ್ಬರಂತೆ 5 ಡಿಸಿಎಂ ಹುದ್ದೆ ಸೃಷ್ಟಿಸಬೇಕು.

## ಅಗ್ನಿ ಸುರಕ್ಷತೆ ಅಳವಡಿಸಿಕೊಳ್ಳದ ಆಸ್ಪತ್ರೆಗಳು

**ಬೆಂಗಳೂರು:** ರಾಜ್ಯದ ನೋಂದಾಯಿತ ಸರಕಾರಿ ಹಾಗೂ ಖಾಸಗಿ ಆಸ್ಪತ್ರೆಗಳ ಪೈಕಿ ಕೇವಲ 329 ಆಸ್ಪತ್ರೆಗಳು ಮಾತ್ರ ಅಗ್ನಿ ಸುರಕ್ಷತೆ ಮಾನದಂಡಗಳನ್ನು ಪಾಲಿಸುತ್ತಿವೆ. ಉಳಿದ ಆಸ್ಪತ್ರೆಗಳಲ್ಲಿ ಈ ವ್ಯವಸ್ಥೆ ನಿಯಮಬದ್ಧವಾಗಿಲ್ಲ ಎಂಬ ಆಘಾತಕಾರಿ ಅಂಶ ಬೆಳಕಿಗೆ ಬಂದಿದೆ. ರಾಜ್ಯದಲ್ಲಿರುವ 2,878 ಸರಕಾರಿ ಆಸ್ಪತ್ರೆಗಳ ಪೈಕಿ 14 ಹಾಗೂ 5,850 ಖಾಸಗಿ ಆಸ್ಪತ್ರೆಗಳ ಪೈಕಿ 315 ಆಸ್ಪತ್ರೆಗಳು ಮಾತ್ರವೇ ಅಗ್ನಿ ಸುರಕ್ಷತೆ ಕ್ರಮಗಳನ್ನು ಅನುಸರಿಸುತ್ತಿವೆ ಎಂದು ಆರೋಗ್ಯ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಅನಾಮಧೇಯ ವ್ಯಕ್ತಿಯ ವಿರುದ್ಧ ಕ್ರಮಕ್ಕೆ ಸದಸ್ಯರ ಆಗ್ರಹ

## ಧರ್ಮಸ್ಥಳದ ಬಗ್ಗೆ ಸದನದಲ್ಲಿ ಪ್ರಸ್ತಾಪ

**ವಿಧಾನಸಭೆ/ವಿಧಾನಪರಿಷತ್:** ಧರ್ಮಸ್ಥಳದಲ್ಲಿನ ಎಸ್‌ಐಟಿ ತನಿಖೆಗೆ ಸಂಬಂಧಿಸಿದಂತೆ ಉಭಯ ಸದನದಲ್ಲಿ ಪ್ರಸ್ತಾಪವಾಗಿದ್ದು, ಅನಾಮಧೇಯ ವ್ಯಕ್ತಿಯ ವಿರುದ್ಧ ಕ್ರಮಕ್ಕೆ ಸದಸ್ಯರು ಆಗ್ರಹಿಸಿದ್ದಾರೆ.

ವಿಧಾನಪರಿಷತ್‌ನಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿದ ಬಿಜೆಪಿ ಶಾಸಕ ಡಿ.ಎಸ್. ಅರುಣ್, ರಾಜ್ಯದ ಧಾರ್ಮಿಕ ಹೆಮ್ಮೆ ಹಾಗೂ ಲಕ್ಷಾಂತರ ಹಿಂದೂ ಭಕ್ತರ ಭಾವನೆಯ ಕೇಂದ್ರವಾಗಿರುವ ಧರ್ಮಸ್ಥಳದ ವಿರುದ್ಧ ಯಾವುದೇ ದೃಢವಾದ ಸಾಕ್ಷ್ಯವಿಲ್ಲದೆ ಅನಾಮಿಕ ವ್ಯಕ್ತಿ ಮಾಡಿದ ಆರೋಪ ಮಾಡಿದ್ದಾನೆ. ಇಂತಹ ಸುಳ್ಳು ಹಾಗೂ ಉದ್ದೇಶಪೂರಿತ ಆರೋಪಗಳಿಂದ ಸನಾತನ ಧರ್ಮದ ಪಾವಿತ್ರ್ಯಕ್ಕೆ ಧಕ್ಕೆ ತರುತ್ತಿರುವುದು ಧರ್ಮ ವಿರೋಧಿ ಶಕ್ತಿಗಳ ಹಳೆಯ ತಂತ್ರ. ಸರಕಾರವು ಶೂನ್ಯ ಸಹಿಷ್ಣುತೆ ನೀತಿಯನ್ನು ಅನುಸರಿಸಿ, ಆರೋಪದ ಹಿಂದೆ ಇರುವ ನಿಜಸ್ವರೂಪವನ್ನು ತಕ್ಷಣ ಬಹಿರಂಗಪಡಿಸಬೇಕು ಹಾಗೂ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಸರಕಾರವು ತನಿಖೆಯನ್ನು ತ್ವರಿತಗೊಳಿಸಲು, ಗೃಹ ಸಚಿವರ ಮೂಲಕ ಪ್ರಗತಿ ವರದಿಯನ್ನು ಸಾರ್ವಜನಿಕರಿಗೆ ಬಹಿರಂಗಪಡಿಸಲು ಹಾಗೂ ಹಿಂದೂ ಧರ್ಮದ ಪಾವಿತ್ರ್ಯವನ್ನು ಹಾಳುಮಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

### ಶವ ಸಿಗದಿದ್ದರೆ ನೇಣಿಗೆ ಹಾಕಿ

ಇದೇ ವಿಷಯಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಶಾಸಕ ಬೇಳೂರು ಗೋಪಾಲಕೃಷ್ಣ ವಿಧಾನಸೌಧದಲ್ಲಿ ಮಾತನಾಡಿದ್ದು, ಧರ್ಮಸ್ಥಳ ಗ್ರಾಮದಲ್ಲಿ ಶವ ಸಿಗಲಿಲ್ಲವಾದರೆ ಆ ಅನಾಮಿಕ ವ್ಯಕ್ತಿಯನ್ನು ನೇಣಿಗೆ ಹಾಕಬೇಕು. ಧರ್ಮಸ್ಥಳ ಪ್ರಕರಣದಲ್ಲಿ ಬಹಳ ಗೊಂದಲ ಇದ್ದಾಗ ಸಮಸ್ಯೆ ಬರಬಾರದು ಅಂತ ರಾಜ್ಯ ಸರಕಾರ ಎಸ್‌ಐಟಿ ತನಿಖೆಗೆ ಕೊಟ್ಟಿದೆ. ಗೊಂದಲ ಹೆಚ್ಚಾಗೋದು ಬೇಡ ಅಂತ ತನಿಖೆಗೆ ಕೊಡಲಾಗಿದೆ. ಬಿಜೆಪಿ ಇದ್ದರೂ ತನಿಖೆಗೆ ಎಸ್‌ಐಟಿಗೆ ಕೊಡುತ್ತಿದ್ದರು. ಧರ್ಮಸ್ಥಳದ ಬಗ್ಗೆ ನಮಗೂ ಗೌರವವಿದೆ. ಈ ಪವಿತ್ರ ಧಾರ್ಮಿಕ ಕ್ಷೇತ್ರಕ್ಕೆ ಯಾವುದೇ ಹಾನಿ ಆಗಲು ನಾವು ಬಿಡಲ್ಲ. ದೇವಸ್ಥಾನಕ್ಕೆ, ಪೂಜ್ಯರಿಗೆ ಹಾನಿಯಾಗೋದಕ್ಕೆ ಬಿಡಲ್ಲ ಎಂದರು. ಎಲ್ಲೂ ಶವಗಳು ಸಿಗಲಿಲ್ಲ ಅಂದಾಗ ಅನಾಮಿಕನನ್ನು ಬಿಡೋಕೆ ಸಾಧ್ಯವಿಲ್ಲ. ಅವನನ್ನು ನೇಣು ಹಾಕಬೇಕಾಗುತ್ತದೆ, ಹುಡುಗಾಟನಾ ಇದು?. ಶವ ಸಿಗದೇ ಇದ್ದಾಗ ಅನಾಮಿಕನ ವಿರುದ್ಧವೂ ಕ್ರಮ ಆಗುತ್ತದೆ ಎಂದು ತಿಳಿಸಿದರು.

## 2027ರೊಳಗೆ ಕೋಲಾರಕ್ಕೆ ಎತ್ತಿನಹೊಳೆ ನೀರು

**ವಿಧಾನಸಭೆ:** ಕೋಲಾರ, ಚಿಕ್ಕಬಳ್ಳಾಪುರಕ್ಕೆ 2027 ಮಾರ್ಚ್ ವೇಳೆಗೆ ಎತ್ತಿನಹೊಳೆ ಕುಡಿಯುವ ನೀರು ಪೂರೈಕೆ ಮಾಡಲಾಗುವುದು ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದರು.

ಶಾಸಕ ವೆಂಕಟಶಿವಾರೆಡ್ಡಿ ಅವರು ಮಂಡಿಸಿದ್ದ ಗಮನ ಸೆಳೆಯುವ ಸೂಚನೆಗೆ ಅವರು ಉತ್ತರಿಸಿದ ಅವರು, ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆ ಸ್ಥಗಿತಗೊಂಡಿತ್ತು. ನಾವು ವಿಶೇಷ ಆದ್ಯತೆ ನೀಡಿ ನೀರನ್ನು ಹೊರಕ್ಕೆ ತಂದಿದ್ದೇವೆ. ಅವರ ನಾಯಕರು ಈ ಯೋಜನೆಯಲ್ಲಿ ನೀರು ಬರುವುದೇ ಇಲ್ಲ ಎಂದು ಹೇಳುತ್ತಿದ್ದರು. ಆದರೆ ನಾವು ನೀರು ತಂದಿದ್ದೇವೆ. ಈಗ ತುಮಕೂರಿನವರೆಗೂ ಈ ನೀರನ್ನು ತರಬೇಕಾಗಿದ್ದು, ಅಲ್ಲಿ ಸಮತೋಲಿತ ಜಲಾಶಯ ನಿರ್ಮಿಸಬೇಕಾಗಿದೆ. ಇದಕ್ಕೆ ಅರಣ್ಯ ಇಲಾಖೆಗೆ ಬದಲಿ ಜಮೀನು ನೀಡುತ್ತಿದ್ದು, ಮುಂದಿನ ಎರಡು ತಿಂಗಳಲ್ಲಿ ಈ ಪ್ರಕ್ರಿಯೆ ಮುಗಿಸಿ ತುಮಕೂರಿನವರೆಗೂ ನೀರು ತರುತ್ತೇವೆ ಎಂದು ತಿಳಿಸಿದರು.

ಚಿಕ್ಕಬಳ್ಳಾಪುರ, ಕೋಲಾರಕ್ಕೆ ನೀರು ತೆಗೆದುಕೊಂಡು ಹೋಗುವ ಕಾಮಗಾರಿಗಳು ಬಾಕಿ ಇದ್ದವು. ಇಲ್ಲಿಯೂ ಪೈಪ್ ಅಳವಡಿಕೆಗೆ ಅನುಮತಿ ನೀಡಿದ್ದೇವೆ. ನಮ್ಮ ನಾಯಕರು ಸೇರಿದಂತೆ ಸ್ಥಳೀಯ ಶಾಸಕರು ಸೇರಿ ಅಲ್ಲಿ ಪೂಜೆ ಸಲ್ಲಿಸಿ ಆದಷ್ಟು ಬೇಗ ಕಾಮಗಾರಿ ಆರಂಭಿಸಲಾಗುವುದು. ಈ ಮಧ್ಯೆ ಕೊರಟಗೆರೆಯಲ್ಲಿ ಆಕ್ಷೇಪ ಇದ್ದ ಕಾರಣ ಪರಮೇಶ್ವರ್ ಅವರ ಜತೆ ಚರ್ಚಿಸಿ ಅದನ್ನು ಬಗೆಹರಿಸಿದ್ದೇವೆ ಎಂದು ವಿವರಿಸಿದರು.

ಸ್ಮಾರ್ಟ್ ಮೀಟರ್ ದರಪಟ್ಟಿ ವ್ಯತ್ಯಾಸದ ಬಗ್ಗೆ ಸಚಿವ ಕೆ.ಜೆ.ಜಾರ್ಜ್‌ಗೆ ಸಿ.ಟಿ.ರವಿ ಪ್ರಶ್ನೆ

## ಸ್ಮಾರ್ಟ್ ಮೀಟರ್: ಮೇಲ್ಮನೆಯಲ್ಲಿ ಕೋಲಾಹಲ

ವಿಶ್ವವಾಣಿ ಸುದ್ದಿಮನೆ ವಿಧಾನಪರಿಷತ್

ರಾಜ್ಯದಲ್ಲಿ ಸ್ಮಾರ್ಟ್ ಮೀಟರ್ ಅಳವಡಿಕೆ ಸಂಬಂಧ ದರಪಟ್ಟಿಯಲ್ಲಿ ವ್ಯತ್ಯಾಸವಾಗಿರುವ ಕುರಿತು ಪ್ರತಿಪಕ್ಷಗಳ ಸದಸ್ಯರ ನಡುವೆ ಮೇಲ್ಮನೆಯಲ್ಲಿ ಕೆಲಹೊತ್ತು ತೀವ್ರ ಮಾತಿನ ಚಕಮಕಿ ನಡೆಯಿತು. ಅಂತಿಮವಾಗಿ ಸಭಾಪತಿ ಬಸವರಾಜ ಹೊರಟ್ಟಿ ಅವರು ಮಧ್ಯಪ್ರವೇಶಿಸಿ, ಇದೇ ರೀತಿ ಸದಸ್ಯರು ನಡೆದುಕೊಂಡರೆ ಕಲಾಪ ಮುಂದೂಡಬೇಕಾಗುತ್ತದೆ ಎಂದು ಎಚ್ಚರಿಕೆ ಕೊಟ್ಟ ನಂತರ ಪರಿಸ್ಥಿತಿ ತಿಳಿಗೊಂಡಿತು.

ಪ್ರಶ್ನೋತ್ತರ ಅವಧಿಯಲ್ಲಿ ಬಿಜೆಪಿಯ ಸದಸ್ಯ ಸಿ.ಟಿ.ರವಿ, ಸ್ಮಾರ್ಟ್ ಮೀಟರ್ ದರಪಟ್ಟಿ ವ್ಯತ್ಯಾಸದ ಬಗ್ಗೆ ಇಂಧನ ಸಚಿವ ಕೆ.ಜೆ.ಜಾರ್ಜ್ ಅವರನ್ನು ಪ್ರಶ್ನೆ ಮಾಡಿದ್ದರು. ಬೇರೆ ರಾಜ್ಯಗಳಿಗೆ ಹೋಲಿಕೆ ಮಾಡಿದರೆ ಸ್ಮಾರ್ಟ್ ಮೀಟರ್ ದರ ನಮ್ಮ ರಾಜ್ಯದಲ್ಲಿ ಹೆಚ್ಚಾಗಿದೆ. ಇದಕ್ಕೆ ಕಾರಣವಾದರೂ ಏನು?, ರಾಜಸ್ಥಾನ ಸೇರಿದಂತೆ ಬೇರೆ ರಾಜ್ಯಗಳಲ್ಲಿ ಕಡಿಮೆ ದರಕ್ಕೆ ವಿತರಣೆ ಮಾಡುತ್ತಿದ್ದಾರೆ. ಅಲ್ಲಿ ಮಾತ್ರ ಸ್ಮಾರ್ಟ್ ಮೀಟರ್, ನಮಲ್ಲಿ ಮಾತ್ರ ಬಂಗಾರದ ಮೀಟರ್ ಕೊಡುತ್ತಿದ್ದೀರಾ ಎಂದು ಪ್ರಶ್ನಿಸಿದರು.

ಒಂದು ಹಂತದಲ್ಲಿ ಸಚಿವರು ಉತ್ತರಿಸುತ್ತಿದ್ದ ವೇಳೆ ರವಿ ಅವರು, ಬೇರೆ ರಾಜ್ಯಗಳಲ್ಲಿ ದರಪಟ್ಟಿ ಕಡಿಮೆ ಇರುವಾಗ ನಮ ರಾಜ್ಯದಲ್ಲಿ ಮಾತ್ರ ಹೆಚ್ಚಿನ ದರ ಏಕೆ?, ನೀವೇನು ದರೋಡೆ ಮಾಡಲು ಲೈಸೆನ್ಸ್ ಕೊಟ್ಟಿದ್ದೀರಾ?, ಇದು ಹಗಲು ದರೋಡೆ ಅಲ್ಲವೇ? ಎಂದು ಸರಕಾರವನ್ನು ತರಾಟೆಗೆ ತೆಗೆದುಕೊಂಡರು. ಸದಸ್ಯರ ಈ ಆರೋಪಕ್ಕೆ ಆಕ್ರೋಶ ವ್ಯಕ್ತಪಡಿಸಿದ ಆಡಳಿತ ಪಕ್ಷದ ಸದಸ್ಯರು, ಮೊದಲು ನೀವು ಬಳಸಿರುವ ಪದ ಹಿಂಪಡೆದುಕೊಳ್ಳಿ. ಯಾರು ದರೋಡೆ ಮಾಡಿದ್ದಾರೆ?, ನೀವು ದರೋಡೆ ಮಾಡಿಕೊಂಡೇ ಆ ಕಡೆ ಕುಳಿತಿದ್ದೀರಿ. ಬಳಸುವ ಪದ ಸರಿಯಾಗಿರಲಿ ಎಂದು ಸಭಾನಾಯಕ ಬೋಸರಾಜು, ಮುಖ್ಯ ಸಚೇತಕ ಸಲೀಂ, ಸದಸ್ಯರಾದ ಐವಾನ್ ಡಿಸೋಜ, ಎಂ.ನಾಗರಾಜು ಮತ್ತಿತರರು ಆಕ್ಷೇಪಿಸಿದರು.

ಈ ಹಂತದಲ್ಲಿ ಸಿ.ಟಿ.ರವಿ ಪರವಾಗಿ ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ರವಿಕುಮಾರ್ ಮತ್ತಿತರರು ಇದರಲ್ಲಿ ದೊಡ್ಡ ಮಟ್ಟದ ಅವ್ಯವಹಾರವಾಗಿದೆ. ಬೇರೆ ರಾಜ್ಯಗಳಿಗೆ ಹೋಲಿಸಿದರೆ ಇದರ ದರ ಹೆಚ್ಚಾಗಿದೆ. ಅದರ ಬಗ್ಗೆ ತನಿಖೆ ನಡೆಯಬೇಕೆಂದು ಒತ್ತಾಯಿಸಿದರು. ಈ ಹಂತದಲ್ಲಿ ಆಡಳಿತ ಮತ್ತು ಪ್ರತಿಪಕ್ಷಗಳ ಸದಸ್ಯರ ನಡುವೆ ಮಾತಿನ ಚಕಮಕಿ, ಗದ್ದಲ ಉಂಟಾಯಿತು.

### ಎಲ್ಲವೂ ನಿಯಮಾವಳಿ ಪ್ರಕಾರವೇ ನಡೆಯುತ್ತಿದೆ

ಇಂಧನ ಸಚಿವ ಕೆ.ಜೆ.ಜಾರ್ಜ್ ಅವರು ಸ್ಮಾರ್ಟ್ ಮೀಟರ್ ಯೋಜನೆಯನ್ನು ಆರ್‌ಡಿಎಸ್‌ಎಸ್ ಅಡಿ ಅಳವಡಿಸಿಕೊಳ್ಳಬೇಕು ಎಂದು ಕೇಂದ್ರ ಸರಕಾರವೇ ನಿರ್ದೇಶನ ನೀಡಿತ್ತು. ಇದರ ಯೋಜನೆಯಡಿ ರಾಜ್ಯಕ್ಕೆ 3 ಲಕ್ಷ ಕೋಟಿ ರು. ಅನುದಾನ ಬಂದಿತ್ತು. ಕೆಲವು ತಾಂತ್ರಿಕ ಕಾರಣಗಳಿಂದ ಇದನ್ನು ಅಳವಡಿಸಿಕೊಳ್ಳಲು ವಿಳಂಬವಾಗಿದ್ದರಿಂದ ಯೋಜನೆ ನನೆಗುದಿಗೆ ಬಿದ್ದಿತು. ನಮಗೆ ಗ್ರಾಮ ಪಂಚಾಯಿತಿಗಳಿಂದ 10 ಸಾವಿರ ಕೋಟಿ ರು. ಬಾಕಿ ಬರಬೇಕಿತ್ತು. ಆದರೆ ಅನೇಕ ಪಂಚಾಯಿತಿಗಳು ನಷ್ಟದಲ್ಲಿರುವ ಕಾರಣ ನಾವು ಎಸ್ಕಾಂ ವತಿಯಿಂದಲೇ 5 ಸಾವಿರ ಕೋಟಿ ರು. ಸಾಲ ಪಡೆದು ತೀರಿಸಿದ್ದೇವೆ. ಎಲ್ಲವೂ ನಿಯಮಾವಳಿ ಪ್ರಕಾರವೇ ನಡೆಯುತ್ತಿರುವು ದರಿಂದ ಇದರಲ್ಲಿ ಅಕ್ರಮ ನಡೆಯಲು ಸಾಧ್ಯವೇ ಇಲ್ಲ ಎಂದು ಸ್ಪಷ್ಟಪಡಿಸಿದರು. ಆಗ ಕಾಂಗ್ರೆಸ್‌ನ ಎಂ.ನಾಗರಾಜು ಅವರು, ಈ ಪ್ರಕರಣವು ನ್ಯಾಯಾಲಯದಲ್ಲಿದೆ. ಇದರ ಬಗ್ಗೆ ಚರ್ಚೆ ಮಾಡುವುದರಿಂದ ನ್ಯಾಯಾಂಗ ನಿಂದನೆಯಾಗುತ್ತದೆ ಎಂದು ಹೇಳಿದರು.

ಶೂನ್ಯ ವೇಳೆಯಲ್ಲಿ ಎಫ್‌ಆರ್‌ಎಸ್ ಸಮಸ್ಯೆ ಬಗ್ಗೆ ಪ್ರಸ್ತಾಪಿಸಿದ ಜೆಡಿಎಸ್ ಸದಸ್ಯ ಗೋವಿಂದರಾಜು ಪ್ರಶ್ನೆ

## ನಕಲಿ ಫಲಾನುಭವಿಗಳ ತಡೆಗೆ ಮುಖ ಪತ್ತೆ ತಂತ್ರಜ್ಞಾನ

**ವಿಧಾನ ಪರಿಷತ್:** ಫೇಸ್ ರೆಕಗ್ನೀಷನ್ ಸಿಸ್ಟಮ್ (ಎಫ್‌ಆರ್‌ಎಸ್) ಜಾರಿಯಿಂದ ನಕಲಿ ಫಲಾನುಭವಿಗಳ ತಡೆಗೆ ಸಹಕಾರಿಯಾಗಲಿದೆ ಎಂದು ಮಹಿಳಾ ಮತ್ತುಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದರು.

ವಿಧಾನ ಪರಿಷತ್ತಿನ ಕಲಾಪದ ಶೂನ್ಯ ವೇಳೆಯಲ್ಲಿ ಜೆಡಿಎಸ್ ಸದಸ್ಯರಾದ ಗೋವಿಂದ ರಾಜು ಕೇಳಿದ, ಸಮಗ್ರ ಶಿಶು ಅಭಿವೃದ್ಧಿ ಯೋಜನೆ, ಗರ್ಭಿಣಿ, ಬಾಣಂತಿಯರು, ಕಿಶೋ ರಿಯರು ಹಾಗೂ 6 ವರ್ಷದೊಳಗಿನ ಮಕ್ಕಳಿಗೆ ಪೌಷ್ಟಿಕ ಆಹಾರ ಪೂರೈಕೆ ಸೇರಿದಂತೆ ಆರೋ ಗ್ಯದ ಮೇಲೆ ನಿಗಾ ವಹಿಸಲು ಫಲಾನುಭವಿಗಳಿಗೆ ಫೇಸ್ ಕ್ಯಾಪ್ಚರ್ ಮೂಲಕ ಸರಬರಾಜು ಮಾಡುವಲ್ಲಿ ಆಗುತ್ತಿರುವ ತೊಂದರೆಗಳ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು, ಕೇಂದ್ರ ಸರಕಾರದ ಮಹತ್ವಾಕಾಂಕ್ಷಿ ಯೋಜನೆ ಕರ್ನಾ ಟಕದಲ್ಲಿ ಕಟ್ಟುನಿಟ್ಟಾಗಿ ಜಾರಿ ಮಾಡಲಾಗಿದೆ. ಪಾರದರ್ಶಕತೆ ತರಲು ಇದು ಸಹಕಾರಿ ಯಾಗಲಿದೆ. ಈ ತಂತ್ರಾಂಶ ಜಾರಿಗೊಳಿಸಿದ ರಾಜ್ಯಗಳಲ್ಲಿ ಕರ್ನಾಟಕ ರಾಜ್ಯ, ಪ್ರಸ್ತುತ ಶೇಕಡ 94.2 ರಷ್ಟು ಫಲಾನುಭವಿಗಳನ್ನು ಎಫ್‌ಆರ್‌ಎಸ್ ಮೂಲಕ ನೋಂದಣಿ ಮಾಡುವ ಮೂಲಕ ಇಡೀ ದೇಶಕ್ಕೆ 2ನೇ ಸ್ಥಾನದಲ್ಲಿದೆ ಎಂದರು.

ರಾಜ್ಯದ ಅಂಗನವಾಡಿ ಕೇಂದ್ರಗಳಿಂದ ಗರ್ಭಿಣಿಯರಿಗೆ ಹಾಗೂ ಬಾಣಂತಿಯರಿಗೆ ಪೂರೈಕೆಯಾಗುತ್ತಿರುವ ಆಹಾರ ವ್ಯವಸ್ಥೆಗೆ ಮತ್ತಷ್ಟು ಪಾರದರ್ಶಕತೆ ತರಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯದಿಂದ ಎಫ್‌ಆರ್‌ಎಸ್ ವ್ಯವಸ್ಥೆ ಅನುಷ್ಠಾನಗೊಳಿಸ ಲಾಗಿದೆ. ಇದರ ಜಾರಿಯಿಂದಾಗಿ ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರಿಗೆ ಕೆಲಸದ ಒತ್ತಡ ಜಾಸ್ತಿಯಾಗುತ್ತಿದೆ. ಹೀಗಾಗಿ ಅವರಿಗೆ ಚುನಾವಣೆ ಕೆಲಸಗಳಿಂದ ವಿನಾಯಿತಿ ನೀಡಲಾಗಿದೆ ಎಂದರು.

### ತಂತ್ರಜ್ಞಾನ ಮತ್ತಷ್ಟು ಸರಳೀಕರಣ

ಅಂಗನವಾಡಿ ಕಾರ್ಯಕರ್ತೆಯರಿಗೆ ಕಳೆದ ವರ್ಷ ಹೊಸ ಮೊಬೈಲ್ ಕೊಡಲಾಗಿದೆ. ರಾಜ್ಯ ಹಾಗೂ ಕೇಂದ್ರ ಸರಕಾರದ ಜಂಟಿ ನಿರ್ದೇಶನದ ಮೇಲೆ ಎಫ್‌ಆರ್‌ಎಸ್ ಮೂಲಕ ಫಲಾನುಭವಿಗಳನ್ನು ಗುರುತಿಸಬೇಕು. ಎಫ್‌ಆರ್‌ಎಸ್ ಮೂಲಕ ಮೊಬೈಲ್ ಸಂಖ್ಯೆಯನ್ನು ಆಧಾರ್ ಸಂಖ್ಯೆಗೆ ಜೋಡಣೆ ಮಾಡದಿದ್ದರೆ, ಕೇಂದ್ರ ಸರಕಾರದಿಂದ ಐಸಿಡಿಎಸ್ ಕಾರ್ಯಕ್ರಮಗಳಿಗೆ ಆಹಾರ ಪದಾರ್ಥಗಳು ಬರುವುದು ನಿಲ್ಲುತ್ತದೆ. ಹೀಗಾಗಿ ಫಲಾನುಭವಿಗಳಿಗೆ ಪಾರದರ್ಶಕವಾಗಿ ಆಹಾರ ತಲುಪಿಸುವ ಸಲುವಾಗಿ ಎಫ್‌ಆರ್‌ಎಸ್ ಜಾರಿ ಮಾಡಲಾಗುತ್ತಿದ್ದು, ಮುಂದಿನ ದಿನಗಳಲ್ಲಿ ಎಫ್‌ಆರ್‌ಎಸ್ ತಂತ್ರಜ್ಞಾನ ಮತ್ತಷ್ಟು ಸರಳೀಕರಿಸಲಾಗುವುದು ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದರು.

## ಅನರ್ಹ ಬಿಪಿಎಲ್‌ನವರಿಗೆ ಎಪಿಎಲ್?

**ವಿಧಾನಪರಿಷತ್:** ರಾಜ್ಯದಲ್ಲಿ 15 ಲಕ್ಷ ಅನರ್ಹ ಬಿಪಿಎಲ್ ಕಾರ್ಡುದಾರರಿದ್ದಾರೆ. ಗುರುತಿಸಲಾಗಿರುವ ಅನರ್ಹ ಪಡಿತರದಾರರನ್ನು ಎಪಿಎಲ್‌ಗೆ ಸೇರ್ಪಡೆ ಮಾಡಲು ವಿಪಕ್ಷ ಸದಸ್ಯರು ಒಪ್ಪಿಗೆ ನೀಡಿದರೆ ಶೀಘ್ರದಲ್ಲಿ ಕಾರ್ಯಾರಂಭ ಮಾಡಲಾಗುವುದು ಎಂದು ಆಹಾರ ಸಚಿವ ಕೆ.ಎಚ್.ಮುನಿಯಪ್ಪ ತಿಳಿಸಿದ್ದಾರೆ.

ಪ್ರಶ್ನೋತ್ತರ ವೇಳೆ ಕಾಂಗ್ರೆಸ್ ಸದಸ್ಯ ಎಸ್.ನಾಗರಾಜ್ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಈ ಹಿಂದೆ ಬಿಪಿಎಲ್ ಕಾರ್ಡ್‌ನಲ್ಲಿದ್ದ ಫಲಾನುಭವಿಗಳನ್ನು ಎಪಿಎಲ್‌ಗೆ ವರ್ಗಾವಣೆ ಮಾಡಲು ಇಲಾಖೆ ಮುಂದಾದಾಗ ದೊಡ್ಡ ವಿವಾದವೇ ಸೃಷ್ಟಿಯಾಯಿತು. ಸದನದ ಸದಸ್ಯರೆಲ್ಲರೂ ಒಪ್ಪಿಗೆಯನ್ನು ಸೂಚಿಸಿದರೆ ಬಿಪಿಎಲ್‌ನಿಂದ ಎಪಿಎಲ್‌ಗೆ ಅನರ್ಹ ಫಲಾನುಭವಿಗಳನ್ನು ವರ್ಗಾವಣೆ ಮಾಡಲಾಗುವುದು ಎಂದರು.

ಅನರ್ಹ ಬಿಪಿಎಲ್ ಕಾರ್ಡುದಾರರು ಆಹಾರಧಾನ್ಯಗಳನ್ನು ಪಡೆಯುತ್ತಿರುವ ಪರಿಣಾಮ ಸರಕಾರದ ಬೊಕ್ಕಸಕ್ಕೂ ಹೊರೆಯಾಗುತ್ತದೆ. ಇದನ್ನು ಮಾಡುವಾಗ ಕೆಲವು ಸಮಸ್ಯೆಗಳು ಎದುರಾಗುತ್ತವೆ. ಕೆಲವರು ಅರ್ಹ ಫಲಾನುಭವಿಗಳನ್ನೇ ತೆಗೆದು ಹಾಕುತ್ತಾರೆ ಎಂದು ಅಪಪ್ರಚಾರ ನಡೆಸುತ್ತಾರೆ. ಇದಕ್ಕೆ ಸದಸ್ಯರು ಅವಕಾಶ ಮಾಡಿಕೊಡಬಾರದು. ನಿಮ್ಮ ಒಪ್ಪಿಗೆ ಇದ್ದರೆ ಅನರ್ಹರನ್ನು ತೆಗೆದು ಹಾಕಲು ಸರಕಾರ ಸಿದ್ಧವಿದೆ ಎಂದು ಹೇಳಿದರು.



### ರಾಜ್ಯದಲ್ಲೆ ಅತೀ ಹೆಚ್ಚು ಬಿಪಿಎಲ್ ಫಲಾನುಭವಿಗಳು

ದಕ್ಷಿಣ ಭಾರತದ ರಾಜ್ಯಗಳ ಪೈಕಿ ಕರ್ನಾಟಕದಲ್ಲೆ ಅತೀ ಹೆಚ್ಚು ಬಿಪಿಎಲ್ ಫಲಾನುಭವಿಗಳಿದ್ದಾರೆ. ತಮಿಳುನಾಡು ಶೇ.50, ಕೇರಳ ಶೇ.45, ತೆಲಂಗಾಣ ಶೇ.50, ಆಂಧ್ರಪ್ರದೇಶ ಶೇ.50, ನಮಲ್ಲಿ ಮಾತ್ರ ಶೇ.70 ರಿಂದ 75 ರಷ್ಟು ಬಿಪಿಎಲ್ ಫಲಾನುಭವಿಗಳು ಇದ್ದಾರೆ ಎಂದು ಅಂಕಿ ಸಂಖ್ಯೆಗಳ ವಿವರಣೆ ನೀಡಿದರು. ಓರ್ವ ಬಿಪಿಎಲ್ ಫಲಾನುಭವಿ ಎಂದು ಗುರುತಿಸಬೇಕಾದರೆ ಕೇಂದ್ರ ಸರಕಾರ 11 ಹಾಗೂ ರಾಜ್ಯ ಸರಕಾರ 5 ಮಾನದಂಡಗಳನ್ನು ನಿಗದಿಪಡಿಸಿದೆ. ಈ ಮಾನದಂಡವನ್ನು ನಾವು ಪಾಲನೆ ಮಾಡಿದರೆ ಬಿಪಿಎಲ್ ಫಲಾನುಭವಿಗಳ ಸಂಖ್ಯೆ 35ಕ್ಕೆ ಇಳಿಕೆಯಾಗುತ್ತದೆ ಎಂದರು. ರಾಜ್ಯದಲ್ಲಿ ಪಡಿತರ ಧಾನ್ಯಗಳನ್ನು ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿರುವವರ ಮೇಲೆ ಇಲಾಖೆ ಹಲವು ದಿಟ್ಟ ಕ್ರಮಗಳನ್ನು ತೆಗೆದುಕೊಂಡಿದೆ. 2023-24ರಲ್ಲಿ 404 ಪ್ರಕರಣಗಳು - 20 ಕೋಟಿ ರು.ದಂಡ, 2024-25 ರಲ್ಲಿ 505 ಪ್ರಕರಣಗಳು-10 ಕೋಟಿ ರು. ದಂಡ, ಪ್ರಸಕ್ತ ವರ್ಷ 287 ಪ್ರಕರಣಗಳು - 4 ಕೋಟಿ ರು. ದಂಡವನ್ನು ವಸೂಲಿ ಮಾಡಲಾಗಿದೆ.

ವಿಶ್ವವಾಣಿ

## ಸಂಪಾದಕೀಯ

# ಸೂಕ್ತ ಮಾಹಿತಿ ದೊರೆಯಲಿ

ಒಂದು ಕಾಲದಲ್ಲಿ ಸಂಗೀತ ಪ್ರೇಮಿಗಳು ರೇಡಿಯೋಗೆ ಹೊರತಾಗಿ ನೆಚ್ಚಿದ್ದು 'ಗ್ರಾಮಾಫೋನ್' ಪ್ಲೇಟುಗಳನ್ನು. ತರುವಾಯದಲ್ಲಿ ಧ್ವನಿಮುದ್ರಣ ಕ್ಷೇತ್ರದಲ್ಲಿ 'ಕ್ಯಾಸೆಟ್ ಕ್ರಾಂತಿ'ಯಾದಾಗ, ಗ್ರಾಮಾಫೋನ್ ಪ್ಲೇಟುಗಳು ಹಂತಹಂತವಾಗಿ ತಮ್ಮ ಅಸ್ತಿತ್ವವನ್ನು ಕಳೆದುಕೊಂಡವು. ಕೆಲ ವರ್ಷಗಳವರೆಗೆ 'ಕ್ಯಾಸೆಟ್' ದರ್ಬಾರು ನಡೆಯಿತಾದರೂ, ನಂತರ ದಾಪುಗಾಲಿಟ್ಟು ಬಂದ 'ಕಾಂಪ್ಯಾಕ್ಟ್ ಡಿಸ್ಕ್' (ಸಿಡಿ) ಮತ್ತು 'ಡಿಜಿಟಲ್ ವರ್ಸಟೈಲ್ ಡಿಸ್ಕ್' (ಡಿವಿಡಿ) ಅಬ್ಬರದಿಂದಾಗಿ ಕ್ಯಾಸೆಟ್ ಮೂಲೆಗುಂಪಾಯಿತು. ನಂತರ 'ಎಂಪಿ 3' ಸ್ವರೂಪ ಆಗಮಿಸಿತು. ಇಷ್ಟೂ ಘಟ್ಟಗಳಲ್ಲಿ ಸಂಗೀತ ಮತ್ತು ದೃಶ್ಯಗಳ ಉತ್ತಮ ಗುಣಮಟ್ಟದ ಪ್ರಸ್ತುತಿಗೆ ಸಂಬಂಧಿಸಿದಂತೆ ಹಾಗೂ 'ಬಳಕೆದಾರ-ಸ್ನೇಹಿ' ಆಯಾಮದಲ್ಲಿ ಗಣನೀಯ ಸುಧಾರಣೆಯಾಗಿದ್ದನ್ನು ತಳ್ಳಿಹಾಕುವಂತಿಲ್ಲ. ಜತೆಗೆ, ಪರ್ಯಾಯವಾಗಿ ಹೊಸ ಸ್ವರೂಪವು ಹೀಗೆ ಬಂದಾಗಲೆಲ್ಲಾ, ಹಳತು ಎನಿಸಿಕೊಂಡಿದ್ದಕ್ಕೆ ಅಥವಾ ಅದನ್ನು ನೆಚ್ಚಿಕೊಂಡಿದ್ದವರಿಗೆ 'ಅಸ್ತಿತ್ವದ ಭಯ' ಕಾಡಿದ್ದಿದೆ. ಆದರೆ ಬಳಕೆದಾರರಾಗಲೀ, ಉತ್ಪಾದಕರಾಗಲೀ ಹೊಸತನ್ನು ಸ್ವೀಕರಿಸಿ ಅಳವಡಿಸಿಕೊಂಡಿದ್ದೂ ಆಗಿದೆ. ಇವೆಲ್ಲವೂ, 'ಬದಲಾವಣೆ ಜಗದ ನಿಯಮ' ಎಂಬ ಗ್ರಹಿಕೆಗೆ ಇಂಬುಕೊಡುವಂಥ ಬೆಳವಣಿಗೆಗಳು. ಪ್ರಸ್ತುತ, 'ಕೃತಕ ಬುದ್ಧಿಮತ್ತೆ' (ಎಐ) ತಂತ್ರಜ್ಞಾನ ಕೂಡ ಸಮಾಜದ ವಿವಿಧ ಕಾರ್ಯಕ್ಷೇತ್ರಗಳಲ್ಲಿ ಇಂಥದೇ ತಲ್ಲಣವನ್ನು ಹುಟ್ಟುಹಾಕಿದೆ. 'ಎಐ'ನ ಆಗಮನದಿಂದಾಗಿ ಉದ್ಯೋಗಾವಕಾಶಗಳಲ್ಲಿ ಭಾರಿ ಕಡಿತವಾಗಿಬಿಡುತ್ತದೆ, ನಿರುದ್ಯೋಗ ಸಮಸ್ಯೆ ಹೆಚ್ಚಿಬಿಡುತ್ತದೆ ಎಂಬುದು ಇಂಥ ತಲ್ಲಣಗಳಲ್ಲೊಂದು. ಆದರೆ, 'ಎಐ ತಂತ್ರಜ್ಞಾನದ ಆಗಮನದಿಂದಾಗಿ ಸಾವಿರಾರು ಹೊಸ ಉದ್ಯೋಗಾವಕಾಶಗಳೂ ತೆರೆದುಕೊಳ್ಳುತ್ತವೆ' ಎಂದು ಭರವಸೆ ನೀಡುವವರೂ ಇದ್ದಾರೆ. ಆದರೆ, ಈ ಕುರಿತಾದ ಸ್ಪಷ್ಟ ಮಾಹಿತಿಯನ್ನು ನಾಡಿನ ಯುವಸಮುದಾಯದೊಂದಿಗೆ ಸಮರ್ಥವಾಗಿ ಹಂಚಿಕೊಳ್ಳುವ ಕೆಲಸ ಆಗುತ್ತಿಲ್ಲ. ಹೀಗಾಗಿ, ಈಗಾಗಲೇ ನಿರುದ್ಯೋಗ ಸಮಸ್ಯೆಯ ಹೊಡೆತಕ್ಕೆ ಸಿಲುಕಿ ಸಾಕಷ್ಟು ನೊಂದಿರುವ ಯುವಜನರು, ಇನ್ನಷ್ಟು ಭಯಗ್ರಸ್ತರಾಗಿದ್ದಾರೆ ಎಂಬ ಗ್ರಹಿಕೆಯನ್ನು ತಳ್ಳಿಹಾಕಲಾಗದು. ಆದಕಾರಣ, 'ಎಐ' ತಂತ್ರಜ್ಞಾನದ ಸಾಧಕ-ಬಾಧಕಗಳ ಕುರಿತಾಗಿ ಸಮರ್ಪಕ ಮಾಹಿತಿಯನ್ನು ಒದಗಿಸುವ ಕೆಲಸ ಆಗಬೇಕಿದೆ.

## ಸೊಂಪಾದಕೀಯ

# ಒಂದೇ ಟ್ರ್ಯಾಕಿನ ಎರಡು ಹಳಿಗಳು

ಬೆಂಗಳೂರಿನ ಹೊಸ ಮೆಟ್ರೋ ರೈಲುಹಾದಿಯ ಉದ್ಘಾಟನೆಗೆ ಪ್ರಧಾನಿ ಮೋದಿ ಆಗಮನ ಆಗಿತ್ತು. ಅದರ ಜತೆಗೆ ಸಿಎಂ ಸಿದ್ರಾಮಯ್ಯ ಮತ್ತು ಡಿಸಿಎಂ ಶಿವಕುಮಾರ್ ಕೂಡ ಭಾಗವಹಿಸಿದ್ದರು. ಇಲ್ಲಿ ಈ ಮೆಟ್ರೋ ನಿರ್ಮಾಣ ಆಗಲು ನಾವೇ ಕಾರಣ ಅನ್ನೋ ಜಿದ್ದು ಎದ್ದು ಕಾಣುತ್ತಿತ್ತು. ಸಿದ್ರಾಮಯ್ಯ ಸಾರಥ್ಯದ ರಾಜ್ಯ ಸರಕಾರ 'ಇದು ನಂದು' ಅಂದ್ರೆ, ಮೋದಿ 'ಇದು ನಂದು' ಅಂತಿದ್ರು. ಹಾಗಾಗಿ ಎರಡು ಟ್ರ್ಯಾಕ್ ಇರೋ ಮೆಟ್ರೋ ರೈಲಿನಲ್ಲಿ ಇವರಿಬ್ಬರೂ 'ಇದು ನಮ್ಮದೇ ಟ್ರ್ಯಾಕ್' ಅಂತ ಒಳಗೊಳಗೇ ಹಲ್ಲು ಮಸೀತಾ ಇದ್ರು. ಇದರ ಜತೆಗೆ ಸಿದ್ರಾಮಯ್ಯ ಅವರು ಮುಖ್ಯಮಂತ್ರಿ ಆದಾಗಿನಿಂದಲೂ ಇರೋ ಸಮಸ್ಯೆ ಅಂದ್ರೆ ಡಿಸಿಎಂ ಡಿಕೆಶಿ ಅವರೊಂದಿಗಿನ ಸ್ಪರ್ಧೆ. ಮುಖ್ಯಮಂತ್ರಿ ಆಗೋಕೆ ಡಿಕೆಶಿ ಮೊದಲ ದಿನದಿಂದಲೂ ಸ್ಪರ್ಧೆ ಮಾಡ್ತಾ ಇದ್ದಾರೆ ಅನ್ನೋ ಅನಿಸಿಕೆ ಅನೇಕರಲ್ಲಿದೆ. ಅವರ ವರ್ತನೆ ನೋಡಿದರೆ ಅದು ನಿಜ ಅಂತಲೂ ಅನ್ನಿಸುತ್ತದೆ. ಮೇಲ್ನೋಟಕ್ಕೆ ಡಿಕೆಶಿ ಅದನ್ನು ಮಾತಿನಲ್ಲಿ ತೋರಿಸಿಕೊಳ್ಳುತ್ತಿಲ್ಲ ಅಷ್ಟೇ. ಆದರೆ ತಾವು ಸಿಎಂ ಆಗಲು ಸರ್ವ ಪ್ರಯತ್ನಗಳನ್ನೂ ಮಾಡ್ತಾ ಇದ್ದಾರೆ ಅವರು. ಹಾಗಾಗಿ ಇಲ್ಲಿ ಸಿದ್ರಾಮಯ್ಯ ಮತ್ತು ಶಿವಕುಮಾರ್ ಕೂಡಾ ಒಂದೇ ಟ್ರ್ಯಾಕಿನ ಎರಡು ಹುಲಿಗಳಂತೆ ಕಂಡರೂ ಡಿಕೆಶಿ ತಮ್ಮ ದೇ ಟ್ರ್ಯಾಕ್ ಮಾಡಿಕೊಂಡು ಓಡುವ ಕನಸು ಕಾಣುತ್ತಿರೋ ಹುಲಿ. ಆದರೆ ಅಂದು ಮಾತ್ರ ಇಬ್ಬರೂ ಜತೆಯಾಗಿ ಒಂದೇ ಟ್ರ್ಯಾಕಿನಲ್ಲಿ ಓಡುತ್ತಿರುವ ರೈಲಿನಂತೆ ಜುಗಲ್ಬಂದಿಯಾಗಿ ಕಾರ್ಯಕ್ರಮ ನಡೆಸಿಕೊಟ್ಟರು. ಆದರೂ ಆಗಾಗ ಉಗಿಬಂಡಿಯ ಹೊಗೆಯಂತೆ ಅಸಮಾಧಾನ ಎದ್ದಿದ್ದೂ ಕಾಣುತ್ತಿತ್ತು. ಮೋದಿ ಅವರೊಂದಿಗೆ ಡಿಕೆಶಿ ಅತಿ ಆಪ್ತವಾಗಿ ಮಾತಾಡ್ತಾ ಇದ್ದಿದ್ದು ಸಿಎಂ ಸಿದ್ರಾಮಯ್ಯ ಅವರಿಗೆ ರುಚಿಸಿರಲಿಕ್ಕಿಲ್ಲ ಅನ್ನೋದು ಸಹಜ. ಆದರೆ ಅಂದು 'ಈ ರೈಲು ನಾನು ಬಿಟ್ಟಿದ್ದು, ನಾನು ಬಿಟ್ಟಿದ್ದು' ಅಂತ ಕೇಂದ್ರ ಮತ್ತು ರಾಜ್ಯ ಸರಕಾರಗಳ ವಕ್ತಾರರು ಜಿದ್ದಿಗೆ ಬಿದ್ದಿದ್ದನ್ನು ನೋಡಿ, 'ಅಂತೂ ರಾಜಕಾರಣಿಗಳು ತಾವು ರೈಲು ಬಿಡೋದನ್ನು ಬಹಿರಂಗವಾಗಿ ಒಪ್ಪಿಕೊಂಡ್ರಲ್ಲ' ಅಂತ ಜನ ಗುಸುಗುಸು ಮಾತಾಡ್ತಾ ಇದ್ರು. ಇನ್ನು, ಇವೆಲ್ಲದರ ಜತೆಗೆ ಅಂದು ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಕೂಡಾ ಇವರ ಜತೆಗೆ ಇದ್ದರು. ಅವರ ಬಗ್ಗೆ ಹೇಳಬಹುದಾದ ವಿಷಯ ಅಂದ್ರೆ,.... ಹೋಗ್ಲಿ ಬಿಡಿ, ಅವರದ್ದೇ ಸೆಪರೇಟ್ ಟ್ರ್ಯಾಕ್.

## ಸಂಪಾದಕರ ಸದ್ಯಶೋಧನೆ

# ವಿಮಾನದ ರೆಕ್ಕೆಗಳು

ವಿಮಾನದ ರೆಕ್ಕೆಗಳನ್ನು ಆಕಾಶದಲ್ಲಿ ತೇಲುವ ಅದ್ಭುತ ಎಂಜಿನಿಯರಿಂಗ್ ಅಂತ ಬಣ್ಣಿಸುವುದುಂಟು. ವಿಮಾನ ಪ್ರಯಾಣದ ಸಮಯದಲ್ಲಿ ಕಿಟಕಿಯಿಂದ ಹೊರಗೆ ನೋಡಿದಾಗ, ಅಗಾಧವಾದ ರೆಕ್ಕೆಗಳು ಗಾಳಿಯ ಒತ್ತಡಕ್ಕೆ ಬಾಗುವುದನ್ನು ನೋಡಿ ಅನೇಕರಲ್ಲಿ ಒಂದು ಕ್ಷಣ ಆತಂಕ ಮೂಡುವುದು ಸಹಜ. 'ಇಷ್ಟು ದೊಡ್ಡ ವಿಮಾನದ ಭಾರವನ್ನು ಹೊತ್ತಿರುವ ಈ ರೆಕ್ಕೆಗಳು ಮುರಿದುಹೋದರೆ ಗತಿ ಏನು?' ಎಂಬ ಪ್ರಶ್ನೆ ಮನಸ್ಸಿನಲ್ಲಿ ಮೂಡಬಹುದು. ಆದರೆ, ವಾಸ್ತವದಲ್ಲಿ ವಿಮಾನದ ರೆಕ್ಕೆಗಳು ಆಧುನಿಕ ಎಂಜಿನಿಯರಿಂಗ್ ಕ್ಷೇತ್ರದ ಒಂದು ಅದ್ಭುತವಾಗಿದ್ದು, ಅವುಗಳನ್ನು ಊಹೆಗೂ ಮೀರಿದಷ್ಟು ದೃಢವಾಗಿ ಮತ್ತು ಸುರಕ್ಷಿತವಾಗಿ ವಿನ್ಯಾಸಗೊಳಿಸಲಾಗಿದೆ. ಹಾಗಾದರೆ ವಿಮಾನದ ರೆಕ್ಕೆಗಳ ಮಹತ್ವವೇನು? ಇವು ಕೇವಲ ವಿಮಾನದ ಅಂದವನ್ನು ಹೆಚ್ಚಿಸುವ ಭಾಗಗಳಾಗಿರದೆ ವಿಮಾನ ಹಾರಾಟದ ಪ್ರತಿ ಹಂತದಲ್ಲೂ ನಿರ್ಣಾಯಕ ಪಾತ್ರ ವಹಿಸುತ್ತವೆ. ಅವುಗಳಿಲ್ಲದ ವಿಮಾನದ ಅಸ್ತಿತ್ವವನ್ನೇ ಊಹಿಸಲು ಸಾಧ್ಯವಿಲ್ಲ. ರೆಕ್ಕೆಗಳ ಪ್ರಮುಖ ಕಾರ್ಯಗಳನ್ನು ಹೀಗೆ ವಿಂಗಡಿಸಬಹುದು. ಮೊದಲನೆಯದಾಗಿ, ಮೇಲ್ಮುಖ ಒತ್ತಡ (ಲಿಫ್ಟ್) ಸೃಷ್ಟಿಸುವುದು. ಇದು ರೆಕ್ಕೆಗಳ ಅತ್ಯಂತ ಪ್ರಮುಖ ಮತ್ತು ಪ್ರಾಥಮಿಕ ಕಾರ್ಯ. ವಿಮಾನವು ಆಕಾಶದಲ್ಲಿ ತೇಲುವುದಕ್ಕೆ ಕಾರಣವೇ ರೆಕ್ಕೆಗಳು ಸೃಷ್ಟಿಸುವ ಲಿಫ್ಟ್ (Lift) ಎಂಬ ಶಕ್ತಿ. ಇದನ್ನು ಅರ್ಥಮಾಡಿಕೊಳ್ಳಲು ರೆಕ್ಕೆಗಳ ವಿಶಿಷ್ಟ ಆಕಾರವನ್ನು ಗಮನಿಸಬೇಕು. ಉದಾಹರಣೆಗೆ, ಏರೋಫಾಯಿಲ್ ಆಕಾರ (Airfoil Shape). ವಿಮಾನದ ರೆಕ್ಕೆಯ ಅಡ್ಡಛೇದವನ್ನು (cross-section) ನೋಡಿದರೆ, ಅದರ ಮೇಲ್ಭಾಗವು ಸ್ವಲ್ಪ ಉಬ್ಬಿಕೊಂಡಿದ್ದು, ಕೆಳಭಾಗವು ಬಹುತೇಕ ಚಪ್ಪಟೆಯಾಗಿರುತ್ತದೆ. ಈ ವಿಶಿಷ್ಟ ವಿನ್ಯಾಸವನ್ನು ಏರೋಫಾಯಿಲ್ ಎಂದು ಕರೆಯುತ್ತಾರೆ. ಇಲ್ಲಿ ಬರ್ನೌಲಿಯ ತತ್ವ (Bernoulli's Principle) ವನ್ನು ಗಮನಿಸಬೇಕು. ವಿಮಾನವು ಮುಂದಕ್ಕೆ ಚಲಿಸಿದಾಗ, ಗಾಳಿಯು ರೆಕ್ಕೆಯ ಮೇಲ್ಭಾಗ ಮತ್ತು ಕೆಳಭಾಗದಲ್ಲಿ ಹರಿಯುತ್ತದೆ. ಉಬ್ಬಿದ ಮೇಲ್ಮೈಯ ಕಾರಣ, ರೆಕ್ಕೆಯ ಮೇಲ್ಭಾಗದಲ್ಲಿ ಗಾಳಿಯು ಹೆಚ್ಚು ದೂರವನ್ನು ವೇಗವಾಗಿ ಕ್ರಮಿಸಬೇಕಾಗುತ್ತದೆ. ಬರ್ನೌಲಿಯ ತತ್ವದ ಪ್ರಕಾರ, ಗಾಳಿಯ ವೇಗ ಹೆಚ್ಚಾದಂತೆ ಅದರ ಒತ್ತಡ ಕಡಿಮೆಯಾಗುತ್ತದೆ. ಹೀಗಾಗಿ, ರೆಕ್ಕೆಯ ಮೇಲ್ಭಾಗದಲ್ಲಿ ಕಡಿಮೆ ಒತ್ತಡ ಮತ್ತು ಕೆಳಭಾಗದಲ್ಲಿ (ಗಾಳಿಯ ವೇಗ ಕಡಿಮೆ ಇರುವುದರಿಂದ) ಅಧಿಕ ಒತ್ತಡ ನಿರ್ಮಾಣವಾಗುತ್ತದೆ. ಈ ಒತ್ತಡದ ವ್ಯತ್ಯಾಸವೇ ರೆಕ್ಕೆಯನ್ನು ಮೇಲಕ್ಕೆ ತಳ್ಳುತ್ತದೆ. ಇದೇ 'ಲಿಫ್ಟ್'. ನೂರಾರು ಟನ್ ತೂಕದ ವಿಮಾನವನ್ನು ಗಾಳಿಯಲ್ಲಿ ತೇಲಿಸುವುದು ಇದೇ ಶಕ್ತಿ. ಎರಡನೆಯದು, ನಿಯಂತ್ರಣ ಮತ್ತು ಚಲನೆ (Control and Maneuverability). ವಿಮಾನವನ್ನು ತಿರುಗಿಸಲು, ಏರಿಸಲು, ಇಳಿಸಲು ಮತ್ತು ಸ್ಥಿರವಾಗಿ ಹಾರಾಟ ನಡೆಸಲು ರೆಕ್ಕೆಗಳ ಮೇಲೆ ಅಳವಡಿಸಲಾದ ಚಲಿಸುವ ಭಾಗಗಳು ಸಹಾಯ ಮಾಡುತ್ತವೆ. ಉದಾಹರಣೆಗೆ, ಏಲರಾನ್‌ಗಳು (Ailerons). ರೆಕ್ಕೆಗಳ ಹೊರ ತುದಿಯಲ್ಲಿರುವ ಈ ಭಾಗಗಳು ವಿಮಾನವನ್ನು ತನ್ನ ಅಕ್ಷದ ಸುತ್ತ (roll) ಉರುಳಲು ಸಹಾಯ ಮಾಡುತ್ತವೆ. ಒಂದು ರೆಕ್ಕೆಯ ಏಲರಾನ್ ಮೇಲಕ್ಕೆ ಚಲಿಸಿದರೆ, ಇನ್ನೊಂದು ರೆಕ್ಕೆಯದ್ದು ಕೆಳಕ್ಕೆ ಚಲಿಸುತ್ತದೆ, ಇದರಿಂದ ವಿಮಾನವು ಎಡಕ್ಕೆ ಅಥವಾ ಬಲಕ್ಕೆ ವಾಲುತ್ತದೆ. ಮತ್ತೊಂದು ಫ್ಲ್ಯಾಪ್‌ಗಳು ಮತ್ತು ಸ್ಲ್ಯಾಟ್‌ಗಳು (Flaps and Slats). ಇವು ರೆಕ್ಕೆಗಳ ಒಳಭಾಗ ಮತ್ತು ಮುಂಭಾಗದಲ್ಲಿರುತ್ತವೆ. ಟೇಕಾಫ್ ಮತ್ತು ಲ್ಯಾಂಡಿಂಗ್ ಸಮಯದಲ್ಲಿ, ಕಡಿಮೆ ವೇಗದಲ್ಲಿಯೂ ಹೆಚ್ಚು ಲಿಫ್ಟ್ ಪಡೆಯಲು ಇವುಗಳನ್ನು ಹೊರಚಾಚಲಾಗುತ್ತದೆ. ಇದು ವಿಮಾನವು ಕಡಿಮೆ ರನ್‌ವೇ ಅಂತರದಲ್ಲಿ ಸುರಕ್ಷಿತವಾಗಿ ಏಳಲು ಮತ್ತು ಇಳಿಯಲು ಅತ್ಯಗತ್ಯ. ಮೂರನೆಯದು, ಇಂಧನ ಸಂಗ್ರಹಣೆ (Fuel Storage). ಆಶ್ಚರ್ಯಕರ ಎನಿಸಬಹುದು, ಬಹುತೇಕ ಎಲ್ಲ ಆಧುನಿಕ ವಾಣಿಜ್ಯ ವಿಮಾನಗಳಲ್ಲಿ ಇಂಧನವನ್ನು ರೆಕ್ಕೆಗಳ ಒಳಗೆ ಸಂಗ್ರಹಿಸಲಾಗುತ್ತದೆ. ರೆಕ್ಕೆಗಳು ಟೊಳ್ಳಾಗಿದ್ದು, ಅವುಗಳೇ ಬೃಹತ್ ಇಂಧನ ಟ್ಯಾಂಕ್‌ಗಳಾಗಿ ಕಾರ್ಯನಿರ್ವಹಿಸುತ್ತವೆ. ಇದಕ್ಕೆ ಹಲವು ಕಾರಣಗಳಿವೆ. ಇಂಧನದ ತೂಕವನ್ನು ವಿಮಾನದ ಕೇಂದ್ರ ಭಾಗದಿಂದ ದೂರ, ರೆಕ್ಕೆಗಳಲ್ಲಿ ಹಂಚುವುದರಿಂದ ವಿಮಾನದ ಗುರುತ್ವಾಕರ್ಷಣೆಯ ಕೇಂದ್ರವನ್ನು (Center of Gravity) ಸಮತೋಲನದಲ್ಲಿಡಲು ಸಹಾಯವಾಗುತ್ತದೆ. ಇಂಧನದ ತೂಕವು ಹಾರಾಟದ ಸಮಯದಲ್ಲಿ ರೆಕ್ಕೆಗಳು ಮೇಲಕ್ಕೆ ಬಾಗುವ ಒತ್ತಡವನ್ನು ಕಡಿಮೆ ಮಾಡುತ್ತದೆ. ಪ್ರಯಾಣಿಕರ ಕ್ಯಾಬಿನ್‌ನಿಂದ ಇಂಧನವನ್ನು ದೂರವಿಡುವುದು ಸುರಕ್ಷತೆಯ ದೃಷ್ಟಿಯಿಂದ ಉತ್ತಮ. ಬೋಯಿಂಗ್ 747, ಏರ್‌ಬಸ್ ಎ-380ರಂಥ ದೊಡ್ಡ ವಿಮಾನಗಳಲ್ಲಿ, ಬೃಹತ್ ಜೆಟ್ ಎಂಜಿನ್‌ಗಳನ್ನು ರೆಕ್ಕೆಗಳ ಕೆಳಗೆ ಜೋಡಿಸಲಾಗಿರುತ್ತದೆ. ರೆಕ್ಕೆಗಳು ಈ ಎಂಜಿನ್‌ಗಳ ಅಗಾಧ ತೂಕ ಮತ್ತು ಅವು ಸೃಷ್ಟಿಸುವ ಒತ್ತಡವನ್ನು ತಡೆದುಕೊಳ್ಳುವಷ್ಟು ಬಲಿಷ್ಠವಾಗಿರುತ್ತವೆ.

# 'ರಾಜಕೀಯ' ಸಂಘರ್ಷಕ್ಕೆ ಶಿಕ್ಷಣ ನಲುಗದಿರಲಿ

ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ
vveditoped@gmail.com
ranjith.hoskere@gmail.com

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸರಕಾರಗಳು ತಪ್ಪುದಾರಿ ತುಳಿಯದಂತೆ 'ಕಾಯುವುದು' ಪ್ರತಿಪಕ್ಷದ ಕೆಲಸವಾದರೂ, ಭಾರತದಲ್ಲಿ ಸರಕಾರಗಳು ತೆಗೆದುಕೊಳ್ಳುವ ತೀರ್ಮಾನದಲ್ಲಿ 'ಕೊಂಕಾಡುವುದು' ಪ್ರತಿಪಕ್ಷದ ಕೆಲಸ ಎನ್ನುವ ಅಲಿಖಿತ ನಿಯಮವಿದೆ. ಈ ನಿಯಮದನ್ವಯವೇ ಕೇಂದ್ರದಲ್ಲಿರುವ ಮೋದಿ ಸರಕಾರದ ಪ್ರತಿ ತೀರ್ಮಾನವನ್ನೂ ಕಾಂಗ್ರೆಸ್ ವಿರೋಧಿಸಿಕೊಂಡೇ ಬರುತ್ತಿದೆ. ಸಾಧಕ-ಬಾಧಕದ ಬಗ್ಗೆ ಯೋಚಿಸುವುದಕ್ಕಿಂತ ಯಾರು ತೀರ್ಮಾನ ತೆಗೆದುಕೊಂಡಿದ್ದಾರೆ ಎನ್ನುವುದರ ಮೇಲೆ, ನಮ್ಮಲ್ಲಿನ ಪರ-ವಿರೋಧ ಚರ್ಚೆಗಳು ನಡೆಯುವುದು ಸಾಮಾನ್ಯ.

ಕೇಂದ್ರ ಸರಕಾರ ಜಾರಿಗೊಳಿಸಿರುವ ಹಲವು ಯೋಜನೆಗಳನ್ನು ವಿರೋಧಿಸಿಕೊಂಡೇ ಬಂದಿರುವ ಕಾಂಗ್ರೆಸ್ 'ಸಹಜ' ಎನ್ನುವಂತೆ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ವಿರೋಧಿಸಿತ್ತು. ಕರ್ನಾಟಕ ಕಾಂಗ್ರೆಸ್ ಒಂದು ಹೆಜ್ಜೆ ಮುಂದೆ ಹೋಗಿ, ಕರ್ನಾಟಕದಲ್ಲಿ ಅಧಿಕಾರಕ್ಕೆ ಬಂದರೆ ಎನ್‌ಇಪಿ ಬದಲು ರಾಜ್ಯ ಶಿಕ್ಷಣ ನೀತಿಯನ್ನು ಜಾರಿಗೊಳಿಸುವುದಾಗಿ ಘೋಷಿಸಿದ್ದು, ಅಧಿಕಾರಕ್ಕೆ ಬಂದ ಬಳಿಕ ಪ್ರೊ. ಸುಖ್‌ದೇವ್ ಥೋರಟ್ ನೇತೃತ್ವದಲ್ಲಿ ಎಸ್‌ಇಪಿ ಸಮಿತಿಯನ್ನು ರಚಿಸಿದ್ದು, ಕಳೆದ ವಾರ ರಾಜ್ಯ ಶಿಕ್ಷಣ ನೀತಿಯ ವರದಿಯನ್ನು ಸಲ್ಲಿಸಿದ್ದು ಎಲ್ಲರಿಗೂ ತಿಳಿದಿರುವ ವಿಷಯ. ಆದರೆ ವಿರೋಧಿಸಬೇಕು ಎನ್ನುವ ಏಕಮಾತ್ರ ಕಾರಣಕ್ಕೆ ಎನ್‌ಇಪಿ ಬದಲು, ಎಸ್‌ಇಪಿ ತರಲು ಹೊರಟಿರುವ ಈ ಕ್ರಮವು ರಾಜ್ಯ ಶಿಕ್ಷಣದ ಮೇಲೆ ಎಷ್ಟು 'ಹೊರೆ'ಯಾಗಲಿದೆ ಎನ್ನುವ ಬಗ್ಗೆ ಯೋಚಿಸುವುದು ಇಂದಿನ ಅಗತ್ಯವಾಗಿದೆ.

ಹಾಗೆ ನೋಡಿದರೆ, ಕೇಂದ್ರ ಸರಕಾರ ಜಾರಿಗೊಳಿಸಿರುವ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ವಿರೋಧಿಸಿರುವುದು ಕೇವಲ ಕರ್ನಾಟಕವಲ್ಲ, ಬದಲಿಗೆ ಈಗಾಗಲೇ ತಮಿಳುನಾಡು, ಪಶ್ಚಿಮ ಬಂಗಾಳ ಸೇರಿದಂತೆ ಬಿಜೆಪಿಯೇತರ ಬಹುತೇಕ ರಾಜ್ಯಗಳು ವಿರೋಧಿಸಿವೆ. ಆದರೆ ಅಧಿಕೃತವಾಗಿ ಎನ್‌ಇಪಿ ಬೇಡ ಎನ್ನುವ ತೀರ್ಮಾನಕ್ಕೆ ಬಂದಿಲ್ಲ. ಕರ್ನಾಟಕದಲ್ಲಿಯೂ ಎಸ್‌ಇಪಿ ಎನ್ನುವುದು ಕಾಗದದ ಮೇಲಿನ ದಾಖಲೆಯಾಗುವುದೋ ಅಥವಾ ಅಧಿಕೃತವಾಗಿ ಜಾರಿಯಾಗುವುದೋ ಎನ್ನುವುದನ್ನು ಕಾದುನೋಡಬೇಕಿದೆ. ಆದರೆ ರಾಜ್ಯ ಶಿಕ್ಷಣ ನೀತಿಯಲ್ಲಿ ಮಾಡಿರುವ ಕೆಲ ಶಿಫಾರಸುಗಳಿಂದ ಮಾತ್ರ ರಾಜ್ಯ ಶಿಕ್ಷಣಕ್ಕೆ ಬಹುದೊಡ್ಡ ಹೊಡೆತ ಬೀಳಲಿದೆ ಎಂದರೆ ತಪ್ಪಾಗುವುದಿಲ್ಲ.

ಕೇಂದ್ರ ಸರಕಾರ ಜಾರಿಗೊಳಿಸಿರುವ ಎನ್‌ಇಪಿಯಲ್ಲಿ ಎಲ್ಲವೂ 'ಸರಿ'ಯಿದೆ ಎಂದಿಲ್ಲ. ಆದರೆ ಜಾರಿಯಲ್ಲಿರುವ ನೀತಿಯಲ್ಲಿ ಸರಿಪಡಿಸಿಕೊಳ್ಳಲು, ರಾಜ್ಯವಾರು ಅಗತ್ಯಕ್ಕೆ ತಕ್ಕಂತೆ ಬದಲಾಯಿಸಿಕೊಳ್ಳಲು ಅವಕಾಶ ನೀಡಲಾಗಿದೆ. ಆದರೆ ಅದನ್ನು ಮಾಡದೇ ಪ್ರತ್ಯೇಕ ಶಿಕ್ಷಣ ನೀತಿಯನ್ನೇ ಮಾಡಲು ಸಾಧ್ಯವೇ? ಏಕೆಂದರೆ ಶಿಕ್ಷಣ ಎನ್ನುವುದು ಸಂವಿಧಾನದ 'concurrent' ಪಟ್ಟಿಯಲ್ಲಿರುವ ವಿಷಯವಾಗಿದೆ. ಅಂದರೆ ಶಿಕ್ಷಣ ವಿಷಯದಲ್ಲಿ ಕೇಂದ್ರ ಹಾಗೂ ರಾಜ್ಯ ಸರಕಾರಗಳ ಸಮಾನ ಅಧಿಕಾರವಿದೆ ಎನ್ನುವುದನ್ನು ಮರೆಯಬಾರದು. ಅಧಿಕಾರದ ವಿಷಯ ಒಂದು ಭಾಗವಾದರೆ, ಜಾರಿಗೊಳಿಸುವ ಸವಾಲು ಹಾಗೂ ಸಮಸ್ಯೆಗಳು ಮತ್ತೊಂದು ಪ್ರಮುಖ ಅಂಶ.

ಒಂದು ವೇಳೆ ಕರ್ನಾಟಕ ಸರಕಾರವು ಪ್ರತ್ಯೇಕವಾದ ರಾಜ್ಯ ಶಿಕ್ಷಣ ನೀತಿಯನ್ನು ತರಲೇಬೇಕೆಂದು ಜಾರಿಗೊಳಿಸಿದರೆ, ಮುಂದೆ ಬರುವ ಸರಕಾರಗಳು ಪುನಃ ರಾಷ್ಟ್ರೀಯ ಶಿಕ್ಷಣ ನೀತಿಯನ್ನೇ ಅಳವಡಿಸಿಕೊಳ್ಳಬೇಕು ಅಥವಾ ಮತ್ತೊಂದು ನೀತಿಯನ್ನು ತರುತ್ತೇವೆ ಎಂದು ಹೊರಟರೆ ವಿದ್ಯಾರ್ಥಿಗಳ ಪಾಡೇನಾಗಬೇಕು. ಆದ್ದರಿಂದ ಈ ವಿಷಯವನ್ನು ರಾಜಕೀಯ ಪಕ್ಷಗಳು 'ಪ್ರತಿಷ್ಠೆ'ಯಾಗಿ ಪರಿಗಣಿಸುವುದಕ್ಕಿಂತ ವಿದ್ಯಾರ್ಥಿಗಳ ಅನುಕೂಲವನ್ನು ನೋಡಬೇಕಿದೆ.

ಪ್ರಾಥಮಿಕ ಶಿಕ್ಷಣ ಇಲಾಖೆಯಲ್ಲಿನ ಶಿಫಾರಸುಗಳಲ್ಲಿ 'ಮಾತೃಭಾಷಾ' ಶಿಕ್ಷಣ, ದ್ವಿಭಾಷಾ ಶಿಕ್ಷಣ ಸೇರಿದಂತೆ ಹಲವು ಸಮಸ್ಯೆಗಳಿವೆ. ಇದಕ್ಕೆ ಕಾನೂನಿನಲ್ಲಿ ಯಾವ ರೀತಿಯ ಮಾನ್ಯತೆ ಸಿಗಲಿದೆ ಎನ್ನುವುದನ್ನು ಕಾದುನೋಡಬೇಕಿದೆ. ಆದರೆ ರಾಷ್ಟ್ರೀಯ ಶಿಕ್ಷಣ ನೀತಿಯು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದ ಸ್ಟೇಟ್ ಸಿಲಬಸ್ ಓದುತ್ತಿರುವ ಕಡೆಯಲ್ಲಿ ಜಾರಿಯಾಗಿರಲಿಲ್ಲ. ಆದ್ದರಿಂದ ಕೆಲವೊಂದಿಷ್ಟು ಅಂಶಗಳ ಹೊರತಾಗಿ ಹೊಸ ಶಿಫಾರಸುಗಳನ್ನು ಅಳವಡಿಸಿಕೊಳ್ಳುವುದು ಬಹುದೊಡ್ಡ ಸವಾಲೇನಲ್ಲ. ಆದರೆ ಉನ್ನತ ಶಿಕ್ಷಣದಲ್ಲಿ ಯಾವ ರೀತಿಯಲ್ಲಿ ಜಾರಿಗೊಳಿಸುತ್ತಾರೆ ಎನ್ನುವುದು ಈಗಿರುವ ಪ್ರಶ್ನೆ. ಏಕೆಂದರೆ, ಈ ಹಿಂದಿನ ಬಿಜೆಪಿ ಸರಕಾರ ಯಾವುದೇ ಪೂರ್ವಸಿದ್ಧತೆ ಇಲ್ಲದೇ ಈಗಾಗಲೇ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೊಳಿಸಿ, ಒಂದೆರಡು ವರ್ಷ ಅದೇ ಮಾದರಿಯಲ್ಲಿ ಶಿಕ್ಷಣ ನೀಡಿದೆ. ಇದರೊಂದಿಗೆ ದ್ವಿತೀಯ ಪಿಯುಸಿ ಬಳಿಕ ದೇಶದಲ್ಲಿ ನಡೆಯುವ ಬಹುತೇಕ ಕೋರ್ಸ್‌ಗಳು ಯುಜಿಸಿಯ 'ಮಾರ್ಗಸೂಚಿ'ಯಂತೆ ನಡೆಯುತ್ತವೆ. ಹೀಗಿರುವಾಗ, ಉನ್ನತ ಶಿಕ್ಷಣದಲ್ಲಿಯೂ ರಾಜ್ಯ ಶಿಕ್ಷಣ ನೀತಿ ಜಾರಿಯಾದರೆ ರಾಜ್ಯ ಹಾಗೂ ರಾಷ್ಟ್ರೀಯ ಶಿಕ್ಷಣ ನೀತಿಗೆ 'ಸಂಘರ್ಷ'ವಾಗುವುದು ಖಚಿತ. ಈ ಸಂಘರ್ಷದ ನೇರ ಫಲಾನುಭವಿಗಳು ವಿದ್ಯಾರ್ಥಿಗಳು ಹಾಗೂ ವಿಶ್ವವಿದ್ಯಾಲಯಗಳು ಎನ್ನುವುದರಲ್ಲಿ ಎರಡನೇ ಮಾತಿಲ್ಲ.

ಶಿಫಾರಸು ಆಗಿರುವ ರಾಜ್ಯ ಶಿಕ್ಷಣ ನೀತಿಯನ್ನು ಜಾರಿಗೊಳಿಸಿದರೆ, ಯುಜಿಸಿಯ ಹಲವು ಮಾರ್ಗಸೂಚಿಗಳನ್ನು ಪಾಲಿಸಲು ಸಾಧ್ಯವಿಲ್ಲ. ಇದರೊಂದಿಗೆ ಕೇಂದ್ರ ಸೇವೆಗೆ ತೆರಳಲು ಬಯಸುವ ಅಭ್ಯರ್ಥಿಗಳಿಗೆ ಸಮಸ್ಯೆಯಾಗಲಿದೆ. ಉದಾಹರಣೆಗೆ, ಕೇಂದ್ರ ಸರಕಾರದ ಎನ್‌ಇಪಿಯಲ್ಲಿ ನಾಲ್ಕು ವರ್ಷದ ಪದವಿಯನ್ನು ಪಡೆಯಲು ಅವಕಾಶ ನೀಡಲಾಗಿದೆ. ಆದರೆ ರಾಜ್ಯ ಶಿಕ್ಷಣ ನೀತಿಯಲ್ಲಿ ಮೂರು ವರ್ಷಕ್ಕೆ ಕಡಿತಗೊಳಿಸಲಾಗಿದೆ. ಹೀಗಾದಾಗ, ಕೇಂದ್ರ ಸರಕಾರಿ ಕೆಲಸಗಳ ಆಯ್ಕೆ ಸಮಯದಲ್ಲಿ ಕರ್ನಾಟಕದ ಅಭ್ಯರ್ಥಿಗಳು ಭಿನ್ನವಾಗಿ ನಿಲ್ಲುತ್ತಾರೆ. ಆ ಸಮಯದಲ್ಲಾಗುವ ವ್ಯತ್ಯಾಸವನ್ನು ಯಾವ ರೀತಿಯಲ್ಲಿ ಸರಿದೂಗಿಸಬೇಕು ಎನ್ನುವ ಪ್ರಶ್ನೆಗೆ ಶಿಫಾರಸಿನಲ್ಲಿ ಉತ್ತರವಿಲ್ಲ.

ಇನ್ನು ದೇಶದಲ್ಲಿರುವ ಎಲ್ಲ ಉನ್ನತ ಶಿಕ್ಷಣ ಸಂಸ್ಥೆಗಳಿಗೆ, ವಿಶ್ವವಿದ್ಯಾಲಯಗಳಿಗೆ ನ್ಯಾಕ್ ಮೂಲಕ ರೇಟಿಂಗ್ ನೀಡಲಾಗುತ್ತದೆ. ಈ ರೇಟಿಂಗ್ ಆಧಾರದಲ್ಲಿಯೇ ಯುಜಿಸಿ ಅನುದಾನವನ್ನು ಆಯಾ ಕಾಲೇಜು ಅಥವಾ ವಿವಿಗಳಿಗೆ ನೀಡಲಾಗುತ್ತದೆ. ಒಂದು ವೇಳೆ ರಾಜ್ಯ ಶಿಕ್ಷಣ ನೀತಿಯನ್ನು ಪದವಿ ಕಾಲೇಜುಗಳಲ್ಲಿ ಅಳವಡಿಸಿಕೊಂಡರೆ, ನ್ಯಾಕ್ ನಿಗದಿಪಡಿಸಿರುವ ಹಲವು 'ಮಾರ್ಗಸೂಚಿ'ಯಿಂದ ರಾಜ್ಯದ ಕಾಲೇಜು, ವಿವಿಗಳು ಹೊರಗುಳಿಯುತ್ತವೆ. ಇದರಿಂದಾಗಿ ನ್ಯಾಕ್ ರೇಟಿಂಗ್ ಮೇಲೆಯೂ ನೇರವಾದ ಹೊಡೆತ ಬೀಳುತ್ತದೆ. ಇದಿಷ್ಟೇ ಅಲ್ಲದೆ, ವಿಶ್ವವಿದ್ಯಾಲಯಗಳು ಯುಜಿಸಿಯ ಮಾರ್ಗಸೂಚಿಯಂತೆಯೆ ನಡೆಯುವುದರಿಂದ, ಎಸ್‌ಇಪಿ ಜಾರಿ ಹೇಗೆ ಸಾಧ್ಯ? ಅದರಲ್ಲಿಯೂ ಖಾಸಗಿ ವಿಶ್ವವಿದ್ಯಾಲಯಗಳಲ್ಲಿ ಅನುಷ್ಠಾನ ನಿಜಕ್ಕೂ ಸಾಧ್ಯವೇ ಎನ್ನುವ ಪ್ರಶ್ನೆಗೆ ಉತ್ತರವಿಲ್ಲ.

ಹಾಗೆಂದ ಮಾತ್ರಕ್ಕೆ, ರಾಜ್ಯ ಶಿಕ್ಷಣ ನೀತಿಯಲ್ಲಿ ಯಾವುದೇ ಉತ್ತಮ ಸಲಹೆಗಳಿಲ್ಲ ಎಂದೇನಿಲ್ಲ. ಶಿಕ್ಷಕರ ಭರ್ತಿಗೆ ಕ್ರಮ, ಗುತ್ತಿಗೆ ಶಿಕ್ಷಕರ ನೇಮಕಕ್ಕೆ ತಡೆ, ಆರ್‌ಟಿಇ ವ್ಯಾಪ್ತಿಯ ವಿಸ್ತರಣೆ, ಖಾಸಗಿ ಶಾಲೆಗಳ ನಿಯಂತ್ರಣಕ್ಕೆ ಪ್ರತ್ಯೇಕ ಸಂಸ್ಥೆಯ ರಚನೆ, ರಾಜ್ಯದ ಬಜೆಟ್‌ನಲ್ಲಿ ಶೇ.30ರಷ್ಟು ಅನುದಾನ ಶಿಕ್ಷಣ ಕ್ಷೇತ್ರಕ್ಕೆ ಮೀಸಲು ಸೇರಿದಂತೆ ಹಲವು ವಿಷಯಗಳನ್ನು ಪ್ರಸ್ತಾಪಿಸಿದ್ದಾರೆ. ಇದರೊಂದಿಗೆ ವಿಶ್ವವಿದ್ಯಾಲಯಗಳ ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಅಧಿಕಾರವನ್ನು ವಿಶ್ವವಿದ್ಯಾಲಯದ ವ್ಯಾಪ್ತಿಯಿಂದ ಹೊರತಂದು, ಕೆಇಎ ಮೂಲಕ ಲಿಖಿತ ಪರೀಕ್ಷೆ ನಡೆಸಲು ಹಾಗೂ ಸಂದರ್ಶನವನ್ನು ವಿವಿಗಳು ನಡೆಸಲು ಶಿಫಾರಸು ಮಾಡಲಾಗಿದೆ. ಸರಕಾರಿ ಕಾಲೇಜುಗಳ ಪ್ರಾಂಶುಪಾಲರ ಹುದ್ದೆಗಳನ್ನು ಕಾಲೇಜು ಶಿಕ್ಷಣ ಆಯ್ಕೆ ಸಮಿತಿ ಮಾಡಬೇಕು. ಅರ್ಹ ಯುಜಿಸಿ ಶಿಕ್ಷಕರಿಂದ ಅರ್ಜಿ ಸ್ವೀಕರಿಸಬೇಕು ಎಂದು ಹೇಳಲಾಗಿದೆ.

ಹಾಗೆ ನೋಡಿದರೆ, ಯುಜಿಸಿಯ ಹಲವು ಮಾರ್ಗಸೂಚಿಗಳಿಗೆ ವಿರೋಧಾಭಾಸ ಎನಿಸುವ ರೀತಿಯ ಶಿಫಾರಸು ಮಾಡಿರುವ ರಾಜ್ಯ ಶಿಕ್ಷಣ ನೀತಿಯನ್ನು ಸಿದ್ಧಪಡಿಸುವ ಸಮಿತಿಯಲ್ಲಿದ್ದ ಪ್ರೊ. ಸುಖದೇವ್ ಥೋರಟ್ ಅವರು ಈ ಹಿಂದೆ ಯುಜಿಸಿಯ ಅಧ್ಯಕ್ಷರಾಗಿ ಸೇವೆಸಲ್ಲಿಸಿದವರು. 2006ರಿಂದ 2011ರವರೆಗೆ ಯುಜಿಸಿ ಅಧ್ಯಕ್ಷರಾಗಿದ್ದ ಅವಧಿಯಲ್ಲಿ, ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದಂತೆ ಯುಜಿಸಿ ತೆಗೆದುಕೊಂಡಿದ್ದ ಅನೇಕ ತೀರ್ಮಾನಗಳಿಗೆ 'ವ್ಯತಿರಿಕ್ತ' ಎನ್ನುವ ರೀತಿಯಲ್ಲಿ ಈಗಿನ ಎಸ್‌ಇಪಿಯಲ್ಲಿ ಶಿಫಾರಸುಗಳನ್ನು ಮಾಡಲಾಗಿದೆ. ಈ ರೀತಿ ಶಿಫಾರಸುಗಳನ್ನು ಮಾಡಲು ಸಮಿತಿಯ ಅಧ್ಯಕ್ಷರನ್ನಾಗಿ ಮಾಡಿದ ಪಕ್ಷದ ಚುನಾವಣಾ ಪ್ರಣಾಳಿಕೆಗೆ ಸರಿಹೊಂದುವ ರೀತಿಯಲ್ಲಿ ಮಾಡಲಾಗಿದೆಯೇ ಅಥವಾ ಈ ಹಿಂದೆ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಮಾಡಿದ್ದ 'ತಪ್ಪು'ಗಳ ಅರಿವಾಗಿ ಕರ್ನಾಟಕದ ಮಟ್ಟಿಗಾದರೂ ಈ ಲೋಪಗಳನ್ನು ಸರಿಪಡಿಸೋಣ ಎನ್ನುವ ಮನಸ್ಥಿತಿಯಲ್ಲಿ ಶಿಫಾರಸು ಮಾಡಿದ್ದಾರೋ ಗೊತ್ತಿಲ್ಲ.

ಶಿಕ್ಷಣ ನೀತಿ ಸಮಿತಿಯ ಶಿಫಾರಸುಗಳು, ತೀರ್ಮಾನಗಳು ಏನಾದರೂ ಇರಲಿ, ಆದರೆ ಮೇಲೆ ಹೇಳಿದಂತೆ, ಒಂದು ವೇಳೆ ಕರ್ನಾಟಕ ಸರಕಾರ ರಾಜ್ಯ ಶಿಕ್ಷಣ ನೀತಿಯನ್ನು ಪ್ರತ್ಯೇಕವಾಗಿ ಜಾರಿಗೊಳಿಸಲೇಬೇಕು ಎಂದಾದರೆ ಒಂದರಿಂದ ದ್ವಿತೀಯ ಪಿಯುಸಿವರೆಗೆ ಜಾರಿಗೊಳಿಸಲು 'ಬಹುದೊಡ್ಡ' ಸವಾಲಿರುವುದಿಲ್ಲ. ಆದರೆ ಉನ್ನತ ಶಿಕ್ಷಣದಲ್ಲಿಯೂ ಬದಲಾವಣೆ ಮಾಡಲು ಹೊರಟರೆ, ಕೇಂದ್ರ ಹಾಗೂ ರಾಜ್ಯ ಸರಕಾರಗಳ ಮಾರ್ಗಸೂಚಿಗಳ 'ತಿಕ್ಕಾಟ'ದಲ್ಲಿ ರಾಜ್ಯದ ವಿದ್ಯಾರ್ಥಿಗಳು ನಲುಗುವುದು ಖಚಿತ. ಆದ್ದರಿಂದ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಸಾರಾಸಗಟಾಗಿ ತಳ್ಳಿಹಾಕುವುದಕ್ಕಿಂತ ಕೇಂದ್ರ ಸರಕಾರ ತನ್ನ ಎನ್‌ಇಪಿಯಲ್ಲಿ ಬದಲಾವಣೆಗೆ ನೀಡಿರುವ ಅವಕಾಶವನ್ನು ಬಳಸಿಕೊಳ್ಳುವುದು ಸೂಕ್ತ.

ಏಕೆಂದರೆ, ರಾಜ್ಯ ಸರಕಾರದ ಕೈಸೇರಿರುವ ರಾಜ್ಯ ಶಿಕ್ಷಣ ನೀತಿಯನ್ನು ಜಾರಿ ಮಾಡುವ, ಬಿಡುವ ಅಥವಾ ನೀಡಿರುವ ವರದಿಯಲ್ಲಿ ಕೆಲವೊಂದಿಷ್ಟು ಶಿಫಾರಸುಗಳನ್ನು ಮಾತ್ರ ಜಾರಿಗೊಳಿಸುವ ಸ್ವಾತಂತ್ರ್ಯ ಸರಕಾರಗಳಿಗೆ ಇದೆ. ಅದಕ್ಕೂ ಮೊದಲು ಸಚಿವ ಸಂಪುಟ ಸಭೆಯಲ್ಲಿ, ಅಧಿವೇಶನದಲ್ಲಿ ಈ ವರದಿ ಮಂಡನೆಯಾಗಿ ಅನುಮೋದನೆಯಾಗಬೇಕು. ಈ ಎಲ್ಲವೂ 'ಸುದೀರ್ಘ' ಕ್ರಿಯೆ ಎನ್ನುವುದು ಬೇರೆ ಮಾತು. ಹಾಗೆ ನೋಡಿದರೆ, ಈ ವರದಿಯನ್ನು ಮಂಡಿಸಲು ಕಾನೂನಾತ್ಮಕವಾಗಿರುವ ಸವಾಲುಗಳು ಒಂದೆರಡಲ್ಲ ಎನ್ನುವುದು ಮುಖ್ಯಮಂತ್ರಿ ಸಿದ್ದರಾಮಯ್ಯ, ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರಿಗೆ ತಿಳಿಯದ ವಿಷಯವೇನಲ್ಲ, ಆದರೆ ರಾಜಕೀಯ ಕಾರಣಕ್ಕೆ, ಕೇಂದ್ರದ ಬಿಜೆಪಿ ಸರಕಾರದ ನೀತಿಯೊಂದನ್ನು ವಿರೋಧಿಸಬೇಕು ಎನ್ನುವ ಕಾರಣಕ್ಕೆ ಹಾಗೂ ಕೇಂದ್ರ ಸರಕಾರದ ತೀರ್ಮಾನವನ್ನು ವಿರೋಧಿಸಿ ಒಂದು 'ಪ್ರಕ್ರಿಯೆ' ನಡೆಸಿದ್ದೇವೆ ಎನ್ನುವ ಸಂದೇಶವನ್ನು ಹೈಕಮಾಂಡ್‌ಗೆ ರವಾನಿಸಬೇಕು ಎನ್ನುವ ಕಾರಣಕ್ಕೆ ಈ ರೀತಿ ಮಾಡಲಾಗಿದೆ ಎನ್ನುವ ವಾದವನ್ನು ತಳ್ಳಿಹಾಕಬೇಕಿಲ್ಲ. ಭಾರತದ ರಾಜಕೀಯ ವ್ಯವಸ್ಥೆಯಲ್ಲಿ ಎಲ್ಲ ತೀರ್ಮಾನಗಳನ್ನು 'ರಾಜಕೀಯ'ವಾಗಿಯೇ ನೋಡಬೇಕು ಎನ್ನುವ ನಿಲುವಿಗೆ ಬಂದು ದಶಕಗಳು ಕಳೆದಿವೆ ಎನ್ನುವುದು ಸತ್ಯ. ಆದರೆ ಶಿಕ್ಷಣದಂಥ ಕ್ಷೇತ್ರದಲ್ಲಿ 'ಗೊಂದಲ' ಸೃಷ್ಟಿಸಿದರೆ ದೇಶ ಹಾಗೂ ರಾಜ್ಯದ ಭವಿಷ್ಯ ಗೊಂದಲದಲ್ಲಿರುತ್ತದೆ ಎನ್ನುವುದನ್ನು ಮರೆಯಬಾರದು.

## ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

# ಹಾವಿಗೆ ಹಾಲೆರೆದ ಮೋದಿ

ಹರೀಶ್‌ಕುಮಾರ್ ಕುಡ್ತಡ್ಕ ಅವರ 'ಹಾವಿಗೆ ಹಾಲೆರೆದರೇ ಪ್ರಧಾನಿ ನರೇಂದ್ರ ಮೋದಿ' ಎಂಬ ಲೇಖನ (ಆ.11) ಚೆನ್ನಾಗಿ ಮೂಡಿಬಂದಿದೆ. ವಿಶ್ವ ರಾಜಕಾರಣದ ವಸ್ತುವನ್ನು ಒಳಗೊಂಡಿರುವ ಈ ಬರಹದಲ್ಲಿ, ವಿಷಯವನ್ನು ನಿರೂಪಿಸಿರುವ ರೀತಿ ಮೆಚ್ಚುಗೆಗೆ ಪಾತ್ರವಾಗುತ್ತದೆ.

ಆದರೆ ಇಲ್ಲೊಂದು ಸ್ಪಷ್ಟೀಕರಣದ ಅಗತ್ಯವಿದೆ. ಟ್ರಂಪ್ ಅವರು ಭಾರತದ ಉತ್ಪನ್ನಗಳಿಗೆ ಶೇ.50ರಷ್ಟು ಸುಂಕವನ್ನು ವಿಧಿಸಿರುವುದರಿಂದಾಗಿ ನಮ್ಮ ರಫ್ತುದಾರರಿಗೆ ಹಿನ್ನಡೆಯಾಗುವುದು ನಿಜವಾದರೂ, ಆ ಸುಂಕವನ್ನು ರಫ್ತುದಾರರೇ ಭರಿಸಬೇಕು ಎಂದೇನಿಲ್ಲ. ಯಾವುದೇ ದೇಶದಲ್ಲಿ ಚಾಲ್ತಿಯಲ್ಲಿರುವ ಆಮದು ಸುಂಕವನ್ನು ಮೊದಲಿಗೆ ಅಲ್ಲಿನ ಆಮದುದಾರರು ಭರಿಸುತ್ತಾರೆ ಮತ್ತು ಕೊನೆಯಲ್ಲಿ ಅಲ್ಲಿನ ಗ್ರಾಹಕರಿಗೆ ಅದನ್ನು ವರ್ಗಾಯಿಸುತ್ತಾರೆ. ಅಂತೆಯೇ, ಟ್ರಂಪ್ ಕ್ರಮದಿಂದಾಗಿ ಭಾರತದ ಉತ್ಪನ್ನಗಳಿಗೆ ಅಲ್ಲಿನ ಗ್ರಾಹಕರು ಹೆಚ್ಚಿನ ಬೆಲೆ ನೀಡಬೇಕಾದ ಅನಿವಾರ್ಯತೆ ಏರ್ಪಡುತ್ತದೆ. ಉದಾಹರಣೆಗೆ, ಫೋರ್ಡ್ ಕಂಪನಿಯ ಇತ್ತೀಚಿನ ವರದಿಯಂತೆ, ವಿವಿಧ ದೇಶಗಳಿಂದ ಅಮೆರಿಕಕ್ಕೆ ತರಿಸುವ ವಾಹನಗಳ ಬಿಡಿಭಾಗಗಳಿಗೆ 36 ಮಿಲಿಯನ್ ಡಾಲರುಗಳಷ್ಟು (ಸುಮಾರು 315 ಕೋಟಿ ರು.) ಹೆಚ್ಚಿನ ಸುಂಕವನ್ನು ಆ ಕಂಪನಿ ಪಾವತಿಸಿದೆಯಂತೆ. ಇದು ಕೊನೆಗೆ ಫೋರ್ಡ್ ಕಂಪನಿಯ ಕಾರುಗಳ ಬೆಲೆಯ ಹೆಚ್ಚಳ ಅಥವಾ ಕಂಪನಿಯ ಲಾಭಾಂಶದಲ್ಲಿನ ಕಡಿತವಾಗಿ ಕೊನೆಗೊಳ್ಳುತ್ತದೆ.

ಟ್ರಂಪ್ ಅವರು ಒಬ್ಬ ತಲೆತಿರುಕನಂತೆ ವರ್ತಿಸುತ್ತಿದ್ದಾರೆ ಎಂಬುದೇನೋ ನಿಜವೇ. ಅವರು ರಾಜಕಾರಣಿಗಿಂತಲೂ ಮಿಗಿಲಾಗಿ ಒಬ್ಬ ವ್ಯವಹಾರಸ್ಥ. ಅವರ ಮಾತು ಮತ್ತು ವರ್ತನೆಗಳಿಗೆ ತಕ್ಷಣಕ್ಕೆ ಪ್ರತಿಕ್ರಿಯಿಸುವುದೆಂದರೆ, ಬೆಂಕಿಗೆ ತುಪ್ಪ ಸುರಿದಂತೆ. ಅದರಲ್ಲೂ, ವಿದೇಶಾಂಗ ವ್ಯವಹಾರಗಳಲ್ಲಿ ಎಷ್ಟು ಜಾಗರೂಕರಾಗಿದ್ದರೂ ಸಾಲದು. ಅಮೆರಿಕದ ಮಾರುಕಟ್ಟೆಯು ಭಾರತದ ವ್ಯಾಪಾರಿಗಳಿಗೆ ತುಟ್ಟಿಯಾಗುತ್ತದೆ ಎಂಬುದು ತಿಳಿಯುತ್ತಿದ್ದಂತೆ, ಪ್ರಧಾನಿ ಮೋದಿಯವರು ಬೇರೆ ದೇಶಗಳ ಮಾರುಕಟ್ಟೆಗಳ ಕಡೆಗೆ ನೋಡಲು ಮುಂದಾ ಗಿದ್ದಾರೆ. ಇದು ಸಾಕಾರಗೊಳ್ಳಲು ಕೆಲವು ತಿಂಗಳುಗಳಾದರೂ ಬೇಕಾಗುತ್ತದೆ. ಅದುವರೆಗೂ, ಅಮೆರಿಕ ಮಾರುಕಟ್ಟೆಯನ್ನು ನಂಬಿಕೊಂಡಿದ್ದವರಿಗೆ ತೊಂದರೆಯಾಗುವುದು ಖಚಿತ.

ಕಳೆದೊಂದು ದಶಕದಲ್ಲಿ ನಾವು ನೋಡುತ್ತಿರುವ (ಅಂದರೆ ದೃಶ್ಯ ಮಾಧ್ಯಮದಲ್ಲಿ ಕಾಣುವ) ಮೋದಿಯವರೇ ಬೇರೆ, ಕೆಲಸದಲ್ಲಿ ಹಾಗೂ 'ದೇಶ ಮೊದಲು' ಎಂಬ ವಿಷಯದಲ್ಲಿ ನಿರ್ಧಾರ ತೆಗೆದುಕೊಳ್ಳುವ ಮೋದಿಯೇ ಬೇರೆ. ಜತೆಯಲ್ಲಿ ನಗುನಗುತ್ತಾ ಮಾತನಾಡಿದ ಮಾತ್ರಕ್ಕೆ 'ಮೋದಿ ನಮ್ಮವರು' ಎಂದುಕೊಳ್ಳುವುದು ಹಾಸ್ಯಾಸ್ಪದವಾಗುತ್ತದೆ. ಇದು ಮೊನ್ನೆ ಮೆಟ್ರೋ ರೈಲಿನಲ್ಲಿ ಜತೆಯಲ್ಲಿ ನಗುತ್ತಾ ಕುಳಿತವರಿಗೂ ಗೊತ್ತು. ಬಹಳಷ್ಟು ಸಲ ಮೋದಿಯವರು ಏನನ್ನೂ ಮಾಡಲಿಲ್ಲ ಅನಿಸಿದರೂ, ಅವರು ಸಮಯ ನೋಡಿ ಸರಿಯಾದ ನಿರ್ಧಾರವನ್ನು ತೆಗೆದುಕೊಳ್ಳುತ್ತಾರೆ, ತಕ್ಷಣದ ಕ್ರಮಗಳಿಗೆ ಕಾದಿರುವವರಿಗೆ ಬಹುಶಃ ನಿರಾಶೆ ಮೂಡಿರಬಹುದೇನೋ? ಒಟ್ಟಿನಲ್ಲಿ ಕಾದು ನೋಡೋಣ.

**- ಎಸ್. ಭಾರದ್ವಾಜ್**, ಮೈಸೂರು

**ಓದುಗರ ಓಣಿಗೆ ಭೇಟಿ ಕೊಡಿ**
**ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು**

# ಈ ಮಾತುಗಳು ಅಭಿಮಾನಿಗಳಿಗೆ ಇಷ್ಟವಾಗಲಿಕ್ಕಿಲ್ಲ, That's ok!

ಪದಸಾಗರ
ನವೀನ್ ಸಾಗರ್
vveditoped@gmail.com

ಸುಮಾರು ಎಂಟು ವರ್ಷಗಳ ಹಿಂದೆ 'ವಿಶ್ವವಾಣಿ'ಯಲ್ಲೇ ಅಂಕಣ ಬರೆದಿದ್ದ, 'ಅಂಗೈ ಅಗಲ ಜಾಗ ಸಾಕು ಅಂದಾತನಿಗೆ ಇದೆಂಥ ಪರಿಸ್ಥಿತಿ?' ಎಂಬ ಶೀರ್ಷಿಕೆ ಅಡಿಯಲ್ಲಿ. 'ವಿಷ್ಣು ಚಕ್ರ' ಒಂದು ಸುತ್ತು ಪೂರ್ತಿ ಸುತ್ತಿ ಮತ್ತೆ ಅಲ್ಲೇ ಬಂದು ನಿಂತಿದೆ. ಆದರೆ ಸ್ಮಶಾನದಲ್ಲಿ(?) ಸ್ಮಶಾನ ಮೌನ ಆವರಿಸಿದೆ! ವಿಷ್ಣು ಅಸ್ಥಿ ಇಟ್ಟು ಪುಣ್ಯಭೂಮಿ ಎಂದು ಕರೆಯಲ್ಪಟ್ಟಿದ್ದ ಜಾಗ ರಾತ್ರೋರಾತ್ರಿ ನೆಲಸಮವಾಗಿದೆ. ವಿಷ್ಣು ಅಭಿಮಾನಿಗಳು ಭಾವುಕತೆಯ ಪರಾಕಾಷ್ಠೆಯಲ್ಲಿ ಆಕ್ರೋಶ ಮತ್ತು ದುಃಖ ವ್ಯಕ್ತಪಡಿಸುತ್ತಿದ್ದಾರೆ. ಈ ನಡುವೆ ಅಭಿಮಾನಿಗಳ ಮತ್ತು ವಿಷ್ಣು ಕುಟುಂಬದ ನಡುವೆಯೂ ಭಿನ್ನಾಭಿಪ್ರಾಯಗಳು ಎದ್ದು ಕಾಣುತ್ತಿವೆ.

ನಟ ವಿಷ್ಣುವರ್ಧನ್ ಬ್ರಾಹ್ಮಣ ಎಂಬ ಕಾರಣಕ್ಕೆ ಈ ರೀತಿ ಸತತ ನೋವುಣ್ಣುತ್ತಿದ್ದಾರೆ ಎಂಬ ವಾದಕ್ಕೆ ಈ ಲೇಖನ ಬರೆಯುವ ಹೊತ್ತಲ್ಲಿ ನಾನಿಲ್ಲ. ವಿಷ್ಣುವಿಗಾದ ಎಲ್ಲ ನೋವುಗಳಿಗೂ ರಾಜ್ ಕುಟುಂಬವೇ ಕಾರಣ ಎಂಬ ಆರೋಪವನ್ನಂತೂ ನಾನು ಸುತರಾಂ ಒಪ್ಪುವುದೇ ಇಲ್ಲ. ಆದರೆ ವಿಷ್ಣು ನಿಜಾರ್ಥದಲ್ಲಿ ಶಾಪಗ್ರಸ್ತ ಗಂಧರ್ವ. ಇಂಡಸ್ಟ್ರಿಗೆ ಬಂದಾಗಿನಿಂದ ಹಿಡಿದು ಸಮಾಧಿ-ಸ್ಮಾರಕಗಳ ವಿವಾದದ ತನಕ ವಿಷ್ಣುವಿಗೆ ಮತ್ತು ವಿಷ್ಣು ಆತ್ಮಕ್ಕೆ ನೆಮ್ಮದಿಯೇ ಇಲ್ಲದಂತಾಗಿರುವುದಂತೂ ಸತ್ಯ.

ಆಗಿರುವುದಿಷ್ಟು. ವಿಷ್ಣು ನಿಧನರಾದಾಗ ಸರಕಾರದ ಎಡವಟ್ಟು ಮತ್ತು ವಿಷ್ಣು ಅವರ ಗೆಳೆಯ ಅಂಬರೀಶ್ ಅವರು ತೆಗೆದುಕೊಂಡ ನಿರ್ಧಾರದ ಫಲವಾಗಿ ಅಭಿಮಾನ್ ಸ್ಟುಡಿಯೋದ ಕ್ಯಾಂಪಸ್ಸಿನಲ್ಲಿ ವಿಷ್ಣುವರ್ಧನ್ ಅವರ ಅಂತಿಮ ಸಂಸ್ಕಾರವಾಯ್ತು. ಅಂತಿಮ ಸಂಸ್ಕಾರ ಆದಾಗಿನಿಂದ ಸಹಜವಾಗಿ ಅದನ್ನು ಪುಣ್ಯಭೂಮಿ ಎಂದು ಅಭಿಮಾನಿಗಳು ನೋಡತೊಡಗಿದರು. ವಿಷ್ಣು ಸ್ಮಾರಕ ಅಲ್ಲೇ ಆಗಬೇಕೆಂಬ ಕನಸು ಕಂಡರು. ಆದರೆ ಅಭಿಮಾನ್ ಸ್ಟುಡಿಯೋ ಬಾಲಣ್ಣನ ಸ್ವತ್ತು. ಬಾಲಣ್ಣ ಕರ್ನಾಟಕಕ್ಕೊಂದು ಸ್ವತಂತ್ರ ಸ್ಟುಡಿಯೋ ಬೇಕೆಂದು ಕನಸಿಟ್ಟುಕೊಂಡು ಸರಕಾರದಿಂದ ಪಡೆದ ಜಾಗವದು. ಆದರೆ ಜಾಗ ಸಿಕ್ಕಿತೇ ಹೊರತು, ಅದನ್ನು ಸುಸಜ್ಜಿತ ಸ್ಟುಡಿಯೋವಾಗಿಸುವುದಕ್ಕೆ ಬಾಲಣ್ಣನಿಂದ ಸಾಧ್ಯ ಆಗಲೇ ಇಲ್ಲ. ಬಾಲಣ್ಣನ ಸ್ಟುಡಿಯೋ ಯಾವ ಶೂಟಿಂಗಿಗೂ ಸೂಕ್ತವೆನಿಸುವಂತೆ ಇರಲಿಲ್ಲ. ಅದನ್ನು ರೆಡಿ ಮಾಡಲು ಬಾಲಣ್ಣನಿಂದ ಹಣ ಒಟ್ಟುಗೂಡಿಸಲೂ ಆಗಲಿಲ್ಲ. ಚಿತ್ರರಂಗವಾಗಲೀ, ಸರಕಾರವಾಗಲೀ ಅಭಿಮಾನ್ ಸ್ಟುಡಿಯೋವನ್ನು ಕಟ್ಟುವ ಬೆಳೆಸುವ ಗೋಜಿಗೇ ಹೋಗಲಿಲ್ಲ. ಅದೊಂದು ಕಳೆಬೆಳೆದ ಕಾಡುಜಾಗದ ಥರ ಉಳಿದುಬಿಟ್ಟಿತು. ಬಾಲಣ್ಣ ಕೊನೆಗೂ ಸ್ಟುಡಿಯೋ ಕಟ್ಟಿಸಲಾಗದೇ ಹೋಗಿಬಿಟ್ಟರು. ಅಂದಹಾಗೆ ಬಾಲಣ್ಣನ ಅಂತ್ಯಸಂಸ್ಕಾರ ಆದದ್ದೆಲ್ಲಿ? ಅಭಿಮಾನ್ ಸ್ಟುಡಿಯೋದಲ್ಲಾ? ನನ್ನಲ್ಲಿ ಮಾಹಿತಿ ಇಲ್ಲ. ಆನಂತರ ಅಭಿಮಾನ್ ಸ್ಟುಡಿಯೋದ ಜಾಗ ಕಾನೂನಾತ್ಮಕವಾಗಿ ಅವರ ಮಕ್ಕಳ ಕೈ ಸೇರಿತು. ಬಾಲಣ್ಣ ನಿಧನದ ನಂತರ ಸುಮಾರು 14 ವರ್ಷದಲ್ಲಿ, ಅಭಿಮಾನ್ ಸ್ಟುಡಿಯೋ ಪೂರ್ತಿಯಾಗಿ ಪಾಳುಬಿದ್ದಂತಾಯ್ತು. ಈ ಸಮಯದಲ್ಲಿ ವಿಷ್ಣು ನಿಧನರಾಗಿದ್ದು, ಅಭಿಮಾನ್ ಸ್ಟುಡಿಯೋ ಆವರಣದಲ್ಲಿ ಅಂತಿಮ ಸಂಸ್ಕಾರವಾದದ್ದು.

ಬಾಲಣ್ಣನ ಮಕ್ಕಳಿಗೆ ಈಗ ತಲೆಬಿಸಿ ಶುರುವಾಯ್ತು. ಅರೆ, ಅಂತಿಮಸಂಸ್ಕಾರಕ್ಕೆ ಅವಕಾಶ ಮಾಡಿಕೊಟ್ಟದ್ದೇ ತಪ್ಪಾಗಿಹೋಯ್ತಲ್ಲ, ಈಗ ಪುಣ್ಯಭೂಮಿ ಮಾಡ್ತೀವಿ, ಇಲ್ಲೇ ಸ್ಮಾರಕ ಮಾಡ್ತೀವಿ ಅಂತ ಹೊರಟುಬಿಟ್ಟಿದ್ದಾರಲ್ಲ. ಇದನ್ನು ಹೇಗೆ ಒಪ್ಪೋದು? ಇದು ಕೇವಲ ಹಣಕ್ಕೆ ಸಂಬಂಧಿಸಿದ ವಿಷಯವಲ್ಲ. ಹಾಗಿದ್ದಿದ್ರೆ ದೊಡ್ಡ ಬೆಲೆ ಕೇಳಿ ಬಾಲಣ್ಣನ ಕುಟುಂಬ ಮಾರಿಬಿಡ್ತಿತ್ತೇನೋ. ಮಾರಲು ಸಿದ್ಧವಿಲ್ಲದ ಜಾಗವನ್ನು ಕೊಳ್ಳಲು ಬಂದರೆ ಯಾರು ತಾನೇ ಕೊಡುತ್ತಾರೆ? ಅಷ್ಟೇ ಅಲ್ಲ, ತಮ್ಮಪ್ಪನ ಸ್ವಂತ ಜಾಗದಲ್ಲಿ ಯಾರದ್ದೋ ಸಮಾಧಿ-ಸ್ಮಾರಕ ನಿರ್ಮಿಸುತ್ತೇವೆ ಅಂದರೆ ಹೇಗೆ ತಾನೇ ಒಪ್ಪೋಕೆ ಸಾಧ್ಯ? ಈ ಮಧ್ಯೆ ಬಾಲಣ್ಣನ ಮಕ್ಕಳು ಈ ಜಾಗವನ್ನು ಕಮರ್ಷಿಯಲ್ ಆಗಿ ಬಳಸಿಕೊಳ್ಳುವ ಯೋಜನೆ ಹಾಕಿರುವುದು ಹೌದು. ಏತನ್ಮಧ್ಯೆ ವಿಷ್ಣು ತವರು ಮೈಸೂರಿನಲ್ಲಿ ವಿಶಾಲ ಜಾಗದಲ್ಲಿ ಬಹುಕೋಟಿ ವೆಚ್ಚದಲ್ಲಿ ಕುಟುಂಬದ ಮನವಿಯಂತೆ, ವಿಷ್ಣುವರ್ಧನ್ ಸ್ಮಾರಕ ನಿರ್ಮಾಣಗೊಂಡಿದೆ ಎಂಬುದನ್ನು ನಾವು ನೆನಪಲ್ಲಿಟ್ಟುಕೊಳ್ಳಬೇಕು. ಈ ಹಂತದಲ್ಲಿ ಪ್ರಕರಣ ಕೋರ್ಟಿಗೆ ಹೋಗಿದೆ- ವಿಷ್ಣು ಪುಣ್ಯಭೂಮಿಗೆ ಅಭಿಮಾನ್ ಸ್ಟುಡಿಯೋದಲ್ಲಿ ಜಾಗ ಕೊಡಬೇಕೋ ಬೇಡವೋ ಎಂದು. ವಿಷ್ಣು ಕುಟುಂಬ ಈ ವಿಚಾರದಲ್ಲಿ ಡಿಮ್ಯಾಂಡ್ ಮಾಡಿಲ್ಲ. ಸರಕಾರವಂತೂ ಮೈಸೂರಿನಲ್ಲಿ ಸ್ಮಾರಕ ನಿರ್ಮಿಸಿ ತನ್ನ ಜವಾಬ್ದಾರಿ ಮುಗಿಸಿತ್ತು. ಚಿತ್ರರಂಗವೂ ಈ ವಿಚಾರದಲ್ಲಿ ಮಾತಿಗೆ ಬರಲಿಲ್ಲ. ನ್ಯಾಯಾಲಯ ತನ್ನ ತೀರ್ಪು ನೀಡಿಯೇಬಿಟ್ಟಿತು. ಅಭಿಮಾನಿಗಳು ಹೇಳ್ತಾರೆ ಅನ್ನೋ ಕಾರಣಕ್ಕೆ ಪುಣ್ಯಭೂಮಿಯಲ್ಲಿ ಸ್ಮಾರಕಕ್ಕೆ ಜಾಗ ಕೊಡಲಾಗುವುದಿಲ್ಲ. ಅಭಿಮಾನಿಗಳಿಗೂ ಇದಕ್ಕೂ ಸಂಬಂಧವಿಲ್ಲ. ಹೀಗೆ ಅಭಿಮಾನಿಗಳು ತಂತಮ್ಮ ನಟ/ನಾಯಕರಿಗೆ ಸ್ಮಾರಕಕ್ಕಾಗಿ ಹಟ ಹಿಡಿದು ಕೂತರೆ ಒಪ್ಪಲು ಸಾಧ್ಯವೇ ಅಂದುಬಿಟ್ಟಿತು. ಅಭಿಮಾನಿಗಳಿಗಾದ ನಿಜವಾದ ಮರ್ಮಾಘಾತವಿದು.

ಇಂಥ ಸಂದರ್ಭದಲ್ಲಿ ಒಮ್ಮೆ ಭಾವುಕತೆ ಸೈಡಿಗಿಟ್ಟು ಅಥವಾ ಭಾವುಕತೆ ಎಂಬುದು ಕೇವಲ ಅಭಿಮಾನಿಗಳಿಗೆ ಮಾತ್ರ ಇರೋದಲ್ಲ ಎಂಬ ಅಂಶವನ್ನು ಗಣನೆಗೆ ತೆಗೆದುಕೊಂಡು ಒಂದಷ್ಟು ಮಾತನಾಡಬೇಕಾಗುತ್ತದೆ.

ರಾಷ್ಟ್ರಕವಿ ಕುವೆಂಪು ನಿಧನರಾದಾಗ, ಅವರ ಸಮಾಧಿಯನ್ನು ಮಾನಸಗಂಗೋತ್ರಿಯಲ್ಲಿ ನಿರ್ಮಿಸಬೇಕು ಎಂಬ ಕೂಗೆದ್ದಿತ್ತು. ಯಾಕಂದ್ರೆ, ಕುವೆಂಪು ಮಾನಸಗಂಗೋತ್ರಿಯ ನಿರ್ಮಾತೃ. ಆಗ ಅವರ ಪುತ್ರ ಪೂರ್ಣಚಂದ್ರ ತೇಜಸ್ವಿ ಒಂದು ಮಾತನ್ನು ಹೇಳಿದರು- ಈಗ ಕುವೆಂಪು ಸಮಾಧಿ ಮಾಡುತ್ತೀರಿ. ಮುಂದಿನ ದಿನಗಳಲ್ಲಿ ಯೂನಿವರ್ಸಿಟಿಗೆ ಸಂಬಂಧಿಸಿದ ಯಾವುದೇ ಗಣ್ಯರು, ಕುಲಪತಿ, ಉಪಕುಲಪತಿಗಳು ತೀರಿಕೊಂಡರೂ, ಅವರ ಸಮಾಧಿಗಾಗಿ ಕೂಗು ಶುರುವಾಗುತ್ತದೆ. ಎಲ್ಲರದೂ ಸಮಾಧಿ ನಿರ್ಮಿಸುತ್ತಾ ಹೋದರೆ, ಯೂನಿವರ್ಸಿಟಿ ಯೂನಿವರ್ಸಿಟಿ ಆಗಿ ಉಳಿಯುವುದಿಲ್ಲ, ಸ್ಮಶಾನವಾಗುತ್ತದೆ. ಕುವೆಂಪು ಅವರು ಹುಟ್ಟೂರು ಕುಪ್ಪಳ್ಳಿಯಲ್ಲೇ ಇರಲಿ ಎಂದಿದ್ದರು. ಈ ಸೆನ್ಸಿಬಲಿಟಿ ಇಂದಿನ ತುರ್ತು ಅಲ್ಲವೇ?

ಸಿನಿಮಾ ನಟರು ಖಂಡಿತವಾಗ್ಯೂ ಸಾಂಸ್ಕೃತಿಕ ರಾಯಭಾರಿಗಳು. ಅದರಲ್ಲೂ ರಾಜ್‌ರಂಥ ಮೇರುನಟರು ಯಾವತ್ತಿಗೂ ಮನುಕುಲಕ್ಕೆ ಆದರ್ಶವೇ. ವಿಷ್ಣು ಕೂಡ ಅದೇ ಸಾಲಿನಲ್ಲಿ ನಿಲ್ಲಬಲ್ಲ ವ್ಯಕ್ತಿತ್ವ. ಇದನ್ನು ಅವರು ನಟಿಸಿದ ಚಿತ್ರಗಳಿಂದಲೇ ಅಳೆಯಲಾಗದಿದ್ದರೂ, ವ್ಯಕ್ತಿಯಾಗಿ ವಿಷ್ಣು ಅನುಕರಣೀಯರಾಗಿದ್ದವರು. ಹಲವು ಅದ್ಭುತ ಚಿತ್ರಗಳಿಂದ ಸಮಾಜದಲ್ಲಿ ಪರಿವರ್ತನೆಗೆ ಕಾರಣರಾದವರು, ನಗಿಸಿದವರು, ಕಣ್ಣಂಚಲ್ಲಿ ನೀರು ತರಿಸಿದವರು. ಅವರು ಸದಾ ಸ್ಮರಣೀಯರು. ನಿಧನದ ನಂತರವೂ ಅವರ ಹೆಸರು ಚಿರಕಾಲ ಉಳಿಯಬೇಕಾದ್ದೇ. ಆದರೆ ಅದಕ್ಕೆ ಸಮಾಧಿ-ಸ್ಮಾರಕಗಳೇ ಮಾನದಂಡವಾ? ಅವರ ಹೆಸರು ಚಿರಸ್ಥಾಯಿಯಾಗಿಸಲು ಬೇರೆ ಉದಾತ್ತ ಮಾರ್ಗಗಳೇ ಇಲ್ಲವಾ? ಕೇಳಿಕೊಳ್ಳಬೇಕಾದ ಪ್ರಶ್ನೆ ಅಲ್ಲವೇ?

ಕೋರ್ಟ್ ಆರ್ಡರ್ ಬರುತ್ತಿದ್ದಂತೆಯೇ ರಾತ್ರೋರಾತ್ರಿ ಪುಣ್ಯಭೂಮಿಯನ್ನು ನೆಲಸಮ ಮಾಡಿಬಿಟ್ಟರು ಎಂದು ಗೊತ್ತಾದಾಗ, ಮೊದಲ ಪ್ರತಿಕ್ರಿಯೆ ಬರುವುದು 'ಹೇಯ ನಡೆ, ಹೇಡಿತನದ ನಡೆ ಅಂತಲೇ'. ಆದರೆ ಅಭಿಮಾನಿಗಳಿಗೆ ಗೊತ್ತಾಗುವ ಹಾಗೆ ಹಗಲುಹೊತ್ತಿನಲ್ಲಿ ತೆರವುಗೊಳಿಸುವುದು ಸಾಧ್ಯವಿತ್ತಾ? ಖಂಡಿತ ಇಲ್ಲ, ಅದೊಂದು ದೊಡ್ಡ ಗಲಭೆಗೆ ಆಸ್ಪದ ಕೊಟ್ಟಿರುತ್ತಿತ್ತು. ರಕ್ತಪಾತಗಳಾಗಿರುತ್ತಿದ್ದವು. ಅಭಿಮಾನ್ ಸ್ಟುಡಿಯೋ ರಣರಂಗವಾಗಿರುತ್ತಿತ್ತು. ಕೋರ್ಟ್ ತೀರ್ಪು ಕೈಲಿದ್ದಾಗಲೂ ರಾತ್ರಿಹೊತ್ತು ನೆಲಸಮ ಮಾಡುವ ಪರಿಸ್ಥಿತಿ ಇದೆ ಅಂದರೆ ಅದು ಅಭಿಮಾನಿಗಳಿಂದಾಗಬಹುದಾದ ಅಪಾಯದ ಭಯ ಅಂತಲೇ ಅರ್ಥ. ಇನ್ನು ಅಭಿಮಾನಿಗಳು ಬಾಲಣ್ಣನ ಕುಟುಂಬದ ವಿರುದ್ಧ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ- ಇಲ್ಲಿ ಮಾಲ್ ಕಟ್ಟೋದಕ್ಕೆ ಪುಣ್ಯಭೂಮಿಯನ್ನು ನಾಶಮಾಡಿದ್ದಾರೆ ಅಂತ. ಅಭಿಮಾನಿಗಳ ಸಮಸ್ಯೆ ಏನು? ಈಗ ಬಾಲಣ್ಣನ ಮಕ್ಕಳು ಅಲ್ಲಿ ಮಾಲ್ ನಿರ್ಮಿಸದೇ ಇದ್ದರೆ, ಪುಣ್ಯಭೂಮಿ ತೆರವುಗೊಳಿಸೋದು ಓಕೆನಾ?

ಮೊತ್ತಮೊದಲಿಗೆ ಸಮಸ್ಯೆಯ ಬುಡಕ್ಕೆ ಹೋಗಿ ನೋಡಬೇಕು. ಕಂಠೀರವ ಸ್ಟುಡಿಯೋದಲ್ಲೇ ವಿಷ್ಣು ಸಮಾಧಿ ನಿರ್ಮಿಸುವುದಕ್ಕೆ ಸರಕಾರ ಮುಂದಾಗಿತ್ತು. ಆದರೆ ಆಗ ಕುಟುಂಬವೇ ಅದನ್ನು ನಿರಾಕರಿಸಿತ್ತು. ಕಾರಣ ಇವತ್ತಿಗೂ ಗೊತ್ತಿಲ್ಲ, ರಾಜ್ ಸಮಾಧಿಯ ಬಳಿಯಲ್ಲಿ ವಿಷ್ಣು ಸಮಾಧಿ ಬೇಡ ಎಂಬ ಉದ್ದೇಶವಿತ್ತಾ? ವಿಷಯ ತಿಳಿಯದ ಅಭಿಮಾನಿಗಳು ಇಲ್ಲಿಯೂ ದೂಷಿಸಿದ್ದು ರಾಜ್ ಕುಟುಂಬವನ್ನು. ರಾಜ್ ಕುಟುಂಬ ವಿಷ್ಣು ಸಮಾಧಿಗೆ ಕಂಠೀರವದಲ್ಲಿ ಜಾಗ ಸಿಗದಂತೆ ಮಾಡಿತು ಎಂಬ ಕಥೆ ಕಟ್ಟಿ ಸಿಂಪಥಿ ಸೃಷ್ಟಿಸಿದ್ದಲ್ಲದೇ, ಇಬ್ಬರೂ ತೀರಿಕೊಂಡ ನಂತರವೂ ಇಬ್ಬರ ನಡುವಣ ಕಂದಕವನ್ನು ಹಾಗೇ ಉಳಿಸಲು ಪ್ರಯತ್ನಿಸಿದರು.

ಅಂದು ಕಂಠೀರವದಲ್ಲಿ ಸಮಾಧಿ/ಸ್ಮಾರಕ ನಿರ್ಮಾಣವಾಗಿಬಿಟ್ಟಿದ್ದರೆ ಸಮಸ್ಯೆಯೇ ಇರುತ್ತಿರಲಿಲ್ಲವಲ್ಲ. ಕಂಠೀರವ ಸ್ಟುಡಿಯೋ ಜಾಗದಲ್ಲಿ ಬೇಡ ಅಂದ ಮಾತ್ರಕ್ಕೆ ಅದಕ್ಕೆ ಪರ್ಯಾಯವಾಗಿ ಬಾಲಣ್ಣನ ಸ್ಟುಡಿಯೋವೇ ಯಾಕೆ ಚಿತಾಗಾರ ಆಗಬೇಕಿತ್ತು? ಬೇರೆ ಜಾಗವೇ ಇರಲಿಲ್ಲವೇ? ಕಂಠೀರವ ಸರಕಾರಿ ಸ್ವತ್ತು. ಆದರೆ ಅಭಿಮಾನ್ ಬಾಲಣ್ಣನ ಕುಟುಂಬದ ಸ್ವತ್ತು. ಯಾರು ತಾನೇ ತಮ್ಮ ಸ್ವಂತ ಜಾಗದಲ್ಲಿ ಅಂತಿಮ ಸಂಸ್ಕಾರ ಮಾಡೋಕೆ ಅವಕಾಶ ಕೊಡ್ತಾರೆ? ಹುಯಿಲೆಬ್ಬಿಸುತ್ತಿರುವ ಅಭಿಮಾನಿಗಳನ್ನೇ ಕೇಳ್ತೀನಿ- ಜನಪ್ರಿಯ ವ್ಯಕ್ತಿಯೊಬ್ಬ ಸತ್ತರೆ, ನಿಮ್ಮ ಸ್ವಂತ ಜಾಗದಲ್ಲಿ ಅವನ ಸಂಸ್ಕಾರ ಮಾಡಿ ಸಮಾಧಿ ನಿರ್ಮಿಸಲು ಒಪ್ಪುತ್ತೀರಾ? ಸ್ವಂತ ಜಾಗವನ್ನು ಯಾರು ಯಾಕೆ ಹೀಗೆ ಬಿಟ್ಟುಕೊಡಲು ಒಪ್ತಾರೆ? ಇಷ್ಟವಿಲ್ಲದಿದ್ದರೂ ಬಲವಂತಕ್ಕೆ ಯಾಕೆ ಮಾರುತ್ತಾರೆ? ಬಾಲಣ್ಣನ ಕುಟುಂಬದ ತಪ್ಪೇನಿದೆ ಇದರಲ್ಲಿ? ಸರಕಾರ ಬಾಲಣ್ಣನಿಗೆ ಈ ಜಾಗ ಕೊಟ್ಟದ್ದು ಸ್ಟುಡಿಯೋ ನಿರ್ಮಿಸೋದಕ್ಕೆ. ಅದರ ಹೊರತಾಗಿ ಬೇರೇನಾದರೂ ಕಟ್ಟಿದರೆ, ಸರಕಾರ ಜಾಗವನ್ನು ಮುಟ್ಟುಗೋಲು ಹಾಕಿಕೊಂಡು ವಾಪಸ್ ಪಡೆಯಬೇಕು ಎಂದು ಕೆಲವರು ಆಗ್ರಹ ವ್ಯಕ್ತಪಡಿಸುತ್ತಿದ್ದಾರೆ. ಹಾಗೇನಾದರೂ ಇದ್ದಿದ್ರೆ ಸರಕಾರ ಇಷ್ಟು ದಿನ ಸುಮ್ಮನೆ ಇರ್ತಾ ಇರ್ಲಿಲ್ಲ ಅನ್ನೋ ಸಾಮಾನ್ಯ ಜ್ಞಾನ ಅಭಿಮಾನಿಗಳಿಗೆ ಇರಬೇಕಿತ್ತು. ಬಾಲಣ್ಣ ಸ್ಟುಡಿಯೋ ನಿರ್ಮಿಸಲು ಹರಸಾಹಸ ಪಟ್ಟಾಗ ಯಾರೊಬ್ಬರೂ ಹೆಗಲು ಕೊಡಲಿಲ್ಲ. ಈಗ ಅವರ ಮಕ್ಕಳು ಕೂಡ ಬಾಲಣ್ಣನ ರೀತಿಯಲ್ಲೇ ಒದ್ದಾಡಿ ಸಾಯಬೇಕಾ? ನಾಳೆ ಅಲ್ಲೊಂದು ಮಾಲ್ ತಲೆಯೆತ್ತಿ ನಿಂತರೆ, ಅದರಲ್ಲೊಂದು ಮಲ್ಟಿಪ್ಲೆಕ್ಸ್ ಬರಬಹುದು. ಅದೂ ಸಿನಿಮಾಗೆ ಪೂರಕವೇ ಅಲ್ಲವೇ? ಬಾಲಣ್ಣನ ಮಕ್ಕಳು ಉದ್ಧಾರವಾಗಬಾರದೇ?

ಈಗಾಗಲೇ ಕುಟುಂಬದ ಇಚ್ಛೆ ಅನುಸಾರ, ಸರಕಾರ ಮೈಸೂರಿನಲ್ಲಿ ಸ್ಮಾರಕ ನಿರ್ಮಿಸಿಕೊಟ್ಟಿದೆ. ಆದರೂ ಬೆಂಗಳೂರಿನಲ್ಲೂ ಬೇಕು ಎಂಬ ಹಟವೇಕೆ? ಇದೇ ರೀತಿ ಅಂಬರೀಶ್, ರಾಜ್, ಪುನೀತ್, ಜಯಂತಿ, ಸರೋಜಾದೇವಿ, ಲೀಲಾವತಿ ಎಲ್ಲರ ಅಭಿಮಾನಿಗಳೂ ತಮ್ಮತಮ್ಮ ಡಿಮ್ಯಾಂಡ್ ಮುಂದಿಡತೊಡಗಿದರೆ? ಎಷ್ಟು ಕಡೆ ಅಂತ ಸ್ಮಾರಕ ಸಮಾಧಿ ನಿರ್ಮಿಸುತ್ತಾ ಹೋಗುವುದು? ಪ್ರಾಕ್ಟಿಕಲ್ ಆಗಿ ಯೋಚಿಸಿದರೆ, ನಟರು ಸಂಭಾವನೆ ಪಡೆದು ನಟಿಸುತ್ತಾರೆ. ನಾವು ಹಣ ಕೊಟ್ಟು ಟಿಕೆಟ್ ಪಡೆದು ಸಿನಿಮಾ ನೋಡ್ತೀವಿ. ಅಲ್ಲಿಗೆ ಇದೊಂದು ಶುದ್ಧ ವ್ಯವಹಾರದ ಕ್ಷೇತ್ರ. ಸಿನಿಮಾದ ನಟನೆಗೆ ಸಿಗುವ ಬಿರುದು, ಪ್ರಶಸ್ತಿ, ಅಭಿಮಾನ ಇವೆಲ್ಲವೂ ಬೋನಸ್. ಸಿನಿಮಾ ಮೂಲಕ ಸಿಕ್ಕಿರೋ ಜನಪ್ರಿಯತೆ, ಸಿನಿಮಾ ಮೂಲಕ ಸಮಾಜಕ್ಕೆ ನೀಡಿದ ಪಾಸಿಟಿವ್ ಸಂದೇಶ ಇವೆಲ್ಲವನ್ನೂ ಪರಿಗಣಿಸಿ ಗೌರವಿಸುವುದು ಸ್ವಾಗತಾರ್ಹ. ಆದರೆ ವಿವೇಚನಾರಹಿತ, ಅಹಮಿಕೆಯ ಅಭಿಮಾನ ಖಂಡನಾರ್ಹ. ಸರಕಾರ ಮೈಸೂರಿನಲ್ಲಿ ಸ್ಮಾರಕ ನಿರ್ಮಿಸುವ ಮೂಲಕ ತನ್ನ ಗೌರವ ಸಲ್ಲಿಸಿದೆ, ಜವಾಬ್ದಾರಿಯನ್ನೂ ಮುಗಿಸಿದೆ. ಅಂತೆಯೇ ನ್ಯಾಯಾಲಯದ ಆದೇಶ ಬಾಲಣ್ಣನ ಕುಟುಂಬದ ಪರವಾಗಿದೆ. ಇದರ ಮೇಲೆ ಅಭಿಮಾನಿಗಳು ತಮ್ಮ ಅಭಿಮಾನ ಮೆರೆಯುವುದಾದರೆ, ಸ್ವಂತ ಹಣದಲ್ಲಿ ಅಥವಾ ದೇಣಿಗೆ ಸಂಗ್ರಹ ಮಾಡಿ ಬೆಂಗಳೂರಿನಲ್ಲಿ ಜಾಗ ಖರೀದಿಸಿ, ಅದ್ಭುತ ಸ್ಮಾರಕ ನಿರ್ಮಿಸಲಿ. ಅದರ ಮೂಲಕ ಸಮಾಜಮುಖಿ ಕೆಲಸಗಳನ್ನು ಮಾಡಲಿ. ಅದು ವಿಷ್ಣುವಿಗೆ ಅಭಿಮಾನಿಗಳು ನೀಡಬಹುದಾದ ಸ್ವಾಭಿಮಾನದ ಕೊಡುಗೆ. ಕುಟುಂಬಕ್ಕಿಂತ ಅಭಿಮಾನಿಗಳು ಹೆಚ್ಚು ಅಂತ ಹೊರನೋಟ ಹೇಳಬಹುದು. ಆದರೆ ಕುಟುಂಬವೇ ಅಂತಿಮಸತ್ಯ. ಇದನ್ನು ಅಭಿಮಾನಿಗಳು ಅರ್ಥ ಮಾಡಿಕೊಳ್ಳಲಿ. ಸಾಕು ವಿಷ್ಣು ಆತ್ಮ ನರಳಿದ್ದು. ಇನ್ನಾದರೂ ನೆಮ್ಮದಿಯಾಗಿರಲು ಬಿಡಿ. ಸಮಾಧಿ, ಸ್ಮಾರಕ ನಿಮ್ಮ 'ಇಗೋ' ತಣಿಸುವ ಸಾಧನಗಳಾಗದಿರಲಿ. ಖುದ್ದು ಸಂತನಂತೆ ತಮ್ಮ ಕೊನೆದಿನಗಳನ್ನು ಬದುಕಿದ ವಿಷ್ಣುಗೆ ಇದ್ಯಾವುದೂ ಬೇಕಿರಲಿಲ್ಲ. ಅವರೇ ವಿರಕ್ತಿ ತೋರಿದ ವಿಷಯಕ್ಕೆ ನೀವ್ಯಾಕೆ ಬಡಿದಾಡಿ, ಅವರ ಮನ ನೋಯಿಸುತ್ತೀರಿ? ನಾನೂ ವಿಷ್ಣುವರ್ಧನ್ ಚಿತ್ರಗಳ ಅಭಿಮಾನಿ. ವ್ಯಕ್ತಿತ್ವದ ಅಭಿಮಾನಿ. ಆದರೂ ಇಂದು ನಾನಾಡಿದ ಮಾತುಗಳು ಅಭಿಮಾನಿಗಳಿಗೆ ಹಿಡಿಸಿರುವುದಿಲ್ಲ, ದಟ್ಸ್ ಓಕೆ. ಮುಂದೆಂದೋ ಸರಿ ಅನಿಸಬಹುದು.

## ಭಟ್ಟರ್ ಸ್ಕಾಚ್

- **ಶ್ರೀಶ ಆಚಾರ್ಯ, ಬೆಂಗಳೂರು**
ಭಟ್ರೇ, ಪ್ರಜ್ವಲ್ ರೇವಣ್ಣಗೆ ಜೀವಾವಧಿ ಶಿಕ್ಷೆ ನೀಡಿದ ಸುದ್ದಿಯನ್ನು ಆ ಟಿವಿ ನಿರೂಪಕ ಹಾಗೇಕೆ ಜೋರಾಗಿ ಓದಿದ?
– **ಅನಸ್ತೇಶಿಯಾ ಕೊಡದೇ ಫೈಲ್ಸ್ ಆಪರೇಷನ್ ಮಾಡಿದರೆ ಹಾಗೆ ಅರಚುತ್ತಾರೆ!**

- **ಚಂದ್ರಶೇಖರ ನಾಗೂರು, (ಇಮೇಲ್ ಮೂಲಕ)**
ಭಟ್ರೇ, ಮೂಲವ್ಯಾಧಿಗೆ ಒಳ್ಳೆಯ ಹೆಸರನ್ನೇಕೆ ಇಟ್ಟಿಲ್ಲ?
– **ಶಿಷ್ಟವಾಗಿ 'ಬುಡಕಟ್ಟು' ಸಮಸ್ಯೆ ಎನ್ನಬಹುದಿತ್ತು ಅಲ್ವಾ?!**

- **ವಸಂತ ಹೆಗಡೆ, ಶಿರಸಿ**
ಭಟ್ರೇ, ನನ್ನ ಹೆಂಡತಿ ಸದಾ ರೀಲ್ಸ್ ನೋಡ್ತಾನೆ ಇರ್ತಾಳಲ್ಲ?
– **ರೀಲ್ಸ್ ಮಾಡ್ತಾನೆ ಇರ್ತಾಳೆ ಅನ್ನೋದಕ್ಕಿಂತ ಅದೇ ವಾಸಿ!**

- **ಭವಾನಿ ಶರ್ಮ, ಹೊನ್ನಾವರ**
ಭಟ್ರೇ, ಹಠಾತ್ ಲೈಮ್‌ಲೈಟ್‌ಗೆ ಬರಬೇಕಂದ್ರೆ ಏನು ಮಾಡಬೇಕು?
– **ಮೋದಿಯವರನ್ನು ಬೈಯಬೇಕು!**

- **ಬಿ.ಕುಮಾರ, (ಇಮೇಲ್ ಮೂಲಕ)**
ಭಟ್ರೇ, ಪುಸ್ತಕ ಹಿಡಿದ್ರೆ ಸಾಕು ನಿದ್ದೆ ಬರುತ್ತದಲ್ಲ?
– **ಬಾಯ್ಮುಚ್ಚು... ಮೊಯಿಲಿ ಮಹಾಕಾವ್ಯ ಅಂದ್ರೆ ಏನಂತ ಭಾವಿಸಿದ್ದೀಯಾ?!**

- **ಕಿರಣ್ ಶೆಟ್ಟಿ, (ಇಮೇಲ್ ಮೂಲಕ)**
ಭಟ್ರೇ, ಬೆಂಗಳೂರು ಟ್ರಾಫಿಕ್‌ಗೆ ತಲೆಗೂದಲು ಉದುರುತ್ತದಂತೆ?
– **ತಲೆಯೇ ಉದುರದಿದ್ದರೆ ಸಾಕು!**

- **ಶ್ರೀರಾಮ ಕರುಣಾ, ಜೀವನಭೀಮಾನಗರ**
ಭಟ್ರೇ, ಸಿದ್ದರಾಮಯ್ಯನವರು ಈಗ ನಿದ್ದೆ ಮಾಡುವುದನ್ನು ಕಮ್ಮಿ ಮಾಡಿದ್ದಾರಂತೆ?
– **ಹಲವರ ನಿದ್ದೆಗೆಡಿಸುತ್ತಿದ್ದಾರಂತೆ!**

- **ಶೇಖರಪ್ಪ ಹಲವಾಡಿ, ಕನಕಪುರ**
ಭಟ್ರೇ, ಮಕ್ಕಳನ್ನು ಸಾಕುವುದು ಹೇಗೆ?
– **ಅದು ತಂದೆ-ತಾಯಿಯರಿಗೆ ಗೊತ್ತಿರುವುದಿಲ್ಲ, ನೆಂಟರು ಮತ್ತು ನೆರೆಹೊರೆಯವರಿಗೆ ಗೊತ್ತಿರುತ್ತದೆ!**

- **ಸುರೇಶ ರಾವ್, ಉಡುಪಿ**
ಭಟ್ರೇ, ನೀಟ್ ಆಗಿರಲು ಖರ್ಚಾಗುತ್ತದಾ?
– **ಗಲೀಜಾದಾಗಲೇ ಖರ್ಚಾಗೋದು!**

- **ಹರಿ ಓಂ ಶಾಸ್ತ್ರೀ, ಶಂಕರಪುರ**
ಕಟ್ಟಕಡೆಗೂ ಬ್ಯಾಟಿಂಗ್ ಲಯ ಕಂಡುಕೊಂಡ ಕರುಣ್ ನಾಯರ್ ಕರ್ನಾಟಕ ತಂಡಕ್ಕೆ ವಾಪಸ್ಸಾದರೆ, ಕೆಎಸ್‌ಸಿಎ ಏನೆಂದು ಹಾಡಿ ಬರಮಾಡಿಕೊಳ್ಳಬಹುದು?
– **'ಕರುಣಾ'ಳು ಬಾ ಬೆಳಕೆ.... ಕೈ ಹಿಡಿದು ನಡೆಸೆಮ್ಮನು!' ಎನ್ನಬಹುದು!**

# ಈ ದೇಶಗಳು ತೆರೆದುಕೊಂಡ ರೀತಿ ಅಚ್ಚರಿದಾಯಕ

**ಯುರೋಪಿನ ಒಂದೊಂದು ದೇಶವೂ ಜಗತ್ತಿನ ಬೇರೆ ಬೇರೆ ದೇಶಗಳನ್ನು ವಸಾಹತು ಮಾಡಿಕೊಂಡು ಲೂಟಿ ಮಾಡಿರುವುದು ಜಗತ್ತಿಗೇ ತಿಳಿದಿರುವ ಇತಿಹಾಸ. ರುವಾಂಡಾ ದೇಶವನ್ನು ಬೆಲ್ಜಿಯಂ ವಸಾಹತು ಮಾಡಿಕೊಂಡಿದ್ದ ಕಾಲಘಟ್ಟದಲ್ಲಿ ಮೈನಾರಿಟಿ ಟುಟ್ಸಿಗಳನ್ನು ಸರಕಾರದಲ್ಲಿ ಸೇರಿಸಿಕೊಂಡು ರುವಾಂಡಾವನ್ನು ನಿಯಂತ್ರದಲ್ಲಿಟ್ಟುಕೊಂಡಿದ್ದರು. ಸರಕಾರದ, ಅಧಿಕಾರದ ಎಲ್ಲಾ ಹಂತದಲ್ಲಿ ಟುಟ್ಸಿಗಳ ಸಂಖ್ಯೆ ಹೆಚ್ಚಾಗಿತ್ತು. ಇದು ಮೆಜಾರಿಟಿ ಹುಟುಗಳಲ್ಲಿನ ಅಸಮಾಧಾನಕ್ಕೆ ಮೂಲ ಕಾರಣ. 1922ರಿಂದ 1962ರವರೆಗಿನ ಬೆಲ್ಜಿಯಂ ಆಳ್ವಿಕೆಯಲ್ಲಿ ಬಿತ್ತಿದ ವಿಷಬೀಜ 1994ರಲ್ಲಿ ಮಾರಣ ಹೋಮಕ್ಕೆ ಕಾರಣವಾಯಿತು.**

ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ
vveditoped@gmail.com
mookanahalli@gmail.com

ರುವಾಂಡಾ (RWANDA) ಎನ್ನುವುದು ಮಧ್ಯ-ಪೂರ್ವ ಆಫ್ರಿಕಾದಲ್ಲಿನ ಒಂದು ದೇಶ. ಇದೊಂದು 'ಲ್ಯಾಂಡ್-ಲಾಕ್ಡ್' ದೇಶ. ಅಂದರೆ ಇದಕ್ಕೆ ನೀರಿನ ದಾರಿಯಿಲ್ಲ, ಇತರ ದೇಶಗಳಿಂದ ಸುತ್ತುವರಿದ ದೇಶವಾಗಿದೆ. ಉಗಾಂಡಾ, ಬುರುಂದಿ, ಡೆಮಾಕ್ರಟಿಕ್ ರಿಪಬ್ಲಿಕ್ ಆಫ್ ಕಾಂಗೋ ಮತ್ತು ತಾಂಜಾನಿಯ ದೇಶಗಳನ್ನ ಅಕ್ಕಪಕ್ಕದ ದೇಶಗಳನ್ನಾಗಿ ಇದು ಪಡೆದಿದೆ. 2023ರ ಜನಗಣತಿ ಪ್ರಕಾರ ಇಲ್ಲಿನ ಜನಸಂಖ್ಯೆ ಒಂದೂವರೆ ಕೋಟಿಗೂ ಕಡಿಮೆ. ರುವಾಂಡಾ ದೇಶದ ಇತಿಹಾಸ ಸದಾ ರಕ್ತದಿಂದ ಕೂಡಿದೆ. ಎರಡನೇ ಮಹಾಯುದ್ಧಕ್ಕೆ ಮೊದಲಿನಿಂದಲೂ ಇಲ್ಲಿನ ಟುಟ್ಸಿ ಮತ್ತು ಹುಟು ಎನ್ನುವ ಎರಡು ಜನಾಂಗೀಯ ಕಲಹವನ್ನ ನಾವು ಕಾಣಬಹುದು. ಟುಟ್ಸಿ ಎನ್ನುವುದು ಮೈನಾರಿಟಿ ಜನಾಂಗ. ಹುಟು ಎನ್ನುವ ಜನಾಂಗ ಇಲ್ಲಿನ ಮೆಜಾರಿಟಿ. ಒಂದು ಕೋಮಿನವರನ್ನ ಕಂಡರೆ ಇನ್ನೊಂದು ಕೋಮಿನವರಿಗೆ ಆಗುವುದಿಲ್ಲ. ಆಶ್ಚರ್ಯವೇನು ಗೊತ್ತೇ? ಎರಡೂ ಜನಾಂಗದ ನಂಬಿಕೆ, ಧರ್ಮಶ್ರದ್ಧೆ ಮಾತ್ರ ಒಂದೇ! ಅನಿಮಿಸಮ್ ಮತ್ತು ಕ್ರಿಶ್ಚಿಯಾನಿಟಿ ಎರಡೂ ಟ್ರೈಬ್ ಅನುಸರಿಸುವ ಧರ್ಮ. ಹುಟು ಟ್ರೈಬ್‌ನವರು ಧವಸ-ಧಾನ್ಯಗಳನ್ನ ಬೆಳೆಯುತ್ತಿದ್ದರು. ಟುಟ್ಸಿಗಳು ಮೂಲತಃ ಪಶುಸಾಕಣಿಕೆಯಲ್ಲಿ ತೊಡಗಿಕೊಂಡವರು. ಆದರೂ ಒಬ್ಬರನ್ನ ಕಂಡರೆ ಒಬ್ಬರಿಗೆ ಆಗುವುದಿಲ್ಲ. ಇದಕ್ಕೆ ಕಾರಣವೇನಿರಬಹುದು?

ಯುರೋಪಿನ ಒಂದೊಂದು ದೇಶವೂ ಜಗತ್ತಿನ ಬೇರೆ ಬೇರೆ ದೇಶಗಳನ್ನ ವಸಾಹತು ಮಾಡಿಕೊಂಡು ಲೂಟಿ ಮಾಡಿರುವುದು ಜಗತ್ತಿಗೇ ತಿಳಿದಿರುವ ಇತಿಹಾಸ. ಬೆಲ್ಜಿಯಂ ದೇಶವು ರುವಾಂಡಾ ದೇಶವನ್ನ ವಸಾಹತು ಮಾಡಿಕೊಂಡಿದ್ದ ಕಾಲಘಟ್ಟದಲ್ಲಿ ಮೈನಾರಿಟಿ ಟುಟ್ಸಿ ಗಳನ್ನ ಸರಕಾರದಲ್ಲಿ ಸೇರಿಸಿಕೊಂಡು ರುವಾಂಡಾ ದೇಶವನ್ನ ನಿಯಂತ್ರದಲ್ಲಿಟ್ಟುಕೊಂಡಿದ್ದರು. ಸರಕಾರದ, ಅಧಿಕಾರದ ಎಲ್ಲಾ ಹಂತದಲ್ಲಿ ಟುಟ್ಸಿಗಳ ಸಂಖ್ಯೆ ಹೆಚ್ಚಾಗಿತ್ತು. ಇದು ಮೆಜಾರಿಟಿ ಹುಟುಗಳಲ್ಲಿನ ಅಸಮಾಧಾನಕ್ಕೆ ಮೂಲ ಕಾರಣ. 1922ರಿಂದ 1962ರವರೆಗಿನ ಬೆಲ್ಜಿಯಂ ಆಳ್ವಿಕೆಯಲ್ಲಿ ಬಿತ್ತಿದ ವಿಷಬೀಜ 1994ರಲ್ಲಿ ಮಾರಣ ಹೋಮಕ್ಕೆ ಕಾರಣವಾಗುತ್ತದೆ.

6ನೇ ಏಪ್ರಿಲ್ 1994, ಅಂದಿನ ರುವಾಂಡಾ ಪ್ರೆಸಿಡೆಂಟ್ ಹಾಬ್ಯಾರಿಮಾನ ಅವರು ಪಯಣಿಸುತ್ತಿದ್ದ ವಿಮಾನವನ್ನ ಮಿಸೈಲ್ ಮೂಲಕ ಹೊಡೆದುರುಳಿಸಲಾಗುತ್ತದೆ. ಆತ ಹುಟು ಸಮುದಾಯಕ್ಕೆ ಸೇರಿದವರಾಗಿರುತ್ತಾರೆ. ಇಂದಿಗೂ ಮಿಸೈಲ್ ಹಾರಿಸಿದವರು ಯಾರು ಎನ್ನುವುದರ ಬಗ್ಗೆ ಅನೇಕ ಊಹಾಪೋಹಗಳಿವೆ. ಆದರೆ ಹುಟು ಸಮುದಾಯದವರು ಇದು ಟುಟ್ಸಿಗಳ ಕೆಲಸ ಎಂದು ನಿರ್ಧಾರಕ್ಕೆ ಬರುತ್ತಾರೆ. ಈ ಹಿಂದೆ ಉಗಾಂಡದಲ್ಲಿ ಕುಳಿತು ಒಂದಷ್ಟು ಟುಟ್ಸಿಗಳು ರುವಾಂಡಾ ಪೇಟ್ರಿಯಾಟಿಕ್ ಫ್ರಂಟ್- RPF ಕಟ್ಟಿಕೊಂಡಿರುತ್ತಾರೆ. ಆಗಾಗ್ಗೆ ಇವರಿಂದ ದಾಳಿಗಳು ಕೂಡ ಆಗಿರುತ್ತವೆ.

ಕಿಗಾಲಿ ಎನ್ನುವುದು ರುವಾಂಡಾ ರಾಜಧಾನಿ. ಪ್ರೆಸಿಡೆಂಟ್‌ರನ್ನ ಹೊಡೆದುರುಳಿಸಿದಾಗ ಕಿಗಾಲಿಯಲ್ಲಿ ಶುರುವಾದ ಮಾರಣಹೋಮ ದೇಶದ ಉದ್ದಗಲಕ್ಕೂ ಬಹುಬೇಗ ಹರಡುತ್ತದೆ. ಮುಂದಿನ ನೂರು ದಿನ ದೇಶದ ಉದ್ದಗಲಕ್ಕೂ ಒಬ್ಬ ಟುಟ್ಸಿಯನ್ನ ಕೂಡ ಉಳಿಸಬಾರದು ಎನ್ನುವ ನಿರ್ಧಾರಕ್ಕೆ ಹುಟು ಸಮುದಾಯ ಬರುತ್ತದೆ. ಮಾರಣಹೋಮ ನೂರು ದಿನ ನಡೆಯುತ್ತದೆ. ದೇಶದ ರೇಡಿಯೋದಲ್ಲಿ ಎಲ್ಲಿ ಟುಟ್ಸಿಗಳು ಇದ್ದಾರೆ ಎನ್ನುವುದನ್ನ ಹುಟುಗಳಿಗೆ ಪ್ರಸಾರ ಮಾಡಲಾಗುತ್ತದೆ. ಕಿಗಾಲಿಯಲ್ಲಿ ಟುಟ್ಸಿಗಳು ಇದ್ದ ಕಾಲೋನಿಗಳಲ್ಲಿ ಹೆಣ ಎತ್ತಲು ಕೂಡ ಜನರಿಲ್ಲವಾಗುತ್ತಾರೆ. ಪ್ರತಿಯೊಬ್ಬರನ್ನ ಹುಡುಕಿ ಕೊಲ್ಲಲಾಗುತ್ತದೆ. ಇಡೀ ನಗರ ವಾರದಲ್ಲಿ ಹೆಣಗಳ ವಾಸನೆಯಿಂದ ತುಂಬಿ ಹೋಗಿತ್ತಂತೆ!

ಅಂದಿಗೆ 70 ಲಕ್ಷ ಜನಸಂಖ್ಯೆಯ ರುವಾಂಡಾದಲ್ಲಿ 85 ಪ್ರತಿಶತ ಹುಟುಗಳು, 14 ಪ್ರತಿಶತ ಟುಟ್ಸಿಗಳು ಮತ್ತು 1 ಪ್ರತಿಶತ 'ತ್ವಾ' ಎನ್ನುವ ಜನರಿದ್ದರು. ಅಂದರೆ ಟುಟ್ಸಿಗಳ ಜನಸಂಖ್ಯೆ ಹತ್ತಿರತ್ತಿರ 1 ಮಿಲಿಯನ್- ಹತ್ತು ಲಕ್ಷ. ಅಂದಾಜಿನ ಪ್ರಕಾರ 100 ದಿನದಲ್ಲಿ 8 ಲಕ್ಷ ಟುಟ್ಸಿಗಳನ್ನ ಕೊಲ್ಲಲಾಗುತದೆ. ಕೆಲವು ಸಮೀಕ್ಷೆಗಳ ಪ್ರಕಾರ ಇದು 9 ಲಕ್ಷವಿದೆ. ಅಂದರೆ ಆಲ್ಮೋಸ್ಟ್ ಎಲ್ಲರನ್ನೂ ಕೊಂದಂತೆ. ಇವುಗಳ ನಡುವೆ ಸಾಕಷ್ಟು ಹುಟುಗಳು ಕೂಡ ಟುಟ್ಸಿಗಳನ್ನ ರಕ್ಷಿಸಲು ಹೋಗಿ ಸತ್ತಿದ್ದಾರೆ. ಇಂಥ ಘಟನೆಗಳು ನಡೆದಾಗ ಸುಲಭವಾಗಿ ತೊಂದರೆಗೆ ಸಿಲುಕುವವರು ಹೆಂಗಸರು ಮತ್ತು ಮಕ್ಕಳು. ಐದು ಲಕ್ಷ ಹೆಣ್ಣು ಮಕ್ಕಳ ಮಾನಹರಣವಾಗಿದೆ ಎನ್ನುವುದು ಚರಿತ್ರೆಯಲ್ಲಿ ದಾಖಲಾಗಿದೆ.

ಇದೇನೂ 18 ಶತಮಾನದಲ್ಲಿ ಆಗಿರುವ ಘಟನೆಯಲ್ಲ, 1994ರಲ್ಲಿ ನಡೆದ ಘಟನೆ. ಇಡೀ ವಿಶ್ವ ಇದನ್ನ ನೋಡುತ್ತಾ ಸುಮ್ಮನಿತ್ತು. 100 ದಿನದಲ್ಲಿ ಯಾವ ದೇಶವೂ ಇದನ್ನ ತಡೆಯುವ ಪ್ರಯತ್ನ ಮಾಡಲಿಲ್ಲ.

ಶ್ರೇಷ್ಠ, ನಿಕೃಷ್ಟ ಎನ್ನುವ ಮನೋಭಾವ ಎಷ್ಟೆಲ್ಲಾ ಅವಘಡಗಳಿಗೆ ಕಾರಣವಾಗುತ್ತದೆ ಅಂತ ಮನಸ್ಸು ಪಿಚ್ಚೆನ್ನಿಸಿತು. ಇವತ್ತಿಗೆ ರುವಾಂಡಾ ಆಫ್ರಿಕಾದ ನೆದರ್ಲ್ಯಾಂಡ್ ಎನ್ನಿಸಿಕೊಂಡಿದೆ. ಟೂರಿಸಂ ಚೆನ್ನಾಗಿದೆ. ಹುಟು, ಟುಟ್ಸಿಗಳು ಮತ್ತೆ ಸಹಬಾಳ್ವೆ ನಡೆಸುತ್ತಿದ್ದಾರೆ. ಆದರೂ ಮನುಷ್ಯನ ಮನಸ್ಸು ಇಷ್ಟೇ ಎಂದು ಹೇಳಲಾಗದು. ಇಲ್ಲಿನ ಜನಾಂಗೀಯ ಸಮಸ್ಯೆ ಸದ್ಯಕ್ಕೆ ಬೂದಿ ಮುಚ್ಚಿದ ಕೆಂಡ.

ನಾವು ಮನುಷ್ಯರು ಹೀಗೇಕೆ? ಸರಿ ತಪ್ಪುಗಳನ್ನ ವಿವೇಚನೆಯಿಂದ ಮಾತನಾಡಿ ಪರಿಹರಿಸಿಕೊಳ್ಳಲು ನಮಗೇಕೆ ಬರುವುದಿಲ್ಲ? ಎಲ್ಲಕ್ಕೂ ಹೊಡೆದಾಟ, ಸಾವು ಪರಿಹಾರವೇ? ಜಗತ್ತು ಮಾತ್ರ ಇತಿಹಾಸದಿಂದ ಪಾಠ ಕಲಿಯುವ ಸೂಚನೆ ಕಾಣುತ್ತಿಲ್ಲ. ಇವತ್ತಿನ ಭಾರತದಲ್ಲಿನ ಸನ್ನಿವೇಶಗಳನ್ನು ಕಂಡಾಗ ಮನಸ್ಸು ತಲ್ಲಣಗೊಳ್ಳುವುದು ಸುಳ್ಳಲ್ಲ. ಈ ನೆಲ ಆ ರೀತಿಯ ನೆತ್ತರು ನೋಡುವುದು ಮಾತ್ರ ಬೇಡ.

ಸೌದಿ ಅರೇಬಿಯಾ ಎನ್ನುವ ಕಟ್ಟರ್ ಮುಸ್ಲಿಂ ದೇಶ ಬದಲಾಗುತ್ತಿದೆ. ಅಲ್ಲಿನ ಕ್ರೌನ್ ಪ್ರಿನ್ಸ್ ಮೊಹಮದ್ ಬಿನ್ ಸಲ್ಮಾನ್ ಕನಸು ಸೌದಿಯನ್ನ ಬದಲಾಯಿಸುವುದು. ಅದರಲ್ಲಿ ಇಂದಿಗೆ 'ಕಚ್ಚಾತೈಲಾಧಾರಿತ ಇಕಾನಮಿ' ಎನ್ನುವ ಹಣೆಪಟ್ಟಿಯನ್ನ ತೊರೆದು ಹೊರಬರುವುದು ಪ್ರಮುಖವಾಗಿದೆ. ಎರಡನೆಯದಾಗಿ ಇಡೀ ಇಸ್ಲಾಂ ಜಗತ್ತಿಗೆ ಹೃದಯದ ಸ್ಥಾನವನ್ನ ಅಲಂಕರಿಸುವುದು, ಮೂರನೆಯದಾಗಿ ಜಾಗತಿಕ ಹೂಡಿಕೆದಾರರ ಪವರ್ ಹೌಸ್ ಎನ್ನಿಸಿಕೊಳ್ಳುವುದು. ಆಫ್ರೋ-ಯುರೇಷ್ಯಾ ಬೆಸೆಯುವ ಕೊಂಡಿಯಂತೆ ಕೆಲಸ ನಿರ್ವಹಿಸುವುದು ಮತ್ತು ಜಗತ್ತಿನ ಅತ್ಯುತ್ತಮ ಟೂರಿಸ್ಟ್ ಡೆಸ್ಟಿನೇಷನ್ ಆಗಿ ದೇಶವನ್ನ ಬದಲಾಯಿಸುವುದು ಪ್ರಮುಖವಾಗಿವೆ. ಸೌದಿ ತನ್ನ ಕಟ್ಟರ್ ನಿರ್ಬಂಧಗಳಿಂದ ಹೊರಬರುತ್ತಿದೆ. ಅದು ಜಗತ್ತಿಗೆ ತನ್ನನ್ನ ತಾನು ತೆರೆದುಕೊಳ್ಳುತ್ತಿದೆ. ಈ ಬದಲಾವಣೆಗೆ ಕಾರಣವೇನು? ಸೌದಿಯ ಕಣ್ಣಿಗೆ ತನಗಿಂತ ಎಲ್ಲಾ ತರಹದಲ್ಲೂ ಕಡಿಮೆ ಎನ್ನಿಸುವ ದುಬೈ ಮತ್ತು ಕತಾರ್ ವಿಶ್ವದಲ್ಲಿ ಪಡೆದುಕೊಂಡಿರುವ ಸ್ಥಾನ ಹುಬ್ಬೇರುವಂತೆ ಮಾಡಿದೆ. ಸ್ವಲ್ಪ ಪ್ರಯತ್ನದಿಂದ ಜಾಗತಿಕವಾಗಿ ಆ ಎರಡೂ ದೇಶಗಳಿಗಿಂತ ತಾನು ಪ್ರಬಲನಾಗಬಹುದು ಎನ್ನುವ ಜ್ಞಾನೋದಯ ಅದಕ್ಕಾಗಿದೆ. ಜಾಗತಿಕವಾಗಿ ಪೂರ್ಣ ಇಸ್ಲಾಂ ಜಗತ್ತಿಗೆ ನಾಯಕನಾಗಬೇಕು ಎನ್ನುವ ಆಸೆ ಸೌದಿಯಲ್ಲಿ ಚಿಗುರಿದೆ. ಇಂಥ ಬದಲಾವಣೆ 100 ಪ್ರತಿಶತ ಇಸ್ಲಾಮಿಕ್ ಆಚರಣೆಯಿಂದ ಆಗುವುದಲ್ಲ ಎನ್ನುವುದು ಕೂಡ ಅದಕ್ಕೆ ಗೊತ್ತಾಗಿದೆ. ಮೆಕ್ಕಾ ಮತ್ತು ಮದೀನಾದಂಥ ಅತ್ಯಂತ ಪವಿತ್ರ ಸ್ಥಳ ಮತ್ತು ಒಂದಷ್ಟು ಕಿಲೋಮೀಟರ್ ಜಾಗವನ್ನ ಮುಸ್ಲಿಮೇತರರು ಪ್ರವೇಶಿಸುವಂತಿಲ್ಲ ಎನ್ನುವುದನ್ನ ಕಡ್ಡಾಯ ಮಾಡಿ ಉಳಿದ ಕಡೆಯೆಲ್ಲಾ ಎಲ್ಲರೂ ಸಂಚರಿಸಬಹುದು ಎನ್ನುವ ಮಟ್ಟಿಗೆ ಸೌದಿ ಬದಲಾಗಿದೆ, ಬದಲಾಗುತ್ತಿದೆ.




ಇನ್ನೊಂದು ಕಾರಣ ಜಗತ್ತು ಸದ್ದಿಲ್ಲದೇ ಕಚ್ಚಾತೈಲದ ಮೇಲಿನ ಅವಲಂಬನೆಯನ್ನ ನಿಧಾನವಾಗಿ ಕಡಿಮೆ ಮಾಡಿಕೊಳ್ಳುತ್ತಿದೆ. ಪರ್ಯಾಯ ಇಂಧನ ಮೂಲಕ್ಕೆ ಜಗತ್ತು ತೆರೆದುಕೊಳ್ಳುತ್ತಿದೆ. ಮಿಥೇನ್, ಇಲೆಕ್ಟ್ರಿಕ್, ಹೈಡ್ರೋಜನ್ ಹೀಗೆ ಬೇರೆ ಬೇರೆ ಇಂಧನ ಮೂಲಗಳನ್ನ ಜಗತ್ತು ಅಪ್ಪಿಕೊಳ್ಳುತ್ತಿದೆ. ಸಹಜವಾಗೇ ಇನ್ನೊಂದು ದಶಕದಲ್ಲಿ ಜಗತ್ತು ಇಂದಿನ ಕಚ್ಚಾತೈಲದ ಮೇಲಿನ ಅವಲಂಬನೆಯನ್ನ ಬಹಳಷ್ಟು ಕಡಿಮೆ ಮಾಡಿಕೊಳ್ಳುತ್ತದೆ. ಜಾಗತಿಕ ಆಟದಲ್ಲಿ ಸೌದಿಯ ತಾಕತ್ತು ಖಂಡಿತ ಕುಸಿಯುತ್ತದೆ. ಜಗತ್ತಿನಲ್ಲಿ ತನ್ನ ಸ್ಥಾನವನ್ನ ಉಳಿಸಿಕೊಳ್ಳುವುದು ಮಾತ್ರವಲ್ಲ, ಇನ್ನಷ್ಟು ಬಲವನ್ನ ಹೆಚ್ಚಿಸಿಕೊಳ್ಳುವುದು ಸೌದಿಗೆ ಇಂದು ಆಯ್ಕೆಯಾಗಿ ಉಳಿದಿಲ್ಲ, ಅದು ಮಾಡಲೇಬೇಕಾದ ಕೆಲಸವಾಗಿದೆ.

ಸರಿ, ಇಷ್ಟೆಲ್ಲಾ ಬದಲಾವಣೆಗಳು ವಿಶ್ವದಲ್ಲಿ ಆಗುವಾಗ ತನ್ನಲ್ಲಿ ಬದಲಾವಣೆ ಅವಶ್ಯಕತೆ ಇದೆ ಎಂದು ಮನಗಂಡು 'ವಿಷನ್-2030' ಎನ್ನುವ ಕಾರ್ಯಸೂಚಿಯನ್ನ ಸೌದಿ ಹಾಕಿಕೊಂಡಿದೆ. ಸೌದಿ 2030ರ ವೇಳೆಗೆ ಅಮೂಲಾಗ್ರವಾದ ಬದಲಾವಣೆಯನ್ನ ಕಾಣಲಿದೆ. 2030ರ ವೇಳೆಗೆ 7 ಮೆಗಾ ಪ್ರಾಜೆಕ್ಟ್‌ಗಳನ್ನ ಮುಗಿಸಲು ಅದು ಕೆಲಸವನ್ನ ಮಾಡುತ್ತಿದೆ. ದಿ ಲೈನ್, ಟ್ರೋಜೆನ್, ಸಿಂದಲಹ್, ಒಕ್ಸಾಗೊನ್, ಅಮಲಾ, ದಿ ರೆಡ್ ಸೀ ಪ್ರಾಜೆಕ್ಟ್, ದಿರಿಯಾಹ್ ಗೇಟ್ ಎನ್ನುವ 7 ಪ್ರಾಜೆಕ್ಟ್‌ಗಳ ಮೇಲೆ ಕೆಲಸ ಮಾಡುತ್ತಿದೆ.

ಒಕ್ಸಾಗೊನ್ ಎನ್ನುವುದು ಜಗತ್ತಿನ ಅತಿ ದೊಡ್ಡ ಫ್ಲೋಟಿಂಗ್ (ತೇಲಾಡುವ ) ನಗರವಾಗಿರಲಿದೆ. ಇಲ್ಲಿನ ಹೊಣೆಯನ್ನ ಹೊತ್ತಿರುವ ಅಧಿಕಾರಿಗಳು ಹೇಳುವ ಪ್ರಕಾರ ಇದು ಅಮೆರಿಕ ದೇಶದ ನ್ಯೂಯಾರ್ಕ್ ನಗರಕ್ಕಿಂತ 33 ಪಟ್ಟು ದೊಡ್ಡದಾಗಿರಲಿದೆ ಮತ್ತು ಅರ್ಧ ನಗರ ನೀರಿನಲ್ಲಿ ತೇಲುವಂತಿರುತ್ತದೆ. ಜನವರಿ 2021ರಲ್ಲಿ ಶುರುಮಾಡಿರುವ ಈ ಕಾರ್ಯ 2030ರಲ್ಲಿ ಮುಗಿಯುವ ಸಂಭಾವ್ಯತೆ ಕೂಡ ಹೆಚ್ಚಾಗಿದೆ.

ದಿರಿಯಾಹ್ ಗೇಟ್ ಎನ್ನುವುದು ಸೌದಿಯ ಹೆರಿಟೇಜ್ ಬಿಂಬಿಸುವ ಯುನೆಸ್ಕೋ ಮಾನ್ಯತೆ ಪಡೆದಿರುವ ಸ್ಥಳಗಳನ್ನ ಹೋಲುವಂಥದು; ಅಲ್ಲಿಂದ ಪ್ರೇರಣೆ ಪಡೆದು ಇದನ್ನು ಹೊಸದಾಗಿ ನಿರ್ಮಿಸಲು ಅಣಿಯಾಗುತ್ತಿದ್ದಾರೆ. ಸೌದಿಯ ಚರಿತ್ರೆಯನ್ನ ಹೇಳುವ ನೂರು ಕಥೆ, ಥೀಮ್‌ಗಳ ಸುತ್ತ ಈ ನಗರವನ್ನ ನಿರ್ಮಿಸಲಾಗುತ್ತಿದೆ.

ಅಮಲಾ ಎನ್ನುವ ಪ್ರಾಜೆಕ್ಟ್‌ನಲ್ಲಿ ಸರಿಸುಮಾರು 3 ಸಾವಿರ ಹೋಟೆಲ್ ರೂಮ್, 900 ಐಷಾರಾಮಿ ವಿಲ್ಲಾಗಳು, ಅಪಾರ್ಟ್‌ಮೆಂಟ್ ಮತ್ತು ಎಸ್ಟೇಟ್ ಹೋಮ್‌ಗಳನ್ನ ಕಟ್ಟಲಾಗುತ್ತದೆ. ಇದರಲ್ಲಿ 1300 ರೂಮುಗಳು 2024ರ ಮಧ್ಯದಲ್ಲಿ ಸಿದ್ಧವಾಗುತ್ತವೆ, 2027ರ ವೇಳೆಗೆ ಇವು ಜಗತ್ತಿಗೆ ತೆರೆದುಕೊಳ್ಳಲಿವೆ.

ಒಟ್ಟಾರೆ ಸೌದಿ 2030ಕ್ಕೆ ಹೊಸ ರೂಪವನ್ನ ಪಡೆದುಕೊಳ್ಳಲಿದೆ. ಜಗತ್ತಿನ ಜನರನ್ನ ಟೂರಿಸಂಗೆ ಕೈ ಬೀಸಿ ಕರೆಯಲಿದೆ. ಅದು ಹೂಡಿಕೆದಾರರಿಗೆ, ಹೊಸ ಉದ್ದಿಮೆಗಳನ್ನ ತೆರೆಯುವವರಿಗೆ, ಹೊಸ ಅವಕಾಶವನ್ನ ನೀಡುತ್ತಿದೆ. ಧರ್ಮವನ್ನ ತನ್ನ ಒಡಲಲ್ಲಿ ಇಟ್ಟುಕೊಂಡು, ಅದನ್ನೂ ಪೋಷಿಸುತ್ತಾ ಜಗತ್ತಿಗೆ ತೆರೆದುಕೊಳ್ಳುವ ಸಾಹಸವನ್ನ ಸೌದಿ ಮಾಡುತ್ತಿದೆ. ಕೆಲವೊಂದು ಪ್ರಾಜೆಕ್ಟ್‌ಗಳು 2016ರಿಂದಲೇ ಕಾರ್ಯ ಆರಂಭಿಸಿವೆ. ಹೊಸ ಕನಸಿನೊಂದಿಗೆ, ಹೊಸ ಹುರುಪಿನೊಂದಿಗೆ, ಹೊಸ ಜಗತ್ತಿಗೆ ಸೌದಿ ತೆರೆದುಕೊಳ್ಳುತ್ತಿದೆ. ಸೌದಿ ತನ್ನ ಕಾರ್ಯದಲ್ಲಿ ಯಶಸ್ಸು ಕಾಣಲಿದೆ. ಅದಕ್ಕೆ ಬೇಕಾದ ಸಿದ್ಧತೆ ಮತ್ತು ಬದ್ಧತೆ ಅದಾಗಲೇ ಮುಕ್ಕಾಲು ಪಾಲು ಮುಗಿಯಲು ಬಂದ ಯೋಜನೆಗಳಲ್ಲಿ ಕಾಣಿಸುತ್ತಿದೆ.

ಕಟ್ಟರ್ ಮನಸ್ಥಿಯಿಂದ ಹೊರಬಂದು ಈ ಎರಡೂ ದೇಶಗಳೂ ಜಗತ್ತಿಗೆ ತೆರೆದುಕೊಂಡ ರೀತಿ ಅಚ್ಚರಿದಾಯಕ. ನಮಗೂ ಮಾದರಿ. ನಾವು? ಭಾರತೀಯರು, ನಮಗೆ ಕನಸು ಬೇಡವೇ? ನಾವು ಮಾತ್ರ ಹಿಂದಕ್ಕೆ ಚಲಿಸುತ್ತಿದ್ದೇವೆ ಎನ್ನಿಸುತ್ತದೆ. ಎಲ್ಲದಕ್ಕೂ ಪರ-ವಿರೋಧ, ಎಲ್ಲರೂ ಮನಸಿಗೆ ಬಂದದ್ದ ಹೇಳುವವರೇ, ದೇಶದ ವಿರುದ್ಧ, ದೇಶದ ಅಭಿವೃದ್ಧಿ ಕಾರ್ಯಗಳು, ಸಾಧನೆಯನ್ನ ಕೂಡ ಲೇವಡಿ ಮಾಡುವ ನಾಗರಿಕರಿರುವವರೆಗೆ ಕಂಡ ಕನಸುಗಳು ನನಸಾಗುವುದಾದರೂ ಹೇಗೆ? ಕೊನೆಪಕ್ಷ 2030ರ ವೇಳೆಗೆ ನಾವು ಹೇಗಿರಬೇಕು ಎನ್ನುವ ಸಣ್ಣ ಆಲೋಚನೆಯಾದರೂ ನಮ್ಮಲಿರಬೇಕು.

ಭಾರತ ಕೂಡ 2030ರ ವೇಳೆಗೆ ಇಂದಿಗಿಂತ ಬಲಶಾಲಿ ರಾಷ್ಟ್ರವಾಗಿರುತ್ತದೆ. ಅದರಲ್ಲಿ ಸಂಶಯವಿಲ್ಲ. ಆದರೆ ಜನರ ಕಣ್ಣಲ್ಲಿ ಕನಸು, ನನ್ನದು ಎನ್ನುವ ಭಾವನೆ ಬಾರದೆ ಹೋದರೆ, ನನ್ನ ದೇಶ ಎನ್ನುವ ಗರ್ವ ಬಾರದೆ ಹೋದರೆ, ಎಲ್ಲವೂ ಇದ್ದೂ ಏನೂ ಇಲ್ಲದಂತೆಯೇ ಸರಿ. ನಾಗರಿಕರಲ್ಲಿ 'ಸೆಲ್ಫ್ ಪ್ರೈಡ್' ಬೆಳೆಸುವ ಕೆಲಸ ಜರೂರಾಗಿ ಆಗಲೇಬೇಕಾಗಿದೆ.

## ಸುದ್ದಿಗಿಷ್ಟು ಒಗ್ಗರಣೆ

ಯಗಟಿ ರಘು ನಾಡಿಗ್
naadigru@gmail.com

- **ಭಾರತೀಯ ವಿಮಾನಗಳಿಗೆ ವಾಯುಪ್ರದೇಶವನ್ನು ನಿರ್ಬಂಧಿಸಿದ ಪರಿಣಾಮ ಪಾಕಿಸ್ತಾನದ ವಿಮಾನ ನಿಲ್ದಾಣ ಪ್ರಾಧಿಕಾರಕ್ಕೆ ಎರಡು ತಿಂಗಳಲ್ಲಿ 4.1 ಶತಕೋಟಿ ರುಪಾಯಿ ನಷ್ಟ: ಸುದ್ದಿ**
– ಉಗ್ರರಿಗೆ ಚಿತಾವಣೆ ನೀಡಿ, ಪಹಲ್ಗಾಮ್‌ನಲ್ಲಿ 26 ಮಂದಿ ಅಮಾಯಕ ಪ್ರವಾಸಿಗರನ್ನು ಹತ್ಯೆ ಮಾಡಿಸಿದ ಪಾಕಿಸ್ತಾನವೀಗ ಅದಕ್ಕೆ 'ದುಬಾರಿ ಬೆಲೆ'ಯನ್ನೇ ತೆರಬೇಕಾಗಿ ಬಂದಿದೆ ಬಿಡಿ!!

- **ಅಭಿವೃದ್ಧಿಯ ನೆಪದಲ್ಲಿ ಸಾವಿರಾರು ಮರಗಳಿಗೆ ಕೊಡಲಿ; ಬೆಂಗಳೂರಿನ ಶೇ.87ರಷ್ಟು ಪಾಲು ಕಾಂಕ್ರೀಟ್: ಸುದ್ದಿ**
– ಸರಿಬಿಡಿ. ಬೆಂಗಳೂರು ಒಂದು ಕಾಲಕ್ಕೆ 'ಉದ್ಯಾನ ನಗರಿ' ಆಗಿತ್ತು, ಈಗ 'ಕಾಂಕ್ರೀಟ್ ಜಂಗಲ್' ಆಗಿದೆ, ಅಷ್ಟೇ!

- **ರಾಹುಲ್ ಗಾಂಧಿಯವರ ಮಿದುಳಿಗೂ ನಾಲಿಗೆಗೂ ಲಿಂಕ್ ಇಲ್ಲ: ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ವ್ಯಂಗ್ಯ**
– ಭಲೇ ಭಲೇ! 'ರಾಜಕೀಯಶಾಸ್ತ್ರ ಪಂಡಿತ' ರೇಣುಕಾಚಾರ್ಯರು, 'ಶರೀರಶಾಸ್ತ್ರ ಪಂಡಿತ'ರಾಗಿ ಬದಲಾಗಿದ್ದಕ್ಕೆ ಹೆಮ್ಮೆ ಪಡೋಣ...

- **'ರಾಹುಲ್ ಗಾಂಧಿ ಒಬ್ಬ ಬಚ್ಚಾ. ಅದಕ್ಕೆ ಮಿದುಳೇ ಇಲ್ಲ' ಎಂದು ಕಿಚಾಯಿಸಿದ ಶಾಸಕ ಬಸನಗೌಡ ಪಾಟೀಲ್ ಯತ್ನಾಳ: ಸುದ್ದಿ**
– ಅಯ್ಯೋ ನೀವೆಲ್ಲಾ ಯಾಕೆ ಸರ್ ಹೀಗೆ ಕನ್‌ಫ್ಯೂಸ್ ಮಾಡ್ತೀರಾ? ಮೇಲೆ ನೋಡಿದ್ರೆ ರೇಣುಕಾಚಾರ್ಯರು 'ರಾಹುಲ್ ಗಾಂಧಿಯ ವರ ಮಿದುಳಿಗೂ ನಾಲಿಗೆಗೂ ಲಿಂಕ್ ಇಲ್ಲ' ಅಂತ ಹೇಳಿಕೆ ನೀಡಿದ್ದಾರೆ; ನೀವು ನೋಡಿದ್ರೆ 'ರಾಹುಲ್ ಗಾಂಧಿಗೆ ಮಿದುಳೇ ಇಲ್ಲ' ಅಂತೀರಿ. ನಾವು ಯಾರ ಮಾತನ್ನ ನಂಬಬೇಕು?!!

- **ಕೇರಳದಲ್ಲಿ ಮದ್ಯಪ್ರಿಯರ ಮನೆ ಬಾಗಿಲಿಗೇ ಅವರಿಷ್ಟದ ಮದ್ಯವನ್ನು ಪೂರೈಕೆ ಮಾಡುವ ಸೇವೆ ಆರಂಭಿಸುವ ಸಂಬಂಧ ರಾಜ್ಯ ಸರಕಾರಕ್ಕೆ ಪ್ರಸ್ತಾವನೆಯೊಂದರ ಸಲ್ಲಿಕೆ: ಸುದ್ದಿ**
– ವಾಟ್ ಆ್ಯನ್ ಐಡಿಯಾ ಸರ್‌ಜೀ! ಇದು ಕೈಗೂಡಿದಲ್ಲಿ 'ಎಣ್ಣೆ ಭಕ್ತ'ರೆಲ್ಲಾ 'Bar Bar ದೇಖೋ, ಹಜಾರ್ Bar ದೇಖೋ' ಎಂದು ಹಾಡುತ್ತಾ 'ಬಾರು'ಗಳಲ್ಲಿ ಬಿದ್ಕೊಳ್ಳೋ ಬದಲು, ಲಕ್ಷಣವಾಗಿ 'ಪೋಟ್ಕೊಂಡು' ಮನೇಲೇ ಪಾಚ್ಕೋಬಹುದು!

- **ಮತಗಳ್ಳತನಕ್ಕೆ ಸಂಬಂಧಿಸಿದಂತೆ ಕೇಂದ್ರ ಚುನಾವಣಾ ಆಯೋಗದ ಮೇಲೆ ಗಂಭೀರ ಆರೋಪ ಮಾಡಿದ್ದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಯವರಿಗೆ ನೋಟಿಸ್ ಜಾರಿಗೊಳಿಸಿದ ಕರ್ನಾಟಕ ಚುನಾವಣಾ ಆಯೋಗ: ಸುದ್ದಿ**
– ಈ ಸುದ್ದಿಯನ್ನು ಓದಿದ 'ಕೇಶವಕೃಪಾ'ಪೋಷಿತ 'ಬಟ್ಲರ್ ಇಂಗ್ಲಿಷ್' ಪರಿಣತರೊಬ್ಬರು It's like letting an ANT into your PANTS because you can't keep quiet ಎಂದು ಕಮೆಂಟು ಮಾಡಿದರಂತೆ. ಅವರ ಪಕ್ಕದಲ್ಲಿದ್ದ ಬಡ ಬೋರೇಗೌಡರು, ''ಅಂಗಂದ್ರೆ ಏನ್ ಬುದ್ಧೀ? ವಸಿ ಬಿಡಿಸಿ ಯೋಳಿ ಪುಣ್ಯ ಕಟ್ಕಳಿ...'' ಅಂತ ಕೇಳಿದ್ದಕ್ಕೆ, ''ಸುಮ್ಮನಿರಲಾರದೆ ಪ್ಯಾಂಟಿನೊಳಗೆ ಇರುವೆ ಬಿಟ್ಟುಕೊಂಡ್ರಂತೆ'' ಎಂದು ಅನುವಾದಿಸಿ ಬೊಚ್ಚುಬಾಯಿಯಲ್ಲಿ ನಕ್ಕರಂತೆ!

## ನಾರದ ಸಂಚಾರ

ಕಲಹಪ್ರಿಯ
naadigru@gmail.com

### ದೊಡ್ಡೋರ ಸಹವಾಸ ಕಷ್ಟ..!

'ಐಎಎಸ್ ಮತ್ತು ಐಪಿಎಸ್ ಪರೀಕ್ಷೆಗಳನ್ನು ಪಾಸುಮಾಡಿ ಸರಕಾರಿ ಮಟ್ಟದಲ್ಲಿ ಉನ್ನತ ಹುದ್ದೆಯಲ್ಲಿರುವವರು ರಾಜರಂತೆ ಇರುತ್ತಾರೆ ಅಲ್ವೇ?' ಎಂಬುದು ಕೆಲವರ ಗ್ರಹಿಕೆಯಾಗಿರುತ್ತದೆ. ಇದು ಒಂದು ಮಟ್ಟಿಗೆ ಅಥವಾ ಕೆಲವರ ವಿಷಯದಲ್ಲಿ ನಿಜವಾದರೂ, ಸಾರಾಸಗಟಾಗಿ ಎಲ್ಲರ 'ವೃತ್ತಿಜೀವನ ವೈಖರಿ' ಆಗಿರೋದಿಲ್ಲ ಅನ್ನೋದಂತೂ ಖರೆ. ಅದರಲ್ಲೂ ಇಂಥ ಉನ್ನತಾಧಿಕಾರಿಗಳು ಬಹುತೇಕವಾಗಿ ಆಳುಗರ ನಿಕಟ ಕಾರ್ಯವಲ ಯದಲ್ಲಿ ಇದ್ದುಕೊಂಡು ಹೆಣಗಬೇಕಾಗುತ್ತದೆಯಾದ್ದರಿಂದ, ಎಷ್ಟು ಹುಷಾರಾಗಿ ನಡೆದುಕೊಂಡರೂ ಕಮ್ಮಿಯೇ!




ಇಂಥ ಉನ್ನತಾಧಿಕಾರಿಗಳು ತಾವು ಸೇವೆಯಲ್ಲಿ ಇರುವಷ್ಟು ದಿನವೂ 'ಕೆಲವೊಂದು ಕಾರಣಗಳಿಗಾಗಿ' ಬಾಯಿಗೆ ಬೀಗ ಹಾಕಿಕೊಂಡಿರ ಬೇಕಾಗುತ್ತದೆ. ಸರಕಾರಿ ಸೇವೆಯಿಂದ ಬಿಡುಗಡೆಯಾಗುತ್ತಿದ್ದಂತೆ ಇಂಥ ವರಲ್ಲಿ ಕೆಲವರು ತಮ್ಮ ವೃತ್ತಿಜೀವನದ 'ವಿಲಕ್ಷಣ' ಅನುಭವಗಳನ್ನು ಅವರಿವರಲ್ಲಿ 'ಆಫ್ ದಿ ರೆಕಾರ್ಡ್' ರೀತಿಯಲ್ಲಿ ಹಂಚಿಕೊಂಡರೆ, ಮತ್ತೆ ಕೆಲವರು ಅವಕ್ಕೆ ಅಕ್ಷರ ರೂಪವನ್ನು ನೀಡುತ್ತಾರೆ. ನಿವೃತ್ತ ಐಎಎಸ್ ಅಧಿಕಾರಿ ಸುಭಾಷ್‌ಚಂದ್ರ ಗರ್ಗ್ ಈ ಎರಡನೇ ಗುಂಪಿಗೆ ಸೇರಿದವರು. ಹಣಕಾಸು ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಇವರು ಇತ್ತೀಚೆಗೆ No Minister ಎಂಬ ಪುಸ್ತಕವೊಂದನ್ನು ಬರೆದಿದ್ದು, ತಮ್ಮ ತಥಾಕಥಿತ 'ಬಾಸ್'ಗಳ ಜತೆಗಿನ ಒಡನಾಟ/ಹೆಣಗಾಟದಲ್ಲಿ ನಡೆದ ಒಂದಷ್ಟು ರೋಮಾಂಚಕಾರಿ ಘಟನೆಗಳನ್ನು ಇದರಲ್ಲಿ ಅವರು ಉಲ್ಲೇಖಿಸಿದ್ದಾರಂತೆ. ಇಂಥ 'ಬಾಸ್'ಗಳಲ್ಲಿ ಕೆಲವರಿಗೆ, ವಾಸ್ತವವಾಗಿ ಅಸ್ತಿತ್ವದಲ್ಲಿರುವ ನಿಯಮಗಳನ್ನು ಹಾಗೂ ಅಂದು ಗದ್ದುಗೆಯಲ್ಲಿದ್ದ ಪ್ರಧಾನಿಗಳ ಆಶಯವನ್ನು ಅಧಿಕಾರಿಗಳು ವಿವರಿಸಿದ್ದರ ಹೊರತಾಗಿಯೂ 'ಬಾಸ್'ಗಳು ಅವನ್ನು ಕಿವಿಗೇ ಹಾಕಿಕೊಳ್ಳಲಿಲ್ಲವಂತೆ! 'ಇದನ್ನು ಹಾಗೆಲ್ಲಾ ಮಾಡಲಿಕ್ಕೆ ಆಗೋಲ್ಲ ಸರ್' ಎಂಬ ಉತ್ತರವನ್ನು ಕೇಳಿಸಿಕೊಳ್ಳುವುದಕ್ಕೆ ಅವರು ಸಿದ್ಧರಿರಲಿಲ್ಲವಂತೆ!

ಇಂಥ ಒಂದೆರಡು ಪುಟ್ಟ ನಿದರ್ಶನಗಳು ಇಲ್ಲಿವೆ ನೋಡಿ: ಭಾರತೀಯ ಕಂದಾಯ ಸೇವಾ ಕೇಡರ್‌ಗೆ ಕಾರ್ಯದರ್ಶಿ ಮಟ್ಟದ 60-70 ಹುದ್ದೆಗಳನ್ನು ನಿಗದಿಪಡಿಸುವ/ಹಂಚಿಕೆ ಮಾಡುವ ತಮ್ಮ ಪ್ರಸ್ತಾವನೆಯನ್ನು ಮಂಡಿಸದಿದ್ದರೆ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ಹಣಕಾಸು ಸಚಿವ ಪಿ.ಚಿದಂಬರಂ ಅವರು ಅಂದಿನ ಪ್ರಧಾನಮಂತ್ರಿ ಮನಮೋಹನ್ ಸಿಂಗ್ ಅವರಿಗೆ ಬೆದರಿಕೆ ಹಾಕಿದ್ದರಂತೆ. ಈ 'ಕಿರಿಕ್' ಅನ್ನು ಗರ್ಗ್ ಅವರು ಉಲ್ಲೇಖಿಸಿ, ''ತೆರಿಗೆ ಸಂಗ್ರಹದ ಸ್ಥಿತಿಯನ್ನು ಸುಧಾರಿಸದೆಯೇ ಈ ಕ್ರಮಕ್ಕೆ ಮುಂದಾದ ಕಾರಣ, ಅದು ಅಧಿಕಾರಿಶಾಹಿ ವ್ಯವಸ್ಥೆಯನ್ನು ಅಸಮ ತೋಲನಗೊಳಿಸಿತು, ಅವ್ಯವಸ್ಥೆಗೆ ಕಾರಣವಾಯಿತು'' ಎಂದು ಅಭಿಪ್ರಾಯಪಟ್ಟಿದ್ದಾರೆ. ಇಂಥ ಮತ್ತೊಂದು 'ಕಿರಿಕ್' ಆಗಿದ್ದು ಅಟಲ್ ಬಿಹಾರಿ ವಾಜಪೇಯಿಯವರ ಸರಕಾರದ ಕಾಲಘಟ್ಟದಲ್ಲಿ. ಪ್ರಧಾನಿ ಅಟಲ್‌ಜಿ ಅವರ ಸರಕಾರವು ತಾನು ಉಸಿರು ಹಿಡಿದುಕೊಂಡಿರುವುದಕ್ಕೆ ಆಂಧ್ರದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರನ್ನು ನೆಚ್ಚಿಕೊಳ್ಳಬೇಕಾದ ಸ್ಥಿತಿಯಿತ್ತು. ಈ ಪರಿಸ್ಥಿತಿಯನ್ನು ತಮ್ಮ ಪ್ರಯೋಜನಕ್ಕೆ ತಕ್ಕಂತೆ ಬಳಸಿಕೊಂಡ 'ನಾಯ್ಡುಗಾರು', 1999 ಮತ್ತು 2000ನೇ ವರ್ಷಗಳಲ್ಲಿ ವಿಶ್ವಬ್ಯಾಂಕ್ ಅನುಮೋದಿಸಿದ ಭಾರತೀಯ ಯೋಜನೆಗಳ ಶೇ.40ಕ್ಕಿಂತ ಹೆಚ್ಚು ಕ್ಷೇತ್ರಗಳ ಪಾಲನ್ನು ತಮ್ಮದಾಗಿಸಿಕೊಳ್ಳುವಲ್ಲಿ ಯಶಸ್ವಿಯಾದರಂತೆ. ಇಲ್ಲಿ ಕೂಡ, ಸರಕಾರದ ಆಕ್ಷೇಪಣೆಗಳ ಹೊರತಾಗಿಯೂ ನಾಯ್ಡು ಅವರು ಕೇಂದ್ರದ ಸಂಪನ್ಮೂಲಗಳ ನ್ಯಾಯಸಮ್ಮತ ವಿತರಣೆಯನ್ನು ಕಡೆಗಣಿಸಿ/ಅಡ್ಡಗಾಲು ಹಾಕಿ, ತಮ್ಮ ಮೊಂಡುಬೇಡಿಕೆಗಳಿಗೇ ಮಣೆಹಾಕುವಂತೆ ಹಠ ಹಿಡಿದುಬಿಟ್ಟರಂತೆ!

ಹೇಳುತ್ತಾ ಹೋದರೆ, 'ಭಾರತೀಯ ಆಡಳಿತ ಸೇವಾ' ಎಂಬ ಹರಿಕಥಾ ಕಾಲಕ್ಷೇಪದಲ್ಲಿ ಇಂಥ ಕಥೆ-ಉಪಕಥೆಗಳು ಹೇರಳವಾಗಿ ಸಿಗುತ್ತವೆ; ಆದರೆ ಅವುಗಳ ಪೈಕಿ ಬೆಳಕಿಗೆ ಬರೋದು ಕೆಲವೇ ಅನ್ನೋದು ವಸ್ತುಸ್ಥಿತಿ!

### ನಾರಾಯಣ ನಾರಾಯಣ!

''ಕೇರಳದ ಏಕೈಕ ಬಿಜೆಪಿ ಸಂಸದ ಮತ್ತು ಕೇಂದ್ರ ಸಚಿವ ಸುರೇಶ್ ಗೋಪಿ ಅವರು ನಾಪತ್ತೆಯಾಗಿದ್ದಾರೆ; ಕ್ಷೇತ್ರಕ್ಕೆ ಮತ್ತು ಜಿಲ್ಲೆಗೆ ಅವರು ಬಹುಕಾಲದಿಂದ ಆಗಮಿಸಿಲ್ಲ'' ಎಂದು ಕೇರಳ ವಿದ್ಯಾರ್ಥಿ ಸಂಘದ ನಾಯಕರೊಬ್ಬರು ಪೊಲೀಸರಿಗೆ ದೂರು ನೀಡಿದ್ದಾರಂತೆ. ಈ ಸುದ್ದಿಯನ್ನು ಓದಿದ ಪ್ರಾಣಿಶಾಸ್ತ್ರದ ಅಧ್ಯಾಪಕರೊಬ್ಬರು, ''ಥೋ ನಿಮ್ಮ... ಇಷ್ಟಕ್ಕೆಲ್ಲಾ ದೂರು ನೀಡ್ತಾರೇನ್ರೀ? ಚುನಾವಣೆಯಲ್ಲಿ ಗೆದ್ದ ನಂತರ ನಾಪತ್ತೆಯಾಗೋದು, ಕ್ಷೇತ್ರಕ್ಕೆ ಬಹುಕಾಲದವರೆಗೆ ಆಗಮಿಸದಿರೋದು 'ರಾಜಕಾರಣಿ' ಎಂಬ 'ವಲಸೆಪಕ್ಷಿ'ಯ ಪ್ರಮುಖ ಲಕ್ಷಣಗಳಲ್ಲಿ ಸೇರಿವೆ. 5 ವರ್ಷ ಕಳೆದು ಚುನಾವಣೆ ಘೋಷಣೆಯಾಗುತ್ತಿದ್ದಂತೆ ಆ ವಲಸೆಪಕ್ಷಿ ತನ್ನ ಕ್ಷೇತ್ರಕ್ಕೆ ಮರಳುತ್ತೆ. ನೀವು ಡೋಂಟ್ ವರಿ ಮಾಡ್ಕೋಬೇಡಿ'' ಅಂತ ವಿಡಿಯೋ ಕಾಲ್‌ನಲ್ಲೇ ಹೇಳಿ ಸಮಾಧಾನಿಸಿದರಂತೆ!

# ಕಬ್ಬು ಕೃಷಿಕರು ಅನುಭವಿಸುತ್ತಿರುವ ಅಸ್ವಾಭಾವಿಕ ಹಾನಿಗಳು

**ಅಲ್ಪಾವಧಿ ತಳಿಯ ಕಬ್ಬನ್ನು ನಾಟಿ ಮಾಡುವುದರಿಂದ ಕಾರ್ಖಾನೆಗೆ ಹೆಚ್ಚು ಆದಾಯವಾಗುತ್ತದೆ. ಇದರಿಂದ ರೈತರಿಗೂ ಹೆಚ್ಚಿನ ಪಾಲು ಲಭಿಸುತ್ತದೆ. ಅಲ್ಪಾವಧಿ ಕಬ್ಬು ತಳಿಗಳು ವಿಶೇಷವಾಗಿ ಸುಂಕ (ಮುಳ್ಳು)ಗಳನ್ನು ಹೊಂದಿರುವುದರಿಂದ ರೈತರು ನಾಟಿ ಮಾಡಲು ಹಿಂಜರಿಯುತ್ತಾರೆ. ಸದ್ಯ ಯಾಂತ್ರೀಕೃತ ಕಟಾವು ಸಾಧ್ಯವಿರುವುದರಿಂದ ಅಲ್ಪಾವಧಿ ತಳಿಗಳ ಕಟಾವಿಗೆ ಸಮಸ್ಯೆಯಾಗುವುದಿಲ್ಲ.**

ಕೃಷಿರಂಗ
ಬಸವರಾಜ ಶಿವಪ್ಪ ಗಿರಗಾಂವಿ
vveditoped@gmail.com

ಕಬ್ಬು ಉತ್ಪಾದನೆಯಲ್ಲಿ ಭಾರತವು ವಿಶ್ವದಲ್ಲೇ 2ನೇ ಸ್ಥಾನದಲ್ಲಿದ್ದರೆ, ಸಕ್ಕರೆ ಉತ್ಪಾದನೆ ಹಾಗೂ ಬಳಕೆಯಲ್ಲಿ ಮೊದಲ ಸ್ಥಾನದಲ್ಲಿದೆ. ಕಬ್ಬು ಬೆಳೆಯು ಭಾರತದ ಆರ್ಥವ್ಯವಸ್ಥೆಗೆ ವಿವಿಧ ತೆರಿಗೆಗಳ ಮೂಲಕ ಬಹುದೊಡ್ಡ ಕೊಡುಗೆಯನ್ನು ನೀಡಿದೆ. ಅಂತೆಯೇ ನೂರಾರು ವರ್ಷಗಳ ಇತಿಹಾಸವಿರುವ ಸಕ್ಕರೆ ಉದ್ಯಮದ ಕಾರ್ಯನೀತಿಯು ಇಂದಿಗೂ ಸರಕಾರದ ನಿಯಂತ್ರಣದಲ್ಲಿದೆ. 'ಸೋಮಾರಿ ಬೆಳೆ' ಎನಿಸಿರುವ ಕಬ್ಬು ಪ್ರತಿವರ್ಷ ತನ್ನ ಕ್ಷೇತ್ರವನ್ನು ವಿಸ್ತರಿಸಿಕೊಳ್ಳುತ್ತಿದೆ.

ಕ್ರಿ.ಶ. 2000ಕ್ಕಿಂತ ಪೂರ್ವದಲ್ಲಿ ಕಾರ್ಖಾನೆಗಳಿಗೆ ಕಬ್ಬು ಪೂರೈಸುವುದೆಂದರೆ ರೈತರಿಗೆ ದೊಡ್ಡ ಸಾಹಸವಾಗಿತ್ತು. ಮಂತ್ರಿ-ಮಹೋದಯರ ಶಿಫಾರಸು ಪತ್ರಗಳಿಗೂ ಮನ್ನಣೆ ಸಿಗುತ್ತಿರಲಿಲ್ಲ. ಕಡಿಮೆ ಸಾಮರ್ಥ್ಯದ ಮತ್ತು ಬೆರಳೆಣಿಕೆಯಷ್ಟಿದ್ದ ಅಂದಿನ ಕಾರ್ಖಾನೆಗಳಿಗೆ ಬೆಳೆದ ಕಬ್ಬನ್ನು ಸಂಪೂರ್ಣವಾಗಿ ಅರೆಯಲು ಸಾಧ್ಯವಾಗುತ್ತಿರಲಿಲ್ಲ. ಹೀಗಾಗಿ ಕಬ್ಬು ಬೆಳೆಗಾರರು ಅದರಲ್ಲೂ ಉತ್ತರ ಕರ್ನಾಟಕ ಮತ್ತು ಪಶ್ಚಿಮ ಮಹಾರಾಷ್ಟ್ರ ಭಾಗದವರು ಅತಿಯಾಗಿ ಹಾನಿಗೀಡಾದರು. ಹಿಂದೆ ಅವರಿಗೆ ಆದ ನಷ್ಟಗಳು ಹೀಗಿವೆ:

- ಕಬ್ಬು ಕಟಾವು ಮಾಡಲು ಸರಾಸರಿ ಒಂದೂವರೆ ವರ್ಷದವರೆಗೆ ಕಾಯಬೇಕಾಗುತ್ತಿದ್ದುದರಿಂದ ಕಬ್ಬು ತೂಕವನ್ನು ಕಳೆದುಕೊಳ್ಳುತ್ತಿತ್ತು. ಅದರಲ್ಲೂ ಅಲ್ಪಾವಧಿ ತಳಿಗಳ ಪರಿಸ್ಥಿತಿಯಂತೂ ಹೇಳತೀರದು.
- ಒಂದೂವರೆ ವರ್ಷದತನಕ ಕಬ್ಬಿಗೆ ನೀರು ಪೂರೈಕೆ, ಕಳೆ ನಿರ್ವಹಣೆ ಮಾಡಬೇಕಾಗಿತ್ತಲ್ಲದೆ, ಪ್ರಾಣಿ, ವಿದ್ಯುತ್, ಬೆಂಕಿಯಂಥ ಅಪಾಯಗಳಿಂದ ಅದನ್ನು ಪಾರುಮಾಡಬೇಕಾಗುತ್ತಿತ್ತು.
- ಕಡಿಮೆ ಸಂಖ್ಯೆಯಲ್ಲಿದ್ದ ಹಾಗೂ ಕಡಿಮೆ ಸಾಮರ್ಥ್ಯವಿದ್ದ ಕಾರ್ಖಾನೆಗಳಿಗೆ ಅಕ್ಟೋಬರ್‌ನಿಂದ ಜೂನ್‌ವರೆಗೆ ಸರಾಸರಿ 9 ತಿಂಗಳುಗಳ ಕಾಲ ಕಬ್ಬು ಅರೆದರೂ ಬೆಳೆದು ನಿಂತ ಕಬ್ಬು ಕಟಾವಾಗದೆ ಉಳಿಯುತ್ತಿತ್ತು.
- ರಾಜಿಯಿಲ್ಲದೆ ಜೇಷ್ಠತೆಯ ಆಧಾರದಲ್ಲಿ ಮತ್ತು ಪಕ್ವಗೊಂಡ ಕಬ್ಬನ್ನು ಮಾತ್ರ ಅರೆಯಲಾಗುತ್ತಿತ್ತು.
- ಕಟಾವಾಗದೆ ಉಳಿದ ಕಬ್ಬನ್ನು ರೈತರು ಒಡ್ಡುಗಳಿಗೆ ಮತ್ತು ದನಕರುಗಳಿಗೆ ಕಟಾವು ಮಾಡಿ ಹಾಕುತ್ತಿದ್ದರು.
- ಬೆಲ್ಲದ ಉತ್ಪಾದನೆಯಿಂದಲೂ ಆದಾಯ ಕಡಿಮೆ ಬರುತ್ತಿತ್ತು.
- ಕಬ್ಬು ಬೆಳೆಗಾರರು ಹೋರಾಟ ಮಾಡಿ ಕಬ್ಬಿನ ದರ ಪಡೆಯಲು ಹಿಂಜರಿಯುತ್ತಿದ್ದರು.
- ವಿಳಂಬಿತ ಕಬ್ಬು ಕಟಾವಿನಿಂದ ಕಬ್ಬು ಬಿಲ್ ಸಹ ವಿಳಂಬವಾಗಿ ಬರುತ್ತಿತ್ತಲ್ಲದೆ ಕನಿಷ್ಠ ಮೂರು ಹಂತದಲ್ಲಿ ಕಬ್ಬು ದರ ಪಡೆಯಬೇಕಾಗಿತ್ತು.
- ಕಾರ್ಖಾನೆಯಿಂದ ಕಬ್ಬು ಬೀಜ, ರಸಗೊಬ್ಬರ ಪಡೆಯುವುದು ಮತ್ತು ತಮಗಿಷ್ಟವಾದ ಕಾರ್ಖಾನೆಗೆ ಕಬ್ಬು ಪೂರೈಸುವುದು ಅಷ್ಟೊಂದು ಸಲೀಸಾಗಿರಲಿಲ್ಲ.
- ಬಹುತೇಕವಾಗಿ ಕಾರ್ಖಾನೆಗಳಲ್ಲಿ ಕಬ್ಬು ತುಂಬಿದ ವಾಹನಗಳು ಹಲವು ದಿನಗಳವರೆಗೆ ಕಾಯ್ದು ಕಬ್ಬು ಅರೆಯಬೇಕಾಗುತ್ತಿತ್ತು. ಇದರಿಂದ ಕಬ್ಬಿನಲ್ಲಿ ತೂಕ ಮತ್ತು ಸಕ್ಕರೆ ಇಳುವರಿಯು ಕಡಿಮೆಯಾಗುತ್ತಿತ್ತು.
- ಕಬ್ಬು ಬೆಳೆಗಾರರು, ಕಟಾವುದಾರರು ಮತ್ತು ಸಾರಿಗೆದಾರರು ಕಾರ್ಖಾನೆಗಳ ಮಾತನ್ನು ಮೀರುತ್ತಿರಲಿಲ್ಲ.
- ಕಬ್ಬು ಕಟಾವು ಯಂತ್ರಗಳು ಲಭ್ಯವಿರಲಿಲ್ಲ.
- ಕಡು ಬೇಸಿಗೆಯಲ್ಲಿಯೂ ಕಾರ್ಮಿಕರು ಕಬ್ಬು ಕಟಾವು ಮಾಡುತ್ತಿದ್ದುದರಿಂದ ಅತಿಯಾದ ತಾಪಮಾನದಿಂದ ತೊಂದರೆಯಾಗುತ್ತಿತ್ತು.

ಹೀಗೆ ಅಂದಿನ ದಿನಮಾನಗಳಲ್ಲಿ ಕಬ್ಬು ಬೆಳೆಗಾರರು ಅತಿಯಾದ ತೊಂದರೆ ಮತ್ತು ನಷ್ಟವನ್ನು ಅನುಭವಿಸುತ್ತಿದ್ದರು.

ಪ್ರಸಕ್ತ ದಿನಮಾನದಲ್ಲಿ ಬಹುತೇಕವಾಗಿ ಮೇಲಿನ ತೊಂದರೆಗಳಿಲ್ಲ. ಆದರೂ ಕಬ್ಬು ಬೆಳೆಗಾರರು ಹಾನಿ ಅನುಭವಿಸುತ್ತಿದ್ದಾರೆ. ಕಬ್ಬು ಬೆಳೆಗಾರರು ಮಾಡುತ್ತಿರುವ ಕೆಲವು ತಪ್ಪುಗಳನ್ನು ತಿದ್ದಿಕೊಂಡಲ್ಲಿ ಯಾವುದೇ ಹೋರಾಟಗಳಿಲ್ಲದೆ ಸರಳವಾಗಿ ಇನ್ನೂ ಹೆಚ್ಚಿನ ಆದಾಯವನ್ನು ಪಡೆಯಬಹುದಾಗಿದೆ.

- ಕಬ್ಬಿನೊಂದಿಗೆ ರವದಿ, ಮಣ್ಣು, ಬೇರು, ಎಲೆ, ಎಳೆಕಬ್ಬು ಮತ್ತು ಹಸಿರು ತುದಿ ಪೂರೈಕೆಯಾಗುತ್ತಿರುವುದರಿಂದ ಗುಣಮಟ್ಟದ ಸಕ್ಕರೆಯು ಉತ್ಪಾದನೆಯಾಗುವುದಿಲ್ಲ. ಇದರಿಂದ ಕಾರ್ಖಾನೆಗೆ ಹಾನಿಯಾಗುವುದರಿಂದ ರೈತರಿಗೆ ಕಬ್ಬು ದರವು ಕಡಿಮೆ ಲಭಿಸುತ್ತದೆ. ತಾಜಾ ಮತ್ತು ಗುಣಮಟ್ಟದ (ಪಕ್ವ) ಕಬ್ಬಿನಿಂದ ಹೆಚ್ಚು ಸಕ್ಕರೆ ಮತ್ತು ತೂಕವು ಲಭಿಸುತ್ತದೆ.
- ಪ್ರಸಕ್ತ ಕಬ್ಬು ಕೊರತೆಯ ದಿನಮಾನಗಳಲ್ಲಿ ಕಟಾವುದಾರರಿಗೆ ನಿಗದಿತ ದರಕ್ಕಿಂತ ಹೆಚ್ಚು ಹಣ (ಲಗಾಣಿ) ಕೊಡುವ ಅವಶ್ಯಕತೆಯಿರುವುದಿಲ್ಲ, ಸ್ವಲ್ಪ ಕಾಯಬೇಕಷ್ಟೇ. ದಕ್ಷಿಣ ಕರ್ನಾಟಕದಲ್ಲಿನ ಕಟಾವು ದರಗಳು ಭಯಾನಕವಾಗಿವೆ. ಪ್ರಸ್ತುತ ಕಟಾವುದಾರರಿಗೆ ಉಳಿಯುವಷ್ಟು ಹಣವು ನೂರಾರು ಕೋಟಿ ಹಣ ಹೂಡಿದ ಕಾರ್ಖಾನೆದಾರರಿಗೆ ಮತ್ತು ಲಕ್ಷಾಂತರ ಹಣ ಖರ್ಚು ಮಾಡಿ ಕಬ್ಬು ಬೆಳೆಸುತ್ತಿರುವ ರೈತನಿಗೂ ಉಳಿಯುತ್ತಿಲ್ಲ. ಇದನ್ನು ಇತಿಮಿತಿಯೊಂದಿಗೆ ಸಾಮೂಹಿಕವಾಗಿ ಕೈಗೊಳ್ಳುವುದು ಕಡ್ಡಾಯ. ಕಾರ್ಮಿಕರ ಕೊರತೆಯ ದಿನಮಾನಗಳಲ್ಲಿ ಯೋಗ್ಯ ಕೂಲಿ ದೊರೆಯದಿದ್ದಲ್ಲಿ ಕಾರ್ಮಿಕರು ಬೇರೆ ಉದ್ಯೋಗದತ್ತ ವಲಸೆ ಹೋಗುವ ಅಪಾಯವಿರುತ್ತದೆ ಎಂಬ ಗಮನವಿರಬೇಕಷ್ಟೆ.
- ಸದ್ಯ ಅವಧಿಪೂರ್ವ ಅಂದರೆ ಗ್ಲೂಕೋಜ್ (ಪಕ್ವಪೂರ್ವ) ಹಂತದಲ್ಲಿ ಕಬ್ಬು ಕಟಾವು ಮಾಡುತ್ತಿರುವುದು ಜೋರಾಗಿದೆ, ಇದರಿಂದ ಕಬ್ಬಿನ ತೂಕ ಕಡಿಮೆಯಾಗುತ್ತದೆ. ಕಬ್ಬನ್ನು ಪಕ್ವಗೊಂಡ ನಂತರ ಅಂದರೆ ಸುಕ್ರೋಸ್ ಹಂತದಲ್ಲಿ ಕಟಾವು ಮಾಡುವುದರಿಂದ ಹೆಚ್ಚಿನ ತೂಕವು ಲಭಿಸುತ್ತದೆ. ಪ್ರಸ್ತುತ ಜಾರಿಯಲ್ಲಿರುವ ಅವಧಿಪೂರ್ವ/ಪಕ್ವಪೂರ್ವ ಕಬ್ಬು ಕಟಾವು ರೈತರಿಗೆ ಮತ್ತು ಕಾರ್ಖಾನೆಗಳಿಗೆ ಮಾರಕವಾಗಿವೆ. ಮನುಷ್ಯರಿಗೆ ತಿನ್ನಲು ಯೋಗ್ಯವಿರುವ ಕಬ್ಬಿನಿಂದ ಮಾತ್ರ ಗುಣಮಟ್ಟದ ಸಕ್ಕರೆ, ಎಥೆನಾಲ್ ಉತ್ಪಾದನೆಯಾಗುತ್ತದೆ.
- ಸದ್ಯದ ಕಬ್ಬು ಕಟಾವಿನ ಸರಾಸರಿ ಅವಧಿಯು ಕೇವಲ 9 ತಿಂಗಳಾಗಿದೆ. ಅಲ್ಪಾವಧಿ ತಳಿಗಳನ್ನು ಸೂಕ್ತ ಸಮಯದಲ್ಲಿ ನಾಟಿ ಮಾಡಿ ಮತ್ತು ಸಮರ್ಪಕ ನಿರ್ವಹಣೆ ಮಾಡಿ ಸರಾಸರಿ 12 ತಿಂಗಳಿಗೆ ಕಾರ್ಖಾನೆಗೆ ಪೂರೈಸಿದಲ್ಲಿ ಹೆಕ್ಟೇರಿಗೆ ನಿಗದಿತ ತೂಕಕ್ಕಿಂತ ಸರಾಸರಿ 15 ಟನ್ ಹೆಚ್ಚಿಗೆ ತೂಕವನ್ನು ಪಡೆಯಬಹುದಾಗಿದೆ.
- ಉಪಗ್ರಹ, ಡ್ರೋನ್, ಕೃತಕ ಬುದ್ಧಿಮತ್ತೆ ಹಾಗೂ ಜಿಪಿಎಸ್ ಆಧಾರಿತ ಕಬ್ಬು ಕೃಷಿ ನಿರ್ವಹಣೆಯಿಂದ ಅನಗತ್ಯ ಖರ್ಚುಗಳನ್ನು ನಿಯಂತ್ರಿಸಬಹುದು. ಇದು ಕಡಿಮೆ ಕ್ಷೇತ್ರದಲ್ಲಿ ಕಡಿಮೆ ಖರ್ಚಿನೊಂದಿಗೆ ಹೆಚ್ಚು ಇಳುವರಿ ಪಡೆಯುವ ಆಧುನಿಕ ಪದ್ಧತಿಯಾಗಿದೆ.
- ಅಲ್ಪಾವಧಿ ತಳಿಯ ಕಬ್ಬನ್ನು ನಾಟಿ ಮಾಡುವುದರಿಂದ ಕಾರ್ಖಾನೆಗೆ ಹೆಚ್ಚು ಆದಾಯವಾಗುತ್ತದೆ. ಇದರಿಂದ ರೈತರಿಗೂ ಹೆಚ್ಚಿನ ಪಾಲು ಲಭಿಸುತ್ತದೆ. ಅಲ್ಪಾವಧಿ ಕಬ್ಬು ತಳಿಗಳು ವಿಶೇಷವಾಗಿ ಸುಂಕ (ಮುಳ್ಳು)ಗಳನ್ನು ಹೊಂದಿರುವುದರಿಂದ ರೈತರು ನಾಟಿ ಮಾಡಲು ಹಿಂಜರಿಯುತ್ತಾರೆ. ಸದ್ಯ ಯಾಂತ್ರೀಕೃತ ಕಟಾವು ಸಾಧ್ಯವಿರುವುದರಿಂದ ಅಲ್ಪಾವಧಿ ತಳಿಗಳ ಕಟಾವಿಗೆ ಸಮಸ್ಯೆಯಾಗುವುದಿಲ್ಲ.
- ಕಬ್ಬು ನಾಟಿ ಮಾಡುವ ಸಮಯವು ವಿಶೇಷವಾಗಿ ಮೇ ತಿಂಗಳಿನಿಂದ ಸೆಪ್ಟೆಂಬರ್‌ವರೆಗೆ ಇರುತ್ತದೆ. ಈ ಅವಧಿಯಲ್ಲಿ ವಾತಾವರಣವು ಹೆಚ್ಚು ಆರ್ದ್ರತೆಯನ್ನು ಹೊಂದಿರುವುದರಿಂದ ಬೀಜವು ಹೆಚ್ಚಿನ ಪ್ರಮಾಣದಲ್ಲಿ ಮೊಳಕೆಯೊಡೆಯುತ್ತದೆ.
- ಸದ್ಯ ಕಾರ್ಖಾನೆಗಳು ಕಬ್ಬು ಕೊರತೆಯಿಂದ 200ರಿಂದ 250 ದಿನಗಳ ಬದಲಾಗಿ ಸರಾಸರಿ 120 ದಿನಗಳು ಮಾತ್ರ ಕಬ್ಬು ಅರೆಯುತ್ತಿವೆ. ಕಡು ಬೇಸಗೆಯ ಪೂರ್ವದಲ್ಲಿಯೇ ಕಾರ್ಖಾನೆಗಳು ಸಂಪೂರ್ಣ ಕಬ್ಬು ಅರೆದು ಮುಗಿಸುತ್ತಿವೆ. ಇಂಥ ಸಂದರ್ಭದಲ್ಲಿ ಯಾವುದೇ ಕಾರಣಕ್ಕೂ ಕಬ್ಬು ಕಟಾವು ಮಾಡಲು ರೈತರು ಅವಸರಪಡುವ ಅವಶ್ಯಕತೆಯಿರುವುದಿಲ್ಲ.
- ಸದ್ಯ ಕಾರ್ಖಾನೆಗಳು ಹೆಚ್ಚಾಗಿದ್ದು, ಹಿಂದಿನಂತೆ ಕಬ್ಬು ಕಟಾವಾಗದೆ ಉಳಿಯುವ ಭಯವಿಲ್ಲ, ಆದ್ದರಿಂದ ರೈತರು ಸಮೀಪದ ಕಾರ್ಖಾನೆಗಳಿಗೆ ಕಬ್ಬು ಪೂರೈಸಬೇಕು. ಇದರಿಂದ ಸಾಗಾಣಿಕೆ ವೆಚ್ಚವನ್ನು ಉಳಿಸಿ ಹೆಚ್ಚಿನ ಲಾಭ ಪಡೆಯಬಹುದು.

ಬೆಳೆಗಾರರು ಈ ಕ್ರಮಗಳನ್ನು ಅಳವಡಿಸಿಕೊಂಡಲ್ಲಿ ಕಬ್ಬು ಬೆಳೆಯಿಂದ ಮತ್ತಷ್ಟು ಆದಾಯವನ್ನು ಪಡೆಯಬಹುದಾಗಿದೆ.

**(ಲೇಖಕರು ಕೃಷಿ ತಜ್ಞರು ಹಾಗೂ ಸಹಾಯಕ ಮಹಾ ಪ್ರಬಂಧಕರು)**

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Edited & Published by : VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942, Printed at M/s Digantha Mudhrana Ltd. NT Road, Shivamogga - 577 201
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue: 210

## ಸಮಾಚಾರ ಸಣ್ಣದಲ್ಲ

### ಶ್ವೇತಭವನ: ಒಬಾಮ, ಬುಷ್ ಚಿತ್ರ ಸ್ಥಳಾಂತರ

**ವಾಷಿಂಗ್ಟನ್:** ಶ್ವೇತಭವನದ ಪ್ರವೇಶ ದ್ವಾರದಲ್ಲಿದ್ದ ಮಾಜಿ ಅಧ್ಯಕ್ಷ ಬರಾಕ್ ಒಬಾಮಾ ಅವರ ಭಾವಚಿತ್ರ ಎತ್ತಂಗಡಿಯಾಗಿದೆ. ಅದನ್ನು ಶ್ವೇತಭವನದಲ್ಲೇ ಕಡಿಮೆ ಪ್ರಾಮುಖ್ಯವಿರುವ ಜಾಗಕ್ಕೆ ಸ್ಥಳಾಂತರಿಸಲಾಗಿದೆ ಎಂದು 'ಸಿಎನ್‌ಎನ್' ಮಾಧ್ಯಮಸಂಸ್ಥೆ ವರದಿ ಮಾಡಿದೆ. ಡೊನಾಲ್ಡ್ ಟ್ರಂಪ್ ಮೊದಲ ಅವಧಿಯಲ್ಲಿ ಅಧ್ಯಕ್ಷರಾಗಿದ್ದ ಅವಧಿಗೂ ಮುಂಚೆ ಒಬಾಮ ಅಧ್ಯಕ್ಷರಾಗಿದ್ದರು. ಆಗ ಇಬ್ಬರ ನಡುವೆ ವಿವಾದವೇ ಹೆಚ್ಚಾಗಿತ್ತು. ಒಬಾಮ ಅವರದ್ದಷ್ಟೇ ಅಲ್ಲದೇ ಮಾಜಿ ಅಧ್ಯಕ್ಷ ಜಾರ್ಜ್ ಡಬ್ಲ್ಯು. ಬುಷ್ ಮತ್ತು ಅವರ ತಂದೆ ಜಾರ್ಜ್ ಎಚ್.ಡಬ್ಲ್ಯು.ಬುಷ್ ಅವರ ಭಾವಚಿತ್ರಗಳನ್ನೂ ಸ್ಥಳಾಂತರಿಸಲಾಗಿದೆ. ಒಬಾಮಾ ಭಾವಚಿತ್ರವನ್ನು ಗ್ರ್ಯಾಂಡ್ ಮೆಟ್ಟಿಲುಗಳ ಮೇಲ್ಭಾಗಕ್ಕೆ ಸ್ಥಳಾಂತರಿಸುವಂತೆ ಶ್ವೇತಭವನ ಸಿಬ್ಬಂದಿಗೆ ಟ್ರಂಪ್ ನಿರ್ದೇಶನ ನೀಡಿದ್ದಾರೆ ಎಂದು ಮೂಲಗಳು ತಿಳಿಸಿರುವುದಾಗಿ 'ಸಿಎನ್‌ಎನ್' ವರದಿ ಮಾಡಿದೆ.

### ದೆಹಲಿ-ವಾಷಿಂಗ್ಟನ್ ಎಐ ವಿಮಾನ ಸ್ಥಗಿತ

**ದೆಹಲಿ:** ದೆಹಲಿ-ವಾಷಿಂಗ್ಟನ್ ಡಿಸಿ ಮಾರ್ಗದಲ್ಲಿನ ವಿಮಾನ ಸಂಚಾರ ಸೇವೆಯನ್ನು ಸೆ.1ರಿಂದ ಸ್ಥಗಿತಗೊಳಿಸುವುದಾಗಿ ಏರ್ ಇಂಡಿಯ ವಿಮಾನಯಾನ ಸಂಸ್ಥೆ ಸೋಮವಾರ ಪ್ರಕಟಿಸಿದೆ. ಕಾರ್ಯಾಚರಣೆ- ನಿರ್ವಹಣಾ ವೆಚ್ಚ ಮತ್ತಿತರ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಹಾಗೂ ಮಾರ್ಗದ ವಿಶ್ವಾಸಾರ್ಹತೆ ಖಚಿತಪಡಿಸಿಕೊಳ್ಳಲು ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಸೆ.1ರ ನಂತರ ವಾಷಿಂಗ್ಟನ್ ಡಿ.ಸಿ.ಗೆ ಸಂಚರಿಸುವ, ಅಲ್ಲಿಂದ ಭಾರತಕ್ಕೆ ಬರಲು ಟಿಕೆಟ್ ಕಾಯ್ದಿರಿಸಿದ್ದ ಪ್ರಯಾಣಿಕರನ್ನು ಸಂಪರ್ಕಿಸಿ ಪೂರ್ಣ ಹಣ ಮರುಪಾವತಿ ಅಥವಾ ಪರ್ಯಾಯ ಪ್ರಯಾಣ ವ್ಯವಸ್ಥೆ ಮಾಡಲಾಗುತ್ತಿದೆ ಎಂದು ಎಐ ಸಂಸ್ಥೆ ತಿಳಿಸಿದೆ. ಇದಕ್ಕೆ ಹೊರತಾಗಿ, ಕೆನಡಾದ ಟೊರೊಂಟೊ ಮತ್ತು ವ್ಯಾಂಕೋವರ್ ಹಾಗೂ ಉತ್ತರ ಅಮೆರಿಕದ 6 ತಾಣಗಳಿಗೆ ತಡೆರಹಿತ ವಿಮಾನ ಸೇವೆ ಮುಂದುವರಿಯುತ್ತದೆ ಎಂದೂ ಸಂಸ್ಥೆ ಹೇಳಿದೆ.

### ಇಸ್ರೇಲ್ ಕ್ಷಿಪಣಿ ದಾಳಿ: 5 ಪತ್ರಕರ್ತರ ಸಾವು?

**ಗಾಜಾ:** ಗಾಜಾ ಸಿಟಿ ಮೇಲೆ ಇಸ್ರೇಲ್ ಕ್ಷಿಪಣಿ ದಾಳಿ ನಡೆಸಿದ್ದು, ಅಲ್ ಜಝೀರಾ ಮಾಧ್ಯಮ ಸಂಸ್ಥೆಯ ಇಬ್ಬರು ವರದಿಗಾರರು ಮತ್ತು ಮೂವರು ಕ್ಯಾಮೆರಾಮೆನ್‌ಗಳು ಸಾವನ್ನಪ್ಪಿದ್ದಾರೆ ಎಂದು ಅಲ್‌ಜಝೀರಾ ಸೋಮವಾರ ವರದಿ ಮಾಡಿದೆ. ಗಾಜಾ ಸಿಟಿಯಲ್ಲಿ ಮಾಧ್ಯಮದವರ ವಸತಿಗಾಗಿ ನಿರ್ಮಿಸಿದ್ದ ಟೆಂಟ್‌ಗಳ ಮೇಲೆಯೇ ಇಸ್ರೇಲ್ ಕ್ಷಿಪಣಿಗಳು ಅಪ್ಪಳಿಸಿವೆ. ಪರಿಣಾಮ ಅಲ್ ಜಝೀರಾದ ಪತ್ರಕರ್ತ ಅನಾಸ್ ಅಲ್ ಶರೀಫ್, ಮೊಹಮ್ಮದ್ ಕ್ರೀಕೆಹ್ ಮತ್ತು ಕ್ಯಾಮೆ ರಾಮೆನ್‌ಗಳಾದ ಇಬ್ರಾಹಿಂ ಜಹೀರ್, ಮೊಹಮ್ಮದ್ ನೌಫಲ್ ಮತ್ತು ಮೊವಾಮೆನ್ ಅಲಿವಾ ಸಾವನ್ನಪ್ಪಿದ್ದಾರೆ ಎಂದು ವರದಿಗಳು ತಿಳಿಸಿವೆ. ಆದರೆ, ಈ ಸುದ್ದಿಯನ್ನು ನಿರಾಕರಿಸಿರುವ ಇಸ್ರೇಲ್ ಸರಕಾರ, ಅನಾಸ್ ಅಲ್-ಶರೀಫ್ ಒಬ್ಬ ಭಯೋತ್ಪಾದಕ. ಆತ ಹಮಾಸ್ ಘಟಕದ ಮುಖ್ಯಸ್ಥನಾಗಿದ್ದ. ಪತ್ರಕರ್ತರಂತೆ ವೇಷ ಧರಿಸಿದ್ದ. ಅವರ ತಂಡ ಇಸ್ರೇಲ್‌ನ ನಾಗರಿಕರು ಮತ್ತು ಸೇನಾಪಡೆ ಮೇಲೆ ರಾಕೆಟ್ ದಾಳಿ ನಡೆಸಲು ಯೋಜಿಸಿದ್ದರು.

ಅಮೆರಿಕದಲ್ಲಿ ನಿಂತು ಮುನೀರ್ ಬೆದರಿಕೆಗೆ ಭಾರತದ ತೀಕ್ಷ್ಣ ಪ್ರತಿಕ್ರಿಯೆ! | ಪಾಕ್ ಸೇನಾಧಿಕಾರಿ ಮಾತಿಗೆ ಅವಕಾಶ: ಅಮೆರಿಕ ನಡೆಗೆ ಭಾರತ ವಿಷಾದ | ಪರಮಾಣು ಅಸ್ತ್ರ: ಭಾರತದ ಬಳಿ ಸದ್ಯ 180, ಪಾಕ್‌ನಲ್ಲಿ 170 ಸಂಗ್ರಹ

# ಪಾಕ್ ಗೊಡ್ಡು ಬೆದರಿಕೆ ಲೆಕ್ಕಕ್ಕಿಲ್ಲ: ಭಾರತ

**ದೆಹಲಿ:** ಪಾಕಿಸ್ತಾನದ ಅಣ್ವಸ್ತ್ರ ಪ್ರಯೋಗಿಸುವ ಹೇಳಿಕೆಗಳಿಗೆ ಹೆದರುವ ಮಾತೇ ಇಲ್ಲ. ಅಂತಹ ಗೊಡ್ಡು ಬೆದರಿಕೆಗಳನ್ನು ನಾವೆಂದೂ ಲೆಕ್ಕಿಸುವುದೂ ಇಲ್ಲ ಎಂದು ಭಾರತ ದಿಟ್ಟವಾಗಿ ಹೇಳಿದೆ.

ಪಾಕ್ ಸೇನಾ ಮುಖ್ಯಸ್ಥ ಅಸಿಮ್ ಮುನೀರ್ ಅಮೆರಿಕದಲ್ಲಿ ಮಾತನಾಡಿ, 'ನಮ್ಮ ಬಳಿ ಅಣ್ವಸ್ತ್ರಗಳಿವೆ. ಅವನ್ನು ಬಳಸಿ ಅರ್ಧ ವಿಶ್ವವನ್ನೇ ನಾವು ನಾಶಪಡಿಸಬಲ್ಲೆವು' ಎಂದು ಬೆದರಿಕೆ ಹಾಕಿರುವುದಕ್ಕೆ ಭಾರತದ ವಿದೇಶಾಂಗ ಸಚಿವಾಲಯ ಸೋಮವಾರ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದೆ.

ಪರಮಾಣು ಶಸ್ತ್ರಾಸ್ತ್ರಗಳ ಮುಂದಿಟ್ಟುಕೊಂಡು ಬೆದರಿಕೆ ಹಾಕುವುದು ಪಾಕಿಸ್ತಾನದ ಹಳೆಯ ಅಭ್ಯಾಸ. ಇಂತಹ ಪರಮಾಣು ಬ್ಲ್ಯಾಕ್‌ಮೇಲ್‌ಗಳಿಗೆ ಭಾರತ ಎಂದೂ ಮಣಿಯುವುದಿಲ್ಲ. ದೇಶವನ್ನು ಹೇಗೆ ರಕ್ಷಿಸಿಕೊಳ್ಳಬೇಕು. ಇಂಥ ಗೊಡ್ಡು ಬೆದರಿಕೆ ಹಾಕುವವರಿಗೆ ಹೇಗೆ ಪಾಠ ಕಲಿಸಬೇಕು ಎಂಬುದು ಭಾರತಕ್ಕೆ ಚೆನ್ನಾಗಿ ತಿಳಿದಿದೆ ಎಂದು ವಿದೇಶಾಂಗ ಸಚಿವಾಲಯ ದೃಢವಾಗಿ ಹೇಳಿದೆ. ಅಮೆರಿಕ ದೇಶದಲ್ಲಿ ಇದ್ದಾಗಲೇ ಇಂಥ ಹೇಳಿಕೆ ನೀಡಲು ಅವಕಾಶ ಮಾಡಿಕೊಟ್ಟಿರುವುದು ಬಹಳ ವಿಷಾದನೀಯ. ಅಮೆರಿಕದಂತಹ ದೇಶ ಇಂಥ ನಡೆಗೆ ಹೇಗೆ ಅವಕಾಶ ಮಾಡಿಕೊಟ್ಟಿದೆ ಎಂಬುದೇ ಆಶ್ಚರ್ಯದಾಯಕ ಎಂದೂ ಭಾರತ ಪ್ರತಿಕ್ರಿಯಿಸಿದೆ.



### ಬೇಜವಾಬ್ದಾರಿ ದೇಶದಲ್ಲಿ ಅಣ್ವಸ್ತ್ರ ಅಪಾಯಕಾರಿ

**ಅಣ್ವಸ್ತ್ರ ಸಜ್ಜಿತ ದೇಶವೊಂದರ ಸೇನಾ ಮುಖ್ಯಸ್ಥನ ಇಂತಹ ಹೇಳಿಕೆಗಳು ಎಷ್ಟು ಬೇಜವಾಬ್ದಾರಿಯುತ ಎಂಬುದನ್ನು ಜಗತ್ತು ಅರ್ಥ ಮಾಡಿಕೊಳ್ಳಬೇಕಿದೆ. ಇಂಥ ಮನಸ್ಥಿತಿ ಇರುವ ಸೇನಾಧಿಕಾರಿ ಇರುವ ದೇಶದಲ್ಲಿ ಪರಮಾಣು ಶಸ್ತ್ರಾಸ್ತ್ರಗಳು ಅದು ಹೇಗೆ ಸುರಕ್ಷಿತವಾಗಿರಲು ಸಾಧ್ಯ? ಅದರಲ್ಲೂ ಸೇನಾಪಡೆಯೇ ಭಯೋತ್ಪಾದಕರ ಜತೆ ನೇರ ಸಂಪರ್ಕ ಹೊಂದಿರುವ ದೇಶದಲ್ಲಿ ಅಣ್ವಸ್ತ್ರಗಳ ಸಂಗ್ರಹ ಅದೆಷ್ಟು ಸುರಕ್ಷಿತ? ಪಾಕ್ ಸೇನಾಧಿಕಾರಿಯ ಈ ನಡೆ ಇಂಥ ವಿಷಯಗಳಲ್ಲಿ ಭಾರೀ ಅನುಮಾನ ಹುಟ್ಟುಹಾಕುತ್ತದೆ. ಈ ಬಗ್ಗೆ ಅಂತಾರಾಷ್ಟ್ರೀಯ ಸಮುದಾಯ ಗಂಭೀರವಾಗಿ ಪರಿಗಣಿಸಬೇಕಿದೆ ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಶ್ವಾಲ್ ಹೇಳಿದ್ದಾರೆ.**

### ಮುನೀರ್ ಮಾತಲ್ಲಿದೆಯೇ ಟ್ರಂಪ್‌ಕಾರ್ಡ್?

**ಆಪರೇಷನ್ ಸಿಂದೂರ್ ಸಮಯದಲ್ಲಿ ಹೆದರಿಕೊಂಡು ಬಂಕರ್‌ನಲ್ಲಿ ಅಡಗಿಕೊಂಡಿದ್ದ ಪಾಕ್ ಸೇನಾಧಿಕಾರಿ ಅಸೀಮ್ ಮುನೀರ್, ಆ ಬಳಿಕ ಜೂನ್‌ನಲ್ಲಿ ಡೊನಾಲ್ಡ್ ಟ್ರಂಪ್ ಕರೆಯ ಮೇರೆಗೆ ಅಮೆರಿಕಕ್ಕೆ ಭೇಟಿ ನೀಡಿದ್ದರು. ಶ್ವೇತಭವನದಲ್ಲಿ ವಿಶೇಷ ಔತಣಕೂಟದಲ್ಲಿ ಟ್ರಂಪ್ ಜತೆ ಭಾರೀ ಮಾತುಕತೆ ನಡೆಸಿದ್ದರು. ಅಮೆರಿಕದಿಂದ ಹಿಂದಿರುಗಿದ ಬಳಿಕ ಅಸೀಮ್ ಮುನೀರ್ ಭಾರತದ ವಿರುದ್ಧ ಮತ್ತೆ ಜೋರು ಮಾತನಾಡಲಾರಂಭಿಸಿದ್ದರು. ಈಗ ಎರಡನೇ ಬಾರಿಗೆ ಅಮೆರಿಕಕ್ಕೆ ಭೇಟಿ ನೀಡಿ ಅಮೆರಿಕದ ಹಿರಿಯ ಸೇನಾಧಿಕಾರಿಗಳು ಮತ್ತು ರಾಜಕೀಯ ನಾಯಕರನ್ನು ಜತೆ ಮಾತುಕತೆ ನಡೆಸಿದ್ದಾರೆ. ಆ ಬಳಿಕ ಅಮೆರಿಕದಲ್ಲಿ ಇರುವಾಗಲೇ ಭಾರತದ ಮೇಲೆ ವಾಗ್ದಾಳಿ ನಡೆಸಿರುವುದು, ಬೆದರಿಕೆ ಹಾಕುತ್ತಿರುವುದು ಅಚ್ಚರಿಗೆ ಕಾರಣವಾಗಿದೆ. ಮುನೀರ್‌ರ ಈ ಅಣ್ವಸ್ತ್ರದ ಪೊಳ್ಳು ಬೆದರಿಕೆ, ಸಿಂಧೂ ಅಣೆಕಟ್ಟೆಗೆ ಬಾಂಬ್ ದಾಳಿ ಮಾತುಗಳ ಹಿಂದೆ ಡೊನಾಲ್ಡ್ ಟ್ರಂಪ್ ಅವರ ಕೀಟಲೆ ರಾಜಕಾರಣ ಇರಬಹುದೆಂಬ ಶಂಕೆ ವ್ಯಕ್ತವಾಗಿದೆ.**

ಕಾಶ್ಮೀರ ನಮ್ಮ ಕಣ್ಣಿನ ರಕ್ತನಾಳ: ಅಸೀಮ್ ಮುನೀರ್ ಬೆದರಿಕೆ

## ಅಣ್ವಸ್ತ್ರ ಬಳಸಿ ಅರ್ಧ ವಿಶ್ವ ನಾಶ: ಪಾಕ್

**ವಾಷಿಂಗ್ಟನ್:** ಕಾಶ್ಮೀರ ನಮ್ಮ ಕಣ್ಣಿನ ರಕ್ತನಾಳ. ಕಾಶ್ಮೀರದಲ್ಲಿನ ನಮ್ಮ ಅಸ್ತಿತ್ವಕ್ಕೆ ಧಕ್ಕೆ ಉಂಟಾದರೆ ನಮ್ಮಲ್ಲಿರುವ ಅಣ್ವಸ್ತ್ರವನ್ನು ಬಳಸುತ್ತೇವೆ. ಅರ್ಧ ವಿಶ್ವವನ್ನೇ ನಾಶಪಡಿಸುತ್ತೇವೆ ಎಂದು ಪಾಕಿಸ್ತಾನ ಮತ್ತೊಮ್ಮೆ ಅಣುಬಾಂಬ್ ದಾಳಿ ಬೆದರಿಕೆ ಹಾಕಿದೆ.

ಪಹಲ್ಗಾಮ್ ಭಯೋತ್ಪಾದಕ ದಾಳಿ, ಆ ಬಳಿಕ ಭಾರತದಿಂದ ಆಪರೇಷನ್ ಸಿಂದೂರ್ ಕಾರ್ಯಾಚರಣೆ ನಡೆದ ನಂತರ ಅಮೆರಿಕಕ್ಕೆ ಮೊದಲ ಭೇಟಿ ನೀಡಿದ್ದ ಪಾಕ್ ಸೇನಾ ಮುಖ್ಯಸ್ಥ ಫೀಲ್ಡ್ ಮಾರ್ಷಲ್ ಅಸಿಮ್ ಮುನೀರ್, ಈಗ 2ನೇ ಬಾರಿಗೆ ಅಮೆರಿಕಕ್ಕೆ ತೆರಳಿ ಅಲ್ಲಿಂದಲೇ ಅಣ್ವಸ್ತ್ರದ ಬೆದರಿಕೆ ಹಾಕಿದ್ದಾರೆ.

ಪಾಕಿಸ್ತಾನದ ಗೌರವ ಕಾನ್ಸುಲ್ ಆಗಿರುವ ಉದ್ಯಮಿ ಅದ್ನಾನ್ ಅಸಾದ್ ಅವರಿಗಾಗಿ ಫ್ಲೋರಿಡಾ ರಾಜ್ಯದ ಟ್ಯಾಂಪಾದಲ್ಲಿ ಆಯೋಜಿಸಲಾಗಿದ್ದ ಬ್ಲ್ಯಾಕ್-ಟೈ ಭೋಜನಕೂಟದಲ್ಲಿ ಪಾಕ್ ಮೂಲದ ಅಮೆರಿಕ ನಿವಾಸಿಗಳನ್ನು ಉದ್ದೇಶಿಸಿ ವೀರಾವೇಶದಿಂದ ಮಾತನಾಡಿರುವ ಮುನೀರ್, 'ಪಾಕ್ ಅಣ್ವಸ್ತ್ರ ಸಜ್ಜಿತ ದೇಶ. ನಮ್ಮ ಅಸ್ತಿತ್ವಕ್ಕೆ ಧಕ್ಕೆಯಾದರೆ ನಮ್ಮೊಂದಿಗೆ ಅರ್ಧ ವಿಶ್ವವನ್ನೂ ನಾಶಪಡಿಸಿಬಿಡುತ್ತೇವೆ ಎಂದು ಬೆದರಿಕೆ ಹಾಕಿದ್ದಾರೆ. ಭಾರತ ಫೆರಾರಿಯಂತಹ ಹೆದ್ದಾರಿಯಲ್ಲಿ ಬರುವ ಮರ್ಸಿಡಿಸ್. ಪಾಕಿಸ್ತಾನ ಕಲ್ಲುಗಳಿಂದ ತುಂಬಿದ ಡಂಪ್ ಟ್ರಕ್. ಎರಡರ ನಡುವೆ ಮುಖಾಮುಖಿ ಡಿಕ್ಕಿಯಾದರೆ ಯಾರಿಗೆ ಹೆಚ್ಚು ನಷ್ಟ ಹೇಳಿ? ಎಂದು ಮುನೀರ್ ಅಣಕವಾಡಿದ್ದಾರೆ.

ಈ ಔತಣಕೂಟಕ್ಕೆ ಅತಿಥಿಗಳು ಮೊಬೈಲ್, ಇತರೆ ಡಿಜಿಟಲ್ ಸಾಧನ ಒಯ್ಯುವುದಕ್ಕೆ ನಿಷೇಧವಿದ್ದ ಕಾರಣ ಮುನೀರ್ ಆಟಾಟೋಪದ ಮಾತುಗಳ ವಿಡಿಯೊ, ಧ್ವನಿಮುದ್ರಿಕೆ ಲಭ್ಯವಾಗಿಲ್ಲ. ಆದರೆ, ಅಲ್ಲಿ ಹಾಜರಿದ್ದವರ ಹೇಳಿಕೆಗಳನ್ನು ಆಧರಿಸಿ 'ದಿ ಪ್ರಿಂಟ್' ಮಾಧ್ಯಮ ಸಂಸ್ಥೆ ಈ ಬಗ್ಗೆ ವಿವರ ವರದಿ ಮಾಡಿದೆ.

### ಸಿಂಧೂಗೆ ಅಣೆ ಕಟ್ಟಿದರೆ ಬಾಂಬ್ ದಾಳಿ

**ಜಲ ಒಪ್ಪಂದ ಅಮಾನತುಗೊಳಿಸಿದ ಭಾರತವನ್ನು ಗುರಿಯಾಗಿಸಿ ಮಾತನಾಡಿದ ಅಸಿಮ್ ಮುನೀರ್, ಸಿಂಧೂ ನದಿ ಭಾರತೀಯರ ಆಸ್ತಿಯಲ್ಲ. ಅದರಲ್ಲಿ ಪಾಕ್‌ಗೂ ಹಕ್ಕು ಇದೆ. ನದಿ ನೀರನ್ನು ತಡೆಯುವ ನಿರ್ಧಾರ 25 ಕೋಟಿ ಪಾಕ್ ಜನರು ಹಸಿವಿನಿಂದ ಬಳಲುವಂತೆ ಮಾಡುತ್ತದೆ. ಭಾರತ ಅಣೆಕಟ್ಟು ನಿರ್ಮಿಸುವವರೆಗೆ ಕಾಯಿರಿ, ನಂತರ 10 ಕ್ಷಿಪಣಿಗಳಿಂದ ಅಣೆಕಟ್ಟೆಯನ್ನೇ ಉಡಾಯಿಸಿಬಿಡುತ್ತೇವೆ ಎಂದು ವೀರಾವೇಶದಿಂದ ಹೇಳಿದ್ದಾರೆ. ಅಲ್ಲದೇ, ಪಾಕ್‌ನ ನೆಲದಲ್ಲಿ ಇನ್ನೂ ಬಳಸದೇ ಇರುವ ತೈಲ ಮತ್ತು ಖನಿಜ ಸಂಪತ್ತು ಅಪಾರವಾಗಿದೆ ಎಂದು ಹೇಳಿಕೊಂಡು, ಪಾಕ್ ಅದೆಷ್ಟು ಸಬಲವಾಗಿದೆ ಎಂದೂ ಕೊಚ್ಚಿಕೊಂಡಿದ್ದಾರೆ.**

ಪ್ರಾಣಿಪ್ರಿಯರೇ ದೂರ ಇರಿ: ಸುಪ್ರೀಂ ಎಚ್ಚರಿಕೆ | ತಡೆಯಾಜ್ಞೆಗೆ ಯತ್ನಿಸಿದರೆ ನ್ಯಾಯಾಂಗ ನಿಂದನೆ | ದೆಹಲಿ ಎನ್‌ಸಿಆರ್‌ನಲ್ಲಿ 10 ಲಕ್ಷ ಬೀದಿನಾಯಿ!

# 8 ವಾರಗಳಲ್ಲಿ ದೆಹಲಿ ನಗರ ಬೀದಿನಾಯಿ ಮುಕ್ತಗೊಳಿಸಿ

**ದೆಹಲಿ:** ದೆಹಲಿಯ ರಾಷ್ಟ್ರೀಯ ರಾಜಧಾನಿ ಪ್ರದೇಶ(ಎನ್‌ಸಿಆರ್)ವನ್ನು 8 ವಾರಗಳಲ್ಲಿ ಸಂಪೂರ್ಣ ಬೀದಿನಾಯಿ ಮುಕ್ತಗೊಳಿಸುವಂತೆ ದೆಹಲಿ ಸರಕಾರ ಮತ್ತು ದೆಹಲಿ ಮಹಾನಗರ ಪಾಲಿಕೆ ಹಾಗೂ ನಗರ ಪಾಲಿಕೆಗಳಿಗೆ ಸುಪ್ರೀಂ ಕೋರ್ಟ್ ಸೋಮವಾರ ಕಟ್ಟುನಿಟ್ಟಿನ ಆದೇಶ ನೀಡಿದೆ. ಪ್ರಸ್ತುತ ದೆಹಲಿ ಎನ್ ಸಿಆರ್‌ನಲ್ಲಿ 10 ಲಕ್ಷಕ್ಕೂ ಅಧಿಕ ಬೀದಿನಾಯಿ ಇರಬಹುದು ಎಂಬ ಅಂದಾಜಿದೆ.

ಬೀದಿ ನಾಯಿ ದಾಳಿ ಮತ್ತು ನಾಯಿಯಿಂದ ಕಡಿತಕ್ಕೆ ಒಳಗಾದವರು ರೇಬೀಸ್ ರೋಗದಿಂದ ನರಳಿ ಸಾವಿಗೀಡಾಗುತ್ತಿರುವ ಪ್ರಕರಣಗಳು ಹೆಚ್ಚುತ್ತಿರುವ ಬಗೆಗೆ ಮಾಧ್ಯಮದಲ್ಲಿ ಪ್ರಕಟವಾದ ವರದಿಗಳನ್ನು ಆಧರಿಸಿ 'ಸುಮೊಟೊ'(ಸ್ವಯಂಪ್ರೇರಿತ) ದೂರು ದಾಖಲಿಸಿಕೊಂಡಿದ್ದ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಜೆ.ಬಿ.ಪಾರದಿವಾಲಾ ಮತ್ತು ನ್ಯಾ. ಆರ್.ಮಹಾದೇವನ್ ಅವರ ದ್ವಿಸದಸ್ಯ ಪೀಠ, ಕೆಲವೇ ದಿನಗಳಲ್ಲಿ ಈ ಮಹತ್ವದ ಆದೇಶ ಹೊರಡಿಸಿದೆ.

ಬೀದಿ ನಾಯಿಗಳ ಹಾವಳಿಯಿಂದಾಗಿ ನೂರಾರು ಮಕ್ಕಳು ಮತ್ತು ವೃದ್ಧರು ಗಾಯಗೊಂಡಿದ್ದಾರೆ. ಕೆಲವರು ರೇಬಿಸ್ ರೋಗದಿಂದ ಸಾವನ್ನಪ್ಪಿದ್ದಾರೆ. ರೇಬಿಸ್ ರೋಗಕ್ಕೆ ಬಲಿಯಾದವರನ್ನು ಮರಳಿ ಜೀವಂತ ಕರೆತರಲು ಪ್ರಾಣಿದಯಾ ಸಂಘಗಳ ಹೋರಾಟಗಾರರಿಗೆ ಸಾಧ್ಯವಿದೆಯೇ? ಎಂದು ಪೀಠ ಕಟುವಾಗಿ ಪ್ರಶ್ನೆ ಮಾಡಿದೆ.

ಬೀದಿನಾಯಿಗಳನ್ನು ನಗರದಿಂದ, ಮುಖ್ಯವಾಗಿ ಜನವಸತಿ ಪ್ರದೇಶದಿಂದ ದೂರವಾಗಿಸಬೇಕು. ಆದಷ್ಟು ಬೇಗ ಕ್ರಮ ಕೈಗೊಳ್ಳಬೇಕು. ಸ್ಥಳಾಂತರಿಸಿ ಒಂದೆಡೆ ಸುರಕ್ಷಿತವಾಗಿ ಇರಿಸಬೇಕು. ಇದಕ್ಕಾಗಿ ಕಾರ್ಯಪಡೆ ಬೇಕಿದ್ದರೆ ರಚಿಸಿಕೊಳ್ಳಿ. ಈ ವಿಚಾರದಲ್ಲಿ ಯಾವುದೇ ರಾಜಿ ಮಾಡಿಕೊಳ್ಳುವಂತಿಲ್ಲ ಎಂದು ಕಟ್ಟುನಿಟ್ಟು ಆದೇಶ ನೀಡಿರುವ ಪೀಠ, ಈ ಆದೇಶವನ್ನು ನಮಗಾಗಿ ಮಾಡುತ್ತಿಲ್ಲ, ಸಾರ್ವಜನಿಕ ಹಿತಾಸಕ್ತಿಗಾಗಿ ಈ ಆದೇಶ ನೀಡಲಾಗಿದೆ. ಇದರಲ್ಲಿ ಯಾವುದೇ ರೀತಿಯ ಭಾವನೆಗಳಿಗೆ ಆಸ್ಪದವಿಲ್ಲ. ಬೀದಿನಾಯಿ ದತ್ತು ತೆಗೆದುಕೊಳ್ಳುವುದಕ್ಕೂ ಸದ್ಯ ಅವಕಾಶ ನೀಡುವುದಿಲ್ಲ ಎಂದೂ ಪೀಠ ಸ್ಪಷ್ಟವಾಗಿ ಹೇಳಿದೆ.

### ಸದ್ಯಕ್ಕೆ ನಿಯಮಗಳನ್ನು ಮರೆತುಬಿಡಿ

**ಬೀದಿನಾಯಿಗಳ ಸೆರೆ-ಸ್ಥಳಾಂತರ ಕ್ರಮದ ಬಗ್ಗೆ ನ್ಯಾಯಾಲಯ ಪ್ರಶ್ನಿಸಿದ್ದಕ್ಕೆ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು, ದೆಹಲಿಯ ಬೀದಿನಾಯಿಗಳನ್ನು ಹಿಡಿದು ಸ್ಥಳಾಂತರಿಸಲು ಒಂದು ಸ್ಥಳ ಗುರುತಿಸಲಾಗಿದೆ. ಆದರೆ ಪ್ರಾಣಿ ಹಕ್ಕುಗಳ ಕಾರ್ಯಕರ್ತರು ತಡೆಯಾಜ್ಞೆ ತಂದ ನಂತರ ಇಡೀ ಯೋಜನೆಯೇ ಸ್ಥಗಿತಗೊಂಡಿತು ಎಂದು ವಿವರಿಸಿದರು. ಆ ಬಳಿಕ, ನ್ಯಾ.ಪಾರದಿವಾಲಾ ಅವರು, ದೆಹಲಿ ಎನ್‌ಸಿಆರ್‌ನ ಎಲ್ಲಾ ವಸತಿ ಪ್ರದೇಶಗಳಿಂದ ಬೀದಿನಾಯಿಗಳನ್ನು ಹಿಡಿದು ಆಶ್ರಯ ತಾಣಗಳಿಗೆ ಬೇಗ ಸ್ಥಳಾಂತರಿಸಿ. ಸದ್ಯಕ್ಕೆ ಬೀದಿ ನಾಯಿಗಳಿಗೆ ಇರುವ ನಿಯಮಗಳನ್ನು ಮರೆತುಬಿಡಿ ಎಂದು 'ಅಮಿಕಸ್ ಕ್ಯೂರಿ'(ನ್ಯಾಯಾಲಯ ಮಿತ್ರ) ಗೌರವ್ ಅಗರ್ವಾಲಾ ಅವರಿಗೆ ಸೂಚನೆ ನೀಡಿದರು.**

**ದೆಹಲಿ ಸರಕಾರ, ದೆಹಲಿ ಮಹಾ ನಗರ ಪಾಲಿಕೆ ಮತ್ತು ನಗರ ಪಾಲಿಕೆಗಳು ಬೀದಿನಾಯಿ ಆಶ್ರಯ ಕೇಂದ್ರಗಳನ್ನು ಸ್ಥಾಪಿಸಿ ಅಲ್ಲಿಗೆ ದೆಹಲಿ ಎನ್‌ಸಿಆರ್‌ನ ಎಲ್ಲಾ ಬೀದಿ ನಾಯಿಗಳನ್ನು ಸ್ಥಳಾಂತರಿಸಬೇಕು. ಒಂದು ಬೀದಿ ನಾಯಿಯನ್ನೂ ಎನ್‌ಸಿಆರ್‌ನಲ್ಲಿ ಬಿಡಬಾರದು. ಆ ಕೇಂದ್ರಗಳನ್ನು ಸಿಸಿಟಿವಿ ಮೂಲಕ ಮೇಲ್ವಿಚಾರಣೆ ಮಾಡಬೇಕು. ಅಲ್ಲದೇ, ಸೆರೆಹಿಡಿದ ಬೀದಿನಾಯಿಗಳ ದಾಖಲೆಗಳನ್ನು ನಿತ್ಯ ನಿರ್ವಹಿಸಬೇಕು. ನಾಯಿ ಕಡಿತ ಪ್ರಕರಣಗಳನ್ನು ವರದಿ ಮಾಡಲು ವಾರದೊಳಗೆ ಸಹಾಯವಾಣಿ ಆರಂಭಿಸಬೇಕು. ರೇಬಿಸ್ ಲಸಿಕೆ ದೊರೆಯುವ ಸ್ಥಳಗಳ ಕುರಿತು ವರದಿ ಪ್ರಕಟಿಸಬೇಕು ಎಂದು ಪೀಠ ಸೂಚನೆ ನೀಡಿದೆ.**

### ನ್ಯಾಯಾಂಗ ನಿಂದನೆ: ಪೀಠದ ಕಟು ಎಚ್ಚರಿಕೆ

**ಬೀದಿ ನಾಯಿಗಳನ್ನು ದೆಹಲಿಯಿಂದ ಸ್ಥಳಾಂತರಿಸುವ ಪ್ರಕ್ರಿಯೆಯನ್ನು ತಡೆಯಲು ಯಾವುದಾದರೂ ಸಂಘಟನೆ ಅಥವಾ ಪ್ರಾಣಿಪ್ರಿಯರು ಮುಂದಾದರೆ ಅಂಥವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು. ನ್ಯಾಯಾಂಗ ನಿಂದನೆ ಕ್ರಮ ಜರುಗಿಸಲಾಗುವುದು ಎಂದು ಸುಪ್ರೀಂ ಕೋರ್ಟ್ ದ್ವಿಸದಸ್ಯ ಪೀಠ ಕಟುವಾಗಿ ಎಚ್ಚರಿಕೆ ನೀಡಿದೆ. ಈ ವಿಚಾರದಲ್ಲಿ ಕೇಂದ್ರ ಸರಕಾರದಿಂದ ಮಾತ್ರವೇ ವಾದವೇನಾದರೂ ಇದ್ದರೆ ಆಲಿಸಲು ನ್ಯಾಯಾಲಯ ಸಿದ್ಧವಿದೆ. ನಾಯಿ ಪ್ರಿಯರು ಅಥವಾ ಯಾವುದೇ ಸಂಘ-ಸಂಸ್ಥೆಗಳವರು ಈ ವಿಷಯವಾಗಿ ಅರ್ಜಿ ಸಲ್ಲಿಸಿದರೆ ಸ್ವೀಕರಿಸಲಾಗುವುದಿಲ್ಲ. ಅವರಿಗೆ ವಾದ ಮಂಡಿಸಲು ಅವಕಾಶವಿಲ್ಲ ಎಂದೂ ಪೀಠ ಸ್ಪಷ್ಟವಾಗಿ ಹೇಳಿದೆ.**

**ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ**
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಸಿನ್ ಸಂಖ್ಯೆ: U04010KA2002SGC030436
ಸಂಖ್ಯೆ: ಗುವಿಸಕಂನಿ/ಅಅ(ವಿ)(ಖರೀದಿ)/ಕಾನಿಇಂ/ಸಕಾನಿಇಂ/25-26/34194-98 ದಿನಾಂಕ:08.08.2025

**:: ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮುಖಾಂತರ) ::**

**ಪಿಸಿ-1473:** ಗು.ವಿ.ಸ.ಕಂ.ನಿ.ಯ ನಿರ್ದಿಷ್ಟತೆಯಂತೆ ಕಾರ್ಯ ಮತ್ತು ಪಾಲನೆ ವಲಯ, ಗು.ವಿ.ಸ.ಕಂ.ನಿ, ಕಲಬುರಗಿಗೆ ವಿವಿಧ ನಮೂನೆಯ ವಿದ್ಯುತ್ ಕಂಬಗಳ ತಯಾರಿಕೆ ಮತ್ತು ಪೂರೈಕೆ ಮಾಡುವುದು.
ಟೆಂಡರ್ ಮೊತ್ತ: **ರೂ. 278.16 ಲಕ್ಷ.**
**ದಿನಾಂಕ:** ಕೆಪಿಪಿ ಪೋರ್ಟಲ್‌ನಲ್ಲಿ ಬಿಡ್ ದಾಖಲೆಗಳು ಲಭ್ಯವಿರುವ ದಿನಾಂಕ: **12.08.2025** ರಂದು ಅಥವಾ ನಂತರ. ಟೆಂಡರ್ ಬಿಡ್ ಸ್ವೀಕರಿಸುವ ಕೊನೆಯ ದಿನಾಂಕ, ತಾಂತ್ರಿಕ ಬಿಡ್ ತೆರೆಯುವ ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ: ಕೆ.ಪಿ.ಪಿ ಪೋರ್ಟಲ್‌ನಲ್ಲಿರುವಂತೆ
**ಬಿಡ್ಡುದಾರರ ಅರ್ಹತೆ ವಿವರ:** ಟೆಂಡರ್ ದಸ್ತಾವೇಜು ಪ್ರಕಾರ, ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ,: ಅಧೀಕ್ಷಕ ಅಭಿಯಂತರರು (ವಿ), ಖರೀದಿ, ನಿಗಮ ಕಾರ್ಯಾಲಯ, ಗು.ವಿ.ಸ.ಕಂ.ನಿ. ಕಲಬುರಗಿ-585 102. ಮೊ.ಸಂ: 94484 99997. ಅಂತರ್ಜಾಲತಾಣದ ವಿಳಾಸ: www.kppp.karnataka.gov.in.KPP ಪೋರ್ಟಲ್‌ನ ಬಗ್ಗೆ ಮಾಹಿತಿಗಾಗಿ ಸಹಾಯವಾಣಿ +91- 8046010000 / 8068948777 / 9240214000 / 9240214001 ಗೆ ಇಮೇಲ್ ವಿಳಾಸ: support@eprochelpdesk.com ಗೆ ಸಂಪರ್ಕಿಸಬಹುದಾಗಿದೆ.
ಸಹಿ/- ಅಧೀಕ್ಷಕ ಅಭಿಯಂತರರು (ವಿ),
ಖರೀದಿ, ನಿಗಮ ಕಛೇರಿ, ಗು.ವಿ.ಸ.ಕಂ.ನಿ, ಕಲಬುರಗಿ.
ವಾ.ಸಾ.ಸಂ.ಇ/ಕಲಬುರಗಿ/380/ಕೆ.ಎಸ್.ಎಂ.ಸಿ.&ಎ/2025-26

### ಗುರಿ ಸಾಧನೆ ಮುಖ್ಯ, ಆಯ್ಕೆ ಇಲ್ಲ: ಇಸ್ರೇಲ್

**ಜೆರುಸಲೆಮ್:** ಗಾಜಾ ಮೂಲದ ಹಮಾಸ್ ಉಗ್ರ ಸಂಘಟನೆಯನ್ನು ಸಂಪೂರ್ಣವಾಗಿ ನಿರ್ಮೂಲ ಮಾಡುವುದಷ್ಟೇ ನಮ್ಮ ಗುರಿ. ಆ ಕೆಲಸವನ್ನು ಅಚ್ಚುಕಟ್ಟಾಗಿ ಮಾಡಬೇಕಷ್ಟೇ. ಅದು ಬಿಟ್ಟರೆ ಇಸ್ರೇಲ್‌ಗೆ ಬೇರೆ ಆಯ್ಕೆಗಳಿಲ್ಲ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಹೇಳಿದ್ದಾರೆ. ಜೆರುಸಲೆಮ್‌ನಲ್ಲಿ ವಿದೇಶಿ ಮಾಧ್ಯಮಗಳ ಜತೆ ಸೋಮವಾರ ಮಾತನಾಡಿದ ಅವರು, ಗಾಜಾ ಸಿಟಿ ಮೇಲೆ ಭಾನುವಾರ ನಡೆಸಿದ ಯೋಜಿತ ಕ್ಷಿಪಣಿ ದಾಳಿಯನ್ನು ಸಮರ್ಥಿಸಿದ್ದಾರೆ. ಇಸ್ರೇಲ್ ಸೇನಾಪಡೆಯ ಗುರಿ ಗಾಜಾ ಪ್ರದೇಶವನ್ನು ಆಕ್ರಮಿಸಿಕೊಳ್ಳುವುದಾಗಿ ಇಲ್ಲ, ನಮ್ಮ ಗುರಿ ಏನಿದ್ದರೂ ಇಡೀ ಗಾಜಾ ಪ್ರದೇಶವನ್ನು ಹಮಾಸ್ ಉಗ್ರರಿಂದ ಮುಕ್ತಗೊಳಿಸುವುದಾಗಿದೆ. ಇಸ್ರೇಲ್‌ನದ್ದು ಅಲ್ಲದ ಬೇರೆಯದೇ ನಾಗರಿಕ ಆಡಳಿತ ಜಾರಿಗೊಳಿಸುವುದು ನಮ್ಮ ಗುರಿಯಾಗಿದೆ. ಗಾಜಾದಲ್ಲಿ ಮುಂದಿನ ಹಂತದ ಯೋಜನೆ ಜಾರಿಗೆ ತರಲು ಕಡಿಮೆ ಸಮಯವಿದೆ ಎಂದು ನೆತನ್ಯಾಹು ಹೇಳಿದರು.

### ರಾಹುಲ್ ಪ್ರಶ್ನೆಗಳಿಗೆ ಆಯೋಗ ಉತ್ತರಿಸಲಿ

**ದೆಹಲಿ:** 2024ರಲ್ಲಿ ನಡೆದ ಲೋಕಸಭೆ ಮತ್ತು ಕೆಲವು ರಾಜ್ಯಗಳ ವಿಧಾನಸಭೆ ಚುನಾವಣೆಗಳಲ್ಲಿ ಅಕ್ರಮವಾಗಿದೆ ಎಂಬ ರಾಹುಲ್ ಗಾಂಧಿ ಆರೋಪಗಳ ಕುರಿತು ಸುದ್ದಿಸಂಸ್ಥೆಗೆ ಪ್ರತಿಕ್ರಿಯಿಸಿರುವ ಕಾಂಗ್ರೆಸ್ ಸಂಸದ ಶಶಿ ತರೂರ್, ರಾಹುಲ್ ಗಂಭೀರ ಪ್ರಶ್ನೆಗಳನ್ನು ಕೇಳಿದ್ದಾರೆ. ಅವುಗಳಿಗೆ ಚುನಾವಣಾ ಆಯೋಗ ಉತ್ತರ ನೀಡಬೇಕು ಎಂದು ಹೇಳಿದ್ದಾರೆ.

ಇಂಡಿ ಒಕ್ಕೂಟ ದೆಹಲಿಯಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಪಾದಯಾತ್ರೆ ವೇಳೆ ಸುದ್ದಿಸಂಸ್ಥೆ ಜತೆ ಶಶಿ ತರೂರ್ ಮಾತನಾಡಿದರು. 'ನನ್ನ ಮಟ್ಟಿಗೆ ವಿಷಯ ತುಂಬಾ ಸರಳ. ನಕಲಿ ಮತ, ಒಬ್ಬ ಮತದಾರನ ಹಲವು ವಿಳಾಸ, ಒಂದೇ ವಿಳಾಸದಲ್ಲಿ ಹತ್ತಾರು ಜನ ಮೊದಲಾದ ಅಂಕಿ ಅಂಶಗಳ ಕುರಿತು ರಾಹುಲ್ ಕೇಳಿರುವ ಪ್ರಶ್ನೆಗಳು ಗಂಭೀರ ಸ್ವರೂಪದವಾಗಿವೆ. ಅವುಗಳಿಗೆ ಆಯೋಗ ಉತ್ತರ ನೀಡಿದರೆ ಆಯಿತು. ಅದು ಆಯೋಗದ ಜವಾಬ್ದಾರಿ. ಚುನಾವಣೆಗಳ ವಿಶ್ವಾಸಾರ್ಹತೆ ಬಗ್ಗೆ ಜನರ ಮನಸ್ಸಿನಲ್ಲಿ ಸಂದೇಹ ಉಳಿಯದಂತೆ ಮಾಡಬೇಕಾದ ಹೊಣೆ ಆಯೋಗದ್ದಾಗಿದೆ ಎಂದು ತರೂರ್ ಹೇಳಿದ್ದಾರೆ.

### ಧನಕರ್ ಸಂಪರ್ಕಕ್ಕಿಲ್ಲ: ಹೇಬಿಯಸ್‌ಗೆ ಚಿಂತನೆ

**ದೆಹಲಿ:** ಜಗದೀಪ್ ಧನಕರ್ ಅವರು ಉಪ ರಾಷ್ಟ್ರಪತಿ ಹುದ್ದೆಗೆ ರಾಜೀನಾಮೆ ನೀಡಿದ ಬಳಿಕ ಯಾರ ಸಂಪರ್ಕಕ್ಕೂ ಸಿಗುತ್ತಿಲ್ಲ, ಅವರು ಎಲ್ಲಿದ್ದಾರೆ ಎಂಬ ಮಾಹಿತಿ ಇಲ್ಲ. ಅವರನ್ನು ಸಂಪರ್ಕಿಸುವ ಪ್ರಯತ್ನಗಳೂ ವಿಫಲವಾಗಿವೆ ಎಂದು ಶಿವಸೇನೆ (ಉದ್ಧವ್ ಬಣ) ರಾಜ್ಯ ಸಭಾ ಸದಸ್ಯ ಸಂಜಯ್ ರಾವತ್ ಸೋಮವಾರ ಹೇಳಿದ್ದಾರೆ. ಧನಕರ್ ಅವರು ಆರೋಗ್ಯದ ಕಾರಣ ನೀಡಿ ರಾಜೀನಾಮೆ ನೀಡಿದ್ದರು. ಹಾಗಾಗಿ ಅವರ ಆರೋಗ್ಯದ ಬಗೆಗೆ ಚಿಂತಿತರಾಗಿರುವ ಕೆಲವು ಸಂಸದರು ಸುಪ್ರೀಂ ಕೋರ್ಟ್‌ನಲ್ಲಿ ಹೇಬಿಯಸ್ ಕಾರ್ಪಸ್ ಅರ್ಜಿ ಸಲ್ಲಿಸಲು ಯೋಚಿಸಿದ್ದಾರೆ ಎಂದೂ ರಾವತ್ 'ಎಕ್ಸ್'ನಲ್ಲಿ ಬರೆದುಕೊಂಡಿದ್ದಾರೆ ಸಂಸತ್ತಿನ ಮಳೆಗಾಲ ಅಧಿವೇಶನದ ಮೊದಲ ದಿನವೇ(ಜು.21) ಧನಕರ್ ರಾಜೀನಾಮೆ ನೀಡಿದರು.

Norican Group
Shaping Industry

**ಡೀಸಾ ಇಂಡಿಯಾ ಲಿಮಿಟೆಡ್**
**ನೋಂದಾಯಿತ ಕಚೇರಿ: ವರ್ಲ್ಡ್ ಟ್ರೇಡ್ ಸೆಂಟರ್ (ಡಬ್ಲ್ಯೂಟಿಸಿ), 6ನೇ ಮಹಡಿ, ಯೂನಿಟ್ ಸಂ. ಎಸ್-604, ಬ್ರಿಗೇಡ್ ಗೇಟ್‌ವೇ ಕ್ಯಾಂಪಸ್, 26/1, ಡಾ. ರಾಜ್‌ಕುಮಾರ್ ರಸ್ತೆ, ಮಲ್ಲೇಶ್ವರಂ-ರಾಜಾಜಿನಗರ, ಬೆಂಗಳೂರು-560055.**
**ಫೋನ್: +91 80 22496700. ಇ-ಮೇಲ್:** bangalore@noricangroup.com www.disagroup.com
CIN No: L85110KA1984PLC006116

**ಜೂನ್ 30, 2025ಕ್ಕೆ ಅಂತ್ಯಗೊಂಡ ತ್ರೈಮಾಸಿಕ ಲೆಕ್ಕ ಪರಿಶೋಧನೆಗೊಳ್ಳದ ಹಣಕಾಸು ಫಲಿತಾಂಶದ ಸಂಕ್ಷಿಪ್ತ ವರದಿ**

(ರೂ. ಮಿಲಿಯನ್‌ಗಳಲ್ಲಿ)

| ವಿವರಗಳು | ಸ್ವತಂತ್ರ | | | ಕ್ರೋಢೀಕರಿಸಿದ | | |
|---|---|---|---|---|---|---|
| | 30.06.2025ಕ್ಕೆ ಕೊನೆಗೊಂಡ 3 ತಿಂಗಳು | 31.03.2025ಕ್ಕೆ ಕೊನೆಗೊಂಡ ವರ್ಷ | ಹಿಂದಿನ ವರ್ಷಕ್ಕೆ ಅನುಗುಣವಾಗಿ 30.06.2024ಕ್ಕೆ ಕೊನೆಗೊಂಡ 3 ತಿಂಗಳು | 30.06.2025ಕ್ಕೆ ಕೊನೆಗೊಂಡ 3 ತಿಂಗಳು | 31.03.2025ಕ್ಕೆ ಕೊನೆಗೊಂಡ ವರ್ಷ | ಹಿಂದಿನ ವರ್ಷಕ್ಕೆ ಅನುಗುಣವಾಗಿ 30.06.2024ಕ್ಕೆ ಕೊನೆಗೊಂಡ 3 ತಿಂಗಳು |
| | ಲೆಕ್ಕಪರಿಶೋಧನೆಗೊಳ್ಳದ | ಲೆಕ್ಕಪರಿಶೋಧಿತ | ಲೆಕ್ಕಪರಿಶೋಧನೆಗೊಳ್ಳದ | ಲೆಕ್ಕಪರಿಶೋಧನೆಗೊಳ್ಳದ | ಲೆಕ್ಕಪರಿಶೋಧಿತ | ಲೆಕ್ಕಪರಿಶೋಧನೆಗೊಳ್ಳದ |
| ವಹಿವಾಟಿನಿಂದ ಬಂದ ಆದಾಯ | 1,017.3 | 3,846.9 | 940.3 | 1,019.7 | 3,903.4 | 959.3 |
| ಅವಧಿಯ ನಿವ್ವಳ ಲಾಭ (ನಷ್ಟ)(ತೆರಿಗೆ ಅಸಾಧಾರಣ ಮತ್ತು/ ಅಥವಾ ಅಸಾಮಾನ್ಯ ಅಂಶಗಳ ಮೊದಲು) | 176.5 | 734.5 | 201.1 | 175.4 | 741.4 | 205.4 |
| ಅವಧಿಯ ನಿವ್ವಳ ಲಾಭ (ನಷ್ಟ) (ತೆರಿಗೆಯ ಮೊದಲು, ಅಸಾಧಾರಣ ಮತ್ತು/ ಅಥವಾ ಅಸಾಮಾನ್ಯ ಅಂಶಗಳ ನಂತರ) | 176.5 | 721.9 | 201.1 | 175.4 | 686.9 | 205.4 |
| ಅವಧಿಯ ನಿವ್ವಳ ಲಾಭ (ನಷ್ಟ) (ತೆರಿಗೆ, ಅಸಾಧಾರಣ ಮತ್ತು ಅಸಾಮಾನ್ಯ ಅಂಶಗಳ ನಂತರ) | 131.5 | 537.4 | 148.7 | 130.4 | 504.2 | 151.9 |
| ಅವಧಿಯ ಒಟ್ಟಾರೆ ವ್ಯಾಪಕ ಆದಾಯ (ತೆರಿಗೆಯ ನಂತರದ ಲಾಭ (ನಷ್ಟ) ಮತ್ತು ತೆರಿಗೆಯ ನಂತರದ ವ್ಯಾಪಕ ಆದಾಯ) | 130.0 | 531.4 | 147.7 | 128.9 | 498.2 | 150.9 |
| ಈಕ್ವಿಟಿ ಷೇರು ಬಂಡವಾಳ | 14.5 | 14.5 | 14.5 | 14.5 | 14.5 | 14.5 |
| ಇತರ ಇಕ್ವಿಟಿ (ಮರು-ಮೌಲ್ಯಮಾಪನ ಮೀಸಲು ಹೊರತುಪಡಿಸಿ ಹಿಂದಿನ ವರ್ಷದ ಲೆಕ್ಕ ಆಯವ್ಯಯ ಪಟ್ಟಿ ಪ್ರಕಾರ) | — | 2,616.8 | — | — | 2,652.0 | — |
| ಒಂದು ಷೇರಿನ ಗಳಿಕೆ (ಮುಖಬೆಲೆ ರೂ. 10/- ಪ್ರತಿ) ಮೂಲ : ರೂ. | 90.43 | 369.55 | 102.26 | 89.67 | 346.72 | 104.46 |
| ನಿಸಾರಗೊಂಡದ್ದು: ರೂ. | 90.43 | 369.55 | 102.26 | 89.67 | 346.72 | 104.46 |

**ಟಿಪ್ಪಣಿ:** ಮೇಲೆ ಹೇಳಿದ ವರದಿಯು 2015ರ ಸೆಬಿ ನಿಯಂತ್ರಣಗಳ (ಪಟ್ಟಿ ಮಾಡುವಿಕೆ ಮತ್ತು ಇತರೆ ಘೋಷಣೆಗಳ ಅವಶ್ಯಕತೆಗಳು) 33ನೇ ನಿಯಂತ್ರಣದಡಿ ಸ್ಟಾಕ್ ಎಕ್ಸ್‌ಚೇಂಜ್‌ಗೆ ಸಲ್ಲಿಸಿರುವ ತ್ರೈಮಾಸಿಕಕ್ಕೆ ಕೊನೆಗೊಂಡ ಲೆಕ್ಕಪರಿಶೋಧನೆಗೊಳ್ಳದ ಹಣಕಾಸಿನ ಫಲಿತಾಂಶಗಳ ವಿವರಗಳ ಸಂಕ್ಷಿಪ್ತ ವಿವರ. ಪೂರ್ಣ ವಿವರವು ಸ್ಟಾಕ್ ಎಕ್ಸ್‌ಚೇಂಜ್ ಜಾಲತಾಣ www.bseindia.com ಮತ್ತು ಸಂಸ್ಥೆಯ ಜಾಲತಾಣ www.disagroup.com ನಲ್ಲಿ ಕೂಡ ಲಭ್ಯವಿದೆ.

ಡೀಸಾ ಇಂಡಿಯಾ ಲಿಮಿಟೆಡ್ ಪರವಾಗಿ
ಸ್ಥಳ : ಬೆಂಗಳೂರು
ದಿನಾಂಕ : ಆಗಸ್ಟ್ 11, 2025
ಲೋಕೇಶ್ ಸಕ್ಸೇನ,
ವ್ಯವಸ್ಥಾಪಕ ನಿರ್ದೇಶಕರು.

### ನಾಲ್ಕು ನದಿಗಳ ಹೆಸರಿನ ಸಂಸದರ ವಸತಿ ಸಮುಚ್ಚಯ ಉದ್ಘಾಟನೆ

**ದೆಹಲಿ:** ಲೋಕಸಭೆ-ರಾಜ್ಯಸಭೆ ಸದಸ್ಯರಿಗಾಗಿ ದೆಹಲಿಯಲ್ಲಿ ಹೊಸದಾಗಿ ನಿರ್ಮಿಸಲಾಗಿರುವ ' ಸಂಸದರ ವಸತಿ ಸಮುಚ್ಚಯ'ವನ್ನು ಪ್ರಧಾನಿ ನರೇಂದ್ರ ಮೋದಿ ಸೋಮವಾರ ಉದ್ಘಾಟಿಸಿದರು. ಬಳಿಕ ಮಾತನಾಡಿದ ಪ್ರಧಾನಿ, ಕೃಷ್ಣಾ, ಗೋದಾವರಿ, ಹೂಗ್ಲಿ ಮತ್ತು ಕೋಸಿ ನದಿಗಳ ಹೆಸರುಗಳಿರುವ ಈ ನಾಲ್ಕು ವಸತಿ ಸಂಕೀರ್ಣಗಳ ಅಂಗಳದಲ್ಲಿ ದೇಶದ ವಿವಿಧೆಡೆಯಲ್ಲಿ ಆಚರಿಸಲಾಗುವುದು ಎಲ್ಲಾ ಹಬ್ಬಗಳನ್ನೂ ಆಚರಿಸುವಂತೆ ಆಗಬೇಕು ಎಂದು ಸಲಹೆ ನೀಡಿದರು. ಈ ಸಂದರ್ಭ ಲೋಕಸಭೆ ಸ್ಪೀಕರ್ ಓಂ ಬಿರ್ಲಾ. ವಸತಿ ಸಚಿವ ಮನೋಹರ ಲಾಲ್, ಸಂಸದೀಯ ಸಚಿವ ಕಿರಣ್ ರಿಜಿಜು ಮತ್ತಿತರರು ಉಪಸ್ಥಿತರಿದ್ದರು.

**ಚೆಮ್ ಫೈನಾನ್ಸ್ ಲಿ.**
No.19, KCD Complex, 3rd Cross, Mission Road, Bangalore-27. Tel: 22221066, 22221115
**ಚಿನ್ನದ ಹರಾಜು ಸೂಚನೆ**
**ಸಾಲಗಾರರು ಮತ್ತು ಸಾರ್ವಜನಿಕರು, ಈ ಕೆಳಗಿನ ಖಾತೆಗಳಲ್ಲಿ ಅಡವಿಟ್ಟ ಚಿನ್ನಾಭರಣಗಳ ಸಾರ್ವಜನಿಕ ಹರಾಜನ್ನು ಈ ಕೆಳಗಿನ ದಿನಾಂಕಗಳಲ್ಲಿ ನಡೆಸಲು ಉದ್ದೇಶಿಸಲಾಗಿದೆ ಎಂದು ಸೂಚಿಸಲಾಗಿದೆ. ನೋಂದಾಯಿತ ಪತ್ರಗಳ ಮೂಲಕ ತಿಳಿಸಲಾಗಿದ್ದರೂ ಸಾಲದ ಮೊತ್ತವನ್ನು ಪಾವತಿಸಲು ವಿಫಲರಾದ ಡೀಫಾಲ್ಟ್ ಮಾಡಿದ ಗ್ರಾಹಕರ ಚಿನ್ನಾಭರಣಗಳ ಹರಾಜು ಮಾಡಲಾಗುವುದು. ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ಶಾಖಾ ವ್ಯವಸ್ಥಾಪಕರನ್ನು ಸಂಪರ್ಕಿಸಿ.**

**26.08.2025. ಹೊಸಕೋಟೆ** : HKT13026, 13034, 13120, 13158, 13189, 13225, 13377,13416, 13418, 13419, 13449, 13450, 13460, 13463, 13514, 13522, 13545, 13566, 15245, **ರಾಮನಗರ** : RMN450, 868 **ಚಿಂತಾಮಣಿ:** CND10007, 10060, 10087, 10101, 10136, 10141, 10164, 10173, 10196, 10202, 10223, 10241, 10251, 10252, 10255. **ಮಂಡ್ಯ** : MDY11094, 11159, 11172. **ಕಾಲೇಜ್ ರೋಡ್** : DBR1082, 1135 **ಬಸವನಗರ**: BSV3444.
**28.08.2025. ಬೊಮ್ಮನಹಳ್ಳಿ:** BMH300. **ದೊಡ್ಡಬಳ್ಳಾಪುರ** : DBP13805, 13825, 13846, 13888, 13905, 13910, 14040, 14051 14099, 14112, 14144, 14146, 14168, 14188, 14190, 14198, 14201, 14232. **ಮಿಷನ್ ರೋಡ್**: CFL13351, 13368, 13390, 13394, 13405, 13439, 13438, 13448,13458, 13473, 13483, 13484, 13485, 13487, 14009, 14109, 14110, 14111 **ಚಾಮರಾಜನಗರ**: CMR12669, 12679, 12938, 13000, 14710, 14767, 14158
**29.08.2025. ಕೆ. ಆರ್. ಪುರಂ** : KRP9638, 9739, 9740, 9781, 10986, 11175, 11180, 11210, 11225, 11293, 11298, 11414 **ಮೈಸೂರು - ಕೊಪ್ಪಳ :** MY2-107, 113. **ಮಾರತ್ತ ಹಳ್ಳಿ:** MRT7507, 7517, 7524, 7574, 7575, 7576, 8318, 8319, 8320, 8321 **ಯಲಹಂಕ** :YHA421, 422, 423, 445, 450, 456, 585.
**30.08.2025. ತಿಪ್ಪಸಂದ್ರ** : TIP5876, 5877, 5878, 5901, 5906, 5921, 5922, 5936, 5944, 5953, 5985, 5999. **ಚಿಕ್ಕ ಬಳ್ಳಾಪುರ** : CHK4118, 4119, 4120. **ಸುಂಕದಕಟ್ಟೆ:** SKT682, **ಹುಬ್ಬಳ್ಳಿ** : HBL2853, 2901, 2910, 2935, 2940, 2951, 2952. **ಮೈಸೂರು** MYS4883, 4914, 5408, 5424, 5425, 5471, 5483, 5506, 5518, 5551 **ಮಾಲೂರು:** MLR10354, 11257, 11338

### 15 ತಿಂಗಳ ಮಗುವಿಗೆ ಥಳಿತ: ನೊಯಿಡಾ ಡೇಕೇರ್ ಹಾರರ್

**ನೊಯಿಡಾ:** ನಗರದ 'ಡೇ ಕೇರ್'ನಲ್ಲಿ 15 ತಿಂಗಳ ಕಂದಮ್ಮನ ಮೇಲೆ ಭಾರೀ ದೌರ್ಜನ್ಯ, ಹಿಂಸಾಚಾರ ನಡೆದಿದ್ದು. ಅದರ ವಿಡಿಯೊ ವೈರಲ್ ಆಗಿದೆ. ದೃಶ್ಯಾವಳಿಗಳು ಬಲು ಆಘಾತಕಾರಿಯಾಗಿದ್ದು, ಪುಟ್ಟ ಕಂದಮ್ಮಗಳನ್ನು ಡೇ ಕೇರ್‌ನಲ್ಲಿ ಬಿಡುವ ಪೋಷಕರು ಮಕ್ಕಳ ಸುರಕ್ಷತೆಗೆ ಬಗ್ಗೆ ಚಿಂತೆಗೀಡಾಗುವಂತೆ ಮಾಡಿದೆ. ನೊಯಿಡಾ ಸೆಕ್ಟರ್-137ರ ಸೊಸೈಟಿಯಲ್ಲಿರುವ ಡೇಕೇರ್ ಕೆಲಸದಾಕೆ, ಮಗುವಿನ ತೊಡೆಗೆ ಕಚ್ಚಿ, ಮನಬಂದಂತೆ ಥಳಿಸಿದ್ದಾಳೆ. ಬೆಲ್ಟ್‌ನಿಂದ ಹೊಡೆದಿದ್ದಾಳೆ. ನೆಲಕ್ಕೂ ಅಪ್ಪಳಿಸಿದ್ದಾಳೆ. ಇದೇ ಆ.4ರಂದು ಘಟನೆ ನಡೆದಿದ್ದು, ಡೇಕೇರ್‌ನ ಸಿಸಿಟಿವಿಯಲ್ಲಿ ದೃಶ್ಯಗಳು ಸೆರೆಯಾಗಿವೆ. ಮಗುವನ್ನು ಪೋಷಕರು ಮನೆಗೆ ಕರೆತಂದ ನಂತರ ಮಗು ನಿರಂತರ ಅಳುತ್ತಿತ್ತು. ಬಟ್ಟೆ ಬದಲಿಸುವಾಗ ಮಗುವಿನ ಎರಡೂ ತೊಡೆಗಳಲ್ಲಿ ಹಲ್ಲಿನಿಂದ ಕಚ್ಚಿರುವ ಗುರುತು ಮೂಡಿತ್ತು. ಪೋಷಕರು ಡೇಕೇರ್ ಸಿಸಿಟಿವಿ ಪರಿಶೀಲಿಸಿದಾಗ ಕೆಲಸದಾಕೆಯ ಕ್ರೌರ್ಯ ಬಯಲಾಗಿದೆ. ಪೋಷಕರು ಈ ಬಗ್ಗೆ ಡೇಕೇರ್ ಮುಖ್ಯಸ್ಥರಿಗೆ ದೂರಿದರೆ ಅವರು ಪೋಷಕರನ್ನೇ ಅವಾಚ್ಯ ಶಬ್ದಗಳಿಂದ ನಿಂದಿಸಿ ಬೆದರಿಕೆ ಹಾಕಿದ್ದಾರೆ. ಪೋಷಕರು ಪೊಲೀಸರಿಗೆ ದೂರು ನೀಡಿದ್ದು, ಪೊಲೀಸರು ಕೆಲಸದಾಕೆಯನ್ನು ಬಂಧಿಸಿದ್ದಾರೆ.

## ಸಮಾಚಾರ ಸಣ್ಣದಲ್ಲ

### ಸಾಮೂಹಿಕ ಜನಿವಾರ ಧಾರಣೆ

**ಮಸ್ಕಿ:** ನೂಲು ಹುಣ್ಣಿಮೆ ನಿಮಿತ್ತ ಪಟ್ಟಣದ ಮಾರ್ಕಂಡೇಶ್ವರ ದೇವಸ್ಥಾನದಲ್ಲಿ ಪದ್ಮಶಾಲಿ (ನೇಕಾರ) ಸಮಾಜದಿಂದ ಸಾಮೂಹಿಕ ಜನಿವಾರ ಧಾರಣೆ, ಪಲ್ಲಕ್ಕಿ ಉತ್ಸವ ಅದ್ದೂರಿಯಾಗಿ ನಡೆಯಿತು. ದೇವಸ್ಥಾನದಲ್ಲಿ ಬೆಳಗ್ಗೆ ಮಾರ್ಕಂಡೇಶ್ವರ ವಿಗ್ರಹಕ್ಕೆ ವಿಶೇಷ ಪೂಜೆ ಹೋಮ ಸೇರಿ ವಿವಿಧ ಧಾರ್ಮಿಕ ಪೂಜಾ ಕಾರ್ಯಕ್ರಮಗಳು ನಡೆದವು. ರಾಘವೇಂದ್ರ ಆಚಾರ್ಯ ಅವರ ನೇತೃತ್ವದಲ್ಲಿ ನಡೆದ ಸಾಮೂಹಿಕ ಜನಿವಾರ ಧಾರಣೆ ಕಾರ್ಯಕ್ರಮ ನಡೆಯಿತು ಪದ್ಮಶಾಲಿ ನೇಕಾರ ಸಮಾಜದ ಮುಖಂಡರು, ಯುವಕರು ಪಾಲ್ಗೊಂಡಿದ್ದರು. ಶಾಸಕ ಬಸನಗೌಡ ತುರ್ವಿಹಾಳ, ಪುರಸಭೆ ಅಧ್ಯಕ್ಷ ಮಲ್ಲಯ್ಯ ಅಂಬಾಡಿ ದೇವಸ್ಥಾನಕ್ಕೆ ಆಗಮಿಸಿ ಭಕ್ತ ಮಾರ್ಕಂಡೇಯನ ಆಶೀರ್ವಾದ ಪಡೆದರು. ಈ ಸಂದರ್ಭದಲ್ಲಿ ಪದ್ಮಶಾಲಿ ಸಮಾಜದ ಮುಖಂಡರಾದ ಮಲ್ಲಯ್ಯ ಪಗಡೆಕಲ್, ಸಮಾಜದ ಅಧ್ಯಕ್ಷ ಲಕ್ಷ್ಮಣ ಕರ್ಲಿ, ವೆಂಕಟೇಶ ಪಗಡೆಕಲ್, ಡಾ. ಶಂಕರ್ ಕರ್ಲಿ, ಪರಶುರಾಮ ಕೊಡುಗುಂಟಿ, ವೀರೇಶ್ ಪೂಜಾರಿ ಮುನಿಯಪ್ಪ ಕರ್ಲಿ ಈರಪ್ಪ ಆಂದೇಲಿ,ಚಿನ್ನಪ್ಪ ಕರ್ಲಿ,ಕನಕಾಚಲ ಪೂಜಾರಿ ಸೇರಿ ಇತರರು ಇದ್ದರು.

### ದೆಹಲಿಯ ಸ್ವಾತಂತ್ರ್ಯ ದಿನಾಚರಣೆಗೆ ಆಯ್ಕೆ

**ಯಲಬುರ್ಗಾ:** ರಾಷ್ಟ್ರ ರಾಜಧಾನಿ ದೆಹಲಿಯ ಕೆಂಪು ಕೋಟೆ ಮೇಲೆ ಆಗಸ್ಟ್ 15 ರಂದು ನಡೆಯುವ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ವಿಶೇಷ ಪ್ರತಿನಿಧಿಯಾಗಿ ಪಾಲ್ಗೊಳ್ಳಲು ತಾಲೂಕಿನ ಕುದರಿಮೋತಿ ಗ್ರಾಪಂ ಅಧ್ಯಕ್ಷೆ ಫರೀದಾಬೇಗಂ ಹುಸೇನ್ ಬಾಷಾ ತಂಬಾಕದರ್ ಅವರ ಆಯ್ಕೆಯಾಗಿದ್ದಾರೆ. ರಾಜ್ಯದ 7 ಗ್ರಾಪಂ ಅಧ್ಯಕ್ಷರು ಹಾಗೂ ಇಬ್ಬರು ನೋಡಲ್ ಅಧಿಕಾರಿಗಳು ಈ ಬಾರಿಯ ಸ್ವಾತಂತ್ರ್ಯ ದಿನೋತ್ಸವದಲ್ಲಿ ವಿಶೇಷ ಪ್ರತಿನಿಧಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಜಿಲ್ಲೆಯ ಗಂಗಾವತಿ ತಾಲೂಕು ಆನೆಗೊಂದಿ ಗ್ರಾಪಂ ಅಧ್ಯಕ್ಷ ಹೊನ್ನಪ್ಪ ನಾಯಕ್ ಸಹ ಈ ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ. ಜಿಲ್ಲೆಯಿಂದ ಇಬ್ಬರು ಗ್ರಾಪಂ ಅಧ್ಯಕ್ಷರು ಆಯ್ಕೆ ಆಗಿದ್ದು, ವಿಶೇಷ. ಇದು ಜಿಲ್ಲೆಗೆ ಹೆಮ್ಮೆಯ ಸಂಗತಿಯಾಗಿದೆ.

### ಇಂದರಗಿ ಶಾಲೆಯ ಎಸ್‌ಡಿಎಂಸಿ ರಚನೆ

**ಗಂಗಾವತಿ:** ಕೊಪ್ಪಳ ತಾಲೂಕು ಇಂದರಗಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಎಸ್ಡಿಎಂಸಿ ಅಧ್ಯಕ್ಷ ಹಾಗೂ ಉಪಾಧ್ಯಕ್ಷರನ್ನು ಶನಿವಾರ ಆಯ್ಕೆ ಮಾಡಲಾಯಿತು. ಎಸ್ ಡಿಎಂಸಿ ನೂತನ ಅಧ್ಯಕ್ಷ ಡಾ.ಅಮರೇಶ ಕುಂಬಾರ, ಉಪಾಧ್ಯಕ್ಷರಾಗಿ ಶಿಲ್ಪಾ ಇಂದ್ರೇಶ ಕೇರಳಿ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಡಾ.ಅಮರೇಶ ಕುಂಬಾರ ಮಾತನಾಡಿ, ಎಸ್ ಡಿಎಂಸಿ ಅಧ್ಯಕ್ಷ ಸ್ಥಾನ ಗುರುತರ ಜವಾಬ್ದಾರಿಯ ಕೆಲಸ. ಮಕ್ಕಳ ಶೈಕ್ಷಣಿಕ ಅಭಿವೃದ್ಧಿಯ ಜತೆಗೆ ಶಾಲೆಗೆ ಅವಶ್ಯವಿರುವ ಮೂಲ ಸೌಲಭ್ಯ ಹಾಗೂ ಸೌಕರ್ಯಗಳಿಗೆ ಹೆಚ್ಚು ಒತ್ತು ನೀಡುವ ಮೂಲಕ ಶಾಲೆಯ ಸರ್ವಾಂಗೀಣ ಅಭಿವೃದ್ಧಿಗೆ ಹೆಚ್ಚು ಪ್ರಾಶಸ್ತ್ಯ ನೀಡಲಾಗುವುದು ಎಂದರು. ಗ್ರಾಮ ಅಧ್ಯಕ್ಷೆ ವರದಮ್ಮ ನಿಂಗಪ್ಪ ಎಮ್ಮಿ, ಉಪಾಧ್ಯಕ್ಷ ಅಮರೇಶ ಕೊಪ್ಪಳ, ಗ್ರಾಪಂ ಸದಸ್ಯರಾದ ಗವಿಸಿದ್ದಪ್ಪ ಹಾವರಗಿ, ದೇವಪ್ಪ ಭೋವಿ, ಡಾ.ನಾಗರಾಜ ಕಂಬಳಿ, ಹನುಮಂತ ಕಾಟ್ನಕ್ಕಿ, ಇಂದ್ರೇಶ ಕೊಳ್ಳಿ, ಗ್ರಾಮದ ಮುಖಂಡರಾದ ಹುಚ್ಚಪ್ಪ ಹಿರೇಕುರಬರ, ಶಿವಣ್ಣ ಭೀಮನೂರು, ಗಾಳೆಪ್ಪ ಹರಿಜನ, ಸಿದ್ದನಗೌಡ ವಣಗೇರಿ, ಫಕೀರಪ್ಪ ಬೆಟ್ಟಗೇರಿ ಇದ್ದರು.

### ಕುಶಲಕರ್ಮಿಗಳಿಗೆ ಉಪಕರಣಗಳಿಗಾಗಿ ಅರ್ಜಿ

**ಕೊಪ್ಪಳ:** ಕೊಪ್ಪಳ ಜಿಲ್ಲಾ ಪಂಚಾಯತ್ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ವತಿಯಿಂದ ವೃತ್ತಿಪರ ಕುಶಲಕರ್ಮಿಗಳಿಗೆ ಉಪಕರಣಗಳಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಕೊಪ್ಪಳ ಜಿಲ್ಲೆಯಲ್ಲಿರುವ ಗ್ರಾಮೀಣ ಪ್ರದೇಶದಲ್ಲಿರುವ ಕುಶಲಕರ್ಮಿಗಳಿಗೆ 2025-26ನೇ ಸಾಲಿನ ವೃತ್ತಿಪರ ಕುಶಲಕರ್ಮಿಗಳಿಗೆ ಉಚಿತವಾಗಿ ಸುಧಾರಿತ ಉಪಕರಣ ಸರಬರಾಜು ಯೋಜನೆಯಡಿ ವಿವಿಧ ವೃತ್ತಿಗಳಾದ ಧೋಬಿ, ಕ್ಷೌರಿಕ, ಬಡಗಿತನ, ಹೊಲಿಗೆ ವೃತ್ತಿಯ ಉಪಕರಣಗಳನ್ನು ಪಡೆಯಲು ಗ್ರಾಮೀಣ ಪ್ರದೇಶದ ಕುಶಲಕರ್ಮಿಗಳು ಆನ್‌ಲೈನ್ ವೆಬ್‌ಸೈಟ್ Koppal.nic.in ನಲ್ಲಿ ನಮೂದಿಸಿದ ಲಿಂಕ್‌ನ ಮುಖಾಂತರ ಅರ್ಜಿಗಳನ್ನು ಆಗಸ್ಟ್ 12 ರಿಂದ ಸೆಪ್ಟೆಂಬರ್ 12ರ ವರೆಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಸಮಯಾವಕಾಶ ನೀಡಲಾಗಿದೆ. ಆಸಕ್ತ ಕುಶಲಕರ್ಮಿಗಳು ಅರ್ಜಿ ಸಲ್ಲಿಸಬಹುದಾಗಿದ್ದು, ಹೆಚ್ಚಿನ ಮಾಹಿತಿಗಾಗಿ ಉಪ ನಿರ್ದೇಶಕರು (ಖಾಗ್ರಾ) ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ (ಜಿಲ್ಲಾ ಪಂಚಾಯತ್), ಕೊಪ್ಪಳ ಕಛೇರಿ ದೂರವಾಣಿ ಸಂಖ್ಯೆ 08539-230980 ಗೆ ಸಂಪರ್ಕಿಸಬಹುದಾಗಿದೆ ಎಂದು ಕೊಪ್ಪಳ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ (ಜಿ.ಪಂ) ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

{ಸಿದ್ದರಾಮಯ್ಯ} ಮುಖ್ಯಮಂತ್ರಿ

**ನಮ್ಮ ಸರಕಾರ ಅಧಿಕಾರಕ್ಕೆ ಬಂದಾಗ ಎಲ್ಲಾ ಯಾವುದೇ ಜಾತಿ ಧರ್ಮವನ್ನು ಪರಿಗಣಿಸದೆ ಎಲ್ಲಾ ಜಾತಿಯ ಬಡವರು, ರೈತರು, ಮಹಿಳೆಯರು, ಆರ್ಥಿಕವಾಗಿ ಹಿಂದುಳಿದವರ ಏಳಿಗೆಗೆ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ .**

ಸ್ವಯಂ ಪ್ರೇರಿತವಾಗಿ ಅಂಗಡಿ ಮುಂಗಟ್ಟು ಬಂದ್। ಗವಿಸಿದ್ಧಪ್ಪ ಕೊಲೆ ಪ್ರಕರಣ। ಹೋರಾಟಕ್ಕೆ ನಿರೀಕ್ಷೆಗೂ ಮೀರಿ ಬಂದ ಜನ

# ಹತ್ಯೆ ಖಂಡಿಸಿ ಹೋರಾಟಕ್ಕೆ ಜನ ಬೆಂಬಲ

**ಕೊಪ್ಪಳ:** ನಗರದ ಬಹದ್ದೂರಬಂಡಿ ರಸ್ತೆಯಲ್ಲಿನ ನದಿಮುಲ್ಲಾ ಖಾದ್ರಿ ಮಸೀದಿ ಮುಂದೆ ಆ. 3ರಂದು ನಡೆದಿದ್ದ ಗವಿಸಿದ್ಧಪ್ಪ ನಾಯಕ ಕೊಲೆ ಖಂಡಿಸಿ ಅಖಿಲ ಕರ್ನಾಟಕ ವಾಲ್ಮೀಕಿ ನಾಯಕ ಮಹಾಸಭಾ ನೇತೃತ್ವದಲ್ಲಿ ಕೊಪ್ಪಳದಲ್ಲಿ ನಡೆದ ಪ್ರತಿಭಟನೆಗೆ ನಿರೀಕ್ಷೆಗೂ ಮೀರಿ ಜನ ಸಾಗರವೇ ಸೋಮವಾರ ಹರಿದು ಬಂದಿತ್ತು. ಕೊಪ್ಪಳದ ವ್ಯಾಪಾರಿಗಳು ಸ್ವಯಂ ಪ್ರೇರಿತರಾಗಿ ಅಂಗಡಿ-ಮುಗ್ಗಟ್ಟು ಬಂದ್ ಮಾಡಿ, ಪ್ರತಿಭಟನೆಗೆ ಬೆಂಬಲ ವ್ಯಕ್ತಪಡಿಸಿದರು.

> ಇದೊಂದು ಸೂಪಾರಿ ಕಿಲ್ಲರ್‌ನಿಂದ ನಡೆದ ಘಟನೆ. ಮುಸ್ಲಿಂ ಯುವತಿಯರನ್ನು ಮುಟ್ಟಿದರೆ ಇದೇ ರೀತಿಯ ಪರಿಣಾಮ ಎದುರಿಸಬೇಕಾಗುತ್ತದೆ ಎಂಬ ಸಂದೇಶವನ್ನು ಹಂತಕರು ರವಾನೆ ಮಾಡಿದ್ದಾರೆ. ಆದರೂ ಸಿಎಂ ಸುಮ್ಮನಿದ್ದಾರೆ. ಇದು ಕೊಪ್ಪಳದವರ ಕೈವಾಡ ಮಾತ್ರವಲ್ಲ. ಬೇರೆ ಸಂಘಟನೆಗಳಿಂದ ಈ ಕೃತ್ಯ ನಡೆದಿದೆ.
> – ರಾಜುಗೌಡ ನಾಯಕ, ಮಾಜಿ ಸಚಿವ

ನಿಗದಿಯಂತೆ ಗಡಿಯಾರ ಕಂಬದಿಂದ ಆರಂಭವಾದ ಪ್ರತಿಭಟನೆ ಮೆರವಣಿಗೆ ಜವಾಹರ ರಸ್ತೆ ಮಾರ್ಗವಾಗಿ ಅಶೋಕ ವೃತ್ತಕ್ಕೆ ತಲುಪಿತು. ಅಶೋಕ ವೃತ್ತದಲ್ಲಿ ಬಹಿರಂಗ ಸಭೆಯಾಗಿ ಮಾರ್ಪಾಡುಗೊಂಡಿತು.

ಕೊಪ್ಪಳದಲ್ಲಿ ಗವಿಸಿದ್ದಪ್ಪ ನಾಯಕ ಕೊಲೆ ಖಂಡಿಸಿ ನಡೆದ ಪ್ರತಿಭಟನೆಗೆ ನಿರೀಕ್ಷೆಗೂ ಮೀರಿ ಜನ ಸಾಗರವೇ ಸೋಮವಾರ ಹರಿದು ಬಂದಿತ್ತು.

### ಹೋರಾಟಕ್ಕೆ ಬಂದವರೆಲ್ಲ ನನ್ನ ಮಕ್ಕಳು

ಮಗನನ್ನು ಕಳೆದುಕೊಂಡ ನನ್ನ ನೋವಿನ ಕೂಗು ಬಹಳಷ್ಟು ಜನರ ಮನಸ್ಸಿಗೆ ತಟ್ಟಿದ್ದು, ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಜನ ಪ್ರತಿಭಟನೆಗೆ ಸೇರಿದ್ದಾರೆ. ಹೋರಾಟಕ್ಕೆ ಬಂದವರೆಲ್ಲರೂ ನನ್ನ ಮಕ್ಕಳು. ನಿಮ್ಮಲ್ಲಿ ಮಗನ ಪ್ರತಿರೂಪ ಕಾಣುತ್ತೇನೆ. ನೀವೆಲ್ಲರೂ ಸೇರಿ ನನ್ನ ಮಗನ ಸಾವಿಗೆ ನ್ಯಾಯ ಕೊಡಿಸಿ ಎಂದು ಕೊಲೆಯಾದ ಗವಿಸಿದ್ದಪ್ಪನ ತಾಯಿ ದೇವಮ್ಮ ಹೋರಾಟದ ವೇಳೆ ಕಣ್ಣೀರು ಹಾಕಿದರು.

ಮೆರವಣಿಗೆ ಯುದ್ದಕ್ಕೂ ಗವಿಸಿದ್ದಪ್ಪನ ಕೊಲೆ ಆರೋಪಿಗಳಿಗೆ ಜೀವಾವಧಿ ಶಿಕ್ಷೆ ವಿಧಿಸಬೇಕು. ಶೀಘ್ರ ನ್ಯಾಯಕ್ಕಾಗಿ ಆರೋಪಿಗಳನ್ನು ಎನ್‌ಕೌಂಟರ್ ಮಾಡಬೇಕು ಎಂದು ಹೋರಾಟಗಾರುರು ಮೆರವಣಿಗೆಯುದ್ದಕ್ಕೂ ಘೋಷಣೆ ಕೂಗಿದರು. ವಾಲ್ಮೀಕಿ ಸಮುದಾಯದ ಯುವಕನನ್ನು ಮೋಸದಿಂದ ಕೊಲೆ ಮಾಡಲಾಗಿದೆ. ಆತನ ಕುಟುಂಬಕ್ಕೆ ನಾವೆಲ್ಲರೂ ಸೇರಿ ನ್ಯಾಯ ಕೊಡಿಸಬೇಕು. ಇದೇ ರೀತಿ ಮುಂದೆ ಯಾವ ಹಿಂದೂ ಯುವಕರಿಗೂ ಆಗಬಾರದು. ಮನುಷ್ಯತ್ವದ ಹಾದಿಯಲ್ಲಿ ಮಹರ್ಷಿ ವಾಲ್ಮೀಕಿ, ಬುದ್ಧ, ಬಸವ, ಅಂಬೇಡ್ಕರ್ ಆದರ್ಶದಲ್ಲಿ ಬದುಕಬೇಕು ಎಂಬ ನಮ್ಮ ಆಶಯಕ್ಕೆ ವಿರುದ್ಧವಾದ ಸಮಾಜಘಾತುಕ ಶಕ್ತಿಗಳು ತಮ್ಮ ಲಾಭಕ್ಕಾಗಿ ಇಂಥ ಕೃತ್ಯದಲ್ಲಿ ತೊಡಗಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಸರಕಾರದ ವಿರುದ್ಧ

**ಘೋಷಣೆ:** ಬೆಳಗ್ಗೆ 11.30ಕ್ಕೆ ಆರಂಭವಾದ ಮೆರವಣಿಗೆಯಲ್ಲಿ ಹಿಂದೂ ಪರ ಸಂಘಟನೆ ಮುಖಂಡರು ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಹಿಂದೂಗಳ ರಕ್ಷಣೆ ಮಾಡದ ಸರ್ಕಾರ ಯಾಕೆ ಇರಬೇಕು? ಎಂದು ಪ್ರಶ್ನಿಸಿದರು. ಸುಮಾರು 4 ಗಂಟೆ ನಡೆದ ಮೆರವಣಿಗೆ, ಅಶೋಕ ವೃತ್ತಕ್ಕೆ ಬಂದ ನಂತರ ಸಂಚಾರಕ್ಕೆ ತೊಂದರೆ ಉಂಟಾಯಿತು. ವಿವಿಧ ನಾಯಕರು ಮಾತನಾಡಿದ ನಂತರ ಜಿಲ್ಲಾಧಿಕಾರಿ ಸುರೇಶ ಬಿ. ಇಟ್ನಾಳ ಅವರಿಗೆ ಮನವಿ ಸಲ್ಲಿಸಲಾಯಿತು.ವಾಲ್ಮೀಕಿ ಮಹಾಸಭಾ ಜಿಲ್ಲಾಧ್ಯಕ್ಷ ಕೆ.ಎನ್. ಪಾಟೀಲ್, ಜಿಲ್ಲಾ ಧರ್ಮದರ್ಶಿ ರಾಮಣ್ಣ ಕಲ್ಲನವರ, ಯುವ ಘಟಕದ ರಾಜ್ಯಾಧ್ಯಕ್ಷ ಟಿ.ತುಳಸಿರಾಮ್, ಜಿಲ್ಲಾಧ್ಯಕ್ಷ ರವಿ ವಕೀಲರು, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶರಣಪ್ಪ ನಾಯಕ, ರಾಜ್ಯ ಸುರೇಶ ಡೊಣ್ಣಿ, ಬಿಜೆಪಿ ಮುಖಂಡರಾದ ರಾಜು ಗೌಡ, ಶಿವನಗೌಡ ನಾಯಕ, ಪರಣ್ಣ ಮುನವಳ್ಳಿ, ಶರಣು ತಳ್ಳಿಕೇರಿ, ಬಂಗಾರು ಲಕ್ಷ್ಮಣ, ಬಿಜೆಪಿ ಜಿಲ್ಲಾಧ್ಯಕ್ಷ ಬಸವರಾಜ ದಢೇಸೂಗೂರು, ರಾಜ್ಯ ಕಾರ್ಯಕಾರಿಣಿ ಸದಸ್ಯರ ಡಾ. ಬಸವರಾಜ ಕ್ಯಾವಟರ್, ಜೆಡಿಎಸ್ ರಾಜ್ಯ ಕೋರ್ ಕಮಿಟಿ ಸದಸ್ಯ ಸಿ.ವಿ. ಚಂದ್ರಶೇಖರ್, ರವಿ, ಟಿ. ರತ್ನಾಕರ, ನಾಗರಾಜ ಬಿಲ್ಗಾರ, ಯಮನೂರಪ್ಪ ನಾಯಕ, ಶಿವಮೂರ್ತಿ ಗುತ್ತೂರು, ವೀರಭದ್ರಪ್ಪ ನಾಯಕ, ಹನುಮಂತಪ್ಪ ನಾಯಕ, ಶಿವರಡ್ಡಿ ವಕೀಲರು, ಹನುಮೇಶ ನಾಯಕ, ಜ್ಯೋತಿ ಎಂ. ಗೊಂಡಬಾಳ, ಬಿಲ್ಗಾರ ನಾಗರಾಜ, ಹನುಮೇಶ ನಾಯಕ, ಮಂಜುನಾಥ ಗೊಂಡಬಾಳ, ಕರಿಯಪ್ಪ, ಚನ್ನಪ್ಪ, ಹನುಮಂತಪ್ಪ, ಶಿವರಡ್ಡಿ ವಕೀಲ, ಜೋಗದ ವೀರಭದ್ರಪ್ಪ ನಾಯಕ, ಜೋಗದ ಹನುಮಂತಪ್ಪ ನಾಯಕ ಪಾಲ್ಗೊಂಡಿದ್ದರು.

### ಐಜಿಪಿ ನೇತೃತ್ವದಲ್ಲಿ ಬಂದೋಬಸ್ತ್

ಭಾರಿ ಪ್ರಮಾಣದಲ್ಲಿ ಜನರು ಸೇರುವ ಸುಳಿವು ಅರಿತ ಬಳ್ಳಾರಿ ಐಜಿಪಿ, ತಾವೇ ಮುಂದೆ ನಿಂತು ಬಂದೋಬಸ್ತ ನೋಡಿಕೊಂಡರು. ಮುಂಜಾಗ್ರತಾ ಕ್ರಮವಾಗಿ ಬಳ್ಳಾರಿ ಐಜಿಪಿ ವರ್ತಿಕಾ ಕಟಿಯಾರ್, ಎಸ್ಪಿ ಡಾ. ರಾಮ್ ಎಲ್. ಅರಸಿದ್ದಿ ಮೆರವಣಿಗೆಯುದ್ಧಕ್ಕೂ ಪ್ರತಿಭಟನೆ ನಿರತರ ಜತೆ ಸಾಗಿದರು. ಐಜಿಪಿ ವರ್ತಿಕಾ ಕಟಿಯಾರ್ ಅವರೇ ಹೋರಾಟ ನಿರತ ಜನರನ್ನು ಮಸೀದಿ ಮುಂದಿನ ಸ್ಥಳದಿಂದ ಮುಂದೆ ಕಳುಹಿಸುತ್ತಿದ್ದ ದೃಶ್ಯ ಕಂಡು ಬಂದವು.

ಶ್ರಾವಣ ಮಾಸ ಆಚರಣೆ। ಉಡಿ ತುಂಬುವ ಕಾರ್ಯಕ್ರಮ

## ಮಗುವಿಗೆ ಕೊಡುವ ಎದೆ ಹಾಲು ಅಮೃತ ಸಮಾನ

**ಕುಷ್ಟಗಿ:** ತಾಲೂಕಿನ ದೋಟಿಹಾಳ ಗ್ರಾಮದ ಸಾಂಸ್ಕೃತಿಕ ಭವನದಲ್ಲಿ ವಿಶ್ವ ಸ್ತನ್ಯಪಾನ ಸಪ್ತಾಹ ಕಾರ್ಯಕ್ರಮ ಹಾಗೂ ಶ್ರಾವಣ ಮಾಸದ ಅಂಗವಾಗಿ ನಡೆದ 5ನೇ ವರ್ಷದ ಉಡಿ ತುಂಬುವ ಕಾರ್ಯಕ್ರಮ ನಡೆಯಿತು.

ಅಂಗನವಾಡಿ ಮೇಲ್ವಿಚಾರಕಿ ಅನ್ನಪೂರ್ಣ ಪಾಟೀಲ್ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ಮಗುವಿನ ಆರೋಗ್ಯ ಸುಧಾರಣೆಗೆ ತಾಯಿ ಎದೆಹಾಲು ಉತ್ತಮ ಹಾಗೂ ಶ್ರೇಷ್ಠ. ಎದೆಹಾಲು ಮಕ್ಕಳಿಗೆ ಅಮೃತಕ್ಕೆ ಸಮಾನವಾಗಿದೆ. ಎದೆ ಹಾಲು ಅಂಗಡಿಯಲ್ಲಿ ಮಾರಾಟಕ್ಕೆ ಇರುವುದಿಲ್ಲ. ಆರೋಗ್ಯವಂತ ಮಗುವಾಗಿ ಬೆಳೆಯಲು ಸಹಕಾರಿಯಾಗುತ್ತದೆ. ತಾಯಿ ಎದೆಹಾಲು ಕುಡಿಸುವುದರಿಂದ ಮಗುವಿನಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚುತ್ತದೆ. ಮಾರಕ ರೋಗದಿಂದ ಕಾಪಾಡುವುದರ ಜೊತೆಗೆ ಮಗುವಿನಲ್ಲಿ ಪೌಷ್ಠಿಕತೆ ಕೂಡ ಹೆಚ್ಚುತ್ತದೆ ಎಂದರು.

ಹೆರಿಗೆಯಾದ ಅರ್ಧ ಗಂಟೆ ಒಳಗಡೆ ತಾಯಿ ಹಾಲು ಕುಡಿಸಲು ಪ್ರಾರಂಭಿಸಬೇಕು. ಮಗುವಿಗೆ ಎದೆ ಹಾಲು ಬಿಟ್ಟು ಬೇರೆ ಯಾವುದೇ ಆಹಾರ ನೀಡಬಾರದು. ಸಕ್ಕರೆ ಪಾನಕ ನೀರು ಮತ್ತು ಇನ್ನಿತರ ಯಾವುದೇ ಗಟ್ಟಿಯಾದ ಪದಾರ್ಥ ನೀಡಬಾರದು. ಇದರಿಂದ ನಮ್ಮ ದೇಶದಲ್ಲಿ ಆಗುತ್ತಿರುವ ಶಿಶು ಮರಣ ಕಡಿಮೆ ಮಾಡಲು ಅನುಕೂಲವಾಗುತ್ತದೆ ಎಂದರು.

ಕುಷ್ಟಗಿ ತಾಲೂಕು ದೋಟಿಹಾಳ ಗ್ರಾಮದ ಸಾಂಸ್ಕೃತಿಕ ಭವನದಲ್ಲಿ ವಿಶ್ವ ಸ್ತನ್ಯಪಾನ ಸಪ್ತಾಹ ಕಾರ್ಯಕ್ರಮ ಹಾಗೂ ಶ್ರಾವಣ ಮಾಸದ ಅಂಗವಾಗಿ 5ನೇ ವರ್ಷದ ಉಡಿ ತುಂಬುವ ಕಾರ್ಯಕ್ರಮ ನಡೆಯಿತು.

ಸಾಹಿತಿ ಶ್ರೀದೇವಿ ಕರ್ಜಗಿ ಮಾತನಾಡಿ, ಮಹಿಳೆಯರಿಗೆ ಉಡಿ ತುಂಬುವ ಪದ್ಧತಿ ಭಾರತೀಯ ಸಂಸ್ಕೃತಿಯ ಪ್ರತೀಕ. ಇಂಥ ಸಂಪ್ರದಾಯ ಇಂದಿಗೂ ಪಾಲಿಸಿಕೊಂಡು ಬಂದಿರುವುದು ಹೆಮ್ಮೆಯ ಸಂಗತಿ ಎಂದರು.

ನಾರಾಯಣಪ್ಪ ಕೊಳ್ಳಿ, ಮಲ್ಲಿಕಾರ್ಜುನ ಕಿರಗಿ, ಶ್ರೀನಿವಾಸ ಕಂಟ್ಲಿ, ಹರೀನಾಥ ಚಿಟ್ಟಾ, ರುಕ್ಮಿಣಿ ನಾಗಶೆಟ್ಟಿ, ಶಶಿಕಲಾ ಅರಳಿಕಟ್ಟಿ, ವಸಂತ ಕಾಳಗಿ ಸವಿತಾ ಗುಗ್ರಿ ಶಂಕ್ರಮ್ಮ ಕಾಳಗಿ, ದೀಪ ಕೊಪ್ಪರದ, ಶೈಲಜಾ ಕಾಳಗಿ, ಶಂಕ್ರಮ್ಮ ಕೊಳ್ಳಿ, ಪಾರ್ವತಿ ಓದಾ ಸೇರಿ ಇತರರು ಇದ್ದರು.

ಶ್ರೀದಯಾನಂದಪುರಿ ಕ್ರೀಡಾ, ಸಾಂಸ್ಕೃತಿಕ, ಜಾನಪದ ಕಲಾ ಸಂಘ ಹಾಗೂ ಗಾಯಿತ್ರಿ ಮಹಿಳಾ ಸಂಘದ ಜಂಟಿಯಾಗಿ ಕಾರ್ಯಕ್ರಮ ಆಯೋಜಿಸಿದ್ದವು.

## ಹೋರಾಟಗಾರ ಶಿರೂರು ಕಂಚಿನ ಪ್ರತಿಮೆ ಸ್ಥಾಪನೆಗೆ ಮನವಿ

ಕುಕನೂರ ಪಟ್ಟಣದಲ್ಲಿ ಸ್ವಾತಂತ್ರ್ಯ ಹೋರಾಟಗಾರ ಹಾಗೂ ಮಾಜಿ ಶಾಸಕ ದಿ. ವೀರಭದ್ರಪ್ಪ ಶಿರೂರು ಅವರ ಕಂಚಿನ ಪ್ರತಿಮೆ ನಿರ್ಮಾಣ ಮಾಡಲು ಆಗ್ರಹಿಸಿ ಸಾರ್ವಜನಿಕರು ಪಪಂ ಮುಖ್ಯಾಧಿಕಾರಿ ನಭಿಸಾಬ್ ಕಂದಗಲ್ ಅವರಿಗೆ ಮನವಿ ಸಲ್ಲಿಸಿದರು.

**ಕುಕನೂರ:** ಪಟ್ಟಣದಲ್ಲಿ ಸ್ವಾತಂತ್ರ್ಯ ಹೋರಾಟಗಾರ ಹಾಗೂ ಯಲಬುರ್ಗಾ ವಿಧಾನಸಭೆ ಕ್ಷೇತ್ರದ ಮಾಜಿ ಶಾಸಕ ದಿ. ವೀರಭದ್ರಪ್ಪ ಶಿರೂರು ಅವರ ಕಂಚಿನ ಪ್ರತಿಮೆ ನಿರ್ಮಾಣ ಮಾಡಲು ಆಗ್ರಹಿಸಿ ಸಾರ್ವಜನಿಕರು ಪಟ್ಟಣ ಪಂಚಾಯತಿ ಮುಖ್ಯಾಧಿಕಾರಿ ನಭಿಸಾಬ್ ಕಂದಗಲ್ ಅವರಿಗೆ ಮನವಿ ಸಲ್ಲಿಸಿದರು. ಶಿರೂರು ವೀರಭದ್ರಪ್ಪ ಅವರು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ ಧೀಮಂತ ನಾಯಕರು. ಯಲಬುರ್ಗಾ ವಿಧಾನಸಭೆ ಕ್ಷೇತ್ರದ ಶಾಸಕರಾಗಿ ಸಾಕಷ್ಟು ಅಭಿವೃದ್ಧಿ ಕೆಲಸ ಮಾಡಿದ್ದಾರೆ. ಪಟ್ಟಣದ ಶಿರೂರು ವೀರಭದ್ರಪ್ಪ ವೃತ್ತದಲ್ಲಿ ಅವರ ಗೌರವಾರ್ಥವಾಗಿ ಮೂರ್ತಿ ನಿರ್ಮಾಣ ಮಾಡಿದರೆ, ಇಂದಿನ ರಾಜಕಾರಣಿಗಳು ಹಾಗೂ ಯುವಕರಿಗೆ ಅವರು ಸ್ಫೂರ್ತಿ ಆಗಲಿದ್ದಾರೆ. ಅವರ ಕಂಚಿನ ಪ್ರತಿಮೆ ಯನ್ನು ಎಲ್ಲ ಸಾರ್ವಜನಿಕರಿಗೆ ಪ್ರದರ್ಶಿತ ವಾಗುವ ನಿಟ್ಟಿನಲ್ಲಿ ಪ್ರತಿಮೆ ನಿರ್ಮಾಣ ಮಾಡಬೇಕು ಎಂದು ಮನವಿ ಸಲ್ಲಿಸಿದರು. ಪಟ್ಟಣದ ಪ್ರಮುಖರಾದ ರವಿ ಗುರಡ್ಡಿ, ಉದಯ ರಾಯರೆಡ್ಡಿ , ಶಿವು ಆದಾಪೂರ, ಶಿವರೆಡ್ಡಿ ಆಡೂರು, ವೀರೇಶ ಮಾಳಗೌಡ್ರ, ಬಸವರಡ್ಡಿ ಬಿಡನಾಳ, ಜಗದೀಶ ಸೂಡಿ, ಮುತ್ತಣ್ಣ ವಾಲ್ಮೀಕಿ, ಮಂಜುನಾಥ ಯಡಿಯಾಪುರ ಇದ್ದರು.

## ಆ.12ರಿಂದ ಆಶಾ ಅಹೋರಾತ್ರಿ ಧರಣಿ

**ಮುದಗಲ್:** ಮೂರು ದಿನಗಳಂದು ಜಿಲ್ಲಾ ಮಟ್ಟದ ಆಶಾ ಕಾರ್ಯಕರ್ತೆಯರ ಅಹೋರಾತ್ರಿ ಪ್ರತಿಭಟನಾ ಧರಣಿಯಲ್ಲಿ ತಾಲೂಕಿನ ಆಶಾ ಕಾರ್ಯಕರ್ತೆಯರು ಭಾಗವಹಿಸುತ್ತೇವೆ ಎಂದು ಆಶಾ ಕಾರ್ಯಕರ್ತೆಯರಿಂದ ಪಟ್ಟಣ ಸಮೀಪದ ಮಾಕಾಪೂರು ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಧಿಕಾರಿ ಲಕ್ಷ್ಮಿಕಾಂತ್‌ರವರಿಗೆ ಸೋಮವಾರ ಮನವಿ ಪತ್ರ ಸಲ್ಲಿಸಿದರು.

ಮುಖ್ಯಮಂತ್ರಿ ಅವರು ಘೋಷಿಸಿದ ಆಶಾ ಕಾರ್ಯಕರ್ತೆಯರಿಗೆ ಪ್ರೋತ್ಸಾಹಧನ ಸೇರಿಸಿ ಕನಿಷ್ಠ ರು.10000 ಗಳ ಗೌರವಧನವನ್ನು ಏಪ್ರಿಲ್ ಒಂದರಿಂದ ಅನ್ವಯವಾಗುವಂತೆ ಮತ್ತು ಇದೇ ಬಜೆಟ್ ನಲ್ಲಿ ರು.1000 ಹೆಚ್ಚಳ ಮಾಡುವ ಆದೇಶವನ್ನು ಕೂಡಲೇ ನೀಡಲು ಮತ್ತು ಜನಸಂಖ್ಯೆ, ಮೌಲ್ಯಮಾಪನದ ಹೆಸರಿನಲ್ಲಿ ಆಶಾ ಕಾರ್ಯಕರ್ತೆಯರನ್ನು ಕೆಲಸದಿಂದ ಕೈಬಿಡುವ ಆತಂಕ ಸೃಷ್ಟಿಸಿರುವುದರ ವಿರುದ್ಧ ಎಐಯುಟಿಯುಸಿಗೆ ಸಂಯೋಜಿತವಾದ ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘ, ಜಿಲ್ಲಾ ಸಮಿತಿಯಿಂದ 'ಜಿಲ್ಲಾ ಮಟ್ಟದ ಆಶಾ ಕಾರ್ಯಕರ್ತೆಯರ ಅಹೋರಾತ್ರಿ ಪ್ರತಿಭಟನಾ ಧರಣಿ' ಆ.12 ರಿಂದ ಮೂರು ದಿನಗಳ ಕಾಲ ರಾಯಚೂರು ಜಿಲ್ಲೆಯಲ್ಲಿ ನಡೆಸಲು ತೀರ್ಮಾನಿಸಿರುತ್ತೇವೆ ಎಂದು ವೈದ್ಯರಿಗೆ ಮನವಿ ಪತ್ರ ಸಲ್ಲಿಸಿದರು.

ಈ ಸಂದರ್ಭದಲ್ಲಿ ಉದಾಸಮ್ಮ ಪಂಪಮ್ಮ ಸುನೀಲಮ್ಮ ಅಂಬಮ್ಮ ಶಾಂತಮ್ಮ ಬಡಿಗೇರ ಸೇರಿದಂತೆ ಆಶಾ ಕಾರ್ಯಕರ್ತೆಯರು ಉಪಸ್ಥಿತರಿದ್ದರು.

ಆಶಾ ಕಾರ್ಯಕರ್ತೆಯರಿಂದ ಪಟ್ಟಣ ಸಮೀಪದ ಮಾಕಾಪೂರು ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಧಿಕಾರಿ ಲಕ್ಷ್ಮಿಕಾಂತ್‌ರವರಿಗೆ ಸೋಮವಾರ ಮನವಿ ಪತ್ರ ಸಲ್ಲಿಸಿದರು.

## ಜೆಜೆಎಂ ಕಾಮಗಾರಿ ಕಳಪೆ:ಗ್ರಾಮಸ್ಥರ ಆರೋಪ

**ಮುದಗಲ್:** ಪಟ್ಟಣ ಸಮೀಪದ ಕನಸಾವಿ ಗ್ರಾಮದಲ್ಲಿ ನಡೆಯುತ್ತಿರುವ ಜೆಜೆಎಂ ಕಾಮಗಾರಿ ಚುನಾಯಿತ ಜನಪ್ರತಿನಿಧಿಗಳ ಹಾಗೂ ಇಲಾಖೆ ಅಧಿಕಾರಿಗಳ ನಿರ್ಲಕ್ಷ್ಯ ದಿಂದ ಕಳಪೆಯಾಗಿದೆ ಗ್ರಾಮಸ್ಥರು ಆರೋಪಿಸಿದರು.

ಮನೆ ಮನೆಗೆ ಕುಡಿಯುವ ನೀರು ಸರಬರಾಜು ಮಾಡುವ ಸಲುವಾಗಿ ಕನಸಾವಿ ಗ್ರಾಮದಲ್ಲಿ ಕೇಂದ್ರ ಸರಕಾರದ ಮಹತ್ವಕಾಂಕ್ಷಿ ಯೋಜನೆಯಾದ ಜೆಜೆಎಂ ಕಾಮಗಾರಿ ಸುಮಾರು ಎರಡು ವರ್ಷಗಳಿಂದ ನಡೆಯುತ್ತಿರುವ ಹಿನ್ನಲೆಯಲ್ಲಿ ಗ್ರಾಮಸ್ಥರಿಗೆ ತೊಂದರೆಯಾಗಿದೆ ಎಂದು ಆರೋಪಿಸಿದರು. ಪೈಪ್‌ಲೈನ್ ಹಾಕಲು ಗ್ರಾಮದಲ್ಲಿ ತಗ್ಗುಗಳನ್ನು ತೆಗೆಯುತ್ತಾರೆ ಆದರೆ ಸರಿಯಾಗಿ ಮುಚ್ಚದ ಹಿನ್ನೆಲೆಯಲ್ಲಿ ಚರಂಡಿ ನೀರು ನಿಂತಲ್ಲೇ ನಿಂತು ಮಲಿನವಾಗಿ ಅನೇಕ ರೋಗಗಳಿಗೆ ತುತ್ತಾಗು ತ್ತಿದ್ದಾರೆ. ಗ್ರಾಮೀಣ ಕುಡಿಯುವ ನೀರು ಹಾಗೂ ನೈರ್ಮಲ್ಯ ಉಪ ವಿಭಾಗ ಲಿಂಗಸುಗೂರು ಅಧಿಕಾರಿಗಳಿಗೆ ಆದಷ್ಟು ಬೇಗನೆ ಕಾಮಗಾರಿ ಮುಗಿಸುವಂತೆ ದೂರವಾಣಿ ಮೂಲಕ ಅನೇಕ ಬಾರಿ ಮನವಿ ಮಾಡಿಕೊಂಡರು ಯಾವುದೇ ಪ್ರಯೋಜನ ವಾಗಿಲ್ಲ ಎಂದು ಆರೋಪಿಸಿದರು. ಈಗಲಾದರೂ ಸಂಬಂಧಪಟ್ಟ ಅಧಿಕಾರಿಗಳು ಕನಸಾವಿ ಗ್ರಾಮದ ಕಾಮಗಾರಿ ನೆಡೆಯುವ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ಮಾಡಿ ಗುತ್ತಿಗೆದಾರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಗ್ರಾಮಸ್ಥರು ಒತ್ತಾಯಿಸಿದರು.

### ಸ್ಥಳಕ್ಕೆ ಪಿಡಿಒ ಭೇಟಿ

ಜೆಜೆಎಂ ಕಾಮಗಾರಿ ನಡೆಯುತ್ತಿರುವ ಕನಸಾವಿ ಗ್ರಾಮಕ್ಕೆ ಆಮದಿಹಾಳ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಭೇಟ ನೀಡಿ ಪರಿಶೀಲನೆ ಮಾಡಿದರು. ಇದೆ ವೇಳೆ ಸ್ವಚ್ಛತೆ ಆದ್ಯತೆ ನೀಡಬೇಕು ಎಂದು ಗ್ರಾಮಸ್ಥರು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡಿದ್ದಾರೆ ಎಂದು ತಿಳಿದು ಬಂದಿದೆ .

## ಯುವಕನ ಹತ್ಯೆ: ಕಠಿಣ ಶಿಕ್ಷೆ ವಿಧಿಸಲು ಆಗ್ರಹ

**ಸಿಂಧನೂರು:** ಕೊಪ್ಪಳದಲ್ಲಿ ಪ್ರೀತಿ ವಿಚಾರಕ್ಕೆ ಯುವಕನನ್ನು ಕೊಲೆ ಮಾಡಲಾಗಿದ್ದು, ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ವಿಧಿಸಬೇಕು ಎಂದು ಆಗ್ರಹಿಸಿ ಸಾಲಿಡಾರಿಟಿ ಯೂತ್ ಮೂವ್ ಮೆಂಟ್‌ನ ತಾಲೂಕು ಘಟಕದ ಪದಾಧಿ ಕಾರಿಗಳು ಇಲ್ಲಿನ ಮಿನಿ ವಿಧಾನಸೌಧ ಕಚೇರಿಯ ಎದುರು ಸೋಮವಾರ ಪ್ರತಿಭಟನೆ ನಡೆಸಿದರು.

ಕೊಪ್ಪಳ ನಗರದಲ್ಲಿ ಗವಿಸಿದ್ದಪ್ಪ ಎಂಬ ಯುವಕನ ಕೊಲೆಯಾಗಿದೆ. ಇದಕ್ಕೆ ಪ್ರೀತಿ ವಿಚಾರವೇ ಕಾರಣ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸ್ಪಷ್ಟಪಡಿಸಿದ್ದಾರೆ. ಈ ಘಟನೆಯು ಶಾಂತಿ, ಕಾನೂನು ಮತ್ತು ಸೌಹಾರ್ದಕ್ಕೆ ಧಕ್ಕೆ ಉಂಟು ಮಾಡಿದೆ. ಕೊಲೆ ಮಾಡಿದ ಆರೋಪಿಗಳಿಗೆ ಕಠಿಣ ಶಿಕ್ಷೆ ವಿಧಿಸಬೇಕು. ಶಾಲಾ-ಕಾಲೇಜುಗಳಲ್ಲಿ ಶಾಂತಿ ಸಂದೇಶ ಸಾರಬೇಕು' ಎಂದು ಮನುಜಮತ ಬಳಗದ ಪ್ರಧಾನ ಕಾರ್ಯದರ್ಶಿ ಬಸವರಾಜ ಬಾದರ್ಲಿ ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಮಸ್ಲಿಂ ಸಮಾಜದ ಮುಖಂಡರಾದ ಬಾಬರ್ ಪಾಷಾ ಜಾಗೀರದಾರ್ ವಕೀಲ, ಕೆ.ಜಿಲಾನಿಪಾಷಾ, ಸೈಯ್ಯದ್ ಜಾಫರ್ ಅಲಿ ಜಾಗೀರದಾರ್, ಎಂ.ಡಿ.ನದೀಮುಲ್ಲಾ, ಜಾವೀದ್ ಖಾಜಿ, ಮೆಹಬೂಬ್ ಖಾನ್, ಡಾ. ವಸೀಮ್ ಅಹ್ಮದ್, ಸಾಲಿಡಾರಿಟಿ ಯೂತ್ ಮೂವ್‌ಮೆಂಟ್‌ನ ತಾಲ್ಲೂಕು ಘಟಕದ ಅಧ್ಯಕ್ಷ ಅಬುಲೈಸ್ ನಾಯ್ಕ್, ಇಸ್ಮೈಲ್ ಗಡಗಿ, ಇಮ್ತಿಯಾಜ್, ನೂರ್ ಮಹ್ಮದ್, ನೈಮ್ ಇರ್ಫಾನ್, ಮಹಾವೀರ್ ಜೈನ್, ಅಯ್ಯಪ್ಪ ಮಲ್ಲಾಪುರ, ಸೈಯ್ಯದ್ ಫಯಾಜ್, ಅಫ್ಜಲ್ ಹುಸೇನ್, ಸೈಯ್ಯದ್ ಸಾದಿಕ್ ಹುಸೇನ್ ಭಾಗಿಯಾಗಿದ್ದರು.

ಯೂತ್ ಮೂವ್‌ಮೆಂಟ್‌ನ ತಾಲೂಕು ಘಟಕದ ಪದಾಧಿ ಕಾರಿಗಳು ಇಲ್ಲಿನ ಮಿನಿ ವಿಧಾನಸೌಧ ಕಚೇರಿಯ ಎದುರು ಸೋಮವಾರ ಪ್ರತಿಭಟನೆ ನಡೆಸಿದರು.

> ಮಾನವೀಯ ಮೌಲ್ಯಗಳನ್ನು ಹಾಳು ಮಾಡುವ ಇಂಥ ಕ್ರೂರ ಘಟನೆಗಳು ಸಮಾಜದಲ್ಲಿ ಭಯದ ವಾತಾವರಣ ಸೃಷ್ಟಿಸುತ್ತವೆ. ಇಂಥ ಅಹಿತಕರ ಘಟನೆಗಳು ನಡೆಯದಂತೆ ನಿಗಾವಹಿಸಬೇಕು. ಆರೋಪಿಗಳು ಗಾಂಜಾದ ನಶೆಯಲ್ಲಿ ಕೃತ್ಯ ಎಸಗಿದ್ದಾರೆ ಎಂದು ಶಂಕೆ ವ್ಯಕ್ತವಾಗಿದೆ. ಜಿಲ್ಲೆಯಲ್ಲಿ ಮಾದಕ ವಸ್ತುಗಳ ಸೇವನೆಯಿಂದ ಇಂಥ ಪ್ರಕರಣಗಳು ಹೆಚ್ಚಾಗುತ್ತಿವೆ.
> – ಮಹ್ಮದ್ ಟಿ.ಹುಸೇನಸಾಬ್, ತಾಲೂಕು ಘಟಕದ ಅಧ್ಯಕ್ಷ

## ವಿಶ್ವನಾಥಗೆ ಸಮಾಜ ಸೇವಾ ರತ್ನ ಪ್ರಶಸ್ತಿ

**ಯಲಬುರ್ಗಾ:** ಕುಕನೂರು ತಾಲೂಕು ಮಂಗಳೂರು ಗ್ರಾಮದ ತಾಪಂ ಮಾಜಿ ಉಪಾಧ್ಯಕ್ಷ ಹಾಗೂ ಬಿಜೆಪಿ ಯುವ ಮುಖಂಡ ವಿಶ್ವನಾಥ ಎಂ ಮರಿಬಸಪ್ಪನವರ್ ಅವರು ಸಮಾಜ ಸೇವಾ ರತ್ನ ರಾಜ್ಯ ಪ್ರಶಸ್ತಿಗೆ ಭಾಜನರಾಗಿದ್ದಾರೆ. ವಿಜಯನಗರ ಜಿಲ್ಲೆ ಕೂಡ್ಲಿಗಿ ತಾಲೂಕು ಹಿರೇಹೆಗ್ಡಾಳ ಗ್ರಾಮದ ಕಲಾಭಾರತಿ ಕಲಾಸಂಘದಿಂದ ಕೊಡಮಾಡುವ 2025-26 ನೇ ಸಾಲಿನ ಸಮಾಜ ಸೇವಾ ರತ್ನ ರಾಜ್ಯ ಪ್ರಶಸ್ತಿಗೆ ಇದಾಗಿದೆ. ಸಾಮಾನ್ಯ ಕುಟುಂಬದ ದಿ.ಮಂಗಳೇಶಪ್ಪ ಹಾಗೂ ದಿ.ದೇವಮ್ಮ ಮಗನಾಗಿ ವಿಶ್ವನಾಥ, ಆಕಸ್ಮಿಕವಾಗಿ ರಾಜಕೀಯ ಪ್ರವೇಶಿಸಿದ್ದಾರೆ. ಕಳೆದ 2016ರಲ್ಲಿ ನಡೆದ ತಾಲೂಕು ಪಂಚಾಯಿತಿ ಚುನಾವಣೆಯಲ್ಲಿ ಮಂಗಳೂರು ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ದಿಸಿ, ಆಯ್ಕೆ ಆಗಿದ್ದರು. ತಾಪಂ ಉಪಾಧ್ಯಕ್ಷ ಹುದ್ದೆ ಇವರಿಗೆ ಒಲಿದು ಬಂದಿತ್ತು. ಇವರ ಸಾಮಾಜಿಕ ಹಾಗೂ ರಾಜಕೀಯ ವಿಶೇಷ ಸಾಧನೆ ಗುರುತಿಸಿದ ಸಂಘಟಣೆ ರಾಜ್ಯ ಮಟ್ಟದ ಸಮಾಜ ಸೇವಾ ರತ್ನ ಪ್ರಶಸ್ತಿ ನೀಡಿ ಗೌರವಿಸಿದೆ. ಇವರಿಗೆ ಕೂಡಲಸಂಗಮ ಜಯಬಸವ ಮೃತ್ಯುಂಜಯ ಸ್ವಾಮಿಜೀ, ತಳ್ಳಿಹಾಳ ಮಠದ ಕಾಲಜ್ಞಾನಿ ಶ್ರೀ ಶರಣಬಸವ ಸ್ವಾಮಿಜೀ, ಮಾಜಿ ಸಚಿವ ಹಾಲಪ್ಪ ಆಚಾರ್, ಪಂಚಸೇನಾ ರಾಜ್ಯಾಧ್ಯಕ್ಷ ರುದ್ರಗೌಡ,ತಾಲೂಕಿನ ಜನಪ್ರತಿನಿಧಿಗಳು,ಹಾಗೂ ಸಮಾಜದ ಮುಖಂಡರು ಅಭಿನಂದನೆ ಕೋರಿದ್ದಾರೆ.

## ಕೈ ಕೊಟ್ಟ ಮಳೆ, ಬೆಳೆ ರಕ್ಷಣೆಗೆ ರೈತ ಹೈರಾಣ

ಖಲೀಲ್ ಅಹ್ಮದ್, ಮಸ್ಕಿ

**ಮಸ್ಕಿ:** ತಾಲೂಕಿನಲ್ಲಿ ಮಳೆ ಕೈ ಕೊಟ್ಟಿರುವ ಹಿನ್ನೆಲೆಯಲ್ಲಿ ಹೊಲ ಗಳಲ್ಲಿ ತೇವಾಂಶ ಕಡಿಮೆ ಆಗಿ ತೊಗರಿ, ಸಜ್ಜೆ,ಕಡಲೆ, ಜೋಳದ ಬೆಳೆಗಳು ನೆಲ ಕಚ್ಚುವ ಹಂತಕ್ಕೆ ತಲುಪುತ್ತಿರುವ ಕಾರಣ ಅನ್ನದಾತರಿಗೆ ಬೆಳೆ ನಷ್ಟದ ಆತಂಕ ಎದುರಾಗಿದೆ. ಬೆಳೆ ರಕ್ಷಣೆಗೆ ರೈತರು ಫಜೀತಿ ಪಡು ತಾಗಿದ್ದು,ಸಮೀಪದ ಸಿಂಗಸ್ ಹಳ್ಳಕ್ಕೆ ಮಸ್ಕಿ ನಾಲಾ ಜಲಾಶಯ ಕಾಲುವೆ ಗಳ ಬಸಿ ನೀರು ಹಳ್ಳಕ್ಕೆ ಹರಿಯುತ್ತಿರುವ ಕಾರಣ ಹಳ್ಳ ಗುಂಟಾ ವಿರುವ ಹೊಲ ಗಳ ರೈತರಿಗೆ ಸ್ವಲ್ಪ ಅನುಕೂಲ ವಾಗಿದೆ. ರೈತರು ಹಳ್ಳದ ಬಳಿ ಮೋಟಾರ್ ಅಳವಡಿಸಿ ಕೊಂಡು ಹೊಲ ಗಳಿಗೆ ನೀರು ಹರಿಸಿ ಕೊಳ್ಳುಲು ಫಜೀತಿ ಪಡುತ್ತಿದ್ದಾರೆ. ಹೊಲ ಗಳಲ್ಲಿ ಕೊಳವೆ ಬಾವಿ ಸೌಲಭ್ಯ ವಿರುವ ರೈತರು ಜಮೀನು ಗಳಿಗೆ ನೀರು ಹರಿಸಿ ಕೊಂಡು ಬೆಳೆ ರಕ್ಷಣೆಗೆ ಮುಂದಾಗಿದ್ದಾರೆ. ತೊಗರಿ ಬಿತ್ತನೆ ನಂತರ ಸ್ವಲ್ಪ ಮಳೆ ಯಾದ ಕಾರಣ ರೈತ ಸಂಪರ್ಕ ಕೇಂದ್ರ ವ್ಯಾಪ್ತಿಯ ಹೊಲ ಗಳಲ್ಲಿ ತೊಗರಿ ಬೆಳೆ ಸಮೃದ್ದ ವಾಗಿ ಬೆಳೆದಿದೆ ಕಳೆದ ತಿಂಗಳಿಂದ ಒಂದು ಹನಿ ಮಳೆ ಯಾಗದ ಕಾರಣ ತೊಗರಿ ಬೆಳೆ ಎತ್ತರಕ್ಕೆ ಬೆಳೆಯುತ್ತಿಲ್ಲ. ಜೋರಾಗಿ ಬೀಸುತ್ತಿರುವ ಗಾಳಿ, ಬಿಸಿಲಿನ ತಾಪಕ್ಕೆ ತೊಗರಿ ಗಿಡಗಳ ಎಲೆ ಉದುರುತ್ತಿರುವುದು ರೈತರ ಚಿಂತೆಗೆ ಕಾರಣವಾಗಿದೆ. ಕಳೆದ ತಿಂಗಳು ಬಿತ್ತನೆ ಮಾಡಿದ್ದ ಜೋಳದ ಬೆಳೆ ಮಳೆ ಇಲ್ಲದ ಕಾರಣ ಎತ್ತರಕ್ಕೆ ಬೆಳೆದಿಲ್ಲ. ಇನ್ನು ಕೆಲ ದಿನಗಳಲ್ಲಿ ಮಳೆ ಯಾಗದಿದ್ದರೆ, ಜೋಳದ ಬೆಳೆ ನೆಲ ಕಚ್ಚಲಿದೆ ಎಂದು ರೈತರು ಆತಂಕ ವ್ಯಕ್ತಪಡಿಸುತ್ತಿದ್ದಾರೆ. ಮಳೆ ಅಭಾವದ ನಡುವೆ ಅಲ್ಪ ಸ್ವಲ್ಪ ಬೆಳೆದ ತೊಗರಿ ಕೈ ಕೊಡುವ ಸಾಧ್ಯತೆ ಗಳಿವೆ ಎಂದು ರೈತರು ಆತಂಕ ವ್ಯಕ್ತಪಡಿಸುತ್ತಿದ್ದಾರೆ.

> ಪಟ್ಟಣದಲ್ಲಿ ಮಳೆ ಬರುತ್ತಿದೆ ಹೊಲ ಗಳಲ್ಲಿ ಮಳೆ ಆಗುತ್ತಿಲ್ಲ ಮಳೆ ಅಭಾವದ ಕಾರಣ ಸಮೃದ್ದವಾಗಿ ಬೆಳೆದಿದ್ದ ತೊಗರಿ, ಸೂರ್ಯ ಕಾಂತಿ ಬೆಳೆ ಬಾಡುವ ಹಂತಕ್ಕೆ ತಲುಪುತ್ತಿರುವುದು ಚಿಂತೆಯಾಗಿದೆ.
> – ಅಮರಪ್ಪ ಕುರುಬರ, ರೈತ ಮಸ್ಕಿ

## ತೋಟಗಾರಿಕೆ ಅಭಿಯಾನ

**ಕೊಪ್ಪಳ:** ಕೊಪ್ಪಳ ತೋಟಗಾರಿಕಾ ಇಲಾಖೆ ವತಿಯಿಂದ ತೋಟಗಾರಿಕಾ ಕ್ಷೇತ್ರದಲ್ಲಿ ಅಭಿವೃದ್ಧಿಪಡಿಸಿದ ಉತ್ಕೃಷ್ಟ ಗುಣಮಟ್ಟದ ಸಸಿಗಳ ಮತ್ತು ಆಧಾಯ ಹೆಚ್ಚಿಸುವ ತೋಟಗಾರಿಕೆ ಸಿಸಿ ತಳಿಗಳ ಪರಿಚಯ ಹಾಗೂ ಮಾರಾಟದ ''ಸಸ್ಯಸಂತೆ ಮತ್ತು ತೋಟಗಾರಿಕೆ ಅಭಿಯಾನ ''ಸ್ವದೇಶಿ ವಿದೇಶಿ ಹಣ್ಣಿನ ಸಸಿಗಳ ಪರಿಚಯ, ಪ್ರದರ್ಶನ ಮತ್ತು ಮಾರಾಟ ಮೇಳ-2025 ನ್ನು ಆಗಸ್ಟ್ 15ರಿಂದ ಆ. 20ರವರೆಗೆ ನಗರದ ತೋಟಗಾರಿಕೆ ಉಪ ನಿರ್ದೇಶಕರ ಕಛೇರಿ ಆವರಣದಲ್ಲಿ ಹಮ್ಮಿಕೊಳ್ಳಲಾಗಿದ್ದು, ಉದ್ಘಾಟನಾ ಕಾರ್ಯಕ್ರಮವು ಆ. 15ರ ಬೆಳಿಗ್ಗೆ 10 ಗಂಟೆಗೆ ನಡೆಯಲಿದೆ. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ ಎಸ್. ತಂಗಡಗಿ ಅವರು ಕಾರ್ಯಕ್ರಮ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಸಂಸದರಾದ ಕೆ.ರಾಜಶೇಖರ್ ಹಿಟ್ನಾಳ, ಗಂಗಾವತಿ ಶಾಸಕರಾದ ಜಿ.ಜನಾರ್ಧನರೆಡ್ಡಿ, ವಿಧಾನ ಪರಿಷತ್ ಸದಸ್ಯರುಗಳಾದ ಶಶೀಲ್ ಜಿ.ನಮೋಶಿ, ಡಾ.ಚಂದ್ರಶೇಖರ್ ಬಿ.ಪಾಟೀಲ, ಶರಣಗೌಡ ಅನ್ನದಾನಗೌಡ ಪಾಟೀಲ ಬಯ್ಯಾಪೂರ ಹಾಗೂ ಹೇಮಲತಾ ನಾಯಕ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಕೆ. ಶ್ರೀನಿವಾಸ ಗುಪ್ತಾ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ರೆಡ್ಡಿ ಶ್ರೀನಿವಾಸ್ ಅವರು ಪಾಲ್ಗೊಳ್ಳುವರು.

ಚೇನಾದ ತಿಯಾಂಜಿನ್‌ನಲ್ಲಿ ನಡೆಯಲಿರುವ ಶಾಂಘೈ ಸಹಕಾರ ಸಂಸ್ಥೆ (ಎಸ್‌ಸಿಒ) ಪ್ರಾದೇಶಿಕ ಶೃಂಗಸಭೆಯಲ್ಲಿ ಭಾಗವಹಿಸಲು ಪ್ರಧಾನಿ ನರೇಂದ್ರ ಮೋದಿ ಇದೇ ಆ.31ರಿಂದ ಸೆ.1ರ ವರೆಗೆ ಚೇನಾ ಪ್ರವಾಸ ಕೈಗೊಳ್ಳಲಿದ್ದಾರೆ. 2020ರಲ್ಲಿ ಭಾರತ-ಚೇನಾ ಸೈನಿಕರ ನಡುವೆ ನಡೆದಿದ್ದ ಗಲ್ವಾನ್ ಘರ್ಷಣೆಯ ಬಳಿಕ, ಇದೇ ಮೊದಲ ಬಾರಿಗೆ ಅವರು ಚೇನಾ ನೆಲದಲ್ಲಿ ಕಾಲಿಡಲಿದ್ದಾರೆ. ಈ ಸಲದ ಶಾಂಘೈ ಸಹಕಾರ ಶೃಂಗಸಭೆಯ ಮೂಲಕ ಭಾರತ, ಚೇನಾ ಮತ್ತು ರಷ್ಯಾ ದೇಶಗಳ ಮೈತ್ರಿ ಇನ್ನಷ್ಟು ಗಟ್ಟಿಯಾದರೆ ಈ ಶೃಂಗಸಭೆಯು ಭಾರತದ ವಸ್ತುಗಳ ಮೇಲೆ ಆಘಾತಕಾರಿ ಪ್ರಮಾಣದಲ್ಲಿ ಸುಂಕ ವಿಧಿಸಿರುವ ಅಮೆರಿಕಕ್ಕೆ ತಿರುಗುಬಾಣವಾಗಲಿದೆ ಎಂಬುದರಲ್ಲಿ ಸಂದೇಹವಿಲ್ಲ.

# ಶಾಂಘೈ ಶೃಂಗಸಭೆ: ಅಮೆರಿಕ ವಿರುದ್ಧ ತ್ರಿಕೂಟ?

## ಗಲ್ವಾನ್ ಸಂಘರ್ಷದ ಬಳಿಕ ಚೀನಾಕ್ಕೆ ಮೋದಿ ಭೇಟಿ | ಭಾರತ-ಚೀನಾ-ರಷ್ಯಾ ಹೊಸ ಮೈತ್ರಿ ಶಕೆ ಸಾಧ್ಯತೆ

ಚೇನಾದ ತಿಯಾಂಜಿನ್ ನಗರದಲ್ಲಿ ಇದೇ ತಿಂಗಳ ಕೊನೆಯಲ್ಲಿ ನಡೆಯಲಿರುವ ಶಾಂಘೈ ಸಹಕಾರ ಸಂಸ್ಥೆ (ಎಸ್‌ಸಿಒ) ಪ್ರಾದೇಶಿಕ ಶೃಂಗಸಭೆಯಲ್ಲಿ ಭಾಗವಹಿಸಲು, ಪ್ರಧಾನಿ ಮೋದಿ ಚೇನಾಕ್ಕೆ ಭೇಟಿ ನೀಡಲಿದ್ದಾರೆ. 2020ರ ಗಲ್ವಾನ್ ಘರ್ಷಣೆಯ ಬಳಿಕ ಮೊದಲ ಬಾರಿಗೆ ಭಾರತದ ಪ್ರಧಾನಿಯೊಬ್ಬರು ಚೇನಾಗೆ ಭೇಟಿ ನೀಡುವ ಕಾರ್ಯಕ್ರಮ ಇದಾಗಿದ್ದು, 2019ರಲ್ಲಿ ಕೊನೆಯ ಬಾರಿಗೆ ಮೋದಿ ಅಲ್ಲಿಗೆ ಭೇಟಿ ನೀಡಿದ್ದರು.

ಈ ಬಾರಿ ಶಾಂಘೈ ಸಹಕಾರ ಸಂಸ್ಥೆಯ ಶೃಂಗಸಭೆಯ ಸದಸ್ಯ ರಾಷ್ಟ್ರಗಳೊಂದಿಗೆ ವಿದೇಶಾಂಗ ಆರ್ಥಿಕ ನೀತಿ, ಪ್ರಾದೇಶಿಕ ಭದ್ರತೆ, ಭಯೋತ್ಪಾದನೆ ಮತ್ತು ವ್ಯಾಪಾರದ ಕುರಿತು ಮೋದಿ ಚರ್ಚೆ ನಡೆಸಲಿದ್ದಾರೆ. ಭಾರತ-ಚೇನಾ ಸಂಬಂಧಗಳಲ್ಲಿ ಸ್ಥಿರತೆ ಮತ್ತು ಸಂವಾದವನ್ನು ಪುನಃಸ್ಥಾಪಿಸುವ ಕುರಿತೂ ಚೇನೀ ನಾಯಕತ್ವದೊಂದಿಗೂ ಅವರು ಚರ್ಚಿಸಲಿದ್ದಾರೆ.

- 6 ವರ್ಷಗಳ ಬಳಿಕ ಪ್ರಧಾನಿ ಮೋದಿ ಚೇನಾ ಪ್ರವಾಸ.
- ಶಾಂಘೈ ಸಹಕಾರ ಶೃಂಗಸಭೆಯಲ್ಲಿ ಟ್ರಂಪ್ ಘೋಷಿಸಿದ ಸುಂಕ ಏರಿಕೆ ಚರ್ಚೆ ಪ್ರಮುಖ ವಿಷಯಸೂಚಿ ಸಾಧ್ಯತೆ.
- ಭಾರತ, ಚೇನಾ ಮತ್ತು ರಷ್ಯಾ ಸಂಬಂಧ ಗಟ್ಟಿಯಾದರೆ ಅಮೆರಿಕಕ್ಕೆ ಕಂಟಕ ಖಚಿತ.

ಎಸ್‌ಸಿಒ ಶೃಂಗಸಭೆಯ ವೇಳೆ ರಷ್ಯಾದ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಮತ್ತು ಚೇನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಅವರೊಂದಿಗೆ ಮೋದಿ ಸಭೆ-ಸಂವಾದ ನಡೆಸಲಿದ್ದಾರೆ. ಹಾಗಾಗಿ ಈ ಮೂರೂ ರಾಷ್ಟ್ರಗಳು ಮುಂದಿನ ದಿನಗಳಲ್ಲಿ ಇನ್ನಷ್ಟು ಒಗ್ಗಟ್ಟನ್ನು ಮೆರೆದರೆ ಅಮೆರಿಕ ಅಧ್ಯಕ್ಷ ಟ್ರಂಪ್ ಪಾಲಿಗೆ ಆತಂಕದ ವಿಷಯ ಆಗುವುದಂತೂ ಖಚಿತ ಎನ್ನಲಾಗುತ್ತಿದೆ.

2024 ಅಕ್ಟೋಬರ್‌ನಲ್ಲಿ ಪ್ರಧಾನಿ ಮೋದಿ ಮತ್ತು ಚೇನಾ ಅಧ್ಯಕ್ಷ ಕ್ಸಿ ಜಿನ್ ಪಿಂಗ್ ಅವರು ಕಜಾನ್‌ನಲ್ಲಿ ನಡೆದ ಬ್ರಿಕ್ಸ್ ಶೃಂಗಸಭೆಯಲ್ಲಿ ನೇರವಾಗಿ ಭೇಟಿ ಮಾಡಿ ಮಾತುಕತೆ ನಡೆಸಿದ್ದರು. ಈ ಭೇಟಿಯ ವೇಳೆ ಉದ್ವಿಗ್ನಗೊಂಡಿದ್ದ ಭಾರತ-ಚೇನಾ ಸಂಬಂಧಗಳನ್ನು ತಿಳಿಗೊಳಿಸುವ ಕುರಿತು ಉಭಯ ನಾಯಕರೂ ಪರಸ್ಪರ ಚರ್ಚೆ ನಡೆಸಿದ್ದರು. ಅದರ ಪರಿಣಾಮವಾಗಿ ಎರಡೂ ದೇಶಗಳ ನಡುವಿನ ಗಡಿ ಉದ್ವಿಗ್ನತೆಯನ್ನು ಕಡಿಮೆ ಮಾಡುವ ಪ್ರಯತ್ನಗಳು ವೇಗ ಪಡೆದುಕೊಂಡವು. ಉಭಯ ದೇಶಗಳ ನಡುವೆ ಹಲವು ಸುತ್ತಿನ ರಾಜತಾಂತ್ರಿಕ ಸಭೆಗಳು ನಡೆದು, ಸಂಬಂಧವನ್ನು ಸಹಜ ಸ್ಥಿತಿಗೆ ತರಲು ಅನೇಕ ಕ್ರಮಗಳನ್ನು ಜಾರಿಗೊಳಿಸಲಾಯಿತು.

ರಷ್ಯಾ ಕೂಡಾ ಶಾಂಘೈ ಸಹಕಾರ ಸಂಸ್ಥೆಯ ಶೃಂಗಸಭೆಯಲ್ಲಿ ಭಾಗವಹಿಸುತ್ತಿರುವುದರಿಂದ ಚರ್ಚೆಯ ಆಯಾಮಗಳು ಇನ್ನಷ್ಟು ವಿಪುಲಗೊಂಡಿವೆ. ಆ ಕಾರಣಕ್ಕಾಗಿಯೇ ಈ ಬಾರಿಯ ಸಭೆಯಲ್ಲಿ ಅಮೆರಿಕದ ಸುಂಕ ಏರಿಕೆಯ ವಿಚಾರಗಳನ್ನು ಭಾರತವು ದೀರ್ಘವಾಗಿ ಚರ್ಚೆಗೆತ್ತಿಕೊಳ್ಳಲಿದೆ. ಭಾರತವೂ ಸೇರಿದಂತೆ ವಿಶ್ವದ ಹಲವು ರಾಷ್ಟ್ರಗಳ ಆರ್ಥಿಕತೆಗೆ ಆಳವಾದ ಪೆಟ್ಟು ನೀಡಿರುವ ಅಮೆರಿಕದಲ್ಲಿ ಸುಂಕ ಏರಿಸಿದ ಟ್ರಂಪ್ ಕ್ರಮವು ಈಗಾಗಲೇ ಜಗತ್ತಿನ ಬಹುತೇಕ ರಾಷ್ಟ್ರಗಳಿಗೆ ಅಪಥ್ಯವೆನಿಸಿವೆ.

ಅಮೆರಿಕಾ ಮುಂದಿನ ದಿನಗಳಲ್ಲಿ ಇನ್ನಷ್ಟು ಮುಂದುವರಿದು, ಹಲವಾರು ದೇಶಗಳಿಗೆ ತೊಡಕೆನಿಸುವ ಆರ್ಥಿಕ ನೀತಿಗಳನ್ನು ಜಾರಿಗೊಳಿಸಲು ಮುಂದಾಗಿರುವ ಯೋಚನೆಯೂ ಈ ಸಲದ ಶಾಂಘೈ ಸಹಕಾರ ಸಂಸ್ಥೆಯ ಸಭೆಯಲ್ಲಿ ಪ್ರಮುಖ ಚರ್ಚಾ ವಿಷಯವಾಗಬಹುದೆನ್ನುವುದು ತಜ್ಞರ ಅಭಿಮತ. ಮಧ್ಯ ಏಷ್ಯಾ ಮತ್ತು ರಷ್ಯಾದೊಂದಿಗೆ ಭಾರತದ ದ್ವಿಪಕ್ಷೀಯ ವ್ಯಾಪಾರವು ಸದ್ಯಕ್ಕೆ ತುಂಬಾ ಕಡಿಮೆಯಾಗಿದ್ದು, ಈ ಶೃಂಗಸಭೆಯ ಮೂಲಕ ಅದು ವ್ಯಾಪಕವಾಗಿ ಅಮೆರಿಕಕ್ಕೆ ಸಡ್ಡು ಹೊಡೆಯುವ ಪರಿಸ್ಥಿತಿಗೂ ಕಾರಣವಾಗಬಹುದು. ಈಗಾಗಲೇ ಭಾರತದ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಶಾಂಘೈ ಸಹಕಾರ ಸಂಸ್ಥೆಯ ರಕ್ಷಣಾ ಸಚಿವರ ಸಭೆಯಲ್ಲಿ ಭಾಗವಹಿಸಿದ್ದು, ಭಯೋತ್ಪಾದನೆ ನಿರ್ಮೂಲನೆಯಾಗದ ಹೊರತು ಪ್ರಾದೇಶಿಕ ಶಾಂತಿ ಅಸಾಧ್ಯ ಎಂದು ಪಾಕಿಸ್ತಾನದ ಹೆಸರು ಉಲ್ಲೇಖಿಸದೇ ಸೂಕ್ಷ್ಮವಾಗಿ ಹೇಳಿದ್ದಾರೆ, ಅವರು ಪಹಲ್ಗಾಮ್ ದಾಳಿ ಉಲ್ಲೇಖವಿರದ ದಾಖಲೆಗೆ ಸಹಿ ಮಾಡಲು ನಿರಾಕರಣೆ ಮಾಡಿ ಗಮನ ಸೆಳೆದಿದ್ದರು. ವಿದೇಶಾಂಗ ಸಚಿವರ ಆ ಸಭೆಯಲ್ಲಿ ಭಾಗವಹಿಸಿದ್ದ ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್ ಕೂಡಾ ಭಯೋತ್ಪಾದನೆಗೆ ಬೆಂಬಲ ನೀಡುವ ರಾಷ್ಟ್ರಗಳ ವಿರುದ್ಧ ಕ್ರಮಕ್ಕೆ ಆಗ್ರಹಿಸಿದ್ದರು.

ಪೂರ್ವ ಏಷ್ಯಾ ವಿಶ್ವವು ಆರ್ಥಿಕತೆಯ ಅಭಿವೃದ್ಧಿಯ ಹೊಸ ಕೇಂದ್ರವಾಗಲು ಇದೀಗ ಸಜ್ಜಾಗಿರುವುದರಿಂದ, ಈ ಪ್ರದೇಶದಲ್ಲಿ ಭಾರತದ ವ್ಯಾಪಾರ ಸಂಬಂಧಗಳನ್ನು ಸುಧಾರಿಸುವ ಬೆಂಬಲವು ಶಾಂಘೈ ಸಹಕಾರ ಸಂಸ್ಥೆಯಿಂದ ಮುಂದಿನ ದಿನಗಳಲ್ಲಿ ಭಾರತಕ್ಕೆ ಸಿಗಲಿದೆ ಎಂಬುದಂತೂ ಖಚಿತ. ಆ ಕಾರಣಕ್ಕಾಗಿಯೇ ಈ ಶೃಂಗಸಭೆಯ ಮೂಲಕ ಭಾರತ, ಚೇನಾ ಮತ್ತು ರಷ್ಯಾ ಒಮ್ಮತದ ನಿರ್ಧಾರಗಳನ್ನು ಕೈಗೊಂಡು ಮುಂದಡಿ ಇಟ್ಟರೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮನಸ್ಥೈರ್ಯ ಕುಗ್ಗುವುದಂತೂ ಖಚಿತ.





### ಶಾಂಘೈ ಸಹಕಾರ ಸಂಸ್ಥೆಯ ಸ್ಥಾಪನೆಯ ಹಿನ್ನೋಟ

- 1996: ಕಜಕಿಸ್ತಾನ್, ಚೀನಾ, ಕಿರ್ಗಿಸ್ತಾನ್, ರಷ್ಯಾ ಮತ್ತು ತಜಿಕಿಸ್ತಾನ್ ದೇಶಗಳೂ ಸೇರಿ ಶಾಂಘೈ ಫೈವ್ ಸ್ಥಾಪನೆ.
- 2001: ಉಜ್ಬೇಕಿಸ್ತಾನ್ ಅನ್ನು ಸೇರಿಸಿದ ನಂತರ, ಶಾಂಘೈ ಫೈವ್ ಅನ್ನು ಎಸ್‌ಸಿಒ ಎಂದು ಮರುನಾಮಕರಣ.
- 2015: ರಷ್ಯಾದಲ್ಲಿ ನಡೆದ ಶೃಂಗಸಭೆಯಲ್ಲಿ, ಭಾರತ ಮತ್ತು ಪಾಕಿಸ್ತಾನವನ್ನು ಪೂರ್ಣ ಸದಸ್ಯರನ್ನಾಗಿ ಸೇರಿಸಿಕೊಳ್ಳಲು ನಿರ್ಧಾರ.
- 2017: ಅಸ್ತಾನಾದಲ್ಲಿ ಭಾರತ ಮತ್ತು ಪಾಕಿಸ್ತಾನಕ್ಕೆ ಅಧಿಕೃತವಾಗಿ ಪೂರ್ಣ ಸದಸ್ಯತ್ವ.

### ಭಾರತಕ್ಕೆ ಏಕೆ ಪ್ರಾಮುಖ್ಯತೆ ಮತ್ತು ಪ್ರಸ್ತುತತೆ?

ಅಮೆರಿಕ ಸರಕಾರವು ಆಗಸ್ಟ್-7ರಿಂದ ಭಾರತದ ವಸ್ತುಗಳ ಮೇಲೆ ತೆರಿಗೆ ವಿಧಿಸಿರುವುದರಿಂದ ದೇಶದ ರಫ್ತು ಪ್ರಮಾಣ ಇಳಿಮುಖವಾಗುವ ಸಾಧ್ಯತೆ ಹೆಚ್ಚು. ಈ ಶೃಂಗಸಭೆಯ ಮೂಲಕ ಭಾರತ-ಚೇನಾ ಮತ್ತು ರಷ್ಯಾ ಒಮ್ಮತದ ನಿರ್ಧಾರಕ್ಕೆ ಬಂದರೆ ಅಮೆರಿಕದ ಇಂತಹ ನಿಲುವುಗಳಿಗೆ ಸೆಡ್ಡು ಹೊಡೆಯುವುದು ಬಹಳ ಸುಲಭದ ಕೆಲಸ. ಶಾಂಘೈ ಸಹಕಾರ ಸಂಸ್ಥೆಯ ಸದಸ್ಯ ರಾಷ್ಟ್ರವಾಗಿ ಭಾರತವು ಮಧ್ಯ ಏಷ್ಯಾ ಮತ್ತು ಅದರಾಚೆಗೆ ಪ್ರಾದೇಶಿಕ ಸ್ಥಿರತೆ ಮತ್ತು ಭದ್ರತೆಯ ನಿರ್ವಹಣೆಗೆ ಕೊಡುಗೆ ನೀಡುವ ಅವಕಾಶವನ್ನು ಹೊಂದಿದೆ. ಇದು ಮಾರುಕಟ್ಟೆಗಳು, ತಂತ್ರಜ್ಞಾನ ಮತ್ತು ಹೂಡಿಕೆ ಅವಕಾಶಗಳಿಗೆ ಹೆಚ್ಚಿನ ಪ್ರವೇಶಕ್ಕೆ ಕಾರಣವಾಗಬಹುದುಹಾಗೆಯೇ ಪಾಕಿಸ್ತಾನದೊಂದಿಗಿನ ದೀರ್ಘಕಾಲದ ಸಂಘರ್ಷ ಮತ್ತು ಗಡಿ ಪ್ರದೇಶದಲ್ಲಿ ಹೆಚ್ಚುತ್ತಿರುವ ಭಯೋತ್ಪಾದನೆಯ ಬೆದರಿಕೆಯನ್ನು ಗಮನದಲ್ಲಿಟ್ಟುಕೊಂಡು, ಭಯೋತ್ಪಾದನೆ ನಿಗ್ರಹ ಮತ್ತು ಭದ್ರತಾ ಸಹಕಾರವು ಭಾರತದ ಪಾಲಿಗೆ ಈ ಶೃಂಗಸಭೆಯ ಪ್ರಮುಖ ವಿಷಯ.

### ಶಾಂಘೈ ಸಹಕಾರ ಸಂಸ್ಥೆಯ ವ್ಯವಹಾರ ಮಂಡಳಿ

ಎಲ್ಲಾ ಸದಸ್ಯ ರಾಷ್ಟ್ರಗಳ ವ್ಯಾಪಾರ ಸಮುದಾಯಗಳ ಪ್ರತಿನಿಧಿಗಳನ್ನು ಒಳಗೊಂಡಿದ್ದು, ಸದಸ್ಯ ರಾಷ್ಟ್ರಗಳಲ್ಲಿ ಆರ್ಥಿಕ ಸಹಕಾರ ಮತ್ತು ಹೂಡಿಕೆಯನ್ನು ಉತ್ತೇಜಿಸುವ ಜವಾಬ್ದಾರಿಯನ್ನು ಶಾಂಘೈ ಸಹಕಾರ ಸಂಸ್ಥೆಯ ವ್ಯವಹಾರ ಮಂಡಳಿಯು ಹೊಂದಿದೆ. ಪ್ರಾದೇಶಿಕ ಭದ್ರತಾ ಸಮಸ್ಯೆಗಳು, ಪ್ರಾದೇಶಿಕ ಭಯೋತ್ಪಾದನೆ, ಜನಾಂಗೀಯ ಪ್ರತ್ಯೇಕತಾವಾದ ಮತ್ತು ಧಾರ್ಮಿಕ ಉಗ್ರವಾದದ ವಿರುದ್ಧದ ಹೋರಾಟ ಮತ್ತು ಪ್ರಾದೇಶಿಕ ಅಭಿವೃದ್ಧಿಯನ್ನು ಉತ್ತೇಜಿಸುವತ್ತ ಇದುವರೆಗೂ ಶೃಂಗಸಭೆ ಗಮನಹರಿಸಿದೆ. ದೊಡ್ಡ ಜನಸಂಖ್ಯೆ ಮತ್ತು ವಿಶ್ವ ಜಿಡಿಪಿಗೆ ಅನುಗುಣವಾಗಿ ಇದು ಜಾಗತಿಕ ಜನಸಂಖ್ಯೆಯ 40%, ಜಾಗತಿಕ ಜಿಡಿಪಿಯ ಸುಮಾರು 20% ಮತ್ತು ವಿಶ್ವದ ಭೂಪ್ರದೇಶದ 22% ಅನ್ನು ಒಳಗೊಂಡಿದೆ. ಏಷ್ಯಾದ ದೇಶಗಳಲ್ಲಿ ಪ್ರಾದೇಶಿಕ ಏಕೀಕರಣವನ್ನು ಸಾಧಿಸಲು ಮತ್ತು ಗಡಿಗಳಲ್ಲಿ ಸ್ಥಿರತೆಯನ್ನು ಉತ್ತೇಜಿಸಲು ಎಸ್‌ಸಿಒ ವೇಗವರ್ಧಕವಾಗಿ ಕಾರ್ಯನಿರ್ವಹಿಸುವ ಸಾಮರ್ಥ್ಯವನ್ನು ಹೊಂದಿದೆ. ಎಸ್‌ಸಿಒಯ ಪ್ರಯತ್ನಗಳು ಅದರ ಪ್ರದೇಶದಾದ್ಯಂತ ಸುಧಾರಿತ ಸಂಪರ್ಕವನ್ನು ಬೆಳೆಸಬಹುದು. ಇದು ಭಯೋತ್ಪಾದನೆ ನಿಗ್ರಹದ ಮೇಲೆ ಮಾತ್ರವಲ್ಲದೆ ಮಾದಕವಸ್ತು ಕಳ್ಳಸಾಗಣೆ, ಮಿಲಿಟರಿ ಸಹಕಾರ ಮತ್ತು ಆರ್ಥಿಕ ಸಹಯೋಗದ ಮೇಲೂ ಗಮನಹರಿಸಿದೆ.

### ಶಾಂಘೈ ಸಹಕಾರ ಸಂಸ್ಥೆ: ಉದ್ದೇಶಗಳು

ಶಾಂಘೈ ಸಹಕಾರ ಸಂಸ್ಥೆಯು ಎಸ್‌ಸಿಒ ಎಂಬ ಸಂಕ್ಷಿಪ್ತ ರೂಪದಲ್ಲಿ ಚಿರಪರಿಚಿತವಾಗಿದ್ದು, ಇದು 2001ರಲ್ಲಿ ಕಝಾಕಿಸ್ತಾನ್, ಚೇನಾ, ಕಿರ್ಗಿಸ್ತಾನ್, ರಷ್ಯಾ, ಉಜ್ಬೇಕಿಸ್ತಾನ್ ಮತ್ತು ತಜಿಕಿಸ್ತಾನ್ ಸ್ಥಾಪಿಸಿದ ಭದ್ರತಾ ಮೈತ್ರಿಕೂಟವಾಗಿದೆ. ತನ್ನ ಮೊದಲ ಶೃಂಗಸಭೆಯನ್ನು 2001ರಲ್ಲಿ ಚೇನಾದ ಶಾಂಘೈನಲ್ಲಿ ನಡೆಸಲಾಯಿತು. ವ್ಯಾಪಾರ, ಹೂಡಿಕೆ, ಇಂಧನ, ಸಾರಿಗೆ ಮತ್ತು ಭದ್ರತೆಯಂತಹ ಕ್ಷೇತ್ರಗಳಲ್ಲಿ ಸಹಕಾರ ಮತ್ತು ಪರಸ್ಪರ ಬೆಂಬಲವನ್ನು ಉತ್ತೇಜಿಸುವುದು ಶೃಂಗಸಭೆಯ ಪ್ರಮುಖ ಗುರಿಯಾಗಿದೆ. ಸದಸ್ಯ ರಾಷ್ಟ್ರಗಳ ನಡುವಿನ ಸಂಬಂಧವನ್ನು ಬಲಪಡಿಸುವುದು, ಆರ್ಥಿಕ ಪರಿಸ್ಥಿತಿ ಸುಧಾರಣೆ, ರಾಜಕೀಯ ವ್ಯವಹಾರಗಳು, ವೈಜ್ಞಾನಿಕ-ತಾಂತ್ರಿಕ, ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಕ್ಷೇತ್ರಗಳಲ್ಲಿ ಹಾಗೂ ಇಂಧನ, ಸಾರಿಗೆ, ಪ್ರವಾಸೋದ್ಯಮ ಮತ್ತು ಪರಿಸರ ಸಂರಕ್ಷಣೆಯಲ್ಲಿ ಸಹಕಾರವನ್ನು ಉತ್ತೇಜಿಸುವುದು, ಪ್ರಾದೇಶಿಕ ಶಾಂತಿ, ಭದ್ರತೆ ಮತ್ತು ಸ್ಥಿರತೆಯನ್ನು ಕಾಪಾಡುವುದು ಮುಂತಾದ ಧ್ಯೇಯೋದ್ದೇಶಗಳನ್ನೂ ಇದು ಒಳಗೊಂಡಿದೆ.

---

ದಾವಣಗೆರೆಯಲ್ಲಿ ಅಮೃತ್ -2 ಯೋಜನೆ ಜಾರಿ | ಟಿವಿ ಸ್ಟೇಷನ್ ಕೆರೆ ಸೇರಿ 9 ಕೆರೆಗಳು

# ಮಂಡಕ್ಕಿ ನಗರಿಯ 9 ಪಾರ್ಕ್ ಸುಂದರೀಕರಣ

ಜಿಲ್ಲಾ ನೋಟ

ಗಣೇಶ್ ಕಮ್ಲಾಪುರ, ದಾವಣಗೆರೆ

ಕುಡಿಯುವ ನೀರು ಹಾಗೂ ಒಳಚರಂಡಿ ಯೋಜನೆಗಾಗಿ ಮಹಾನಗರ ಪಾಲಿಕೆಯಲ್ಲಿ ಜಾರಿಯಲ್ಲಿದ್ದ ಅಮೃತ್ ಯೋಜನೆಯ ಮುಂದುವರಿದ ಭಾಗ ಅಮೃತ್-2.0 ದಾವಣಗೆರೆಗೆ ದೊರೆತಿದ್ದು, ಎರಡು ಕೆರೆಗಳ ಪುನಶ್ಚೇತನ ಹಾಗೂ ಒಂಬತ್ತು ಪಾರ್ಕ್‌ಗಳ ಸುಂದರೀಕರಣಕ್ಕಾಗಿ ಒಟ್ಟು 14 ಕೋಟಿ ರೂ. ಅನುದಾನ ಬಿಡುಗಡೆಗೊಂಡಿದೆ. ಕೇಂದ್ರ ಪುರಸ್ಕೃತ ಅಮೃತ್ 2.0 ಯೋಜನೆಯ ಟ್ರಾಂಚ್ 3ರಲ್ಲಿ ದೇಶದ ವಿವಿಧ ರಾಜ್ಯದಲ್ಲಿ ಜಲಮೂಲಗಳ ಪುನಶ್ಚೇತನ ಹಾಗೂ ಉದ್ಯಾನವನ ಅಭಿವೃದ್ಧಿ ಕಾಮಗಾರಿಗೆ 2024ರ ನವೆಂಬರ್‌ನಲ್ಲಿ ನಡೆದ ಕೇಂದ್ರದ ಅಪೆಕ್ಸ್ ಸಮಿತಿ ಸಭೆಯಲ್ಲಿ ಅನುಮೋದನೆ ನೀಡಲಾಗಿದ್ದು, ಇದರನ್ವಯ ದಾವಣಗೆರೆಗೆ 15 ಕೋಟಿ ರೂ. ದೊರೆತಿದೆ.

### 25 ಕೋಟಿ ಪ್ರಸ್ತಾವ

ಕೆರೆಗಳ ಸಮಗ್ರ ಅಭಿವೃದ್ಧಿಗಾಗಿ ಈ ಹಿಂದೆ ದಾವಣಗೆರೆ ಪಾಲಿಕೆ 25 ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿಗೆ ಪ್ರಸ್ತಾವ ಕಳುಹಿಸಿತ್ತು. ಆದರೆ, ಕೇಂದ್ರ ಸರಕಾರ ಅಮೃತ್ 2.0 ಯೋಜನೆಯಡಿ 14 ಕೋಟಿಗೆ ಅನುಮೋದನೆ ನೀಡಿದೆ. ಈ ಹಿಂದೆ ದೂಡಾದಿಂದ ಕೆರೆಗಳ ಅಭಿವೃದ್ಧಿ ಮಾಡಲಾಗಿ ತ್ತಾದರೂ ಕೆಲ ತಾಂತ್ರಿಕ ಕಾರಣ, ಅನುದಾನದ ಕೊರತೆಯಿಂದ ಕೆರೆಗಳ ಸಮಗ್ರ ಅಭಿವೃದ್ಧಿಯಾ ಗಿರಲಿಲ್ಲ. ಆದರೆ, ಇದೀಗ ಕೇಂದ್ರ ಸರಕಾರದ ಅನುದಾನದ ಜತೆಗೆ ಪಾಲಿಕೆ ಅನುದಾನದ ಬಳಕೆಯೂ ಆಗುವುದರಿಂದ ಕೆರೆ, ಪಾರ್ಕ್‌ಗಳು ಸಂಪೂರ್ಣವಾಗಿ ಪುನಶ್ಚೇತಗೊಳ್ಳಲಿವೆ.

### ಟಿವಿ ಸ್ಟೇಷನ್, ಆವರಗೆರೆ ಕೆರೆ

ದಾವಣಗೆರೆ ನಗರಕ್ಕೆ ಕುಡಿಯುವ ನೀರು ಪೂರೈಸುವ ಟಿ.ವಿ. ಸ್ಟೇಷನ್ ಕೆರೆ ಹಾಗೂ ಆವರೆಗೆರೆ ಕೆರೆಗಳ ಪುನಶ್ಚೇತನಕ್ಕೆ ಸರಕಾರ ಮುಂದಾಗಿದ್ದು, ಅದರಂತೆ ಟಿ.ವಿ. ಸ್ಟೇಷನ್ ಕೆರೆಗೆ 5.50 ಕೋಟಿ ರು.ಜತೆಗೆ ಪಾಲಿಕೆ ಅನುದಾನ 45 ಲಕ್ಷ ರು. ಸಿಗಲಿದೆ. ಜತೆಗೆ ಆವರಗೆರೆ ಕೆರೆಗೆ 4.50 ಕೋಟಿ ರು.ದೊರೆತಿದೆ ಎಂದು ಮಹಾನಗರ ಪಾಲಿಕೆ ಆಯುಕ್ತೆ ಜಿ.ರೇಣುಕಾ ವಿವರಿಸಿದರು.

### ಮತ್ತಷ್ಟು ಸ್ಮಾರ್ಟ್

ಈಗಾಗಲೇ ಸ್ಮಾರ್ಟ್‌ಸಿಟಿಯಾಗುತ್ತಿರುವ ದಾವಣಗೆರೆಯಲ್ಲಿ ಕೇಂದ್ರದ ಅಮೃತ್ 2 ಯೋಜನೆಯಡಿ ಪಾಲಿಕೆ ವ್ಯಾಪ್ತಿಯ ಎರಡು ಕೆರೆಗಳು, ಒಂಭತ್ತು ಪಾರ್ಕ್ ಅಭಿವೃದ್ಧಿ ಮಾಡಲಾಗುವುದು. ಈ ಮೂಲಕ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಒದಗಿಸಲಾಗುವುದು. ಇದರಿಂದ ದಾವಣಗೆರೆ ಮತ್ತಷ್ಟು ಸ್ಮಾರ್ಟ್ ಆಗುವುದು ನಿಶ್ಚಿತ ಎನುತ್ತಾರೆ ಪಾಲಿಕೆ ಆಯುಕ್ತರು.

ದಾವಣಗೆರೆಯಲ್ಲಿರುವ ಟಿವಿ ಸ್ಟೇಷನ್ ಕೆರೆ.

> ಯಾವ ಕಾಮಗಾರಿಗೆ ಎಷ್ಟು ಹಣ ಬೇಕೆಂಬ ಬಗ್ಗೆ ರಾಜ್ಯ ಸರಕಾರಕ್ಕೆ ವಿಸ್ತೃತ ಯೋಜನೆ ವರದಿ ತಯಾರಿಸಲು ಕಳುಹಿಸಲಾಗಿದೆ. ಇಷ್ಟರಲ್ಲೆ ಶೀಘ್ರವಾಗಿ ಅನುಮೋದನೆ ದೊರಕಿ, ಟೆಂಡರ್ ಪ್ರಕ್ರಿಯೆಗೆ ಚಾಲನೆ ನೀಡಲಾಗುವುದು.
>
> -ಜಿ. ರೇಣುಕಾ, ಆಯುಕ್ತೆ, ಮಹಾನಗರ ಪಾಲಿಕೆ, ದಾವಣಗೆರೆ.

### ದಾವಣಗೆರೆ ಜೀವನಾಡಿ

ದಾವಣಗೆರೆ ನಗರಕ್ಕೆ ಕುಡಿಯುವ ನೀರು ಒದಗಿಸುವ ಜಲಮೂಲಗಳಲ್ಲಿ ಒಂದಾದ ಟಿ.ವಿ. ಸ್ಟೇಷನ್ ಕೆರೆಯ ಸಮಗ್ರ ಅಭಿವೃದ್ಧಿಗೆ ಹಿಂದಿನಿಂದಲೂ ದೂಡಾ ಹಾಗೂ ಪಾಲಿಕೆಯಿಂದ ಯತ್ನಗಳು ನಡೆದವಾದರೂ ಅನುದಾನ, ತಾಂತ್ರಿಕತೆ ಕಾರಣದಿಂದ ಕೆರೆ ಪುನಶ್ಚೇತನಗೊಂಡಿರಲಿಲ್ಲ. ಕೆರೆಯು 92 ಎಕರೆ ವಿಸ್ತೀರ್ಣವಿದ್ದು, 65 ಟಿಎಂಸಿ ನೀರು ಸಂಗ್ರಹದ ಸಾಮರ್ಥ್ಯ ಹೊಂದಿದೆ. ಕೆರೆಯ ನೀರನ್ನು ಸದ್ಯ ಕುಡಿಯುವ ಉದ್ದೇಶಕ್ಕೆ ಮಾತ್ರ ಬಳಸಲಾಗುತ್ತಿದೆ. ಪಾಲಿಕೆಯ 16 ವಾರ್ಡ್‌ಗಳಿಗೆ ಕುಡಿಯುವ ನೀರನ್ನು ಒದಗಿಸಲಾಗುತ್ತಿದೆ. ಈ ಕೆರೆಗೆ ಭದ್ರಾ ಚಾನಲ್‌ನಿಂದ ನೀರು ಹರಿಸಲಾಗುತ್ತಿದೆ.

### ನೀರಿನ ಸಂಗ್ರಹ ಹೆಚ್ಚಳ

ಈ ಅನುದಾನದಲ್ಲಿ ಕೆರೆ ಸುತ್ತಲಿನ ಜಾಗದಲ್ಲಿ ಕಲ್ಲು ಅಳವಡಿಸಿ, ನೀರಿನ ಸಂಗ್ರಹ ಹೆಚ್ಚಿಸುವುದು, ಬಂಡ್ ದುರಸ್ತಿಗೊಳಿಸುವುದು, ಕೆರೆಯ ಇನ್ನೊಂದು ಬದಿಯ ಬಂಡ್ ಬಳಿ ಇರುವ ಗುಂಡಿಯ ದುರಸ್ತಿ, ಕೆರೆಗೆ ನೀರು ಬರುವ ಪೈಪ್‌ನ ಜಾಗದ ಕಾಮಗಾರಿ ಕೈಗೆತ್ತಿಕೊಳ್ಳಲಿದೆ. ಜತೆಗೆ, ಟಿ.ವಿ. ಸ್ಟೇಷನ್ ಕೆರೆಯ ಶುದ್ಧ ನೀರಿನ ಸಂಸ್ಕರಣ ಘಟಕ ಸುಸ್ಥಿರಗೊಳಿಸುವುದು. ನೀರಿನ ಘಟಕದವರೆಗೆ ಕಾಂಕ್ರೀಟ್ ರಸ್ತೆ ನಿರ್ಮಾಣ ಮಾಡಲಾಗುವುದು ಎಂದು ಪಾಲಿಕೆ ಕಾರ್ಯಪಾಲಕ ಎಂಜಿನಿಯರ್ ಎಂ.ಎಚ್. ಉದಯ ಕುಮಾರ್ ಮಾಹಿತಿ ನೀಡಿದರು.

### ಆವರಗೆರೆ ಕೆರೆಗೂ ಭಾಗ್ಯ

ಆವರಗೆರೆ ಕೆರೆ ನೀರು ಬಳಕೆಯಿಂದ ದಾವಣಗೆರೆ ಜನತೆಗಿರುವ ಕುಡಿಯುವ ನೀರಿನ ಸಮಸ್ಯೆ ಶಾಶ್ವತವಾಗಿ ಪರಿಹಾರಿಸಬಹುದು. ಆದರೆ, ಕಳೆದ 10 ವರ್ಷಗಳ ಹಿಂದೆ ಒಮ್ಮೆ ಕೆರೆ ಹೂಳೆತ್ತಿದ್ದು ಬಿಟ್ಟರೆ ಮತ್ತೆ ಕೆರೆ ಪುನಶ್ಚೇತನಕ್ಕೆ ಮುಂದಾಗಿರಲಿಲ್ಲ. ಆದರೆ, ಇದೀಗ ಪಾಲಿಕೆ ವ್ಯಾಪ್ತಿಯ ಆವರಗೆರೆ ಕೆರೆಗೆ ಅಭಿವೃದ್ಧಿ ಭಾಗ್ಯ ಒದಗಿಬಂದಿದ್ದು, ಮುಂದಿನ ದಿನಗಳಲ್ಲಿ ನಗರದ ಜನರಿಗೆ ಕುಡಿಯುವ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ದೊರೆಯಲಿದೆ. ಕೇಂದ್ರದ ಅಮೃತ್ 2 ಯೋಜನೆಯಡಿ ರೂ. 4.50 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ನಡೆಯಲಿದ್ದು, ಕೆರೆ ಏರಿ ದುರಸ್ತಿ, ಗೋಡೆ ಮರು ನಿರ್ಮಾಣ, ಟ್ಯೂಬ್‌ಗಳ ದುರಸ್ತಿ ಜತೆಗೆ ಕೊಳಚೆ ನೀರು ಸೇರದಂತೆ ಅನುದಾನದ ಸಮರ್ಪಕ ಬಳಕೆಗೆ ಮಹಾಪಾಲಿಕೆ ಮುಂದಾಗಿದೆ.

### ಪಂಪ್‌ಹೌಸ್ ಗುರಿ

ದಾವಣಗೆರೆಯ ಆವರಗೆರೆ ಕೆರೆಯು 98 ಎಕರೆ 4 ಗುಂಟೆ ವಿಸ್ತೀರ್ಣ ಹೊಂದಿದೆ. ನೀರಾವರಿ ಇಲಾಖೆ ವ್ಯಾಪ್ತಿಗೆ ಒಳಪಟ್ಟಿದೆ. ಮಳೆ ನೀರು ಬಂದಾಗ ತುಂಬಿಕೊಳ್ಳುತ್ತದೆ. ಮುಂದೆ ಈ ಕೆರೆಗೆ ರಾಜನಹಳ್ಳಿಯಿಂದ ನೀರು ಹರಿಸುವ ಮತ್ತು ಪಂಪ್‌ಹೌಸ್ ನಿರ್ಮಾಣ ಮಾಡುವ ಗುರಿ ಇದೆ.

### ಯಾವ್ಯಾವ ಪಾರ್ಕ್ :

ದಾವಣಗೆರೆಯ 9 ಉದ್ಯಾನವನಗಳ ಅಭಿವೃದ್ಧಿಗೆ ಅಮೃತ್ 2.0 ಯೋಜನೆಯಡಿ ರೂ. 4. ಕೋಟಿ ಜತೆಗೆ ಪಾಲಿಕೆ ಅನುದಾನದಲ್ಲಿ ರೂ. 54 ಲಕ್ಷ ಅನುದಾನದಲ್ಲಿ ಅಭಿವೃದ್ಧಿ ಮಾಡಲಾಗುತ್ತಿದ್ದು, ದಾವಣಗೆರೆಯ ವಾರ್ಡ್ ನಂ. 44ರ ಮಹಾಲಕ್ಷ್ಮಿ ಲೇಔಟ್‌ನ 2 ಪಾರ್ಕ್‌ಗಳು, 42ರ ಡಾಲರ್ ಕಾಲೋನಿಯ 2 ಪಾರ್ಕ್, 33ರ ಲಕ್ಷ್ಮಿ ಲೇಔಟ್ 1 ಪಾರ್ಕ್, 32ರ ಭೂಮಿಕಾ ನಗರದ 1 ಪಾರ್ಕ್, ವಾರ್ಡ್ 24ರ ವಿಶ್ವೇಶ್ವರಯ್ಯ ಪಾರ್ಕ್, 40ರ ಸ್ವಾಮಿ ವಿವೇಕಾನಂದ ಬಡಾವಣೆ ಹಾಗೂ ವಾರ್ಡ್ 28ರ ಶಿವರಾಮ ಕಾರಂತ್ ಪಾರ್ಕ್‌ಗಳಿಗೆ ಅಭಿವೃದ್ಧಿ ಭಾಗ್ಯ ಒದಗಿ ಬಂದಿದೆ.

### ಜನಸ್ನೇಹಿ ಪಾರ್ಕ್

ಅಮೃತ್ 2 ಯೋಜನೆಯಡಿ ಪಾಲಿಕೆ ವ್ಯಾಪ್ತಿಯಲ್ಲಿನ ಏಳು ವಾರ್ಡ್‌ಗಳಲ್ಲಿನ 9 ಉದ್ಯಾನ ಅಭಿವೃದ್ಧಿ ಮಾಡಲಾಗುತ್ತಿದ್ದು, ಇದರಲ್ಲಿ ವಾಕಿಂಗ್ ಪಾಥ್, ಮಕ್ಕಳ ಆಟಿಕೆ ಪರಿಕರಗಳು, ಉದ್ಯಾನವನ ಸುತ್ತ ತಂತಿ ಬೇಲಿ, ಗಿಡ ನೆಡುವುದು ಜತೆಗೆ ನೀರು ಹರಿಸುವುದು, ಮಳೆ ನೀರು ಇಂಗು ಗುಂಡಿ ಹಾಗೂ ಜಿಮ್ ಪರಿಕರ ಅಳವಡಿಸಲಾಗುತ್ತದೆ.

---

ಮಹಾನಗರಪಾಲಿಕೆ-ಬಿಪಿಸಿಎಲ್ ಸಹಯೋಗ | ತ್ಯಾಜ್ಯದಿಂದ ಬಯೋಗ್ಯಾಸ್ ಉತ್ಪಾದನೆ

# ಬಯೋಗ್ಯಾಸ್ ಯೋಜನೆ, ಕಸದ ಸಮಸ್ಯೆಗೆ ಮುಕ್ತಿ

ಜಿಲ್ಲಾ ನೋಟ

ಕೆ.ಜೆ.ಲೋಕೇಶ್ ಬಾಬು, ಮೈಸೂರು

ತ್ಯಾಜ್ಯ ಮರುಬಳಕೆ ಮೂಲಕ ಕಂಪ್ರೆಸ್ಡ್ ಬಯೋಗ್ಯಾಸ್ ತಯಾರಿಸುವ ಯೋಜನೆಗೆ ಮುಂದಾಗುವ ಮೂಲಕ ತ್ಯಾಜ್ಯ ಸಂಗ್ರಹಣೆ, ವಿಲೇವಾರಿ ಹಾಗೂ ಸಂಸ್ಕರಣೆ ವಿಚಾರದಲ್ಲಿ ಇದ್ದ ಸಮಸ್ಯೆ ನಿವಾರಣೆಗೆ ಮೈಸೂರು ನಗರಪಾಲಿಕೆ - ಬಿಪಿಸಿಎಲ್ ಮುಂದಡಿ ಇಟ್ಟಿವೆ. ಸಾಂಸ್ಕೃತಿಕ ನಗರಿ ಮೈಸೂರು ಸ್ವಚ್ಛ ಸರ್ವೇಕ್ಷಣೆ ಯಲ್ಲಿ ಪ್ರತಿ ವರ್ಷ ಹಿಂದುಳಿಯಲು ನಗರದಲ್ಲಿ ಪ್ರತಿನಿತ್ಯ ಮನೆ ಮನೆಗಳಿಂದ ಸಂಗ್ರಹಿಸಲಾಗುವ ಕಸದ ಸಮಸ್ಯೆಗೆ ಉತ್ತರ ಕಂಡುಕೊಳ್ಳಲು ನಗರ ಪಾಲಿಕೆ ಹೊಸ ಯೋಜನೆ ರೂಪಿಸಿದ್ದು, ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಬಿಪಿಸಿಎಲ್) ಸಹ ಯೋಗದಲ್ಲಿ ನಗರದ ಸೀವೇಜ್ ಫಾರ್ಮ್‌ನಲ್ಲಿ ಬಯೋಗ್ಯಾಸ್ ಘಟಕ ನಿರ್ಮಾಣಕ್ಕೆ ನಿರ್ಧರಿಸಲಾಗಿದೆ.

### ಹಸಿ ತ್ಯಾಜ್ಯದಿಂದ ಬಯೋಗ್ಯಾಸ್

ಪ್ರತಿನಿತ್ಯ 150 ಟನ್ ತ್ಯಾಜ್ಯ ಬಳಕೆ ಮಾಡಿ ಬಯೋಗ್ಯಾಸ್ ತಯಾರಿಸುವ ಗುರಿಯೊಂದಿಗೆ ನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಅವರೊಂದಿಗೆ ಬಿಪಿಸಿಎಲ್ ಅಧಿಕಾರಿಗಳು ಒಡಂಬಡಿಕೆ ಮಾಡಿಕೊಂಡಿದ್ದಾರೆ. ಈ ಮೂಲಕ ಮನೆಗಳಿಂದ ಸಂಗ್ರಹವಾಗುವ ಹಸಿ ತ್ಯಾಜ್ಯವನ್ನು ಶುದ್ಧ, ಸುಸ್ಥಿರ ಇಂಧನವಾಗಿ ಪರಿವರ್ತಿಸುವುದು ಯೋಜನೆಯ ಭಾಗವಾಗಿದೆ.

### ದಿನಕ್ಕೆ 600 ಟನ್ ತ್ಯಾಜ್ಯ

ಮೈಸೂರು ನಗರದಿಂದ ಪ್ರತಿದಿನ 600 ಟನ್ ತ್ಯಾಜ್ಯ ಉತ್ಪಾದನೆಯಾಗುತ್ತಿದ್ದು, ಸದರಿ ತ್ಯಾಜ್ಯವನ್ನು ನಗರದ ಸೀವೇಜ್‌ಫಾರ್ಮ್, ಕೆಸರೆ ಘಟಕದಲ್ಲಿ ಸಂಸ್ಕರಣೆ ಮಾಡಿ ಗೊಬ್ಬರವಾಗಿ ಪರಿವರ್ತಿಸುವ ಘಟಕ ಕಾರ್ಯನಿರ್ವಹಿಸುತ್ತಿದೆ. ಬಯೋಗ್ಯಾಸ್ ಘಟಕ ಪ್ರಾರಂಭವಾದರೆ ತ್ಯಾಜ್ಯ ಸಂಸ್ಕರಣೆ ಯ ಸಮಸ್ಯೆಗೆ ಮತ್ತಷ್ಟು ಪರಿಹಾರ ದೊರೆಯುವ ಸಾಧ್ಯತೆ ಇದೆ ಎಂಬುದು ಅಧಿಕಾರಿಗಳ ಲೆಕ್ಕಾಚಾರ. ಮೈಸೂರು ನಗರಪಾಲಿಕೆಯ ಈ ಉದ್ದೇಶಿತ ಯೋಜನೆಗೂ ಮುನ್ನವೇ ಬಿಪಿಸಿಎಲ್ ಈಗಾಗಲೇ ಕೊಚ್ಚಿ, ತಿರುವನಂತಪುರಂ, ಕೋಝಿಕೋಡ್‌ನಲ್ಲಿ ಯಶಸ್ವಿಯಾಗಿ ಜಾರಿಗೊಳಿಸಿದೆ. ಅಂತೆಯೇ ಈ ಯೋಜನೆ ಕಾಮಗಾರಿ ಎರಡು ವರ್ಷದೊಳಗೆ ಪೂರ್ಣಗೊಳ್ಳಲಿದೆ.

### ಸ್ವಚ್ಛತೆಯಲ್ಲಿ 27ನೇ ಸ್ಥಾನ:

ಸ್ವಚ್ಛತೆ ವಿಷಯದಲ್ಲಿ ಮೈಸೂರು ನಗರ ರಾಷ್ಟ್ರಮಟ್ಟದಲ್ಲಿ 27ನೇ ಸ್ಥಾನದಲ್ಲಿದ್ದು, ಮತ್ತೆ ಟಾಪ್ 10 ಸ್ಥಾನಕ್ಕೆ ಮರಳಲು ಇಂತಹ ಉಪಕ್ರಮದ ಅನುಷ್ಠಾನಕ್ಕೆ ನಗರಪಾಲಿಕೆ ಮುಂದಾಗಿದೆ. ಈ ಮೂಲಕ ತ್ಯಾಜ್ಯ ಸಂಗ್ರಹಣೆ, ವಿಲೇವಾರಿ ಹಾಗೂ ಸಂಸ್ಕರಣೆಗೆ ಹೆಚ್ಚಿನ ಒತ್ತು ನೀಡಲಾಗಿದೆ. ಸ್ವಚ್ಛ ಸರ್ವೇಕ್ಷಣೆಗೆ ಒಟ್ಟು 12,500 ಅಂಕಗಳನ್ನು ನಿಗದಿ ಪಡಿಸಲಾಗಿದೆ. ಈ ಪೈಕಿ ಬಡಾವಣೆ, ವಾಣಿಜ್ಯ ಪ್ರದೇಶಗಳನ್ನು ದಿನನಿತ್ಯ ಶುಚಿಗೊಳಿಸುವುದು ಹಾಗೂ ಇತ್ಯಾದಿಗೆ 1,500 ಅಂಕಗಳು, ತ್ಯಾಜ್ಯದ ವಿಂಗಡಣೆ, ಸಂಗ್ರಹಣೆ ಹಾಗೂ ಸಾಗಣೆಗೆ 1,000 ಅಂಕಗಳು ಹಾಗೂ ಘನತ್ಯಾಜ್ಯ ನಿರ್ವಹಣೆಗೆ 1,500 ಅಂಕಗಳನ್ನು ನಿಗದಿ ಪಡಿಸಲಾಗಿದೆ. ಹಾಗಾಗಿ ತ್ಯಾಜ್ಯ ಸಂಗ್ರಹ, ವಿಲೇವಾರಿ, ಸಂಸ್ಕರಣೆ ಪ್ರಮುಖವಾದ ವಿಚಾರವಾಗಿದೆ.

ಮೈಸೂರು ಮಹಾನಗರ ಪಾಲಿಕೆ ಮೈಸೂರು

- ದಿನಕ್ಕೆ 600 ಟನ್ ಕಸ ಹೊರ ಹಾಕುವ ಮೈಸೂರು
- ಸ್ವಚ್ಛತೆಯಲ್ಲಿ ಅರಮನೆಗಳ ನಗರಿಗೆ 27ನೇ ಸ್ಥಾನ

**ಅಂದಾಜು 66 ಕೋಟಿ ವೆಚ್ಚದ ಯೋಜನೆ**

ಇದೀಗ ಬಿಪಿಸಿಎಲ್ ಸಹಯೋಗದೊಂದಿಗೆ ಮೈಸೂರಿನಲ್ಲೂ ಬಯೋಗ್ಯಾಸ್ ಘಟಕ ನಿರ್ಮಾಣಕ್ಕೆ ಆದ್ಯತೆ ನೀಡಲಾಗಿದೆ. ಈ ಬಯೋಗ್ಯಾಸ್ ಉತ್ಪಾದಿಸುವ ಘಟಕ ಸ್ಥಾಪನೆಗೆ 60ರಿಂದ 66 ಕೋಟಿ ರೂ. ವೆಚ್ಚವಾಗಬಹುದಾಗಿದೆ ಎಂದು ಅಂದಾಜಿಸಲಾಗಿದೆ.

### ಶೂನ್ಯ ಕಸ ಸಾಧನೆ

ನಗರದ ಸೀವೇಜ್‌ಫಾರ್ಮ್‌ನಲ್ಲಿ ಹಳೆಯ ತ್ಯಾಜ್ಯ ಸಂಸ್ಕರಣೆಯಾಗದೆ ಬೆಟ್ಟದ ರೀತಿ ಬೆಳೆದಿದ್ದು, ಇದನ್ನು ಬಯೋ ಮೈನಿಂಗ್ ಮೂಲಕ ತೆರವುಗೊಳಿಸುವ ಕಾರ್ಯ ನಡೆಯುತ್ತಿದೆ. ಈ ತ್ಯಾಜ್ಯ ಸಂಪೂರ್ಣ ತೆರವುಗೊಂಡು ನಗರದಲ್ಲಿ ಪ್ರತಿನಿತ್ಯ ಸಂಗ್ರಹವಾಗುವ ತ್ಯಾಜ್ಯ ಆಯಾ ದಿನವೇ ವಿಲೇವಾರಿ ಮಾಡಿ ಪರಿಹಾರ ಕಂಡುಕೊಳ್ಳುವುದು ಯೋಜನೆಯ ಉದ್ದೇಶವಾಗಿದೆ.

### ಇಂದೋರ್ ಸಿಟಿ ಮಾದರಿ

ತ್ಯಾಜ್ಯ ಸಂಗ್ರಹಣೆ, ವಿಲೇವಾರಿ ಹಾಗೂ ಸಂಸ್ಕರಣೆ ಯಲ್ಲಿ ಇಂದೋರ್ ನಗರ ದೇಶಕ್ಕೆ ಮಾದರಿಯಾ ಗಿದೆ. ಪ್ರಸ್ತುತ ಅಲ್ಲಿ ಈ ಹಸಿ ತ್ಯಾಜ್ಯದಿಂದ ಬಯೋಗ್ಯಾಸ್ ತಯಾರಿಸಲಾಗುತ್ತಿದ್ದು, ಅದನ್ನು ಖಾಸಗಿ ಸಂಸ್ಥೆಗೆ ವಹಿಸಲಾಗಿದೆ. ಇದು ಇಂದೋರ್‌ನ ಸರಕಾರಿ ಸಿಎನ್‌ಜಿ ಬಸ್‌ಗಳಿಗೆ ಪೂರೈಕೆ ಮಾಡಲಾಗುತ್ತಿದೆ. ಒಣ ಕಸದಲ್ಲಿ ಪೇಪರ್, ಪ್ಲಾಸ್ಟಿಕ್, ಕಬ್ಬಿಣ, ಗಾಜಿನ ಬಾಟಲಿಗಳನ್ನು ಬೇರ್ಪಡಿಸಿ ಪ್ಲಾಸ್ಟಿಕ್ ತ್ಯಾಜ್ಯವನ್ನು ಸಿಮೆಂಟ್ ಕಂಪನಿಗಳಿಗೆ ಪೂರೈಕೆ ಮಾಡಲಾಗುತ್ತಿದ್ದು, ಉಳಿದ ತ್ಯಾಜ್ಯವನ್ನು ಮರುಬಳಕೆ ಮಾಡಲು ಕ್ರಮ ವಹಿಸಲಾಗುತ್ತಿದೆ.

### ಆರು ಕಡೆ ತ್ಯಾಜ್ಯ ವಿಲೇವಾರಿ

ಒಟ್ಟು 6 ಕಡೆಗಳಲ್ಲಿ ಕಟ್ಟಡ ತ್ಯಾಜ್ಯ ವಿಲೇವಾರಿಗೆ ಜಾಗ ಒದಗಿಸಲಾಗಿದ್ದು ಇದರಿಂದ ಟೈಲ್ಸ್ ಉತ್ಪನ್ನಗಳನ್ನು ತಯಾರಿಸಿ ಇಂದೋರ್ ಆದಾಯ ಗಳಿಸುತ್ತಿದೆ. ಮೈಸೂರು ನಗರ ಪಾಲಿಕೆಯ ತಂಡ 2023ರಲ್ಲಿ ಇಂದೋರ್‌ಗೆ ಭೇಟಿ ನೀಡಿ ಅಧ್ಯಯನ ನಡೆಸಿದ ನಂತರ ನಗರದಲ್ಲೂ ಬಯೋಗ್ಯಾಸ್ ಘಟಕ ಅಳವಡಿಕೆಗೆ ಯೋಜನೆ ರೂಪಿಸಿತು.

> ತ್ಯಾಜ್ಯದ ಪರಿಣಾಮಕಾರಿ ಬಳಕೆಗಾಗಿ ಬಿಪಿಸಿಎಲ್ ಸಹಯೋಗದೊಂದಿಗೆ ಕಂಪ್ರೆಸ್ಡ್ ಬಯೋಗ್ಯಾಸ್ ಘಟಕ ತೆರೆಯಲು ಉದ್ದೇಶಿಸಲಾಗಿದೆ. ಮುಂದಿನ ಎರಡು ವರ್ಷದೊಳಗೆ ಯೋಜನೆ ಅನುಷ್ಠಾನ ಕಾರ್ಯ ಪೂರ್ಣಗೊಳಿಸಲಾಗುವುದು. ಇದರಿಂದ ತ್ಯಾಜ್ಯ ಸಂಸ್ಕರಣೆಯ ಸಮಸ್ಯೆ ಕ್ರಮೇಣ ಬಗೆಹರಿಯಲಿದೆ.
>
> - ಶೇಖ್ ತನ್ವೀರ್ ಆಸಿಫ್, ಆಯುಕ್ತರು, ಮೈಸೂರು ನಗರಪಾಲಿಕೆ

# ಆರಾಮ

ಅನುದಿನವೂ ವಿರಾಮಕ್ಕೆ ಒಂದು ನೆಪ

## ಭದ್ರತಾ ಕ್ಷೇತ್ರದಲ್ಲಿ ಅಪರೂಪದ ಸಾಧನೆ

# ರೆಹಮಾನಸಾಬ ದರಗಾದ

**ಕೆಲಸಕ್ಕಾಗಿ ಗೋವಾ ಸೇರಿದಂತೆ ಊರೂರು ಸುತ್ತಿದ ಯುವಕ ಇವರು. ಓದಿದ್ದು ಮೊದಲನೆಯ ಬಿ.ಎ. ಮಾತ್ರ. ಆದರೆ ಸಾಧನೆ ಮಾತ್ರ ಅದಮ್ಯ. ಜೀವನದಲ್ಲಿ ಕಷ್ಟಗಳನ್ನು ಕಂಡು, ಅಂದು ಬಾವಿಯ ದಂಡೆಯ ಮೇಲೆ ಸಾಯಲು ಕುಳಿತಿದ್ದ ಸಾಮಾನ್ಯ ಯುವಕ, ಇಂದು ಸಾವಿರಾರು ಮಂದಿಯ ಜೀವನದ ಭವಿಷ್ಯದ ಆಶಾಕಿರಣವಾಗಿದ್ದಾರೆ. ಕಾರ್ಮಿಕರ ಮುಖದಲ್ಲಿ ಸದಾಕಾಲ ನಗುವನ್ನು ಕಾಣುವ ಇವರ ಹೃದಯ ವೈಶಾಲ್ಯತೆಗೆ ಕಾರ್ಮಿಕರು ಫಿದಾ ಆಗಿದ್ದಾರೆ. ಇವರೇ ಧಾರವಾಡದ ಇಂಡಸ್ಟ್ರಿಯಲ್ ಪ್ರೊಟೆಕ್ಷನ್ ಫೋರ್ಸ್‌ನ (ಐಪಿಎಫ್) ಮಾಲೀಕರಾದ ರೆಹಮಾನಸಾಬ ದರಗಾದ. ಇವರು ವಿಶ್ವವಾಣಿ ಗ್ಲೋಬಲ್ ಅಚೀವರ್ಸ್ ಪ್ರಶಸ್ತಿಗೆ ಭಾಜನರಾಗಿದ್ದಾರೆ.**

● ಮಹಾಂತೇಶ್ ಕಂಬಳಿ ಧಾರವಾಡ

ಧಾರವಾಡ ತಾಲೂಕಿನ ಮಾರಡಗಿ ಊರಿನಲ್ಲಿ ಜನಿಸಿದ ರೆಹಮಾನಸಾಬ ದರಗಾದ, ಮುಂದೊಂದು ದಿನ ಉತ್ತರ ಕರ್ನಾಟಕದ ಅತಿ ದೊಡ್ಡ ಯಶಸ್ವಿ ಉದ್ಯಮಿಯಾಗುತ್ತಾನೆ ಎಂದು ಯಾರು ಊಹೆ ಮಾಡಿರಲಿಲ್ಲ. ದಿನಕ್ಕೆ 20 ತಾಸುಗಳ ಕೆಲಸ ಮಾಡುತ್ತಿದ್ದ ಕಾಯಕಯೋಗಿ ಇವರು. ಇಂದು ಯಶಸ್ವಿ ಉದ್ಯಮಿಯಾಗಿ 'ವಿಶ್ವವಾಣಿ ಗ್ಲೋಬಲ್ ಅಚೀವರ್ಸ್ ಅವಾರ್ಡ್'ಗೆ ಭಾಜನರಾಗಿದ್ದಾರೆ. ರೆಹಮಾನಸಾಬ ದರಗಾದ ಅವರು ಸೆಕ್ಯೂರಿಟಿ ಏಜೆನ್ಸಿಯನ್ನು ನಡೆಸಿ, ಇಂದು ಉತ್ತರ ಕರ್ನಾಟಕದ ಅತಿ ದೊಡ್ಡ ಭದ್ರತಾ ಸಿಬ್ಬಂದಿ ವ್ಯವಸ್ಥೆಯನ್ನು ಕಟ್ಟಿದ್ದಾರೆ. ಇವರ ಕುಟುಂಬದವರು ಇವರ ಸಾಧನೆಗೆ ಜತೆಯಾಗಿ ನಿಂತಿದ್ದಾರೆ. ರೆಹಮಾನಸಾಬ ದರಗಾದ ಅವರಿಗೆ 4 ಜನ ಮಕ್ಕಳಿದ್ದು, ಮುಸ್ತಾಕ ಎನ್ನುವ ಹಿರಿಯ ಮಗ ಕಂಪನಿಯ ಉಸ್ತುವಾರಿ ನೋಡಿ ಕೊಂಡು ಹೋಗುತ್ತಿದ್ದಾರೆ. ಬಾಬು ಎನ್ನುವ 2 ನೇ ಮಗ ಲಾ ಕಾಲೇಜಿನ ಪ್ರಾಧ್ಯಾಪಕರಾಗಿ ಕೆಲಸ ಮಾಡುತ್ತಿದ್ದಾರೆ. 3 ನೇ ಮಗ ಹುಸೇನ ಪೆಟ್ರೋಲ್ ಬಂಕ್ ಉಸ್ತುವಾರಿ ನೋಡಿಕೊಂಡು ಹೋಗುತ್ತಿದ್ದಾರೆ. 4 ನೇ ಮಗ ಯೂಸೂಫ್ ವಾಯುಪುತ್ರ ಎಚ್.ಪಿ ಗ್ಯಾಸ್ ಏಜೆನ್ಸಿ ನೋಡಿಕೊಂಡು ಹೋಗುತ್ತಿದ್ದಾರೆ. ಜತೆಯಲ್ಲೇ 40 ಎಕರೆಯಲ್ಲಿ ಕೃಷಿ ಮಾಡಿಕೊಂಡು ಜೀವನವನ್ನು ನಡೆಸುತ್ತಿದ್ದಾರೆ.

### ಐಪಿಎಫ್ ಸಂಸ್ಥೆ

1986 ರಲ್ಲಿ ಸಣ್ಣದಾಗಿ ಐಪಿಎಫ್ ಅಂತಾ, ಒಂದು ಏಜೆನ್ಸಿ ಪ್ರಾರಂಭ ಮಾಡಿದ ಇವರಿಗೆ, ಅಗರವಾಲ್ ಅವರು ಸಹಾಯ ಮಾಡಿದ್ರು. ಮೊದಲು 7 ಮಂದಿಯನ್ನು ಇಟ್ಟುಕೊಂಡು ಏಜೆನ್ಸಿಯನ್ನು ಪ್ರಾರಂಭಿಸಿದರು. 28 ಜನರನ್ನು ಗಾರ್ಡ್ ಆಗಿ ಇಟ್ಟುಕೊಂಡು, ಸದ್ಯಕ್ಕೆ ಒಟ್ಟು 3500 ಜನ ಸೆಕ್ಯೂರಿಟಿ ಸಿಬ್ಬಂದಿಯನ್ನು ಹೊಂದಿದ್ದಾರೆ. ಧಾರವಾಡದ ಬೇಲೂರು ಇಂಡಸ್ಟ್ರಿಯಲ್ ಏರಿಯಾ, ಕರ್ನಾಟಕ ವಿಶ್ವವಿದ್ಯಾಲಯ ಸೇರಿದಂತೆ ಇತರೆ ರಾಜ್ಯದ ಜಿಲ್ಲೆಗಳಲ್ಲಿಯೂ ಇವರ ಐಪಿಎಫ್ ಕಂಪನಿ ವಿಸ್ತಾರಗೊಂಡಿದೆ. 40 ವರ್ಷಗಳಿಂದ ಕಂಪನಿಯಲ್ಲಿ ಸೆಕ್ಯೂರಿಟಿ ಆಗಿ ಕೆಲಸ ಮಾಡಿದ ಅದೆಷ್ಟೋ ಕಾರ್ಮಿಕರಿಗೆ ಐಪಿಎಫ್ ಏಜೆನ್ಸಿ ಕಂಪನಿ ಜೀವನಕ್ಕೆ ದಾರಿದೀಪವಾಗಿ ಮಾರ್ಪಟ್ಟಿದೆ.

**ಕಾರ್ಮಿಕರಿಗೆ ಇಲ್ಲಿರುವ ಸೌಲಭ್ಯಗಳು ಹೀಗಿವೆ:** ಇಎಸ್ಐ, ಪಿಎಫ್ ಮತ್ತು ವಾರದ ರಜೆ ಕೊಡಲಾಗುತ್ತೆ. ಕಾರ್ಮಿಕರಿಗೆ ಬೋನಸ್ ಕೊಡಲಾಗುತ್ತಿದೆ.

**ನಾನು 1996ರಲ್ಲಿ ಜಾಯಿನ್ ಆಗಿದ್ದೆ. ಎಂ.ಆರ್. ದರಗಾದ ಅವರು ನನ್ನನ್ನು ಅವರ ಮಗನ ರೀತಿ ನೋಡಿಕೊಳ್ಳುತ್ತಾರೆ. ನನ್ನ ತಂದೆಗೆ ಪಾರ್ಶ್ವವಾಯು ಆದಾಗ, ಅವರೇ ಮುಂದೆ ನಿಂತು , ನಂಗೆ ಎಲ್ಲಾ ರೀತಿ ಸಪೋರ್ಟ್ ಮಾಡಿದ್ದಾರೆ.ಯಾವತ್ತಿಗೂ ನನ್ನ ಕೆಲಸದವನ ತರಾ ನೋಡಿಲ್ಲಾ. ಈಗ ನಾನು ಅವರ ಹತ್ತಿರಾ ಕೆಲಸ ಮಾಡ್ತಾ ಇದ್ದು, 30ವರ್ಷ ಆಯಿತು. ನಮಗೆ ಉತ್ತಮ ಬೆಂಬಲ ನೀಡಿದ್ದಾರೆ.**

**-ರವಿ ಊರಣೆಕರ್,**
ಧಾರವಾಡದ ಸಿಬ್ಬಂದಿ

### ಗೌರವಗಳು

- 1998ರಲ್ಲಿ ಅಮೇರಿಕದಿಂದ ವಲ್ಡ್ ಅಸೋಸಿಯೇಷನಿಂದ ಸೆಲ್ಪ ಮೇಡ್ ಮ್ಯಾನ್ ಅಂತಾ ಗುರುತಿಸಿದ್ದರು; ಆದರೆ, ಇವರು ಆ ಸಮಾರಂಭಕ್ಕೆ ಹೋಗಿಲ್ಲಾ.
- 2002ರಲ್ಲಿ ಇಂದಿರಾ ಆವಾಸ ಉದ್ಯೋಗ ರತ್ನ ಪ್ರಶಸ್ತಿಯನ್ನು ದೆಹಲಿಯಲ್ಲಿ ಘೋಷಣೆ ಮಾಡಿದ್ದರು. 'ನಾನು ಹೋಗಲಿಲ್ಲಾ ಅಂತಾರೆ' ರೆಹಮಾನಸಾಬ ದರಗಾದ.
- 2025ರಲ್ಲಿ ಜುಲೈ 7 ರಂದು ಮಹಾರಾಷ್ಟ್ರದ ಕಂಪನಿಯು ಲೈಫ್‌ಟೈಮ್ ಅಚೀವಮೆಂಟ್ ಅವಾರ್ಡ್ ಕೊಟ್ಟಿರುತ್ತದೆ.
- 2025ರಲ್ಲಿ ವಿಶ್ವವಾಣಿ ಗ್ಲೋಬಲ್ ಅಚೀವರ್ಸ್ ಪ್ರಶಸ್ತಿಗೆ ಭಾಜನರಾಗಿ, ಭೂತಾನ್ ರಾಷ್ಟ್ರ ಥಿಂಪುವಿನಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ರೆಹಮಾನಸಾಬ ದರಗಾದ ಅವರ ಪರವಾಗಿ ರಹಮಾನ್ ಸಾಬ್ ಮುಸ್ತುಮ್ ಸಾಬ್ ದರಗಾದ್ ಅವರು ಪ್ರಶಸ್ತಿಯನ್ನು ಸ್ವೀಕರಿಸಿದರು.

### ದೇಶದಾದ್ಯಂತ ಸೇವೆ

ಧಾರವಾಡದಲ್ಲಿ ಸ್ಥಾಪನೆ ಆಗಿರುವ ಐಪಿಎಫ್ ಕಂಪನಿ, 2004 ರಿಂದ 2010 ರವರೆಗೆ ಭಾರತ ತುಂಬೆಲ್ಲಾ ಸೆಕ್ಯೂರಿಟಿ ಏಜೆನ್ಸಿ ಕೆಲಸವನ್ನು ಮಾಡಿದೆ. ನಂತರದಲ್ಲಿ 2011 ರಲ್ಲಿ ಕಂಪನಿಯ ಮಾಲೀಕರಾದ ರೆಹಮಾನಸಾಬ ಅವರಿಗೆ ಅನಾರೋಗ್ಯದ ಕಾರಣದಿಂದ, ವಿಸ್ತರಣೆಯನ್ನು ಕಡಿಮೆ ಮಾಡಿ, 3500 ಗಾರ್ಡ್‌ಗಳನ್ನು ಹೊಂದಿ, ಕೆಲಸ ಮಾಡಿಕೊಂಡು ಹೋಗುತ್ತಿದ್ದಾರೆ.

### ಮರೆಯಲಾಗದ ಘಟನೆ

ರೆಹಮಾನಸಾಬ ದರಗಾದ ಅವರ ಕಷ್ಟಪಟ್ಟು ದುಡಿದು ಮೇಲೆ ಬಂದವರು; ತಮ್ಮ ಸಾಧನೆಯ ಹಾದಿಯಲ್ಲಿ ಹಲವು ಕಹಿ ಘಟನೆಗಳನ್ನೂ ಎದುರಿಸಬೇಕಾಗಿತ್ತು. ಅದನ್ನು ಎದುರಿಸಿ, ಯಶಸ್ಸು ಸಾಧಿಸಿದರು. ಅವರ ನೆನಪಿನಲ್ಲೇ ಹೇಳುವುದಾದರೆ, "1981 ರಲ್ಲಿ ಗಾರ್ಡ್ ಅಂತಾ ನೇಮಕ ಆದೆ. ನಾನು ಹಳೇ ಹುಬ್ಬಳ್ಳಿಯಲ್ಲಿ ಸ್ಮಶಾನ ಹತ್ತಿರ ಸಿಸಿಎಲ್ ಅವರು ಹಾಕಿರುವ ಹತ್ತಿ ಕಾಯುವ ಕೆಲಸ ಮಾಡುತ್ತಿದ್ದೆ. ಅಕ್ರಮ ಚಟುವಟಿಕೆಗಳು ನಡೆಯುವ ಜಾಗ ಅದು ಆಗಿತ್ತು. ರಾತ್ರಿ ಸೀಟಿ ಹೊಡೆದರೆ ಸಾಯಿಸ್ತೀವಿ ಅಂತಾ ಅಲ್ಲಿನ ಜನರು ಹೆದರಿಸಿದ್ದರು. ಸುಮ್ಮನೆ ಮಲಗಿ ನಿನ್ನ ಡ್ಯೂಟಿ ಮಾಡಿಕೊಂಡು ಹೋಗು ಅಂತಾ ಹೆದರಿಸಿದ್ದರು. ಹೀಗೆ 3 ತಿಂಗಳು ಮಾಡಿದೆ. ಇದು ನನ್ನ ಜೀವನದ ಕಹಿ ಘಟನೆ.' 'ಇನ್ನೊಂದು ಘಟನೆ ಹೀಗಿದೆ. ನಾನು ಬಿಎ1 ವರೆಗೂ ಕಾಲೇಜು ಕಲಿತಿದ್ದೆ. ಮನೆಯಲ್ಲಿ ಬಡತನ; ಖರ್ಚಿಗೆ ಹಣ ಇರಲಿಲ್ಲ. ಜೀವನದಲ್ಲಿ ಬೇಸರವಾಗಿ ಬಾವಿ ದಂಡೆ ಮೇಲೆ ಕುಳಿತಿದ್ದೆ. ಆಗ ಶಿರೂರು ಊರಿನ ದುರ್ಗಪ್ಪ ಸಹಾಯ ಮಾಡಿ, ನನ್ನ ಜೀವನದಲ್ಲಿ ಬಂದು ಬದಲಾವಣೆಯ ಮಾರ್ಗ ತೋರಿಸಿದ್ದ. ನಾನು ಬಿಕಂದಕಟ್ಟಿ ಆಯಿಲ್‌ಮಿಲಗೆ ಗಾರ್ಡ ಆಗಿ ಸೇರಿಕೊಂಡೆ. ಅಲ್ಲಿ ನಡೆಯುತ್ತಿದ್ದ ಕಳ್ಳತನ ಪ್ರಕರಣಗಳನ್ನು ಪತ್ತೆ ಹಚ್ಚು ಕೆಲಸ ಮಾಡುತ್ತಿದೆ. ನಂತರ ಕೆ.ಎಚ್.ಪಾಟೀಲ್?ಅವರ ಪರಿಚಯ ಆಯಿತು. ಅವರು ನನ್ನ ಕಾರ್ಯಶೈಲಿ ಕಾರ್ಯ, ಕ್ಷಮತೆ ಮೆಚ್ಚಿ ಸಹಾಯ ಮಾಡಿದ್ದರು.''

### ಹೋರಾಟದ ಬದುಕು

''ನಾನು ಬೋರಕಾ ಟೆಕ್ಸ್‌ಟೈಲ್ ಮಿಲ್‌ಗೆ 27 ವರ್ಷದವನು ಇದ್ದಾಗ ಕೆಲಸ ಕೇಳಿ ಹೋಗಿದ್ದೆ. ಜಾತಿ ನೋಡಿ ಮೊದಲು ಕೆಲಸ ಕೊಡಲು ನಿರಾಕರಿಸಿದ್ದರು. ಅದೃಷ್ಟ ಅಗರವಾಲ್ ಎನ್ನುವರು ಕೆಲಸಕ್ಕೆ ಸೇರಿಸಿಕೊಂಡರು. ಅಲ್ಲಿ ಬಹಳಷ್ಟು ಕಾರ್ಮಿಕರ ಹೋರಾಟಗಳು ನಡೆಯುತ್ತಿದ್ದವು. ಅದನ್ನು ಎಲ್ಲವನ್ನು ನಿಭಾಯಿಸಿ, 20 ಕೇಸ್‌ಗಳನ್ನು ಹಿಡಿದುಕೊಟ್ಟೆ. ಮುಂದೆ ಸುಪರ‌ವೈಸರ್ ಆದೆ. ಮುಂದೆ ಅಸಿಸ್ಟಂಟ ಸೆಕ್ಯೂರಿಟಿ ಆಫಿಸರ್ ಆದೆ. ಹೀಗಾಗಿ ಏನಾದ್ರೂ ಸಾಧನೆ ಮಾಡಬೇಕೆಂದು ವಿಚಾರ ಮಾಡಿ ಮುಂದುವರೆದೆ. 1987 ರಲ್ಲಿ ಫೆಬ್ರುವರಿ 28 ರಲ್ಲಿ ನನ್ನನ್ನು ಮುಗಿಸಲು ದೊಡ್ಡ ಮಟ್ಟದ ಪ್ರತಿಭಟನೆ ಮಾಡಿದರು. 2 ಗಾಡಿ ಸುಟ್ಟು, ನನ್ನನ್ನು ಹೊಡೆಯಲು ಬಂದಿದ್ದರು. ಆಗ ನಾನು ಜೀವನದ ಹಂಗು ತೊರೆದು ಪರಿಸ್ಥಿತಿಯನ್ನು ನಿಯಂತ್ರಿಸಿದೆ. 4 ಸಾವಿರ ಮಂದಿ ಓಡಿ ಹೋದರು.

### ಎಲ್ಲರಿಗೂ ಸಮಾನ ಗೌರವ

ಕಷ್ಟದ ಜೀವನ ಏನು ಎನ್ನುವುದು ನಮಗೆ ಗೊತ್ತಿದೆ. ಜನರ ನೋವಿಗೆ ಮಿಡಿಯುವ ಹೃದಯ ನಮ್ಮದು. ನಾವು ಕಾರ್ಮಿಕರಿಗೆ ಕುಟುಂಬದ ಸದಸ್ಯರಂತೆ ಗೌರವ ಕೊಡುತ್ತೇವೆ. ನಮ್ಮ ಸಂಸ್ಥೆಯಲ್ಲಿ ಕೆಲಸ ಮಾಡುವ ಸೆಕ್ಯೂರಿಟಿ ಗಾರ್ಡ್‌ಗಳ ವೇತನದಲ್ಲಿ ಯಾವುದೇ ತಾರತಮ್ಯ ಆಗದೇ ರೀತಿಯಲ್ಲಿ ನೋಡಿಕೊಳ್ಳುತ್ತೇವೆ. ವಿಶ್ವವಾಣಿ ಪತ್ರಿಕೆ ನಮ್ಮ ಸಂಸ್ಥೆಯನ್ನು ಗುರುತಿಸಿ, ಪ್ರಶಸ್ತಿ ಕೊಡುತ್ತಿರುವುದು ನಿಜಕ್ಕೂ ತುಂಬಾ ಸಂತೋಷದ ವಿಷಯ ವಾಗಿದೆ. ಸರಿಯಾಗಿ ಕೆಲಸ ಮಾಡುವ ವರಿಗೆ ನಾವು ರಕ್ಷಣೆ ಕೊಡುತ್ತೇವೆ. ಅಸಭ್ಯವಾಗಿ ವರ್ತನೆ ಮಾಡಿದರೆ, ಕೆಲಸದಿಂದ ವಜಾ ಮಾಡಲಾಗುತ್ತೆ. ಕಾರ್ಮಿಕರು ಮತ್ತು ಮಾಲೀಕರ ನಗುವನ್ನು ರಕ್ಷಿಸುವುದು ನಮ್ಮ ಹೊಣೆ.

**-ರೆಹಮಾನಸಾಬ ದರಗಾದ**

ನಂತರದಲ್ಲಿ ನೌಕರಿ ಬಿಡಲು ನಿರ್ಧಾರ ಮಾಡಿದ್ದೆ. ಆದ್ರೆ ಮ್ಯಾನೇಜ್‌ಮೆಂಟನವರು ನೌಕರಿ ಬಿಡಬೇಡಾ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡುತ್ತೇವೆ ಎಂದು ಹೇಳಿದರೂ ನಾನು ಒಪ್ಪಲಿಲ್ಲಾ'' ಎಂದು ರೆಹಮಾನಸಾಬ ದರಗಾದ ಅವರು ನೆನೆಸಿಕೊಳ್ಳುತ್ತಾರೆ.

### ಉನ್ನತ ಹುದ್ದೆಯಲ್ಲಿ ಸಿಬ್ಬಂದಿ

ಐಪಿಎಫ್‌ನಲ್ಲಿ ಟ್ರೇನಿಂಗ್ ಮಾಡಿದವರು, ಮಹಾರಾಷ್ಟ್ರದಲ್ಲಿ ಸರಕಾರಿ ನೌಕರಿಯಲ್ಲಿದ್ದಾರೆ. ಪ್ರೊಫೆಸರ್ ಆಗಿದ್ದಾರೆ. ಎಸಿಪಿಯಾಗಿ ನಿವೃತ್ತಿಯಾಗಿದ್ದಾರೆ. ಹಾಗೂ ಸೆಕ್ಯೂರಿಟಿ ಅವರ ಮಕ್ಕಳು ಜಡ್ಜ ಆಗಿದ್ದಾರೆ. ಹಾಗೂ ಫೈಯರ್ ಕಮೀಶನರ್ ಆಗಿದ್ದಾರೆ. ಇವರು ಬೇರೆ ಕಡೆಗಳಲ್ಲಿ ಕೊಟ್ಟಿರುವ ಸೇವೆ ನೋಡಿ, ಒಳ್ಳೆಯ ಒಳ್ಳೆಯ ಕಂಪನಿಗಳು ಇವರಿಗೆ ಆಫರ್ ಕೊಡುತ್ತಲೇ ಇವೆ.

---

# ವೆಂಕಟೇಶ ಸುಪ್ರಭಾತದ ಹಿನ್ನೆಲೆ

### ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ನಮ್ಮಲ್ಲಿ ಇಂದಿಗೂ ಎಲ್ಲರ ಮನೆಗಳಲ್ಲೂ ಬೆಳಗಾಗುವುದೇ ಭಾರತರತ್ನ, ಸಂಗೀತದ ಮೇರುಪರ್ವತ ಎಂ. ಎಸ್. ಸುಬ್ಬಲಕ್ಷ್ಮಿ ಅವರ ಅಪೂರ್ವ ಗಾಯನದಲ್ಲಿ ಮೂಡಿ ಬರುವ ವೆಂಕಟೇಶ್ವರ ಸುಪ್ರಭಾತದಿಂದ. ಆದರೆ ಈ ವೆಂಕಟೇಶ ಸುಪ್ರಭಾತದಲ್ಲಿ ಕೌಶಲ್ಯ ಸುಪ್ರಜಾ ರಾಮ ಎಂದು ಏಕೆ ರಾಮನನ್ನು ಸಂಭೋದಿಸ ಲಾಗಿದೆ ಅನಿಸದೆ ಇರುವುದಿಲ್ಲ:

**ಕೌಸಲ್ಯಾ ಸುಪ್ರಜಾ ರಾಮಾ ಪೂರ್ವಾ**
**ಸಂಧ್ಯಾಯಾ ಪ್ರವರ್ತತೇ।**
**ಉತ್ತಿಷ್ಠ ನರಶಾರ್ದೂಲ ಕರ್ತವ್ಯಂ**
**ದೈವಮಾಹ್ನಿಕಂ ॥ ಎಂದು ಹಾಡುತ್ತಾರೆ.**

'ಕೌಸಲ್ಯೆಯ ಸತ್ಪುತ್ರನಾದ ರಾಮನೇ, ಪೂರ್ವದಿಕ್ಕಿನಲ್ಲಿ ಪ್ರಾತಃಕಾಲ ಕಾಣುತ್ತಿದೆ, ಏಳು, ಎಲೈ ನರಶ್ರೇಷ್ಠನೆ, ದೇವತಾರಾಧನೆ ಮೊದ ಲಾದ ಕಾರ್ಯಗಳನ್ನು ಮಾಡು' ಎಂಬ ಅರ್ಥ ಬರುವ ಸುಪ್ರಭಾತದ ಈ ಶ್ಲೋಕಗಳು ರಾಮಾಯಣ ಬಾಲಕಾಂಡದಲ್ಲಿ ಸಿಗುತ್ತವೆ.

ಇಲ್ಲಿ ವಿಶ್ವಾಮಿತ್ರ ಋಷಿಯು ಕಾಡಿನಲ್ಲಿ ಮಲಗಿದ್ದ ದಶರಥ ನಂದನ ರಾಮನನ್ನು ಸುಪ್ರಭಾತ ಹೇಳುತ್ತಾ ಎಬ್ಬಿಸುತ್ತಿದ್ದಾನೆ. ರಾಮ ನೇಕೆ ಕಾಡಿನಲ್ಲಿ ಮಲಗಿದ್ದ? ವಿಶ್ವಾಮಿತ್ರರೇಕೆ ಅವನನ್ನು ಎಬ್ಬಿಸಿದರು? ಎನ್ನುವುದಕ್ಕೆ ಒಂದು ಹಿನ್ನೆಲೆಯಿದೆ. ವಿಶ್ವಾಮಿತ್ರ ಋಷಿ ತನ್ನ ಯಾಗ ರಕ್ಷಣೆಗಾಗಿ ರಾಮ ಲಕ್ಷ್ಮಣರನ್ನು ಕಳುಹಿಸುವಂತೆ ದಶರಥ ನಲ್ಲಿ ಕೇಳುತ್ತಾನೆ. ಯಾಗ ನೆರವೇರಿಸಿ, ರಾಮ ನನ್ನು ಸೀತಾಸ್ವಯಂವರಕ್ಕೆ ಕರೆದೊಯ್ಯುವುದು ವಿಶ್ವಾಮಿತ್ರನ ಒಳ ಉದ್ದೇಶ. ದಶ ರಥ ಮೊದಲು ನಿರಾಕರಿಸಿದರೂ ವಿಶ್ವಾಮಿತ್ರನಿಗೆ ಎದುರಾಡಿ ಉಳಿಯುವುದುಂಟೆ? ಸಾಧ್ಯವಿಲ್ಲ ಎಂದು ಕೊಂಡು ಒಲ್ಲದ ಮನಸಿನಿಂದಲೇ ತನ್ನ ಮಕ್ಕಳನ್ನು ಕಳುಹಿಸಿಕೊಡುತ್ತಾನೆ.

ಹೀಗೆ ರಾಮಲಕ್ಷ್ಮಣರನ್ನು ಕರೆದುಕೊಂಡು, ಅವರಿಗೆ ಬಲ ಅತಿಬಲ ಮಂತ್ರಗಳನ್ನು ಉಪ ದೇಶಿಸಿದ ವಿಶ್ವಾಮಿತ್ರ ಅರಣ್ಯ ಪ್ರವೇಶಿಸುತ್ತಾನೆ. ರಾತ್ರಿ ವೇಳೆ ಅಲ್ಲೇ ಮಲಗಿ ವಿಶ್ರಾಂತಿ ಪಡೆಯುತ್ತಾರೆ. ರಾಮ ಲಕ್ಷ್ಮಣರು ಅರಮನೆಯಲ್ಲಿ ಬೆಳೆದ ರಾಜಕುಮಾರರು. ಅವರಿಗೆ ಪ್ರಾತಃ ಸಂಧ್ಯಾಕಾಲದಲ್ಲಿ ತಾವಾಗಿಯೇ ಎದ್ದು ರೂಢಿಯೇ ಇಲ್ಲ! ಆದ್ದರಿಂದಲೇ ಅವರನ್ನು ಎಬ್ಬಿಸಲು ವಿಶ್ವಾಮಿತ್ರ ಮೇಲಿನಂತೆ ಸುಪ್ರಭಾತ ಹೇಳುವುದು. ಈಗ ನಾವು ಕೇಳುವ ಕೌಸಲ್ಯಾ ಸುಪ್ರಜಾ ರಾಮ ಎಂದು ಆರಂಭವಾಗುವ ವೆಂಕಟೇಶ ಸುಪ್ರಭಾತ ಸಂಪೂರ್ಣವಾಗಿ ವಿಶ್ವಾಮಿತ್ರನಿಂದ ಹೇಳಲ್ಪಟ್ಟದ್ದು ಅಥವಾ ವಾಲ್ಮೀಕಿಯಿಂದ ರಚಿಸಲ್ಪಟ್ಟದ್ದಲ್ಲ. ಬಾಲ ರಾಮಾಯಣದ ಒಂದಷ್ಟು ಶ್ಲೋಕಗಳನ್ನು ಮುಂದುವರಿಸುತ್ತಾ ಈ ಸುಪ್ರಭಾತವನ್ನು ಸುಮಾರು 15 ನೇ ಶತ ಮಾನದಲ್ಲಿ ಶ್ರೀ ಪ್ರತಿವಾದಿ ಭಯಂಕರಂ ಅಣ್ಣಾ ಚಾರ್ಯರು ರಚಿಸಿದ್ದಾರೆ. ಅವರನ್ನು ಹಸ್ತಗಿರಿ ನಾಥ ಅಣ್ಣ ಅಥವಾ ಅಣ್ಣನ್ ಎಂದೂ ಕರೆಯುತ್ತಾರೆ. ಪ್ರತಿವಾದಿ ಭಯಂಕರ ಹಸ್ತಗಿರಿ ಅನಂತಾರ್ ಅಣ್ಣ, ಶ್ರೀನಿವಾಸನ ದರ್ಶನಕ್ಕಾಗಿ ತಿರುಪತಿಗೆ ತೆರಳುತ್ತಾರೆ. ಅಲ್ಲಿ ವೆಂಕಟೇಶ್ವರನ ಸೇವಕರಾಗಿದ್ದ ಸ್ವಾಮಿ ಅನಂತಪಿಳ್ಳೈ ಅವ ರೊಂದಿಗೆ ವೆಂಕಟೇಶ್ವರ ಸ್ವಾಮಿಯ ಸೇವೆಗೆ ಮುಂದಾಗುತ್ತಾರೆ. ಪ್ರತಿ ದಿನ ವೆಂಕಟೇಶ್ವರ ಸ್ವಾಮಿಯ ಪೂಜೆಗೆ ಅಗತ್ಯವಿರುವ ಆಕಾಶ ಗಂಗೆಯಿಂದ ನೀರನ್ನು ತರುವ ಜವಾಬ್ದಾರಿ ಹೊತ್ತಿದ್ದ ಹಸ್ತಗಿರಿ ಅಣ್ಣಾಚಾರ್ಯರಿಗೆ ಒಂದು ದಿನ ಅಚ್ಚರಿ ಎದುರಾಗುತ್ತೆ.

ಶ್ರೀರಂಗಂನಿಂದ ಬಂದ ಸ್ವಾಮಿ ಮನವಾಳ ಮಾಮುನಿಗಳ್ ನೀರು ತರುತ್ತಿದ್ದ ಇವರಿಗೆ ಎದುರಾಗುತ್ತಾರೆ. ಹಸ್ತಗಿರಿಯೊಂದಿಗೆ ಮಾತನಾಡುತ್ತಾ ಶ್ರೀರಂಗಂನ ಭಕ್ತರು ಅಲ್ಲಿ ಸಾಕಷ್ಟು ಸೇವೆಗಳನ್ನು ಮಾಡಿ ರಾಮಾನುಜಾಚಾರ್ಯರ ತತ್ವವನ್ನು ಚಾಚೂ ತಪ್ಪದೇ ಅನುಸರಿಸುತ್ತಿರುವ ಮಾಮುನಿಗಳ್ ಸ್ವಾಮಿಗಳ ಬಗ್ಗೆ ಹೇಳಲು ಪ್ರಾರಂಭಿಸುತ್ತಾರೆ. ಇದರಲ್ಲೆ ತಲ್ಲೀನರಾದ ಹಸ್ತಗಿರಿ ವೆಂಕಟೇಶ್ವರ ಸ್ವಾಮಿಯ ಪೂಜಾ ಕೈಂಕರ್ಯಕ್ಕೆ ನೀರು ಕೊಂಡೊಯ್ಯುವುದನ್ನೂ ಮರೆತುಹೋಗುತ್ತಾರೆ. ಕೆಲವು ಸಮಯದ ನಂತರ ದೇವಾಲಯದವರೇ ಹಸ್ತಗಿರಿಯನ್ನು ಹುಡುಕಿಕೊಂಡು ಬಂದು ನೀರನ್ನು ಪಡೆದು ಹೋಗುತ್ತಾರೆ. ಆದರೆ ಅದಕ್ಕೆ ಸುಗಂಧ ವಸ್ತುಗಳನ್ನು ಸೇರಿಸುವುದಕ್ಕೆ ಹಸ್ತಗಿರಿ ಮರೆತಿರುತ್ತಾರೆ. ಇದನ್ನು ಹೇಳುವಷ್ಟರಲ್ಲಿ ಪೂಜೆಯೂ ಮುಕ್ತಾಯಗೊಂಡಿರುತ್ತದೆ.

ಮಾಡಿದ ತಪ್ಪಿಗೆ ದೇವರ ಬಳಿ ಪ್ರಾಯಶ್ಚಿತ್ತ ಮಾಡಿಕೊಳ್ಳುತ್ತಿದ್ದ ಹಸ್ತಗಿರಿಯೊಂದಿಗೆ ಸ್ವತಃ ವೆಂಕಟೇಶ್ವರನೇ ಮಾತನಾಡಲು ಪ್ರಾರಂಭಿಸಿ, ನೀರು ಸುಗಂಧಭರಿತವಾಗಿತ್ತೆಂದೂ ಪಶ್ಚಾತ್ತಾಪ ಪಡದಂತೆಯೂ ಹೇಳುತ್ತಾರೆ. ಇದನ್ನು ಸ್ವಾಮಿ ಮನವಾಳ ಮಾಮುನಿಗಳ್‌ರ ಕೃಪೆ ಎಂದೇ ಪರಿಗಣಿಸಿದ ಹಸ್ತಗಿರಿ ಅವರನ್ನು ಭೇಟಿ ಮಾಡಲು ಶ್ರೀರಂಗಂಗೆ ತೆರಳುತ್ತಾರೆ. ಇದಾದ ನಂತರ ಶ್ರೀರಂಗಂನಿಂದ ಹಸ್ತಗಿರಿ ಹಾಗೂ ಸ್ವಾಮಿ ಮಾಮುನಿಗಳ್ ಇಬ್ಬರೂ ತಿರುಮಲಕ್ಕೆ ಭೇಟಿ ನೀಡುತ್ತಾರೆ. ಭೇಟಿ ವೇಳೆ ವೆಂಕಟೇಶ್ವರ ಸ್ವಾಮಿಯ ವೈಭವ ಎಲ್ಲರಿಗೂ ತಿಳಿಯುವ ರೀತಿಯಲ್ಲಿ ಕೀರ್ತನೆ ರಚಿಸುವಂತೆ ಸ್ವಾಮಿ ಮಾಮುನಿಗಳ್ ಹಸ್ತಗಿರಿ ಆಚಾರ್ಯರಿಗೆ ಸೂಚಿಸುತ್ತಾರೆ. ಅದರಂತೆಯೇ ಹಸ್ತಗಿರಿ ಅನಂತಾರ್ ಆಚಾರ್ಯರು 11 ಸ್ತೋತ್ರ, 16 ಪ್ರಪತ್ತಿ ಹಾಗೂ 14 ಮಂಗಳಗಳನ್ನುಳ್ಳ ಬೆಳಗಿನ ಸುಪ್ರಭಾತವನ್ನು ರಚಿಸುತ್ತಾರೆ.

## ಹೊಳೆಯುವ ಗಣಪೆಕಾಯಿ

● ಹೊಸ್ಮನೆ ಮುತ್ತು

ಪಶ್ಚಿಮ ಘಟ್ಟದ ದಟ್ಟ ಅರಣ್ಯಗಳು ತನ್ನ ವಿಶಿಷ್ಟ ಹವಾಮಾನದಲ್ಲಿ ಪೋಷಿಸಿದ ವಿಶಿಷ್ಟ ಸಸ್ಯಗಳಲ್ಲಿ 'ಗಣಪೆ ಕಾಯಿ'ಯೂ ಒಂದು. ಅಡವಿಯ ಬೃಹತ್ ಮರಗಳ ಮೇಲೆ ಹಬ್ಬುವ ಗಟ್ಟಿಕಾಂಡದ ಬಳ್ಳಿಯಿಂದ ಮೂಡಿಬರುವ ಈ ಕಾಯಿ ಸಾಮಾನ್ಯವಾಗಿ 2-3 ಅಡಿ ಉದ್ದವಿರುತ್ತದೆ ಮತ್ತು ಒಳಗಡೆ 6-8 ದೊಡ್ಡ ಬೀಜಗಳನ್ನು ಹೊಂದಿರುತ್ತದೆ. ಈ ಗಣಪೆ ಕಾಯಿಯು ತನ್ನ ವಿಶಿಷ್ಟ ಆಕಾರ, ನೈಸರ್ಗಿಕ ಸೌಂದರ್ಯ ಮತ್ತು ಗಟ್ಟಿತನದಿಂದಾಗಿ ಕರಕುಶಲ ವಸ್ತುಗಳ ತಯಾರಿಕೆಯಲ್ಲಿ ಬಳಕೆಯಲ್ಲಿದೆ. ಈ ಕಾಯಿಗಳನ್ನು ಬಳಸಿಕೊಂಡು ನೆಕ್ಲೇಸ್‌ಗಳು, ಕಿವಿಯೋಲೆಗಳು, ಕೀಚೈನ್‌ಗಳು, ಗೋಡೆಗೆ ನೇತುಹಾಕುವ ಅಲಂಕಾರಿಕ ವಸ್ತುಗಳು, ಟೇಬಲ್ ಡೆಕೋರ್‌ಗಳು ಮತ್ತು ಬ್ರೇಸ್‌ಲೆಟ್‌ಗಳಂತಹ ಆಭರಣಗಳನ್ನು ತಯಾರಿಸಲಾಗುತ್ತದೆ.

# ಇತಿಮಿತಿಯಲ್ಲಿ ಮುಂದುವರಿಯಬೇಕು

### ಶುಭೋದಯಕ್ಕೊಂದು ಕಗ್ಗ



ರವೀ ಚಿಕ್ಕನಾಯಕನಹಳ್ಳಿ

**ಕಡಲ ಕಡೆದರು ಸುರಾಸುರರು ನಿಜಬಲದಿಂದ**
**ಕುಡಿದನದನು ತಪಸಿನಿಂದ ಕುಂಭಜನು**
**ಕಡಮೆಜನ ಪಾರಗಾಂಬರೆ ಗಾಸಿಯನು ಪಡದೆ ?**
**ಪೊಡವಿ ಬಾಳ್ವೆಯುಮಂತು - ಮಂಕುತಿಮ್ಮ॥**

ದೇವ ದಾನವರು ಅವರಿಗಿರುವ ದೈವೀಕ ಶಕ್ತಿಯಿಂದ ಅಮೃತಕ್ಕಾಗಿ ಕಡಲನ್ನು ಮಂಥನ ಮಾಡಿದರು. ಆದರೆ ಅಗಸ್ತ್ಯನು ತನಗಿರುವ ತಪಸ್ಸಿನ ಶಕ್ತಿಯಿಂದ ಇಡೀ ಕಡಲನ್ನೇ ಒಂದು ಗುಟುಕಾಗಿ ಸೋಹ ಮಾಡಿದನು. ಹೀಗೆ ಕಡಲನ್ನು ಮಥಿಸಲು, ಕಡಲನ್ನು ಕುಡಿಯಲು ದೇವ ದಾನವರಿಗೆ ದೈವೀಕ ಶಕ್ತಿಯೂ, ಅಗಸ್ತ್ಯನಿಗೆ ತನ್ನ ತಪಸ್ಸಿನ ಶಕ್ತಿಯೂ ಇದ್ದುದರಿಂದ ಸಾಧ್ಯವೆನಿಸಿತು. ಆದರೆ ನಾವು ಹುಲುಮಾನವರು! ನಮಗೆ ಅಂಥಹ ದೈವೀಕ ಶಕ್ತಿಯೇ ಆಗಲಿ, ತಪಸ್ಸಿನ ಶಕ್ತಿಯೇ ಆಗಲಿ ಇಲ್ಲ, ನಾವು ಈ ಜಗತ್ತಿನಲ್ಲಿ ಹುಟ್ಟಿದ ಬದುಕಲು ಕಷ್ಟಪಡಲೇ ಬೇಕು ಎಂದಿದ್ದಾರೆ.

ಸುರರಿಗೆ ದೈವೀಕ ಶಕ್ತಿ ಇತ್ತು. ಹಾಗೆಯೇ ಅಸುರರಿಗೆ ಅಪರಿಮಿತವಾದ ರಾಕ್ಷಸೀ ಶಕ್ತಿ ಇತ್ತು. ಇನ್ನು ಋಷಿ ತಪಸ್ವಿಗಳು ಮನುಷ್ಯರೇ ಆದರೂ ಸಹ ಅವರು ಗಳಿಸಿದ ಅಗೋಚರವಾದ ತಪಸ್ಸಿನ ಶಕ್ತಿ ಇತ್ತು. ಹಾಗಾಗಿಯೇ ನಮ್ಮ ಪುರಾಣ ಪುಣ್ಯ ಕಥೆಗಳಲ್ಲಿ ಅವರುಗಳ ಬಗ್ಗೆ ಹಲವಾರು ಘಟನೆಗಳಲ್ಲಿ ಅವರುಗಳ ಶಕ್ತಿಯ ಬಗ್ಗೆ ಕೇಳಿದ್ದೇವೆ. ವಿಶ್ವಾಮಿತ್ರ ಒಂದು ತ್ರಿಶಂಕು ಸ್ವರ್ಗವನ್ನೇ ಸ್ಥಾಪಿಸಿದ ಬಗ್ಗೆಯೂ, ರಾವಣನು ಕೈಲಾಸವನ್ನೇ ಎತ್ತಿದನೆಂದೂ ಅಸುರರ ಬಗ್ಗೆ ತಿಳಿದು ಕೊಂಡಿದ್ದೇವೆ. ಹಾಗೆಯೇ ದೇವತೆಗಳು ಸಹ ತಮಗೆ ಬಂದಂತಹ ದೈವೀಕ ಶಕ್ತಿಯಿಂದ ಹಲವಾರು ಕಾರ್ಯಗಳನ್ನು ಮಾಡಿದ್ದಾರೆಂದು ತಿಳಿದಿದ್ದೇವೆ. ಅಂತೆಯೇ ಅಮೃತಕ್ಕಾಗಿ ಈ ಸುರಾಸುರರು ಕಡಲನ್ನು ಮಂದಾರ ಪರ್ವತವನ್ನೇ ಕಡೆಗೋಲಾಗಿ, ವಾಸುಕಿಯನ್ನೇ ಬಳಸಿಕೊಂಡು ಕಡೆದರು. ಈ ಕಾರ್ಯ ನಡೆದಿರುವುದು ದೇವದಾನವರಿಗೆ ಇದ್ದಿರುವ ಶಕ್ತಿಗಳಿಂದಲೇ ಹೊರತು ಮತ್ತೇನಲ್ಲ. ಹಾಗೆಯೇ ಅಗಸ್ತ್ಯನು ಇಡೀ ಕಡಲನ್ನೇ ಒಂದು ಗುಟುಕು ನೀರಾಗಿ ಕುಡಿದನು. ಈ ಕಾರ್ಯವು ಅಗಸ್ತ್ಯನು ಸಂಪಾದಿಸಿದ ತನ್ನ ತಪಸ್ಸಿನ ಶಕ್ತಿಯಿಂದ ಸಾಧ್ಯವಾಯಿತು. ಹೀಗೆ ದೇವತೆಗಳಿಗೆ, ದಾನವರಿಗೆ, ತಪಸ್ವಿಗಳಿಗೆ ಒಂದೊಂದು ರೀತಿಯ ಶಕ್ತಿ ಇದ್ದು, ಆ ಶಕ್ತಿ ಯಿಂದ ಅವರು ಇಂಥಹ ಕಾರ್ಯಗಳನ್ನು ಮಾಡಿದರು.

ಆದರೆ ಈ ನರ ಮಾನವನಿಗೆ ಇರುವ ಶಕ್ತಿಯಾದರೂ ಯಾವುದು ? ದೇವತೆಗಳಿ ಗಾಗಲಿ, ದಾನವರಿಗಾಗಲಿ, ಋಷಿ ಮುನಿಗಳಿ ಗಾಗಲಿ ಇರುವಂಥ ಶಕ್ತಿಯನ್ನು ನಾವು ಮಾನವ ನಿಗೆ ಹೋಲಿಸಿದರೆ, ಈ ಮಾನವನಿಗೆ ಇರುವ ಶಕ್ತಿಯಂಥೂ ಬಹಳ ಕಡಿಮೆಯೇ ಹೌದು. ಮಿತಿಯಲ್ಲಿರುವ ಇವನ ಶಕ್ತಿಯಿಂದಲೇ ಈತನು ತನ್ನ ಬದುಕನ್ನು ಕಟ್ಟಿಕೊಳ್ಳಬೇಕು. ಇಲ್ಲಿರುವ ಕಷ್ಟ ಕಾರ್ಪಣ್ಯಗಳನ್ನು, ಏಳು ಬೀಳುಗಳನ್ನು, ದುಃಖ ದುಮ್ಮಾನಗಳನ್ನು, ನೋವು ನಲಿವುಗಳನ್ನು ಇರುವ ಶಕ್ತಿಯಿಂದಲೇ ಹೋರಾಟ ಮಾಡಿ ತಾನು ಜೀವಿಸಬೇಕು. ಕೆಲವು ವ್ಯಕ್ತಿಗಳಿಗೆ ಹೋರಾಟವನ್ನೊರತು ಪಡಿಸಿ ಬೇರೆ ಮಾರ್ಗವೇ ಇರುವುದಿಲ್ಲ, ಕೆಲವರಿಗಂತೂ ಕಷ್ಟಪಡುವುದೇ ಜೀವನವಾಗುತ್ತದೆ. ಒಬ್ಬೊಬ್ಬರ ಜೀವನದಲ್ಲಿ ಒಂದೊಂದು ರೀತಿಯ ಆಟಗಳು ನಡೆಯುತ್ತಲಿರುತ್ತವೆ. ಆದರೆ ಮನುಷ್ಯನಾಗಿ ಜನ್ಮ ತಳೆದ ಮೇಲೆ ನಮಗೆ ಇರುವ ಮಿತ ಶಕ್ತಿಯಲ್ಲೇ ಈ ಬದುಕು ಎಂಬ ಬಂಡಿಯನ್ನು ಎಳೆಯಲೇಬೇಕು.

ಇದೊಂದು ನಮ್ಮ ಜೀವನಕ್ಕೆ ಹತ್ತುರವಾದ ವಾಸ್ತವ ಪ್ರಜ್ಞೆಯ ಪದ್ಯವೇ ಆಗಿದೆ. ಮನುಷ್ಯನು ತನಗಿರುವ ಇತಿಮಿತಿಯಲ್ಲಿಯೇ ತನ್ನ ಬದುಕನ್ನು ಕಟ್ಟಿಕೊಂಡು, ಈ ಭೂಮಿಯ ಮೇಲೆ ಜೀವನ ಮಾಡಬೇಕು. ಇದಕ್ಕೆ ಯಾರೂ ಹೊರತಾಗಿಲ್ಲ. ಮನುಷ್ಯನಿಗೆ ಮೊದಲು ತಾನಾರೆಂಬ ಅರಿವು ಮುಖ್ಯವಾಗುತ್ತದೆ ಎಂದು ಈ ಪದ್ಯದಲ್ಲಿ ತಿಳಿಸುತ್ತಾರೆ. ನಮ್ಮ ಯೋಚನಾಲಹರಿ ಆಕಾಶಕ್ಕೆ ಏಣಿ ಹಾಕುವಂತಿದ್ದರೂ ಸಹ ಅದು ಸಾಧ್ಯವೇ? ಎಂಬ ಪ್ರಶ್ನೆಯನ್ನು ನಾವು ಹಾಕಿಕೊಳ್ಳಬೇಕಾಗುತ್ತದೆ. ಇದಕ್ಕೆ ಕಾರಣ ನಾವು ಮನುಷ್ಯರು. ನಮಗೊಂದು ಇತಿ ಮಿತಿಯೆಂಬುದಿದೆ. ಹಾಗಾಗಿ ನಾವುಗಳು ಇತಿ ಮಿತಿಯಲ್ಲಿಯೇ ನಮ್ಮ ಜೀವನವನ್ನು ಸಾಗಿಸಬೇಕಾಗಿರುವುದೂ' ಅನಿವಾರ್ಯವೇ ಆಗಿದೆ. ಏಕೆಂದರೆ ನಾವುಗಳು ದೇವರೂ ಅಲ್ಲ, ಅಸುರರೂ ಅಲ್ಲ, ಋಷಿ ಮುನಿಗಳಂಥೂ ಅಲ್ಲವೇ ಅಲ್ಲ. ನಾವುಗಳು ಕೇವಲ ಮಾನವರಷ್ಟೇ!

## ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ

| | | | | | | | | |
|---|---|---|---|---|---|---|---|---|
| 1 | | | ■ | 2 | ■ | 3 | 4 | |
| | ■ | ■ | 5 | | 6 | ■ | | ■ |
| 7 | | 8 | ■ | ■ | 9 | | | |
| | ■ | 10 | | 11 | | ■ | | ■ |
| ■ | ■ | | ■ | 12 | ■ | | ■ | ■ |
| ■ | 13 | ■ | 14 | | | | ■ | 15 |
| 16 | | | | ■ | ■ | 17 | | |
| ■ | | ■ | 18 | 19 | | ■ | ■ | |
| 20 | | | ■ | | ■ | 21 | | |

### ಎಡದಿಂದ ಬಲಕ್ಕೆ

1. ಆನೆಯ ಮೇಲಿರಿಸುವ ಮಂಟಪ (3)
3. ಭಯ ಅಥವಾ ಚಳಿಗೆ ಉಂಟಾದ ನಡುಕ (3)
5. ಚಿನ್ನದ ಜಿಂಕೆಯಾಗಿ ಸೀತಾಪಹರಣಕ್ಕೆ ಕಾರಣವಾದವನು (3)
7. ರಸವಲ್ಲ, ವೇಗ (3)
9. ಬೆಲೆಬಾಳುವ ಹರಳಿನ ಮಾಲೆ (4)
10. ಹವಾಮಾನ (4)
14. ದೂರದಲ್ಲಿರುವವರೊಂದಿಗೆ ಮಾತನಾಡಲು ಇದು ಬೇಕು (4)
16. ಎಷ್ಟು ಬೇಕೋ ಅಷ್ಟೇ ಮಾತನಾಡುವವನು (4)
17. ಬಿದಿರಿನ ತಟ್ಟೆ (3)
18. ಒಳ್ಳೆಯ ಬಣ್ಣ ಎಂಬರ್ಥದಲ್ಲಿ ಚಿನ್ನ (3)
20. ದೇವ ಕುಲದ ವಿರೋಧಿಗಳು (3)
21. ಬಾಡು ಅಥವಾ ಕಂದು (3)

### ಮೇಲಿಂದ ಕೆಳಕ್ಕೆ

1. ಮಂಗಳ ಗ್ರಹ (4)
2. ಎರಡಕ್ಷರದ ಮಹಿಳೆ ಕೊನೆಗೆ ದೀರ್ಘವಾಗಿದ್ದಾಳೆ (2)
4. ನಷ್ಟವನ್ನು ತುಂಬಿ ಕೊಡುವುದು (4)
6. ಪಾದ (3)
8. ಸಾಲು ಸಾಲು ಪ್ರಶ್ನೆ (3)
11. ತಾತ್ಕಾಲಿಕವಾಗಿ ಹಾಕಿದ ಡೇರೆ (3)
12. ಒಮ್ಮೊಮ್ಮೆ ಕಬ್ಬಿಣದ ಕಡಲೆಯಾಗುವ ವಿಷಯ (3)
13. ಚುನಾವಣೆಯ ದಿನ ತಪ್ಪದೇ ಮಾಡಬೇಕಾದ್ದು (4)
14. ಮತ್ತೊಬ್ಬರನ್ನು ನಿಂದಿಸು (3)
15. ಗಡಿ ದಾಟು (4)
19. ನೇರವಾಗಿಲ್ಲದ್ದು (2)

### ಸರಿಯುತ್ತರಗಳು

**ಎಡದಿಂದ ಬಲಕ್ಕೆ**
1. ಅಂಬಾರಿ 3. ಕಂಪನ 5.ಮಾರೀಚ 7. ರಭಸ 9. ರತ್ನಹಾರ 10. ವಾಯುಗುಣ 14. ದೂರವಾಣಿ 16. ಮಿತಭಾಷಿ 17. ತಡಿಕೆ 18. ಸುವರ್ಣ 20. ದಾನವ 21. ಕಮರು

**ಮೇಲಿಂದ ಕೆಳಕ್ಕೆ**
1. ಅಂಗಾರಕ 2. ನಾರೀ 4. ಪರಿಹಾರ 6. ಚರಣ 8. ಸವಾಲು 11. ಗುಡಾರ 12. ಗಣಿತ 13. ಮತದಾನ 14. ದೂಷಿಸು 15. ಅಂಕೆಮೀರು 19. ವಕ್ರ

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

## ಸಮಾಚಾರ ಸಣ್ಣದಲ್ಲ

### ಅರ್ಜುನ್‌ಗೆ ಆಘಾತ

**ಚೆನ್ನೈ:** ಭಾರತದ ನಿಹಾಲ್ ಸರಿನ್, ಚೆನ್ನೈ ಗ್ರ್ಯಾಂಡ್‌ಮಾಸ್ಟರ್ಸ್ ಚೆಸ್ ಟೂರ್ನಿಯ ನಾಲ್ಕನೇ ಸುತ್ತಿನಲ್ಲಿ ವಿಶ್ವದ ಐದನೇ ಕ್ರಮಾಂಕದ ಆಟಗಾರ ಹಾಗೂ ಅಗ್ರ ಶ್ರೇಯಾಂಕ ಪಡೆದಿರುವ ಅರ್ಜುನ್ ಇರಿಗೇಶಿ ಅವರಿಗೆ ಆಘಾತ ನೀಡಿ ದರು. ಇದು ನಿಹಾಲ್‌ಗೆ ಟೂರ್ನಿಯ ಮೊದಲ ಜಯ ಹಾಗೂ ಅರ್ಜುನ್‌ಗೆ ಮೊದಲ ಸೋಲು. ಜರ್ಮನಿಯ ವಿನ್ಸೆಂಟ್ ಕೀಮರ್ ಭಾನುವಾರದ ಕೊನೆಗೆ 3.5 ಪಾಯಿಂಟ್ಸ್ ಕಲೆಹಾಕಿ ಅಗ್ರಸ್ಥಾನದಲ್ಲಿ ಮುಂದುವರಿದಿದ್ದಾರೆ. ಈ ಸೋಲಿನ ಹೊರತಾಗಿಯೂ ಇರಿಗೇಶಿ 2.5 ಅಂಕಗಳೊಂದಿಗೆ ಎರಡನೇ ಸ್ಥಾನದಲ್ಲಿ ಮುಂದುವರಿದಿದ್ದಾರೆ. ಒಟ್ಟು ಒಂಬತ್ತು ಸುತ್ತುಗಳ ರೌಂಡ್ ರಾಬಿನ್ ಮಾದರಿಯ (ಕ್ಲಾಸಿಕಲ್ ಶೈಲಿಯ) ಸ್ಪರ್ಧೆ ನಡೆಯಲಿದೆ. ನಿಹಾಲ್ (1.5) ಮತ್ತು ಇರಿಗೇಶಿ ಮಧ್ಯೆ ತೀವ್ರ ಪೈಪೋಟಿ ಏರ್ಪಟ್ಟಿತ್ತು. 70ನೇ ನಡೆಯಲ್ಲಿ ನಿಹಾಲ್ ಗೆಲುವಿನ ನಗೆ ಬೀರಿದರು. ಕೀಮರ್ ಅವರು ಡಚ್ ತಾರೆ ಅನೀಶ್ ಗಿರಿ (2) ಅವರೊಂದಿಗೆ ಡ್ರಾ ಮಾಡಿಕೊಂಡರು. ಉಳಿದಂತೆ, ಮುರಳಿ ಕಾರ್ತಿಕೇಯನ್ (2) ಅವರು ನೆದರ್ಲೆಂಡ್‌ನ ಜೋರ್ಡನ್ ವಾನ್ ಫೊರೀಸ್ಟ್ (1) ಅವರನ್ನು ಮಣಿಸಿದರು. ಭಾರತದ ಆಟಗಾರರಾದ ವಿದಿತ್ ಗುಜರಾತಿ (2), ಪ್ರಣವ್ ವಿ. (1.5) ಅವರು ಅಂಕಗಳನ್ನು ಹಂಚಿಕೊಂಡರು.

# ಮಂಗಳೂರು ಡ್ರ್ಯಾಗನ್ಸ್ ಶುಭಾರಂಭ

## ಮಹಾರಾಜ ಟ್ರೋಫಿ ಮೊದಲ ಪಂದ್ಯ | ಗುಲ್ಬರ್ಗಾ ಮಿಸ್ಟಿಕ್ಸ್‌ಗೆ 33 ರನ್ ಸೋಲು

**ಮೈಸೂರು:** ಇಲ್ಲಿನ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ20 ಟೂರ್ನಿಯ ಮೊದಲ ಪಂದ್ಯದಲ್ಲಿ ಮಂಗಳೂರು ಡ್ರ್ಯಾಗನ್ಸ್ ತಂಡವು ಗುಲ್ಬರ್ಗಾ ಮಿಸ್ಟಿಕ್ಸ್ ತಂಡವನ್ನು 33 ರನ್‌ಗಳಿಂದ ಸೋಲಿಸಿ ಟೂರ್ನಿಯಲ್ಲಿ ಶುಭಾರಂಭ ಮಾಡಿತು.

ಮೊದಲು ಬ್ಯಾಟಿಂಗ್ ಮಾಡಿದ ಮಂಗಳೂರು ಡ್ರ್ಯಾಗನ್ಸ್ ತಂಡವು 20 ಓವರ್‌ನಲ್ಲಿ 8 ವಿಕೆಟ್ ನಷ್ಟಕ್ಕೆ 180 ರನ್ ಕಲೆ ಹಾಕಿತು. ಮಂಗಳೂರು ತಂಡದ ಪರ ಆರಂಭಿಕ ಆಟಗಾರರಾದ ಲೋಚನ್ ಗೌಡ ಮತ್ತು ಶರತ್ ಬಿ. ಆರ್ ತಂಡಕ್ಕೆ ಉತ್ತಮ ಆರಂಭ ನೀಡಿ ಮೊದಲ ವಿಕೆಟ್‌ಗೆ 5.2 ಓವರ್‌ಗಳಲ್ಲಿ 54 ರನ್ ಕೂಡಿ ಹಾಕಿದರು. 14 ಬಾಲ್‌ಗಳನ್ನು ಎದುರಿಸಿದ ಶರತ್ 16 ರನ್ ಗಳಿಸಿ ರನ್ ಪೃಥ್ವಿರಾಜ್‌ಗೆ ವಿಕೆಟ್ ಒಪ್ಪಿಸಿದರು. ಲೋಚನ್ ಗೌಡ 20 ಬಾಲ್ ಎದುರಿಸಿ 27 ರನ್ ಗಳಿಸಿ ರನೌಟ್ ಆದರು.

ಆದರೆ ಆ ಬಳಿಕ ಬಂದ ಅನೀಶ್ 12 ಬಾಲ್ ಎದುರಿಸಿ ಕೇವಲ 9 ರನ್ ಗಳಿಸಿ ಪೆವಿಲಿಯನ್ ಸೇರಿದರು. 4ನೇ ಆಟಗಾರನಾಗಿ ಕ್ರೀಸ್‌ಗೆ ಬಂದ ಮ್ಯಾಕ್ನೀಲ್ ನೊರೊನ್ಹಾ ಅದ್ಭುತ ಪ್ರದರ್ಶನ ನೀಡಿದರು. ಕೇವಲ 28 ಬಾಲ್‌ಗಳನ್ನು ಎದುರಿಸಿದ್ದ ಮ್ಯಾಕ್ನೀಲ್ ಅರ್ಧ ಶತಕ (53) ಸಿಡಿಸಿ ಮಂಗಳೂರು ಡ್ರ್ಯಾಗನ್ಸ್ ತಂಡವು ಉತ್ತಮ ಮೊತ್ತ ಪೇರಿಸುವಲ್ಲಿ ತಮ್ಮ ಕೊಡುಗೆ ನೀಡಿದರು. ಅವರು ಪೃಥ್ವಿರಾಜ್ ಬೌಲಿಂಗ್‌ನಲ್ಲಿ ಪ್ರಜ್ವಲ್‌ಗೆ ಕ್ಯಾಚಿತ್ತು ನಿರ್ಗಮಿಸಿದರು.

ನಂತರ ಕ್ರೀಸ್‌ಗೆ ಬಂದ ಶ್ರೇಯಸ್ ಗೌಡ 16 ಬಾಲ್ ಎದುರಿಸಿ 20 ರನ್ ಗಳಿಸಿ ಅಜೇಯರಾಗಿ ಉಳಿದರು. ಆದರ್ಶ್ 11 ಬಾಲ್ ಎದುರಿಸಿ 18 ರನ್ ಗಳಿಸುವಲ್ಲಿ ಸಫಲರಾದರು. ಉಳಿದಂತೆ ದಾಸ್ 11 ರನ್, ಶಿವರಾಜ್ 9 ರನ್ ಗಳಿಸಿದರು.

ಗುಲ್ಬರ್ಗಾ ತಂಡದ ಪರ ಪೃಥ್ವಿರಾಜ್ 21 ರನ್ ನೀಡಿ 3 ವಿಕೆಟ್ ಪಡೆದರೆ, ವೈಶಾಕ್ ವಿಜಯ್ ಕುಮಾರ್ ಮತ್ತು ಮೋನಿಶ್ ರೆಡ್ಡಿ ತಲಾ 2 ವಿಕೆಟ್ ಪಡೆದರು.

181 ರನ್‌ಗಳ ಗೆಲುವಿನ ಗುರಿಯನ್ನು ಬೆಂಬತ್ತಿದ ಗುಲ್ಬರ್ಗ ಮಿಸ್ಟಿಕ್ಸ್ ತಂಡಕ್ಕೆ ಆರಂಭಿಕ ಆಟಗಾರರಾದ ಲುವ್ನಿತ್ ಸಿಸೋಡಿಯಾ ಮತ್ತು ನಿಕಿನ್ ಉತ್ತಮ ಆರಂಭವನ್ನು ತಂದುಕೊಟ್ಟರು. 14 ಬಾಲ್‌ಗಳಲ್ಲಿ ಲುವ್ನಿತ್ 26 ಗಳಿಸಿದರೆ, ನಿಕಿನ್ 7 ಬಾಲ್ ಎದುರಿಸಿ 11 ರನ್ ಗಳಿಸಿದರು. ಆದರೆ ಆ ಬಳಿಕ ಗುಲ್ಬರ್ಗ ತಂಡವು ಉತ್ತಮ ಜತೆಯಾಟವನ್ನು ಪಡೆಯಲೇ ಇಲ್ಲ. ಮೋಹಿತ್ ಮತ್ತು ರವಿಚಂದ್ರನ್ ತಲಾ 11 ರನ್ ಗಳಿಸಲಷ್ಟೇ ಶಕ್ತರಾದರು. ತಂಡದ ಪರ ಪ್ರಜ್ವಲ್ 25 ಬಾಲ್ ಎದುರಿಸಿ 25 ರನ್ ಗಳಿಸಿದ್ದು ಬಿಟ್ಟರೆ ಉಳಿದ ಆಟಗಾರರು ಬ್ಯಾಟಿಂಗ್ ವೈಫಲ್ಯ ಕಂಡರು.

ವೈಶಾಕ್ ವಿಜಯ್ ಕುಮಾರ್ 12 ರನ್, ಪೃಥ್ವಿರಾಜ್ ಮತ್ತು ಶಶಿಕುಮಾರ್ ತಲಾ 11 ರನ್ ಗಳಿಸಿದರು.

ಮಂಗಳೂರು ತಂಡದ ಪರ ಶ್ರೇಯಸ್ ಗೋಪಾಲ್ ಮತ್ತು ಕ್ರಾಂತಿ ಕುಮಾರ್ ತಲಾ 3 ವಿಕೆಟ್ ಪಡೆದರು. ರೋನಿತ್ ಮತ್ತು ನೊರೊನ್ಹಾ ತಲಾ ಒಂದು ವಿಕೆಟ್ ಪಡೆದರು.

ಮ್ಯಾಕ್ನೀಲ್: ಮಂಗಳೂರು ಪರ ಭರ್ಜರಿ ಪ್ರದರ್ಶನ.

ಮಹಿಳಾ ವಿಶ್ವಕಪ್ ಟೂರ್ನಿ | ನಾಯಕಿ ಕೌರ್ ಆತ್ಮವಿಶ್ವಾಸ

# ಈ ಸಲ ಕಪ್ ನಮ್ದೇ

**ಮುಂಬಯಿ:** ಸೆಪ್ಟೆಂಬರ್ 30ರಿಂದ ಭಾರತವು ಐಸಿಸಿ ಮಹಿಳಾ ಕ್ರಿಕೆಟ್ ವಿಶ್ವಕಪ್ 2025 ಅನ್ನು ಆಯೋಜಿಸಲಿದ್ದು, ಭಾರತ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ತವರು ನೆಲದಲ್ಲಿ ಈ ಬಾರಿ ವಿಶ್ವಕಪ್ ಗೆಲ್ಲುವ ಆತ್ಮವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಮಹಿಳಾ ಏಕದಿನ ವಿಶ್ವಕಪ್ ಟ್ರೋಫಿ ಅನಾವರಣ ಸಂದರ್ಭದಲ್ಲಿ ಮಾತನಾಡಿದ ಅವರು, 'ನಮ್ಮ ತಂಡವು ಕ್ರಮವಾಗಿ 2005 ಮತ್ತು 2017ರಲ್ಲಿ ವಿಶ್ವಕಪ್ ಫೈನಲ್ ತಲುಪುವ ಮೂಲಕ ಎರಡು ಬಾರಿ ವಿಶ್ವಕಪ್ ಗೆಲ್ಲುವ ಸನಿಹಕ್ಕೆ ಬಂದಿದ್ದರೂ ಕಪ್ ಗೆಲ್ಲಲು ಸಾಧ್ಯವಾಗಲಿಲ್ಲ. ಆ ತಡೆಗೋಡೆಯನ್ನು ಮುರಿದು ದೇಶಕ್ಕಾಗಿ ಏನಾದರೂ ವಿಶೇಷವಾದದ್ದನ್ನು ಮಾಡಲು ನಮ್ಮ ತಂಡ ಈ ಸಲ ದೃಢನಿಶ್ಚಯ ಹೊಂದಿದೆ' ಎಂದು ಹೇಳಿದ್ದಾರೆ.

'ಎಲ್ಲಾ ಭಾರತೀಯರು ಕಾಯುತ್ತಿರುವ ಕನಸನ್ನು ಈಡೇರಿಸಲು ನಾವು ಬಯಸುತ್ತೇವೆ. ವಿಶ್ವಕಪ್ ಯಾವಾಗಲೂ ವಿಶೇಷವಾಗಿರುತ್ತವೆ, ದೇಶಕ್ಕಾಗಿ ಅದನ್ನು ಗೆಲ್ಲಲು ನಾವು ಬಯಸುತ್ತೇನೆ. ನಾನು ಯುವರಾಜ್ ಸಿಂಗ್ ಅವರನ್ನು ನೋಡಿದಾಗಲೆಲ್ಲಾ ನನಗೆ ಬಹಳಷ್ಟು ಪ್ರೇರಣೆ ಸಿಗುತ್ತದೆ' ಎಂದು ಹರ್ಮನ್‌ಪ್ರೀತ್ ಕೌರ್ ಏಕದಿನ ವಿಶ್ವಕಪ್‌ನ ಟ್ರೋಫಿ ಅನಾವರಣ ಸಮಾರಂಭದಲ್ಲಿ ಹೇಳಿದರು.

'ಆಸ್ಟ್ರೇಲಿಯಾ ವಿರುದ್ಧ ವಿಶ್ವಕಪ್‌ಗೂ ಮುನ್ನ ಸೆಪ್ಟೆಂಬರ್ 14ರಿಂದ ನಾವು ಮೂರು ಏಕದಿನ ಪಂದ್ಯಗಳನ್ನು ಆಡುವುದರಿಂದ ಅದು ಈ ವಿಶ್ವಕಪ್‌ನ ನಮ್ಮ ನೈಜ ಸಿದ್ಧತೆ ಎಂದೇ ತಿಳಿಯುತ್ತೇವೆ. ಆ ಸರಣಿಯಲ್ಲಿ ಸಾಕಷ್ಟು ಪ್ರಯತ್ನ ಮಾಡಿ ಗೆದ್ದು, ಉತ್ತಮ ಫಲಿತಾಂಶವನ್ನು ತೋರಿಸುತ್ತೇವೆ. ಹಾಗಾಗಿ ಈ ಸಲ ವಿಶ್ವಕಪ್ ನಮ್ಮದೇ ಎಂಬ ನಂಬಿಕೆ ನಮಗಿದೆ' ಎಂದೂ ಕೌರ್ ಹೇಳಿದರು.

### ಭಾರತದ ಪಂದ್ಯಗಳು

**13ನೇ ಆವೃತ್ತಿಯ ಮಹಿಳಾ ಏಕದಿನ ವಿಶ್ವಕಪ್ ಟೂರ್ನಿಯಲ್ಲಿ 8 ತಂಡಗಳು ರೌಂಡ್ ರಾಬಿನ್ ಸ್ವರೂಪದಲ್ಲಿ ಸ್ಪರ್ಧಿಸಲಿವೆ. ಅಗ್ರ ನಾಲ್ಕು ತಂಡಗಳು ಸೆಮಿಫೈನಲ್‌ಗೆ ಅರ್ಹತೆ ಪಡೆಯುತ್ತವೆ. ಸೆ.30ರಂದು ನಡೆಯಲಿರುವ ಮೊದಲ ಪಂದ್ಯದಲ್ಲಿ ಭಾರತ ತಂಡವು ಶ್ರೀಲಂಕಾವನ್ನು ಎದುರಿಸಲಿದೆ. ಇನ್ನುಳಿದಂತೆ ಭಾರತ ಮಹಿಳಾ ತಂಡವು ಅಕ್ಟೋಬರ್-5ರಂದು ಪಾಕಿಸ್ತಾನ, ಅಕ್ಟೋಬರ್-9ರಂದು ದ. ಆಫ್ರಿಕಾ, ಅಕ್ಟೋಬರ್-12ರಂದು ಆಸ್ಟ್ರೇಲಿಯಾ, ಅಕ್ಟೋಬರ್-19ರಂದು ಇಂಗ್ಲೆಂಡ್, ಅಕ್ಟೋಬರ್-23ರಂದು ನ್ಯೂಜಿಲೆಂಡ್ ಮತ್ತು ಅಕ್ಟೋಬರ್-27ರಂದು ಬಾಂಗ್ಲಾ ದೇಶವನ್ನೂ ಎದುರಿಸಲಿದೆ.**

ಸಂಸತ್‌ನಲ್ಲಿ ಗದ್ದಲದ ನಡುವೆಯೇ ರಾಷ್ಟ್ರೀಯ ಕ್ರೀಡಾ ಆಡಳಿತ ಮಸೂದೆ ಅಂಗೀಕಾರ

# ಡೋಪಿಂಗ್ ವಿರೋಧಿ ತಿದ್ದುಪಡಿ ಮಸೂದೆ

**ದೆಹಲಿ:** ಕಳೆದ 14 ವರ್ಷದಿಂದ ಬಾಕಿ ಉಳಿದುಕೊಂಡಿದ್ದ ರಾಷ್ಟ್ರೀಯ ಕ್ರೀಡಾ ಆಡಳಿತ ಮಸೂದೆ ಕೊನೆಗೂ ಅಂಗೀಕಾರವಾಗಿದೆ. ವಿರೋಧ ಪಕ್ಷದ ತೀವ್ರ ಗದ್ದಲದ ನಡುವೆಯೂ ಕೇಂದ್ರ ಸರಕಾರ ಸೋಮವಾರ ಲೋಕಸಭೆಯಲ್ಲಿ ರಾಷ್ಟ್ರೀಯ ಕ್ರೀಡಾ ಆಡಳಿತ ಮಸೂದೆ ಮತ್ತು ರಾಷ್ಟ್ರೀಯ ಡೋಪಿಂಗ್ ವಿರೋಧಿ ತಿದ್ದುಪಡಿ ಮಸೂದೆಯನ್ನು ಅಂಗೀಕರಿಸಿದೆ.

ಆಡಳಿತಾರೂಢ ಭಾರತೀಯ ಜನತಾ ಪಕ್ಷದ (ಬಿಜೆಪಿ) ಚುನಾಯಿತ ಸದಸ್ಯೆ ಸ್ಪೀಕರ್ ಸಂಧ್ಯಾ ರೇ ಅವರ ಸಮ್ಮುಖದಲ್ಲಿ ನಡೆಯುತ್ತಿರುವ ಮಳೆಗಾಲದ ಅಧಿವೇಶನದಲ್ಲಿ ಕ್ರೀಡಾ ಸಚಿವ ಮನ್ಸುಖ್ ಮಾಂಡವಿಯಾ ಅವರು ಎರಡೂ ಮಸೂದೆಗಳನ್ನು ಮಂಡಿಸಿದರು.

ಕ್ರೀಡಾ ಆಡಳಿತ ಮಸೂದೆಯು ಭಾರತದ ವಿವಿಧ ಕ್ರೀಡಾ ಆಡಳಿತಗಾರರನ್ನು ನಿಯಂತ್ರಿಸಲು ಪ್ರಯತ್ನಿಸುತ್ತದೆ, ಆದರೆ ಡೋಪಿಂಗ್ ವಿರೋಧಿ ತಿದ್ದುಪಡಿ ಮಸೂದೆಯು ವಿಶ್ವ ಡೋಪಿಂಗ್ ವಿರೋಧಿ ಸಂಸ್ಥೆ (ವಾಡಾ) ಸೂಚಿಸಿದಂತೆ ದೇಶದ ಡೋಪಿಂಗ್ ವಿರೋಧಿ ಸಂಸ್ಥೆ (ನಾಡಾ) ಗೆ ಹೆಚ್ಚಿನ ಕಾರ್ಯಾಚರಣಾ ಸ್ವಾತಂತ್ರ್ಯವನ್ನು ಒದಗಿಸುತ್ತದೆ.

ರಾಷ್ಟ್ರೀಯ ಡೋಪಿಂಗ್ ವಿರೋಧಿ (ತಿದ್ದುಪಡಿ) ಮಸೂದೆ-2025, ಕಾರ್ಯಾಚರಣೆಗಳು, ತನಿಖೆಗಳು ಮತ್ತು ಜಾರಿ ಚಟುವಟಿಕೆಗಳಿಗೆ ಸಂಬಂಧಿಸಿದ ನಿರ್ಧಾರಗಳಲ್ಲಿ ಸ್ವಾಯತ್ತತೆಯನ್ನು ಖಚಿತಪಡಿಸಿಕೊಳ್ಳಲು ರಾಷ್ಟ್ರೀಯ ಡೋಪಿಂಗ್ ವಿರೋಧಿ ಮೇಲ್ಮನವಿ ಸಮಿತಿ ಮತ್ತು ರಾಷ್ಟ್ರೀಯ ಡೋಪಿಂಗ್ ವಿರೋಧಿ ಏಜೆನ್ಸಿಯ ಸಾಂಸ್ಥಿಕ ಮತ್ತು ಕಾರ್ಯಾಚರಣೆಯ ಸ್ವಾತಂತ್ರ್ಯವನ್ನು ಹೆಚ್ಚಿಸಲು ಪ್ರಯತ್ನಿಸುತ್ತದೆ ಎಂದು ಮಸೂದೆಯ ಉದ್ದೇಶಗಳು ಹೇಳಿವೆ.

ಈ ಮಸೂದೆಯು ಸ್ವಾತಂತ್ರ್ಯದ ನಂತರದ ಕ್ರೀಡೆಯಲ್ಲಿನ ಏಕೈಕ ಅತಿದೊಡ್ಡ ಸುಧಾರಣೆಯಾಗಲಿದ್ದು, ಕ್ರೀಡಾ ಒಕ್ಕೂಟಗಳಲ್ಲಿ ಹೊಣೆಗಾರಿಕೆ, ನ್ಯಾಯ ಮತ್ತು ಉತ್ತಮ ಆಡಳಿತವನ್ನು ಖಚಿತಪಡಿಸುತ್ತದೆ ಎಂದು ಲೋಕಸಭೆಯಲ್ಲಿ ಕ್ರೀಡಾ ಆಡಳಿತ ಮಸೂದೆಯ ಕುರಿತು ಸಚಿವ ಮಾಂಡವಿಯಾ ಹೇಳಿದರು.

ಎರಡು ದಶಕಗಳ ಬಳಿಕ ಏಷ್ಯನ್ ಕಪ್‌ಗೆ ಪ್ರವೇಶ ಪಡೆದ ಭಾರತ

# ಅರ್ಹತೆ ಪಡೆದ ಮಹಿಳಾ ಫುಟ್ಬಾಲ್ ತಂಡ

**ಯಾಂಗೂನ್ (ಮ್ಯಾನ್ಮಾರ್):** ಕ್ವಾಲಿಫೈಯರ್-ಡಿ ಗುಂಪಿನ ಕೊನೆಯ ಪಂದ್ಯದಲ್ಲಿ ಭಾರತ ಮಹಿಳಾ ಫುಟ್ಬಾಲ್ ತಂಡವು ಮ್ಯಾನ್ಮಾರ್ ತಂಡವನ್ನು 10 ಗೋಲಿನಿಂದ ಮಣಿಸುವ ಮೂಲಕ ಎರಡು ದಶಕಗಳ ನಂತರ ಮೊದಲ ಬಾರಿ ಎಎಫ್‌ಸಿ 20 ವರ್ಷದೊಳಗಿನವರ ಏಷ್ಯನ್ ಕಪ್ ಫುಟ್ಬಾಲ್ ಟೂರ್ನಿಗೆ ಅರ್ಹತೆ ಪಡೆದ ಸಾಧನೆಗೈದಿದೆ.

ಭಾನುವಾರ ನಡೆದ ನಿರ್ಣಾಯಕ ಪಂದ್ಯದಲ್ಲಿ ಪೂಜಾ ಅವರು 27ನೇ ನಿಮಿಷದಲ್ಲಿ ಬಾರಿಸಿದ ಏಕೈಕ ಗೋಲಿನ ನೆರವಿನಿಂದ ಭಾರತ ಗೆಲುವು ಸಾಧಿಸಿತು. ಇದರಿಂದಾಗಿ ಏಳು ಅಂಕ ಪಡೆದ ಭಾರತ ಗುಂಪಿನಲ್ಲಿ ಅಗ್ರಸ್ಥಾನ ಪಡೆದು 2026ರಲ್ಲಿ ಥಾಯ್ಲೆಂಡ್‌ನಲ್ಲಿ ನಡೆಯುವ ಟೂರ್ನಿಗೆ ಅರ್ಹತೆ ಗಿಟ್ಟಿಸಿಕೊಂಡಿತು. ಭಾರತ ಕೊನೆಯ ಬಾರಿ 2006ರಲ್ಲಿ ಅರ್ಹತೆ ಪಡೆದಿತ್ತು.

ಭಾರತದ ಮಹಿಳಾ ತಂಡ ಆರಂಭಿಕ ಪಂದ್ಯದಲ್ಲಿ ಇಂಡೊನೇಷ್ಯಾದೊಂದಿಗೆ ಗೋಲುರಹಿತವಾಗಿ ಡ್ರಾ ಸಾಧಿಸಿದ್ದರೆ, ಎರಡನೇ ಪಂದ್ಯದಲ್ಲಿ 70 ಗೋಲುಗಳಿಂದ ತುರ್ಕ್‌ಮೆನಿಸ್ತಾನ ತಂಡವನ್ನು ಮಣಿಸಿತ್ತು. ಎ-ಗುಂಪಿನಲ್ಲಿ ಉತ್ತರ ಕೊರಿಯಾ, ಬಿ-ಗುಂಪಿನಲ್ಲಿ ವಿಯೆಟ್ನಾಂ, ಇ-ಗುಂಪಿನಲ್ಲಿ ಚೀನಾ, ಎಫ್-ಗುಂಪಿನಲ್ಲಿ ಜಪಾನ್, ಎಚ್-ಗುಂಪಿನಲ್ಲಿ ಬಾಂಗ್ಲಾದೇಶ ಮತ್ತು ದಕ್ಷಿಣ ಕೊರಿಯಾ ತಂಡಗಳೂ ಟೂರ್ನಿಗೆ ಅರ್ಹತೆ ಪಡೆದವು.

ಏಷ್ಯನ್ ಕಪ್ ಫುಟ್ಬಾಲ್ ಟೂರ್ನಿಗೆ ಅರ್ಹತೆ ಪಡೆದ ಭಾರತದ ಮಹಿಳಾ ತಂಡಕ್ಕೆ ಅಖಿಲ ಭಾರತ ಫುಟ್ಬಾಲ್ ಫೆಡರೇಷನ್ ರು.21.89 ಲಕ್ಷ ಬಹುಮಾನ ಘೋಷಿಸಿದೆ.

# ಕ್ವಾ. ಫೈನಲ್ ಪ್ರವೇಶಿಸಲು ಆರ್ಮಿ ವಿಫಲ

**ಜಮ್‌ಶೆಡ್‌ಪುರ:** ಇಂಡಿಯನ್ ಆರ್ಮಿ ತಂಡವು ಇಲ್ಲಿ ಸೋಮವಾರ ನಡೆದ 134ನೇ ಆವೃತ್ತಿಯ ಡುರ್ಯಾಂಡ್ ಕಪ್ ಫುಟ್ಬಾಲ್ ಟೂರ್ನಿಯ ಪಂದ್ಯದಲ್ಲಿ 4-2 ಗೋಲುಗಳಿಂದ ಲಡಾಕ್ ಎಫ್.ಸಿ ವಿರುದ್ಧ ಗೆಲುವು ಸಾಧಿಸಿದರೂ ಕ್ವಾರ್ಟರ್ ಫೈನಲ್‌ನಲ್ಲಿ ಸ್ಥಾನ ಪಡೆಯಲು ವಿಫಲವಾಯಿತು. ಎರಡು ಗೋಲುಗಳ ಹಿನ್ನಡೆಯಿಂದ ಅಮೋಘವಾಗಿ ಪುನರಾಗಮನ ಮಾಡಿದ ಆರ್ಮಿ ತಂಡವು ಸಿ ಗುಂಪಿನ ಕೊನೆಯ ಪಂದ್ಯದಲ್ಲಿ ಅಧಿಕಾರಯುತ ಜಯ ಗಳಿಸಿತು. ಆಡಿದ ಮೂರು ಪಂದ್ಯಗಳಲ್ಲಿ ಎರಡನ್ನು ಗೆದ್ದು, ಆರು ಅಂಕ ಗಳಿಸಿದ ಆರ್ಮಿ ತಂಡದ ಅಭಿಯಾನಕ್ಕೆ ಸೋಮವಾರ ತೆರೆಬಿತ್ತು.

ಲಡಾಕ್ ತಂಡದ ಪರ ಪಿ. ಕಮಲೇಶ್ (23ನೇ ನಿಮಿಷ) ಮತ್ತು ವಿಶ್ವೇಶ್ ವೇಲನ್ (37ನೇ ನಿಮಿಷ) ಚೆಂಡನ್ನು ಗುರಿ ಸೇರಿಸಿದರು. ಆರ್ಮಿ ತಂಡದ ಪರವಾಗಿ ಸಾಮ (41ನೇ ನಿಮಿಷ), ಅಭಿಷೇಕ್ ಶಂಕರ್ (45ನೇ ನಿಮಿಷ), ಕ್ರಿಸ್ಟೋಫರ್ ಕಮ್ಮ (51ನೇ ನಿಮಿಷ) ಮತ್ತು ಅಪ್ಪು (55ನೇ ನಿಮಿಷ) ಗೋಲು ಗಳಿಸಿದರು.

ಆರ್ಮಿ ತಂಡವು ತನ್ನ ಮೊದಲ ಪಂದ್ಯದಲ್ಲಿ 0-1ರಿಂದ ಜೆಮ್‌ಶೆಡ್‌ಪುರ ಎಫ್.ಸಿ ವಿರುದ್ಧ ಸೋಲು ಅನುಭವಿಸಿತ್ತು. ನಂತರ 1-0ಯಿಂದ ತ್ರಿಭುವನ್ ಆರ್ಮಿ ಎಫ್.ಸಿ ವಿರುದ್ಧ ಗೆಲುವು ಸಾಧಿಸಿತ್ತು. ಮೂರೂ ಪಂದ್ಯಗಳನ್ನು ಗೆದ್ದು 9 ಅಂಕ ಗಳಿಸಿದ ಜೆಮ್‌ಶೆಡ್‌ಪುರ ತಂಡ ಸಿ ಗುಂಪಿನಲ್ಲಿ ಅಗ್ರಸ್ಥಾನ ಪಡೆದು ಕ್ವಾರ್ಟರ್ ಫೈನಲ್‌ಗೆ ಮುನ್ನಡೆಯಿತು.

## ವಿಟಾಕೀಸ್

# ಸಾರಂಗಿಯಲ್ಲಿ ಎರಡೇ ಪಾತ್ರಗಳು

ಚಂದನವನದಲ್ಲಿ ಹೊಸಬರ ದಂಡೇ ಇದ್ದು ಹೊಸ ಪ್ರಯತ್ನಗಳ ಮೂಲಕ ಗಮನಸೆಳೆಯುತ್ತಿದ್ದಾರೆ. ಅಂತೆಯೇ ಈಗ ಹೊಸಬರೇ ಸೇರಿ ನಿರ್ಮಿಸಿ, ನಿರ್ದೇಶಿಸಿರುವ ಸಾರಂಗಿ ಚಿತ್ರ ವಿಭಿನ್ನ ಕಥೆಯನ್ನು ಹೊತ್ತುಬಂದಿದೆ. ಕೆಲವು ಸಿನಿಮಾಗಳಲ್ಲಿ ದೊಡ್ಡ ತಾರಾಬಳಗವೇ ಇರುತ್ತದೆ, ಆದರೆ ಈ ಚಿತ್ರದಲ್ಲಿ ಕೇವಲ ಎರಡೇ ಪಾತ್ರಗಳಿರುವುದು ವಿಶೇಷ. ಮನುಷ್ಯ ದಿನ ಬೆಳಗ್ಗಾದರೆ ಎಲ್ಲರ ಮುಂದೆ ಒಂದೊಂದು ತರಹದ ಮುಖವಾಡ ಧರಿಸಿ ಜೀವನ ನಡೆಸುತ್ತಿರುತ್ತಾನೆ. ಆದರೆ ಒಂದು ಅನಿರೀಕ್ಷಿತ ಸನ್ನಿವೇಶ ಎದುರಾದಾಗ ಮುಖವಾಡ ಹೇಗೆ ಕಳಚುತ್ತದೆ. ನಾವು ನಮ್ಮ ಮೌಲ್ಯಗಳನ್ನು ಉಳಿಸಿಕೊಳ್ಳುತ್ತೇವಾ, ಅದರಿಂದ ಹೇಗೆ ಪಾರಾಗುತ್ತೇವೆ ಎಂಬುದೇ ಚಿತ್ರದ ಕಥಾಸಾರಾಂಶ. ಮಿಸ್ಟರಿ, ಥ್ರಿಲ್ಲರ್ ಕಥಾಹಂದರ ಹೊಂದಿರುವ ಚಿತ್ರ ಇದಾಗಿದ್ದು, ಜೆ.ಆಚಾರ್ ಚಿತ್ರಕ್ಕೆ ಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಎರಡು ಪಾತ್ರಗಳ ಸುತ್ತಲೇ ಚಿತ್ರದ ಕಥೆ ಸಾಗಲಿದ್ದು, ಕಾರ್ತಿಕ್ ಹಾಗೂ ಶ್ವೇತಾ ಅರಕೆರೆ ಅಭಿನಯಿಸಿ ದ್ದಾರೆ. ನಾನು ಮೂಲತಃ ರಂಗಭೂಮಿ ಕಲಾವಿದ, ಯು.ಎಸ್ ನಲ್ಲಿ ಥಿಯೇಟರ್ ನಡೆಸುತ್ತಿದ್ದೆ, ಈಗ ಬೆಂಗಳೂರಿನಲ್ಲಿ ವಾಸವಿದ್ದೇನೆ. ಸಾರಂಗಿ ಎಂದರೆ ಒಂದು ಬೆಟ್ಟದ ಹೆಸರು. ಬೆಟ್ಟದ ಸುತ್ತ ಏನೆಲ್ಲಾ ನಡೆಯುತ್ತದೆ ಎಂಬುದನ್ನು ನಿರ್ದೇಶಕರು ಚಿತ್ರದಲ್ಲಿ ಹೇಳಹೊರಟಗಟಿದ್ದಾರೆ. ನಿರ್ಮಾಪಕ ತೇಜೇಶ್ ಹೇಳಿದರು. ಸಾರಂಗಿ ಚಿತ್ರವನ್ನು ಆಗಸ್ಟ್‌ನಲ್ಲಿ ಮೊದಲು ಯು.ಎಸ್ ನಲ್ಲಿ ಬಿಡುಗಡೆ ಮಾಡಿ, ಅಕ್ಟೋಬರ್‌ನಲ್ಲಿ ಕರ್ನಾಟಕದಲ್ಲಿ ರಿಲೀಸ್ ಮಾಡಲು ಚಿತ್ರತಂಡ ನಿರ್ಧರಿಸಿದೆ. ನಾನು ಮೂಲತಃ ಮಂಗಳೂರಿನವಳು, ರಂಗಭೂಮಿ ಕಲಾವಿದೆ. ಜತೆಗೆ ಭರತನಾಟ್ಯ ಕಲಾವಿದೆಯೂ ಹೌದು. ಈ ಚಿತ್ರದ ಕಥೆ ಹಾಗೂ ನನ್ನ ಪಾತ್ರ ಎರಡು ಕೂಡ ಚೆನ್ನಾಗಿದೆ ಎಂದರು ನಾಯಕಿ ಶ್ವೇತಾ ಅರಕೆರೆ ಸಂತಸದಿಂದ ನುಡಿದರು. ನವಿ ನಂಜಪ್ಪ ಛಾಯಾಗ್ರಹಣ ಈ ಚಿತ್ರಕ್ಕಿದೆ.

# ಬಾಘಿಯಲ್ಲಿ ರಕ್ತಚರಿತ್ರೆ

ಬಾಲಿವುಡ್ ನಟ ಟೈಗರ್ ಶ್ರಾಫ್ ಆ್ಯಕ್ಷನ್ ಹೀರೊ ಆಗಿಯೇ ಗುರುತಿಸಿಕೊಂಡಿದ್ದಾರೆ, ಈಗ ಬಾಘಿ 4ನಲ್ಲಿ ಮಿಂಚಲು ಸಿದ್ಧವಾಗಿದ್ದಾರೆ. ಬಾಘಿ ಸರಣಿಯ ಮುಂದುವರಿದ ಸಿನಿಮಾ ಇದಾಗಿದ್ದು, ರಣರೋಚಕವಾದ ಟೀಸರ್ ರಿಲೀಸ್ ಆಗಿದೆ. ಉದ್ದಕ್ಕೂ ರಕ್ತಚರಿತ್ರೆಯೇ ಕಾಣುತ್ತದೆ. ಎದೆ ಝಲ್ ಎನಿಸುತ್ತದೆ. ಟೀಸರ್‌ನಲ್ಲಿ ಹೊಡಿ ಬಡಿ ದೃಶ್ಯಗಳೇ ಹೆಚ್ಚಾಗಿ ಕಂಡುಬರುತ್ತವೆ. ರೋನಿಯಾಗಿ ರಗಡ್ ಲುಕ್‌ನಲ್ಲಿ ಕಾಣಿಸಿಕೊಂಡಿರುವ ಟೈಗರ್ ತನ್ನ ತಂಟೆಗೆ ಬಂದ ಶತ್ರುಗಳನ್ನು ಕೊಚ್ಚಿ, ರಕ್ತ ಹರಿಸಿ ಯಮಪುರಿಗಟ್ಟುತ್ತಾರೆ. ಸಂಜಯ್ ದತ್ ಇಲ್ಲಿ ಅಂಡರ್‌ವರ್ಲ್ಡ್ ಡಾನ್ ಆಗಿ ನಟಿಸಿದ್ದು, ವಿಭಿನ್ನ ಲುಕ್‌ನಲ್ಲಿ ಕಂಗೊಳಿಸಿದ್ದಾರೆ, ಸಂಜುಬಾಬ ಕೂಡ ಕತ್ತಿ ಹಿಡಿದು ಅಬ್ಬರಿಸಿದ್ದು, ತನ್ನ ಎದುರಾಳಿಗಳನ್ನು ಮುಲಾಜಿಲ್ಲದೆ ಸದೆಬಡಿಯುತ್ತಾರೆ. ಅಷ್ಟು ಮಾತ್ರವಲ್ಲ ನಾಯಕಿಯರೂ ಕೂಡ ಆ್ಯಕ್ಷನ್‌ನಲ್ಲಿ ಮಿಂಚಿದ್ದು, ಅವರ ಕೈಗಳು ಕೂಡ ರಕ್ತಸಿಕ್ತವಾಗಿರುವುದು ಟೀಸರ್‌ನಲ್ಲಿ ಕಾಣುತ್ತದೆ. ಸೋನಮ್ ಬಜ್ವಾ ನಾಯಕಿ ಯಾಗಿ ನಟಿಸಿದ್ದು, ರೋಷಾವೇಷದಲ್ಲಿ ಅಬ್ಬರಿಸಿದ್ದಾರೆ, ಮಿಸ್ ಯೂನಿವರ್ಸ್ ಹರ್ನಾಜ್ ಸಂಧು ಪ್ರಮುಖ ಪಾತ್ರದಲ್ಲಿ ನಟಿಸಿದ್ದು, ಈ ಚಿತ್ರದ ಮೂಲಕ ಬಾಲಿವುಡ್‌ಗೆ ಪರಿಚಿತರಾಗುತ್ತಿದ್ದಾರೆ.

ಭಜರಂಗಿ ಖ್ಯಾತಿಯ ಎ.ಹರ್ಷ ಈ ಚಿತ್ರವನ್ನು ನಿರ್ದೇಶಿಸಿರುವುದು ವಿಶೇಷ. ಬಾಘಿ ಮೂಲಕ ಹರ್ಷ ಬಾಲಿವುಡ್ ಅಂಗಳಕ್ಕೂ ಎಂಟ್ರಿಕೊಟ್ಟಿದ್ದಾರೆ. ಸಾಜಿದ್ ನಾದಿಯಾವಾಲ ಕಥೆ, ಚಿತ್ರಕಥೆ ಬರೆದು ಚಿತ್ರ ನಿರ್ಮಾಣಕ್ಕೂ ಬಂಡವಾಳ ಹೂಡಿದ್ದಾರೆ. ಬಾಘಿ 4 ಚಿತ್ರದ ಟೀಸರ್ ರಿಲೀಸ್ ಆದ ಕೆಲವೇ ಗಂಟೆಗಳಲ್ಲಿ ಮಿಯನ್ ಗಟ್ಟಲೇ ವೀಕ್ಷಣೆ ಕಂಡಿದೆ, ಟೀಸರ್ ನೋಡಿದರವರೆಲ್ಲ, ಈ ಚಿತ್ರವನ್ನು ಅನಿಮಲ್ ಹಾಗೂ ಮಾರ್ಕೋ ಚಿತ್ರಕ್ಕೆ ಹೋಲಿಸುತ್ತಿದ್ದಾರೆ. ಕೆಲವರು ಆ ಎರಡೂ ಸಿನಿಮಾಗಿಂತ ಹೆಚ್ಚಿನ ಕ್ರೌರ್ಯ ತುಂಬಿದೆ ಎಂದು ಕಮೆಂಟ್ ಮಾಡಿದ್ದಾರೆ. ಸೆಪ್ಟೆಂಬರ್ 5 ರಂದು ಬಾಘಿ 4 ತೆರೆಗೆ ಬರಲಿದೆ.

# ಬಾಂಧವ್ಯ ಬೆಸೆಯುವ ಸನ್ ಆಫ್ ಮುತ್ತಣ್ಣ

ಪ್ರಶಾಂತ್.ಟಿ.ಆರ್

ಪ್ರಣಮ್ ದೇವರಾಜ್, ಸನ್ ಆಫ್ ಮುತ್ತಣ್ಣನಾಗಿ ಮಿಂಚಲು ಸಿದ್ಧವಾಗಿದ್ದಾರೆ. ತಂದೆ ಮಗನ ಬಾಂಧವ್ಯ ಸಾರುವ ಈ ಚಿತ್ರದ ಮೂಲಕ ಪ್ರಣಮ್ ಮತ್ತೊಮ್ಮೆ ಅದೃಷ್ಟ ಪರೀಕ್ಷೆಗಿಳಿದಿದ್ದಾರೆ. ಈ ಚಿತ್ರವನ್ನು ಶ್ರೀಕಾಂತ್ ಹುಣಸೂರು ನಿರ್ದೇಶಿಸಿದ್ದು, ತಮ್ಮ ಸಿನಿಮಾದ ಕುರಿತಂತೆ ವಿ.ಸಿನಿಮಾಸ್‌ನೊಂದಿಗೆ ಮಾತನಾಡಿದ್ದಾರೆ,

**ಸನ್ ಆಫ್ ಮುತ್ತಣ್ಣ ಶೀರ್ಷಿಕೆ ಆಯ್ದುಕೊಳ್ಳಲು ಕಾರಣ?**

**ಶ್ರೀಕಾಂತ್:** ತಂದೆ ಮಗನ ಬಾಂಧವ್ಯದ ಕಥೆ ಇಲ್ಲಿದ್ದು, ಮುತ್ತಣ್ಣ ಮತ್ತು ಮಗನ ಸುತ್ತ ಚಿತ್ರದ ಕಥೆ ಸಾಗುತ್ತದೆ. ಹಾಗಾಗಿ ಇದೇ ಶಿರ್ಷಿಕೆಯನ್ನು ಆಯ್ದುಕೊಂಡೆವು. ಮೊದಲು ಮೇಜರ್ ಮುತ್ತಣ್ಣ ಸೇರಿದಂತೆ ಹಲವು ಟೈಟಲ್‌ಗಳು ನಮ್ಮ ಮುಂದಿತ್ತು. ಆದರೆ ಸನ್ ಆಫ್ ಮುತ್ತಣ್ಣ ಕಥೆಗೆ ಸೂಕ್ತ ಎನಿಸಿತು. ಹಾಗಾಗಿಯೇ ಇದೇ ಶೀಷಿಕೆ ಅಂತಿಮವಾಯಿತು. ಯಾಕೆಂದರೆ ಮುತ್ತಣ್ಣನ ಹೆಸರಿಗೆ ಒಂದು ಶಕ್ತಿಯಿದೆ.

**ಇಲ್ಲಿ ಬಾಂಧವ್ಯದ ಕಥೆಯೆ ಹೈಲೈಟ್ ಆಗಿದೆಯೆ?**

**ಶ್ರೀಕಾಂತ್ :** ತಂದೆ ಮತ್ತು ಮಗನ ಸುತ್ತ ಕಥೆ ಸಾಗುತ್ತದೆ. ತಂದೆಗೆ ಮಗನ್ನು ಬಿಟ್ಟಿರಲು ಸಾಧ್ಯವಿಲ್ಲ, ಮಗನಿಗೆ ತಂದೆಯನ್ನು ಬಿಟ್ಟರೆ ಬೇರೆ ಲೋಕವೇ ಇಲ್ಲ. ಹೀಗೆ ಎಮೋಷನಲ್ ಡ್ರಾಮಾ ಇಲ್ಲಿ ಹೈಲೈಟ್ ಆಗಿದೆ. ಜತೆಗೆ ಒಳ್ಳೆಯ ಕಂಟೆಂಟ್ ಇದ್ದು ಲವ್, ಕಾಮಿಡಿ, ಸೆಂಟಿಮೆಂಟ್ ಎಲ್ಲಾ ಅಂಶಗಳು ಬೆರೆತಿವೆ. ಜೀವನದಲ್ಲಿ ತಂದೆಯೇ ಪ್ರಪಂಚ ಎಂದುಕೊಂಡ ಮಗ ತಂದೆಯ ಪ್ರೀತಿಯನ್ನು ಕಾಪಾಡಿಕೊಳ್ಳಲು ಹೇಗೆ ಹರಸಾಹಸ ಪಡುತ್ತಾನೆ ಎಂಬುದನ್ನು ಎಮೋಷನ್ ಆಗಿ ಕಟ್ಟಿಕೊಟ್ಟಿದ್ದಾರೆ.

**ಪ್ರಣಮ್ ಆಯ್ಕೆ ಯಾಕೆ?**

**ಶ್ರೀಕಾಂತ್ :** ಈ ಚಿತ್ರದಲ್ಲಿ ಪ್ರಣಮ್ ಅವರೇ ನಟಿಸಬೇಕು ಎಂಬುದು ನಿರ್ಮಾಪಕರ ಆಸೆಯಾಗಿತ್ತು. ಲವ್ವರ್ ಬಾಯ್ ಆಗಿ ಮಿಂಚಿದ್ದ ಪ್ರಣಮ್, ಆ್ಯಕ್ಷನ್‌ಗೂ ಹೇಳಿ ಮಾಡಿದಂತಿದ್ದಾರೆ. ಹಾಗಾಗಿ ಎಮೋಷನ್‌ಗೆ ಹೇಗೆ ಹೊಂದಿಕೊಳ್ಳುತ್ತಾರೆ ಎಂಬ ಕುತೂಹಲ ನಮಗೂ ಇತ್ತು. ಮೊದಲು ಈ ಕಥೆಯನ್ನು ದೇವರಾಜ್ ಸರ್‌ಗೆ ಹೇಳಿದೆವು, ಅವರು ಮೆಚ್ಚಿದರು. ಬಳಿಕ ಪ್ರಣಮ್ ಕೇಳಿದರು, ಸ್ಟೋರಿ ಇಷ್ಟಪಟ್ಟು ಸಿನಿಮಾದಲ್ಲಿ ನಟಿಸಲು ಸಮ್ಮತಿಸಿದರು. ಕಥೆಗೆ ತಕ್ಕಂತೆ ಅವರು ತಯಾರಿಯನ್ನು ಮೆಚ್ಚಲೇಬೇಕು. ತಂದೆಗೆ ತಕ್ಕ ಮಗನಾಗಿ ಅದ್ಭುತವಾಗಿ ನಟಿಸಿದ್ದಾರೆ. ತಂದೆಯ ಪಾತ್ರದಲ್ಲಿ ರಂಗಾಯಣ ರಘು ಅವರು ಜೀವತುಂಬಿದ್ದಾರೆ. ಇಬ್ಬರ ಪಾತ್ರಗಳನ್ನು ತೆರೆಯಲ್ಲಿ ನೋಡುತ್ತಿದ್ದರೆ, ಅಪ್ಪ ಎಂದರೆ ಹೀಗಿರಬೇಕು ಅನ್ನಿಸುತ್ತದೆ. ಅಪ್ಪ ಮಗನನ್ನು ಬೆಸೆಯುವ ಜವಾಬ್ದಾರಿಯುತ ಹುಡುಗಿಯಾಗಿ ಖುಷಿ ಅದ್ಭುತವಾಗಿ ಅಭಿನಯಿಸಿದ್ದಾರೆ.

**ಚಿತ್ರದ ಕಥೆ ಎಲ್ಲರಿಗೂ ಕನೆಕ್ಟ್ ಆಗಲಿದೆಯೆ?**

**ಶ್ರೀಕಾಂತ್ :** ಚಿತ್ರದಲ್ಲಿ ನೈಜತೆಗೆ ಹೆಚ್ಚಿನ ಒತ್ತು ನೀಡಲಾಗಿದೆ. ನಮ್ಮ ಸುತ್ತಮುತ್ತ ನಡೆಯುವ ಘಟನೆಗಳನ್ನು ಆಧರಿಸಿ ಕಥೆ ಹೆಣೆದಿದ್ದು, ಅದರೊಂದಿಗೆ ಒಂದಷ್ಟು ಕಾಲ್ಪನಿಕ ಅಂಶಗಳನ್ನು ಬೆರೆಸಿ ಮನರಂಜನಾತ್ಮಕವಾಗಿ ತೆರೆಯಲ್ಲಿ ಕಟ್ಟಿಕೊಟ್ಟಿದ್ದೇವೆ. ಪ್ರೇಕ್ಷಕರು ಸಿನಿಮಾ ನೋಡುತ್ತಿದ್ದರೆ ಸಿನಿಮಾದೊಂದಿಗೆ ತಾವು ಸಾಗುತ್ತಾರೆ. ತಮ್ಮ ಜೀವನದಲ್ಲಿ ನಡೆದ ಘಟನೆಗಳನ್ನು ಮೆಲುಕು ಹಾಕುತ್ತಾರೆ.

# ಶೋಧ ಆರಂಭಿಸಿದ ಸಿರಿ

ಪರಭಾಷೆಯಲ್ಲಿ ವೆಬ್ ಸರಣಿಗಳ ಅಬ್ಬರ ಜೋರಾಗಿದೆ. ಅಂತೆಯೇ ಕನ್ನಡದಲ್ಲಿಯೂ ವೆಬ್ ಸರಣಿಗಳು ಆರಂಭವಾಗಿದ್ದು, ಪ್ರೇಕ್ಷಕರನ್ನು ಸೆಳೆಯುತ್ತಿವೆ. ಅಯ್ಯನ ಮನೆ ವೆಬ್ ಸೀರೀಸ್ ಪ್ರೇಕ್ಷಕರ ಮನಗೆದ್ದ ಬಳಿಕ ಈಗ ಶೋಧ ಶೀರ್ಷಿಕೆಯಲ್ಲಿ ಸೀರೀಸ್ ಮೂಡಿಬರುತ್ತಿದೆ. ಪವನ್ ಕುಮಾರ್ ನಾಯಕನಾಗಿ ನಟಸುತ್ತಿರುವ ಈ ವೆಬ್ ಸರಣಿಗೆ ಸಿರಿ ರವಿಕುಮಾರ್ ಕೂಡ ಎಂಟ್ರಿ ಕೊಟ್ಟಿದ್ದಾರೆ.

ಕವಲುದಾರಿ, ಸಕುಟುಂಬ ಸಮೇತ ಹಾಗೂ ಸ್ವಾತಿ ಮುತ್ತಿನ ಮಳೆ ಹನಿ ಸಿನಿಮಾಗಳ ಮೂಲಕ ಖ್ಯಾತಿ ಗಳಿಸಿರುವ ಸಿರಿ ರವಿಕುಮಾರ್ ಈಗ ಥ್ರಿಲ್ಲರ್ ಕಥಾಹಂದರದ ಶೋಧ ಸರಣಿಯ ಭಾಗವಾಗಿದ್ದಾರೆ. ಆರು ಸಂಚಿಕೆಯುಳ್ಳ ಈ ವೆಬ್ ಸರಣಿಗೆ ಸುಹಾಸ್ ನವರತ್ನ ಕಥೆ ಬರೆದಿದ್ದಾರೆ. ಸಸ್ಪೆನ್ಸ್, ಥ್ರಿಲ್ಲರ್ ಕಥಾಹಂದರ ಹೊಂದಿರುವ ಈ ವೆಬ್ ಸರಣಿಯನ್ನು ಸುನೀಲ್ ಮೈಸೂರು ನಿರ್ದೇಶನ ಮಾಡುತ್ತಿದ್ದಾರೆ.

ರಂಗಭೂಮಿಯಿಂದ ಸಿನಿಮಾದವರೆಗೆ, ಗಾಯನದಿಂದ ನಟನೆವರೆಗೆ, ನನ್ನನ್ನು ನಾನು ಕಲಾವಿದೆಯಾಗಿ ರೂಪಿಸಿಕೊಳ್ಳುತ್ತಾ ಬಂದಿದ್ದೇನೆ. ಶೋಧ ಒಂದು ಅದ್ಭುತ ಕಥೆ. ತೀವ್ರವಾದ, ಆಕರ್ಷಕವಾದ ಕಥೆಯಾಗಿದೆ. ಈ ಥ್ರಿಲ್ಲರ್ ಕಥಾಹಂದರದ ಭಾಗವಾಗಿರುವುದು ಖುಷಿಯಾಗಿದೆ ಎನ್ನುತ್ತಾರೆ ಸಿರಿ. ಶೋಧ ವೆಬ್ ಸರಣಿ ಇದೇ ತಿಂಗಳ 22ರಿಂದ ಪ್ರಸಾರವಾಗಲಿದೆ.